UNIVERSAL LIBRARY

OU_200459

UNIVERSAL LIBRARY

ವಾಗ್ಭೂಷಣ ಗ್ರಂಥಮಾಲೆ—ಪುಸ್ತಕ ೫೭.

# ರಾಣಾ ರಾಜಸಿಂಹ

ಲೇಖಕ —ಗ. ದೇ. ಸೊರಬ

ಬೆಲೆ 12 ಆಣೆ.

ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ವಾಗ್ಭೂಷಣ

ಗ್ರಂಥಮಾಲೆಯ ೫೭ನೆಯ ಪುಸ್ತಕವು

# ರಾಣಾ ರಾಜಸಿಂಹ

ಇವನ್ನು

ಸಿದ್ದಗಿರಿಯಪ್ಪ ದೇವಪ್ಪ ಹುರಕದ

ಧಾರವಾಡ

ಇವರು ಸಂಘದ ವಾಗ್ಭೂಷಣಕ್ಕಾಗಿ ರಚಿಸಿದುದು

OSMANIA UNIVERSITY
ಮೈಸೂರು COLLEGE LIBRARY

[illegible] ಮುದ್ರಿಸಲ್ಪಟ್ಟಿತು

1913

(ಈ ಪುಸ್ತಕದ [illegible] ಅಧಿಕಾರಗಳು ಸಂಘದ [illegible])

Price 12 As | | ಬೆಲೆ ೧೨ ಆಣೆ

PRINTED BY
**S. Nanjunda Sastry**
AT THE SRI LAKSHMINIVASA PRESS, MYSORE

# ಪ್ರಸ್ತಾವನೆ

ನಮ್ಮ ಈ ಕಹಾನಕವು ಬಹು ದೊಡ್ಡದಾದ ಐತಿಹಾಸಿಕ ಸಂಗತಿಯದೊಂದು ಸಣ್ಣ ಅಂಶಮಾತ್ರವಿರುವದು. ಮೊಗಲ ಅರಸರ ಪ್ರಧಾನ ಕಥೆಯು, ಹಿಂದೂಜನರ ಸಂಗಡ ಅವರ ವಿವಾದವು ಮೊಗಲರ ಪ್ರತಿಪಕ್ಷಿಗಳಾದ ಹಿಂದೂಜನರಲ್ಲಿ ರಜಪೂತರೂ ಮಹಾರಾಷ್ಟ್ರರೂ ಪ್ರಧಾನರು ಮಹಾರಾಷ್ಟ್ರರ ಕಥೆಯು ಬಹುಶಃ ಎಲ್ಲರಿಗೂ ಗೊತ್ತಾಗಿರುವಷ್ಟು ರಜಪೂತರ ಕಥೆಯು ತಿಳಿದಿಲ್ಲ ಇತಿಹಾಸವ ಅವನ್ನು ತಿಳಿಸುವ ಉಪಾಯವು ಆದರೆ ಇತಿಹಾಸ ಬರೆಯಬೇಕಾದರೆ ಅನೇಕ ವಿಘ್ನಗಳು ಪ್ರಕೃತದಲ್ಲಿ ಐತಿಹಾಸಿಕ ಸಂಗತಿಗಳನ್ನು ನಿಶ್ಚಯಿಸುವದೂ ದುಸ್ಸಾಧ್ಯ ಆದ್ದರಿಂದ ಗುರುತರವಾದ ಐತಿಹಾಸಿಕ ಸಂಗತಿಯ ಸಣ್ಣಸಣ್ಣ ಅಂಶಗಳನ್ನು ಕಥಾರೂಪದಿಂದ ಬರೆಯುವದರಿಂದ ವಾಚಕರಿಗೆ ಮನೋರಂಜನವಾಗಿ ರಜಪೂತರ ಇತಿಹಾಸವು ಮನನವಾಗಬಹುದೆಂದು ಕೋರುತ್ತೇನೆ ಕಹಾಣಿಕರು ಸರ್ವತ್ರ ಸತ್ಯದ ಶೃಂಖಲೆಯಿಂದ ಬದ್ಧರಾಗಿರುವದಿಲ್ಲ, ಕಥೆಯು ಮನೋರಂಜನವಾಗಲಿಕ್ಕೆ ಹೊಸಕಲ್ಪನೆಗಳನ್ನು ಆಶ್ರಯಿಸಬೇಕಾಗಿರುತ್ತದೆಂಬದನ್ನು ವಾಚಕರು ಲಕ್ಷ್ಯದಲ್ಲಿಡಬೇಕು

ಉದೇಪುರದ ಪ್ರತಾಪಶಾಲಿಯಾದ ರಾಣಾರಾಜಸಿಂಹನ ಕಥೆಯನ್ನು ಅನೇಕ ಲೇಖಕರು ಅನೇಕಭಾಷೆಗಳಲ್ಲಿ ಬರೆದಿಟ್ಟಿರುವರು ಔರಂಗಜೇಬನ ಕಾಲದ ಕಠಿಣ ಪರಿಸ್ಥಿತಿಯಲ್ಲಿ ರಾಜಸಿಂಹನು ತೋರಿಸಿದ ಪರಾಕ್ರಮವು ಅವರ್ಣನೀಯವಾಗಿದೆ ಆತನ ಸ್ವಾಭಿಮಾನ, ಸಾಹಸವೃತ್ತಿ, ಧರ್ಮರಕ್ಷಣೆಯ ನಿಶ್ಚಯ, ಇವು ಆರ್ಯಾವರ್ತದ ಇತಿಹಾಸದಲ್ಲಿ ಚಿರಸ್ಮರಣೀಯವಾಗಿರುತ್ತವೆ ಈ ನರವರನ ಚರಿತ್ರವನ್ನು ಕಹಾರೂಪದಿಂದ ವರ್ಣಿಸಬೇಕೆಂಬ ಉದ್ದೇಶದಿಂದ ವಂಗಭಾಷೆಯೊಳಗಿನ ‘ರಾಜಸಿಂಹ’ ಹಾಗು ಮಹಾರಾಷ್ಟ್ರಭಾಷೆಯೊಳಗಿನ ‘ರಾಣಾ ರಾಜಸಿಂಹ’ ‘ರೂಪನಗರದ ರಾಜಕನ್ಯೆ’ ಇವುಗಳ ಆಧಾರದಿಂದ ಈ ಕಥೆಯನ್ನು ಬರೆದಿರುತ್ತೇನೆ

ಕನ್ನಡದಲ್ಲಿ ಕಥಾ ಗ್ರಂಥಗಳು ಇತರಭಾಷೆಗಳಲ್ಲಿರುವಷ್ಟು ಇಲ್ಲ ಅವರೊಳಗೂ ಐತಿಹಾಸಿಕ ಕಥೆಗಳಂತೂ ತೀರ ವಿರಳ ನನ್ನಕೈಲಾದಮಟ್ಟಿಗೆ ಮಾತೃಭಾಷೆಯ

ಸೇವೆಯನ್ನು ಕೈಕೊಂಡು ಈ ಗ್ರಂಥವನ್ನು ಬರೆದೆನು ಇದರ ಮೂಲಪ್ರತಿಯನ್ನು ಫಿಮೋಲ ಟ್ರೇನಿಂಗಕಾಲೇಜದ ಅಧ್ಯಾಪಕರಾದ ಗುರುವರ್ಯ ಪಿ ಎನ್ ಮುಗದಾಳ ಬಿ ಎ ಇವರು ತಮ್ಮ ಅನೇಕ ಕೆಲಸಗಳನ್ನು ಬದಿಗೊತ್ತಿ ಸದಾಂತಃಕರಣದಿಂದ ತಿದ್ದಿ ಕೊಟ್ಟು, ನನ್ನನ್ನು ಪ್ರೋತ್ಸಾಹಗೊಳಿಸಿದರು ಕನ್ನಡಭಾಷಾಭಿಮಾನಿಗಳಿಗೆಲ್ಲ ಆಶ್ರಯದಾತರೂ ವಾಗ್ಭೂಷಣದ ಎಡಿಟರರೂ ಆದ ಗುರುವರ್ಯ ಆರ್ ಎಮ್ ಮಹಿಷಿ ಬಿ ಎ ಇವರು ಇದನ್ನು ಆ ಪತ್ರಿಕೆಯಲ್ಲಿ ಅಚ್ಚುಗೊಳಿಸಿ ನನಗೆ ಉದಾರಾಶ್ರಯವನ್ನಿತ್ತುದಕ್ಕಾಗಿ ಈ ಮಹನೀಯರಿಬ್ಬರಿಗೆ ನಾನು ಚಿರಕಾಲ ಋಣಿಯಾಗಿರುತ್ತೇನೆ ಈ ಗ್ರಂಥದ ಸಾರ್ಥಕತೆಯಿಂದುಂಟಾದ ಆನಂದದಿಂದ 'ಕಲ್ಯಾಣಿ' ಎಂಬ ಮತ್ತೊಂದು ಸಾಮಾಜಿಕ ಕಾದಂಬರಿಯನ್ನು ಬರೆದೆನು ಅದಕ್ಕಾಗಿ ವಿದ್ಯಾವರ್ಧಕಸಂಘದವರು ನನಗೆ ಐವತ್ತು ರೂಪಾಯಿಗಳನ್ನು ಇನಾಮವಾಗಿ ಕೊಟ್ಟರು ಅದನ್ನು ಸಹ ಸಂಘದವರು ಬೇಗ ಮುದ್ರಿಸಬಹುದೆಂದು ಆಶಿಸುತ್ತೇನೆ

ನನ್ನ ಈ ಮೊದಲನೇ ರಚನೆಯನ್ನು ಪರಮಪೂಜ್ಯರೂ ಗುರುವರ್ಯರೂ, ಶಿಷ್ಯವತ್ಸಲರೂ ಟ್ರೇನಿಂಗಕಾಲೇಜದ ಪ್ರಿನ್ಸಿಪಾಲರೂ ಆದ ವಿ ಜಿ ಜೋಶಿ ಬಿ ಎ ಇವರ ಚರಣಕಮಲದಲ್ಲಿ ಸಮರ್ಪಿಸಬೇಕೆಂದು ಕೇಳಿಕೊಳ್ಳಲು ಪ್ರೇಮಪೂರ್ವಕವಾಗಿ ಒಪ್ಪಿಕೊಂಡು ನನ್ನನ್ನು ಕೃತಕೃತ್ಯನನ್ನಾಗಿ ಮಾಡಿದ್ದರಿಂದ ಅವರ ಉಪಕಾರವನ್ನು ಚಿರಕಾಲ ಸ್ಮರಿಸುವ ವಿವ ಪ ನವಿಧೇಯ,

ಸಿ ರೇ ಸಬರದ

ಈ

ಗ್ರಂಥವನ್ನು

ಪರಮಪೂಜ್ಯರೂ ಗುರುವರರೂ

ಆದ

ವಿನಾಯಕ ಬಾಬಾಜಿ ಜೋಶಿ, ಬಿ.ಎ.

ಪ್ರಿನ್ಸಿಪಾಲ ಟ್ರೇನಿಂಗಕಾಲೇಜ ಧಾರವಾಡ

ಈ

ಮಹನೀಯರಿಗೆ

(ಅವರ ಅಪ್ಪಣೆಯನ್ನು ಪಡೆದು)

ಪರಮಾದರದಿಂದಲೂ ಕೃತಜ್ಞತೆಯಿಂದಲೂ ಅರ್ಪಿಸುತ್ತೇನೆ

ಸಿ. ಕೇ. ಸಬರದ,

# ಪ್ರಕಾಶಕರ ಪ್ರಸ್ತಾವನೆಯು.

---

ಸದ್ಯದ ಕನ್ನಡ ಭಾಷೆಯಲ್ಲಿ ಕಾದಂಬರೀರೂಪದಿಂದ ಬರೆದ ಐತಿಹಾಸಿಕ ಗ್ರಂಥಗಳು ಬಹು ಅಪರೂಪವಿರುವವೆಂಬದು ಎಲ್ಲರಿಗೂ ಗೊತ್ತಿದ್ದ ಮಾತೇ ಸರಿ. ಈ ತರದ ಕೊರತೆಯನ್ನು ಕ್ರಮೇಣ ದೂರಮಾಡುವ ಉದ್ದೇಶದಿಂದಲೂ ವಾಗ್ಭೂಷಣದ ಚಂದಾದಾರರಿಗೆ ವಾಗ್ಭೂಷಣದ ಆದಾಯದ ಹಣದಿಂದ ಈತರದ ಕಾದಂಬರಿಗಳನ್ನು ಅಚ್ಚುಹಾಕಿಸಿ ಇನಾಮವಾಗಿ ಹಂಚುವ ಉದ್ದೇಶದಿಂದಲೂ ನಾವು ವಾಗ್ಭೂಷಣದ ಮುಖಾಂತರ ಲೇಖಕರಿಗೆ ವಿನಂತಿಮಾಡಿಕೊಂಡ ಮೇರೆಗೆ ನಮ್ಮ ಕಡೆಗೆ ಬರೆದುಬಂದ ಕಾದಂಬರಿಗಳನ್ನು ಪರೀಕ್ಷಿಸಲು, ಅವುಗಳಲ್ಲಿ ಈ ಕಾದಂಬರಿಯೇ ಅಚ್ಚುಹಾಕಿಸಲಿಕ್ಕೆ ಯೋಗ್ಯವೆಂದು ಕಂಡು ಬಂದದ್ದರಿಂದ ಸರ್ವಾಂಗಸುಂದರವಾಗುವಂತೆ ಅದನ್ನು ಅಚ್ಚುಹಾಕಿಸಿ, ನಮ್ಮ ಚಂದಾದಾರರಿಗೆ ವಿನಯಪೂರ್ವಕವಾಗಿ ಅರ್ಪಿಸಿದ್ದೇವೆ. ಅಚ್ಚುಹಾಕುವ ಕೆಲಸವನ್ನು ಅಂದವಾಗಿ ಮಾಡಿಕೊಟ್ಟದ್ದಕ್ಕೆ ನಾವು ಮೈಸೂರು ಶ್ರೀನಿವಾಸ ಪ್ರೆಸ್ ಪ್ರೊಪ್ರೈಟರರಾದ ಎಸ್. ನಂಜುಂಡಶಾಸ್ತ್ರಿಯವರಿಗೆ ತುಂಬಾ ಉಪಕೃತರಾಗಿದ್ದೇವೆ.

**R. M. Mahishi, B. A.**

Editor Vaghbhushana.

# ಅನುಕ್ರಮಣಿಕೆ.


| ಪ್ರಕರಣ | ವಿಷಯ | ಪುಟ |
|---|---|---|
| 1 | ಓಲಗದೊಳಗಿನ ಗೊಂದಲವು | ೧ |
| 2 | ಚಿತ್ರಮರುವವಳು | ೮ |
| 3 | ಓರಂಗಜೇಬನ ಮನೋನಿಶ್ಚಯ | ೧೫ |
| 4 | ಸ್ವೀಕರಣ | ೨೭ |
| 5 | ವಿಷಯಸುಖವು ಹೆಚ್ಚೋ ಅಪತ್ಯಸುಖವು ಹೆಚ್ಚೋ? | ೩೧ |
| 6 | ರಾಜೋಪಾಧ್ಯಾಯ | ೩೯ |
| 7 | ಪರಮಹಂಸ | ೪೭ |
| 8 | ತಪಸ್ವಿನಿಯೂ ಜಯನಂದನೂ | ೫೪ |
| 9 | ಆಯುರ್ವಾಲಿಕೆಯ ಮೇಲಿನ ಅತ್ಯಾಚಾರ | ೬೧ |
| 10 | ಪರ್ಣಕುಟೀರದ ರಹಸ್ಯ | ೬೮ |
| 11 | ಮಹೋನ್ಮಾದರಾದ ವೀರರಗುಪ್ತಸಂಘ | ೭೨ |
| 12 | ಮುದ್ರದಲ್ಲಿ ಏನಾಯಿತು? | ೮೦ |
| 13 | ಜಯಸಿಂಹ | ೮೪ |
| 14 | ಪತ್ರವಾಚನ | ೮೯ |
| 15 | ವಧೂಕೃತ್ಯ | ೯೩ |
| 16 | ಜಯಸಿಂಹನ ಕೌಶಲ್ಯ | ೯೮ |
| 17 | ಮಾರ್ಗದೊಳಗಿನ ಯುದ್ಧ | ೧೦೩ |
| 18 | ಜಯಾಪಜಯ | ೧೧೦ |
| 19 | ವಿಜಯ | ೧೧೪ |
| 20 | ತಂದೆಯ ಸಮ್ಮತಿಯು ಬೇಕೇಬೇಕು | ೧೧೮ |
| 21 | ರಾಜನಂದನ ಪ[illegible] | ೧೨೬ |

| | | |
|---|---|---|
| 22 | ಮದನೋತ್ಸವಕ್ಕೆ ಬದಲು ರಣೋತ್ಸವ | ೧೨೮ |
| 23 | ಯುದ್ಧದ ಮೊದಲನೆಯ ಪ್ರಸಂಗ | ೧೨೯ |
| 24 | ಪ್ರತಾಪರಾಯರೇ ನಾನು ನಿಮ್ಮವಳು | ೧೩೪ |
| 25 | ಉದೇಪುರದ ಬೇಗಮ್ಮಳು ರಾಣಾನ ವಶದಲ್ಲಿ | ೧೩೯ |
| 26 | ಔರಂಗಜೇಬನು ಬಲೆಯಲ್ಲಿ ಸಿಕ್ಕನು | ೧೪೫ |
| 27 | ದಾಳಿಮೇಲಿನ ಸವಾರ | ೧೪೮ |
| 28 | ಪಂಜರದೊಳಗಿನ ಸಿಂಹ | ೧೫೧ |
| 29 | ಶತ್ರುಗಳಮೇಲ ತೋರಿಸಿದ ದಯೆ | ೧೫೬ |
| 30 | ಪಂಜರದೊಳಗಿನ ಸಿಂಹದ ಬಿಡುಗಡೆ | ೧೬೧ |
| 31 | ಮಧ್ಯದಲ್ಲಿ ಬಂದ ವಿಘ್ನ | ೧೬೪ |
| 32 | ರಾಜಸಿಂಹನ ಸಹಾಯ | ೧೬೮ |
| 33 | ಬಾದಶಹನ ಪರಾಜಯ | ೧೭೨ |
| 34 | ಚಿಂತೆಯ ನಿರ್ಮೂಲನ | ೧೭೫ |
| 35 | ಗುಪ್ತಪಾತಕರ ಪರಿಸಮಾಪ್ತಿ | ೧೮೨ |
| 36 | ಇಷ್ಟಲಾಭ | ೧೮೭ |
| 37 | ಪರ್ಯವಸಾನ | ೧೯೧ |




# ರಾಣಾ ರಾಜಸಿಂಹ.

## ಮೊದಲನೆಯ ಪ್ರಕರಣ.

### ಓಲಗದೊಳಗಿನ ಗೊಂದಲವು

ಪ್ರಿಯ ವಾಚಕರೆ, ರೂಪನಗರದ ಓಲಗದಲ್ಲಿ ಇಷ್ಟು ಗೊಂದಲವೇಳಲು ಕಾರಣವೇನು? ಕೈಯಲ್ಲಿ ಒರೆಗಳೆದ ಕತ್ತಿಗಳನ್ನು ಹಿಡಿದು ಕ್ರೋಧಾನಲದಿಂದ ಉದ್ದೀಪ್ತರಾಗಿದ್ದ ಇಬ್ಬರು ವೀರರು ಯುದ್ಧಮಾಡುವದಕ್ಕೆ ತತ್ಪರರಾದಂತೆ ಕಂಡುಬರುತ್ತದೆ. ಹೀಗಾಗಲು ಕಾರಣವೇನಿರಬಹುದು? ಅವರು ಯಾರಿರಬಹುದು? ಸಿಂಹಾಸನದ ಮೇಲೆ ಕುಳಿತ ರಾಣಾವಿಕ್ರಮಸಿಂಹನು ಇದನ್ನು ಕಂಡು ಚಂಚಲನಾಗಿ ಸುತ್ತಲೂ ನೋಡುತ್ತಿರುವನು. ಹೋರಾಡುವದಕ್ಕೆ ಸಿದ್ಧರಾದವರಲ್ಲಿ ಒಬ್ಬನು ವಿಕ್ರಮಸಿಂಹನ ಅಣ್ಣನ ಮೋಹದ ಮಗನಾದ ವೀರಪ್ರತಾಪಸಿಂಹನು, ಎರಡನೆಯವನು ಔರಂಗಜೇಬ ಬಾದಶಹನ ಸೇನಾಪತಿಯಾದ ದಿಲೇರಖಾನ ಬಹಾದ್ದರನು.

ಹಾ! ತಿಳಿಯಿತು! ರೂಪನಗರದ ರಾಜಸಭೆಯು ನಿಯಮದಂತೆ ರಾಣಾನ ಬಲಭಾಗದಲ್ಲಿ ಪ್ರತಾಪಸಿಂಹನ ಆಸನವು. ಎದುರ ಬಾದಶಹನ ಸೇನಾನಿಯು ಬಂದದ್ದರಿಂದ ಆತನ ಬಹುಮಾನಕ್ಕೋಸ್ಕರ ರಾಣಾವಿಕ್ರಮಸಿಂಹನು ಆತನನ್ನು ಪ್ರತಾಪಸಿಂಹನ ಆಸನದ ಮೇಲೆ ಕುಳ್ಳಿರಿಸಿದ್ದನು. ಅಷ್ಟರಲ್ಲಿ ರಾಜಕುಮಾರನಾದ ಪ್ರತಾಪಸಿಂಹನು ಬಂದು ತನ್ನ ಆಸನದ ಮೇಲೆ ಕುಳಿತ ಮೊಗಲ ಸರದಾರನನ್ನು ನೋಡಿ ತನಗೆ ಮಿತಿಯಿಲ್ಲದ ಅಪಮಾನವಾಯಿತೆಂದು ತಿಳಿದುಕೊಂಡನು.

ಕುಮಾರಪ್ರತಾಪಸಿಂಹನು ಪರಧರ್ಮೀಯರಾದ ಮುಸಲ್ಮಾನರನ್ನು ದ್ವೇಷಿಸುತ್ತಿದ್ದನು. ಅದರೊಳಗೂ ಮೊಗಲಸರದಾರನಾದ ದಿಲೇರಖಾನನ್ನಂತೂ ಅವನು ವಿಶೇಷವಾಗಿ ಧಿಕ್ಕರಿಸುತ್ತಿದ್ದನು. ಅದ್ದರಿಂದಲೇ ತನ್ನ ಆಸನದಮೇಲೆ ಕುಳಿತ ಖಾನನನ್ನು ನೋಡಿದಕೂಡಲೆ ಪ್ರತಾಪಸಿಂಹನಿಗೆ ಅತ್ಯಂತಕ್ರೋಧವು ಉಂಟಾಯಿತು. ಸಂತಾಪದಿಂದ ಅವನ ಶರೀರವು ನಡುಗಹತ್ತಿತು. ಆದಾಗ್ಯೂ ರಾಣಾನಿಗೆ ರೀತಿಯಂತೆ ನಮಸ್ಕರಿಸಿ "ಮಹಾರಾಜರೇ, ಈಹೊತ್ತು ಸಭೆಯಲ್ಲಿ ನಿಯಮವಿರುದ್ಧವಾದ ಆಚರಣೆಯೇಕೆ? ನಿರ್ಮಲವಾದ ಸೂರ್ಯಕುಲೋತ್ಪನ್ನನೂ ವಿರೂಪಾಕ್ಷಮಹಾರಾಜನ ಮಗನೂ ಆದ ಪ್ರತಾಪನ ಆಸನದಮೇಲೆ ಈ ಮುಸಲ್ಮಾನನೇಕೆ ಕುಳಿತನು? ನನ್ನ ಆಸನವಿಂದದ್ದು ಬೇರೆಕಡೆಗೆ ಕೊಡಲ್ಪಟ್ಟಿತ್ತು. ಆವನಿಗೆ ಹೇಳಿರಿ. ಇಲ್ಲವಿದ್ದರೆ ಈ ಅಪಮಾನವನ್ನು ನಾನು ಸಹಿಸಲಾರೆನು."

ಈ ಗರ್ವೋಕ್ತಿಯನ್ನು ಕೇಳಿ ರಾಣಾನು ಹೆದರಿದನು. ಹಾಗು ಹಚ್ಚು ಮಾತಾಡದ ಪ್ರತಾಪನು ಸುಮ್ಮನಾಗಬೇಕೆಂದು ಆವನನ್ನು ದಿಟ್ಟಿಸಿ ನೋಡಹತ್ತಿದನು. ಇಷ್ಟರಲ್ಲಿಯೇ ದಿಲೇರಖಾನನು ತನಗಾದ ಅಪಮಾನವನ್ನು ಸಹಿಸದೆ ಆವೇಶಯುಕ್ತನಾಗಿ ಆ ಸಭೆಗೆದ್ದು "ಏನು? ಬುದ್ಧಿಯಿಲ್ಲದ ಒಬ್ಬ ಹುಡುಗನು ನನ್ನನ್ನು ಅಪಮಾನ ಪಡಿಸಬೇಕೇ? ಆಗದು, ಹಾಗೆಂದಿಗೂ ಆಗದು. ನಿಲ್ಲು, ನಿನ್ನ ಅಭಿಮಾನದ ಫಲವನ್ನು ನಿನಗೀಗಲೆ ತೋರಿಸುತ್ತೇನೆ" ಎಂದು ಒರೆಯಿಂದ ತನ್ನ ಕತ್ತಿಯನ್ನು ಹೊರಗೆಳೆದು ಪ್ರತಾಪನಮೇಲೆ ಹರಿದು ಹೋದನು.

"ಸಿಂಹದ ಮರಿಯು ಸಿಂಹವೇ ಇರುವದು. ಶಕ್ತಿಯಿದ್ದರೆ ಮುಂದಕ್ಕೆ ಬಂದರಾಯಿತು. ಯುದ್ಧದಿಂದಲೇ ಯಾರು ಹುಡುಗರೆಂಬದು ಗೊತ್ತಾಗುವದು" ಎಂದು ಪ್ರತಾಪಸಿಂಹನು ತಿರಸ್ಕಾರಭಾವದಿಂದ ನಗುತ್ತ ತನ್ನ ಕತ್ತಿಯನ್ನು ಹಿಡಿದು ಮುಂದಕ್ಕೆ ಸಾಗಿಹೋದನು. ಇದನ್ನು ಕಂಡು ರಾಣಾನು ಹೆದರಿ ತನ್ನ ಸಭೆಯೊಳಗಿನ ಸರದಾರರನ್ನೆಲ್ಲ

ಕುರಿತು "ಇಷ್ಟು ಜನರಿದ್ದು ಇದನ್ನು ನೋಡುತ್ತ ಕೂಡಬೇಕೆ? ಇಬ್ಬರನ್ನೂ ಸಮಾಧಾನಗೊಳಿಸಬಾರದೆ?" ಎಂದಕೂಡಲೆ, ಎಲ್ಲರೂ ನಡುವೆ ಬಂದು "ಏನಿದು? ಸರದಾರಸಾಹೇಬರೇ ಶಾಂತರಾಗಿರಿ ಕುಮಾರರೇ ಕ್ರೋಧವನ್ನು ತಡೆಯಿರಿ ನೀವು ಮಾಡುವ ಕೆಲಸವೇದೇನು?" ಎಂದು ಹಾಹಾಕಾರವನ್ನಬ್ಬಿಸಿದರು

ವಾಚಕರೆ, ರೂಪನಗರದ ಓಲಗದೊಳಗಿನ ಗೊಂದಲವೇನೆಂಬದು ಈಗ ಗೊತ್ತಾಯಿತು ಮುಂದೆ ಅದರ ಪರಿಣಾಮವೇನಾಯಿತೆಂಬದನ್ನು ನೋಡುವ ಮೊದಲು, ರಾಣಾವಿಕ್ರಮಸಿಂಹನ ಹಾಗು ವೀರಪ್ರತಾಪನಾದ ಪ್ರತಾಪಸಿಂಹನ ಸಂಬಂಧದಿಂದ ಸ್ವಲ್ಪ ಮಾಹಿತಿಯನ್ನು ಮಾಡಿಕೊಳ್ಳುವದು ಅವಶ್ಯವಾದದ್ದು ರಾಣಾವಿಕ್ರಮಸಿಂಹನು ಸುಂದರನು, ಯಾವಾಗಲೂ ವಿಷಯೋಪಭೋಗದಲ್ಲಿಯೂ ವಿನೋದದಲ್ಲಿಯೂ ಮಗ್ನನಾಗಿರುತ್ತಿದ್ದನು ಇಂದ್ರಿಯಸುಖದಹೊರ್ತು ಆತನಿಗೆ ಬೇರೆ ಅಪೇಕ್ಷೆಯೆ ಇದ್ದಿಲ್ಲ ಒಂದುವೇಳೆ ಆತನಿಗೆ ತನ್ನ ಕುಲದ ಅಭಿಮಾನವಿನಿಸಿದ್ದರೆ, ಔರಂಗಜೇಬನ ಭಯಂಕರವಾದ ಜುಲುಮೆಗೆ ಬೇಸತ್ತು, ಉಳಿದವರಂತೆ ತಾನೂ ಉದೇಪುರದ ರಾಣಾ ರಾಜಸಿಂಹನನ್ನು ಕೂಡುತ್ತಿದ್ದನು. ಹಾಗಾದ ಪಕ್ಷಕ್ಕೆ ತನಗೂ ಮೊಗಲರೊಡನೆ ಯುದ್ಧಮಾಡುವ ಪ್ರಸಂಗವು ಬದಗಿ ತನ್ನ ವಿನೋದಕ್ಕೆ ಸಹಜವಾಗಿಯೇ ಕೊರತೆಬರುತ್ತಿತ್ತು, ಇದ್ದರಿಂದ ಆತನು ಮೊದಲಿನಿಂದಲೂ ಮೊಗಲರೊಡನೆ ಒಡಂಬಡಿಕೆಯನ್ನು ಮಾಡಿಕೊಂಡಿದ್ದನು, ಮತ್ತು ಯಾವಾಗಲೂ ಬಾದಶಹನನ್ನು ಪ್ರಸನ್ನಮಾಡಿಕೊಳ್ಳುವದರಲ್ಲಿ ತತ್ಪರನಾಗಿದ್ದನು ಇದರಿಂದಲೆ ದಿಲೇರಖಾನನನ್ನು ಇಷ್ಟು ಸತ್ಕರಿಸಿ ಪ್ರತಾಪಸಿಂಹನ ಆಸನದಮೇಲೆ ಕುಳ್ಳಿರಿಸಿ ಆತನೊಡನೆ ಪ್ರೀತಿಯ ಸಂಭಾಷಣೆಯನ್ನು ನಡಿಸಿದ್ದನು

ಪ್ರತಾಪಸಿಂಹನು ಸ್ವಲ್ಪ ಎತ್ತರ, ಗೌರವರ್ಣದವನು, ಸಿಂಹಬಲನು, ಆತನ ಮುಖಚರ್ಯೆಯು ಮನೋಹರವಾದದ್ದು. ವಿಶಾಲವಾದ ಹಣೆಯೂ ತೇಜೋಮಯವಾದ ನಯನಗಳೂ ಆತನಿಗೆ ಬಹಳ ಒಪ್ಪು

ತ್ತಿದ್ದವು ಇದರಿಂದ ಆತನ ಸರಳಸ್ವಭಾವವು ಸ್ಪಷ್ಟವಾಗುತ್ತಿತ್ತು ಆತನ ಮಂದಹಾಸದ ಮುಖಮುದ್ರೆಯಿಂದ ಪರೋಪಕಾರದ ಚಿನ್ಹವು ಒಡೆದು ಕಾಣುತ್ತಿತ್ತು ವಿಶಾಲವಾದ ಎದೆಯೂ, ಎತ್ತರವಾದ ಬಾಹುಗಳೂ ಆತನು ಅತ್ಯಂತ ಬಲವಂತನೆಂದು ಸೂಚಿಸುತ್ತಿದ್ದವು ನಿಜವಾಗಿ ಆಕಾಲಕ್ಕೆ ರೂಪನಗರದಲ್ಲಿ ಆತನಿಗೆ ಸಮಾನರಾದ ಬಲವಂತರೂ ಧೈರ್ಯವಂತರೂ ಯಾರೂ ಇದ್ದಿಲ್ಲ ಆಗ ಆತನ ವಯಸ್ಸು ಹದಿನೇಳು

"ಭರತಖಂಡದೊಳಗಿನ ಆರ್ಯರ ಪ್ರಾಚೀನ ವೈಭವವು ಮರಳಿ ಯಾವಾಗ್ಗೆ ಪ್ರಕಾಶಿಸುವದೆಂಬ ಬಯಕೆಯು ಆತನಲ್ಲಿ ನೆಲಸಿಕೊಂಡಿತ್ತು ಪರಧರ್ಮದ್ವೇಷಿಗಳಾದ ಯವನರ ಪರಾಭವವೆಂದಾಗಬಹುದು! ಆರ್ಯರಿಗೆ ತಮ್ಮಧರ್ಮದ ಸ್ವತಂತ್ರತೆಯು ಉತ್ಸಹವೆಂದು ದೊರೆಯುವದು! ಆರ್ಯಭೂಮಿಯಲ್ಲಿ ಯವನರ ಸಂತಾನವು ಹ್ಯಾಗ ನಾಶವಾಗಬಹುದು?" ಎಂಬ ಚಿಂತೆಯಲ್ಲಿಯೇ ಆತನು ಯಾವಾಗಲೂ ಮಗ್ನನಾಗಿರುತ್ತಿದ್ದನು ವಿಕ್ರಮಸಿಂಹನ ಮಗಳಾದ ಚಂಚಲಕುಮಾರಿಯನ್ನು ಆತನು ತನ್ನ ಸಹೋದರಿಯಂತೆಯೆ ಪ್ರೀತಿಸುತ್ತಿದ್ದನು ಅವಳಾದರೂ ಈತನನ್ನು ತನ್ನ ಪ್ರಾಣಕ್ಕಿಂತಲೂ ಹೆಚ್ಚು ಪ್ರೀತಿಸುತ್ತಿದ್ದಳು ತನ್ನ ತಂದೆಯು ಗಾದಿಯ ರಕ್ಷಕನಾದ ವಿಕ್ರಮಸಿಂಹನು ಇವನಿಗೆ ಮಾನಕೊಡುತ್ತಿದ್ದನು ಇದರಿಂದಲೇ ಈತನ ಅಯೋಗ್ಯವರ್ತನವನ್ನು ಕಂಡಾಗ್ಯೂ ವಿಕ್ರಮಸಿಂಹನು ಸುಮ್ಮನೆ ಕುಳಿತು ಈತನ ಕಠೋರಶಬ್ದಗಳನ್ನು ಸಹಿಸುತ್ತಿದ್ದನು ಈಕಾರಣವೇ ತನ್ನ ಆಸನದಮೇಲೆ ಕುಳಿತ ಯವನ ಸೇನಾಪತಿಯನ್ನು ಕಂಡು ಈತನಿಗೆ ಸಿಟ್ಟು ಬಂದಿರಬಹುದೆಂಬದರಲ್ಲಿ ಸಂಶಯವಿಲ್ಲ

ಸಮಾಧಾನ ಹೇಳಲಿಕ್ಕೆ ಬಂದ ಸರದಾರರಲ್ಲಿ ಕೆಲವರು ಪ್ರತಾಪಸಿಂಹನನ್ನು ಒತ್ತಟ್ಟಿಗೆ ಸರಿಸಿದರು ಅಲ್ಲದೆ ಆತನನ್ನು ಸಮಾಧಾನಪಡಿಸುವದಕ್ಕೋಸ್ಕರ ಅನೇಕ ಪ್ರಯತ್ನಗಳನ್ನು ಮಾಡಹತ್ತಿದರು ಅಷ್ಟರಲ್ಲಿ ಪ್ರತಾಪಸಿಂಹನು ಅರಸನಕಡೆಗೆ ತಿರುಗಿ ಬಳ್ಳೇ ಆವೇಶದಿಂದ "ಮಹಾರಾಜ, ನನ್ನ ಎದುರಿಗೇ ಈ ಪ್ರತಾಪನ ಆಸನದಮೇಲೆ ಒಬ್ಬ ಯಃಕಶ್ಚಿತ

ಪರಧರ್ಮಿಯನೂ, ನೀಚನೂ, ಕಡಿಮೆಯ ಚಾಕರನೂ, ಕೊಡಬಹುದಾ ಯಿತಲ್ಲವೇ? ಇವನು ಭರತ ಭೂಮಿಯ ಸ್ವತಂತ್ರತೆಯನ್ನು ಸೂರೆಗೊ ಳ್ಳುವ ಕಪಟಿಯೂ ಧರ್ಮಾಂಧನೂ ಆದ ಔರಂಗಜೇಬನ ಸರದಾರನ ಲ್ಲವೆ? ನೀನೇ ನೋಡು ನನ್ನ ಅಭಿಮಾನವನ್ನು ಎಷ್ಟರಮಟ್ಟಿಗೆ ಕಾಯ್ದಿ ಈ ಅಪಮಾನವು ತಿಲಮಾತ್ರವೂ ಸಹನ ಮಾಡಲಕ್ಕಾಗದು ನಾನು ಯಾವ ಕುಲದಲ್ಲಿ ಹುಟ್ಟಿದೆನೋ ಆ ಕ್ಷತ್ರಿಯ ವೀರರು ತಮ್ಮ ಅಪಮಾನ ವನ್ನು ಎಂದೂ ಸಹಿಸಿಕೊಂಡಿಲ್ಲ ಇನ್ನು ಮೇಲೆ ಇಲ್ಲಿರುವದಕ್ಕೆ ನಾನೂ ಒಲ್ಲನು ಭೂದೇವಿಗೆ ಇದೇ ನನ್ನ ಕಡೆಯ ನಮಸ್ಕಾರವು ''

ಹೀಗೆ ಮಾತಾಡುವಾಗ ಪ್ರತಾಪನ ಶರೀರವು ಕ್ರೋಧದಿಂದ ಕಂಪಿ ಸತೊಡಗಿತು. ಆಮೇಲೆ ಮತ್ತೂ ಧಿಕ್ಕಾರದಿಂದ ಕೂಡಿದ ವಾಣಿಯಿಂದ "ತಂದೆಗ ಸಮರಾದ ಮಹಾರಾಜರೆ, ಪರಧರ್ಮಿಯನಾದ ದುಷ್ಟ ಯವನನ ಸಹವಾಸದಿಂದ ನಿಮ್ಮ ಉಚ್ಚವಾದ ಪವಿತ್ರ ಕುಲಧರ್ಮವನ್ನು ಬಿಡಬೇಕೆ? ಮತ್ತು ನೀವೇ ಅದಕ್ಕೆ ಚಿರಕಲಂಕವನ್ನು ಹಚ್ಚಬೇಕೇ?''

ತುಂಬಿದ ಸಭೆಯಲ್ಲಿ ಅಣ್ಣನಮಗನಿಂದ ಈತರಹದ ಅಪಮಾನ ಕಾರಕವಾದ ಮಾತುಗಳನ್ನು ಕೇಳಿದಕೂಡಲೆ ವಿಕ್ರಮಸಿಂಹನು ಕೆಂಡ ದಂತಾದನು ಆತನು ಪ್ರತಾಪನನ್ನು ಹಿಡಿದು, ಕಾರಾಗೃಹಕ್ಕೆ ಒಯ್ಯು ವಂತೆ ಪಹರೆಯವರಿಗೆ ಆಜ್ಞಾಪಿಸಿದನು ಈ ಅಪ್ಪಣೆಯನ್ನು ಕೇಳಿದ ಕೂಡಲೆ ಇಪ್ಪತ್ತಿಪ್ಪತ್ತೈದು ಪಹರೆಯವರು ಪ್ರತಾಪನಮೇಲ ಧಾವಿಸಿ ಹೋದರು. ಕೂಡಲೆ ಅವರ ಕೈಯೊಳಗಿಂದ ಬಿಡಿಸಿಕೊಂಡು ಭಯಂ ಕರವಾದ ಸಿಂಹದಂತೆ ಸಭೆಯಮಧ್ಯದಲ್ಲಿ ಒಂದುನಿಂತು "ಎಚ್ಚರ! ಎಚ್ಚರ! ದೂರ, ನಿಲ್ಲಿರಿ!! ಈ ಯವನನದುರಿಗ ನನ್ನ ಅಪಮಾನ ಮಾಡಬೇಡಿರಿ! ನನ್ನ ಭುಜದಲ್ಲಿ ಈ ಕತ್ತಿಯನ್ನು ಹಿಡಿಯುವ ಶಕ್ತಿಯು ಇರುವವರೆಗೆ ಯಾರೂ ನನ್ನ ಸಮೀಪಕ್ಕ ಒರಲಾರರಿ!?'' ಎಂದು ಗರ್ಜಿಸಿ ಕತ್ತಿಯನ್ನು ತಿರುಗಿಸಹತ್ತಿದನು ಇದರಿಂದ ಅಲ್ಲಿ ವಿಶೇಷ ಗೊಂದಲವೆದ್ದಿತು ಒಂದು ಕಡೆ ಅರಸನು ಪಹರೆಯವರಿಗೆ ಹಿಡಿಯುವುದಕ್ಕ ಅಪ್ಪಣೆಯನ್ನು ಕೊ

ಡುತ್ತಿರುವನು ಮತ್ತೊಂದು ಕಡೆಗೆ ಪ್ರತಾಪಸಿಂಹನು ಕತ್ತಿಯನ್ನು ತಿರುಗಿಸುತ್ತ ಅವರ ಮೈಮೇಲೆ ಹರಿದುಹೋಗಹತ್ತಿರುವನು

ಎಷ್ಟೋ ಸಾವಿರ ಸಿಪಾಯರು ಪ್ರತಾಪಸಿಂಹನ ಕತ್ತಿಯ ಬಾಯಿಗೆ ತುತ್ತಾದರು ಇದರಿಂದ ಅರಸನು ಮತ್ತಿಷ್ಟು ಸಿಟ್ಟಿಗೆದ್ದು, "ನನ್ನ ಎದುರಿಗೆ ನನ್ನ ಸಿಪಾಯಿಗಳ ಪ್ರಾಣಹಾನಿಯೆ ? ಇಲ್ಲಿರುವವರೆಲ್ಲರೂ ಹೆಂಗಸರೆ ? ಬೇಗ ಆತನನ್ನು ಯಾರಾದರೂ ಬಂಧಿಸಬಾರದ ?"

ಇದನ್ನು ಕೇಳಿದಕೂಡಲೆ ಹೊರಗಿರುವ ಪಹರೆಯವರೂ ಸಿಪಾಯರೂ ಒಟ್ಟಾಗಿ ಬಂದು ಪ್ರತಾಪಸಿಂಹನನ್ನು ಹಿಡಿದರು ಹಿಡಿಯುವ ಕಾಲಕ್ಕೆ ಎಷ್ಟೋ ಸಿಪಾಯಿಗಳು ಪ್ರಾಣಬಿಟ್ಟರು ಆಮೇಲೆ ಪ್ರತಾಪನು ಶಾಂತನಾದನು ಮುಸಲ್ಮಾನನದುರಿಗೆ ತನ್ನ ಶತ್ರುವಿಂದಾದ ಈತರಹದ ಅಪಮಾನದಿಂದ ಅವನಿಗೆ ವಿಶೇಷ ದುಃಖವೆನಿಸಿತು ನೇತ್ರಗಳಿಂದ ಮುತ್ತುಗಳಂತೆ ಜಲಬಿಂದುಗಳುದುರಿದವು ಸ್ವಲ್ಪಹೊತ್ತಿನಮೇಲೆ ಎಲ್ಲವೂ ಶಾಂತವಾದಬಳಿಕ ಪುನಃ ದೊಡ್ಡ ಧ್ವನಿಯಿಂದ—

'ಮಹಾರಾಜರೇ ಪಾಲನಮಾಡತಕ್ಕ ಕಕ್ಕಂದಿರ ಕರ್ತವ್ಯವಿದೇ ಏನು ? ಪರಮಪೂಜ್ಯರಾದ ನನ್ನ ತಂದೆಗಳು ಇದಕ್ಕೇ ನಿಮಗೆ ರಾಜ್ಯವನ್ನು ಒಪ್ಪಿಸಿದರೇನು ? ಪ್ರತಾಪದಿಂದ ಸೂರ್ಯಸಮಾನರಾದ ನನ್ನ ತಂದೆಯವರು ಯವನರ ಹೆಸರೆತ್ತಿದ ಮಾತ್ರದಿಂದಲೆ ಕೆಂಡದಂತಾಗುತ್ತಿದ್ದರು ಅವರೊಡನೆ ನೂರಾರುಸಾರಿ ಕಾದಿ ತನ್ನ ರಾಜ್ಯದ ಸಂರಕ್ಷಣಕ್ಕಾಗಿ ಕಡೆಯಲ್ಲಿ ರಣದಲ್ಲಿಯೆ ಪ್ರಾಣವನ್ನು ಅರ್ಪಿಸಿದಾತನ ಪವಿತ್ರವಾದ ಸಿಂಹಾಸನವು ಈ ಹೊತ್ತು ಹೇಡಿಯಾದ ಕಕ್ಕಂದಿರೆನಿಸುವ ನಿಮ್ಮಿಂದ ಕಲಂಕಿತವಾಯಿತು ಯವನರನ್ನು ಮುಂಬಡಿದು ಸ್ವತಂತ್ರತೆಯೆಂಬ ಸೂರ್ಯನನ್ನು ಮುಸುಕಿರುವ ಮೋಡವನ್ನು ದೂರಮಾಡುವದಂತೂ ಇರಲಿ,? ಸ್ವತಃ ನೀವೆ ದುಷ್ಟಯವನರ ಸೇವೆಯನ್ನು ಕೈಕೊಳ್ಳುವುದೇ ? ನಿಮ್ಮ ಕರ್ತವ್ಯಕ್ಕೆ ಧಿಕ್ಕಾರವಿರಲಿ ? ನಿಮ್ಮ ಪುರುಷತ್ವಕ್ಕೆ ಬೆಂಕಿಹಚ್ಚಿತು , ಹಳದಿಘಾಟದ ಯುದ್ಧದಲ್ಲಿ ನಮ್ಮ ಪೂರ್ವಜರು ಅಕ

ವೀರನ ಸೇನೆಯ ರಕ್ತಪ್ರವಾಹದಲ್ಲಿ ಪೌರುಷದ ಧ್ವಜವನ್ನು ಸ್ಥಾಪಿಸಿದರು! ಅದೇರಣದಲ್ಲಿ ತಮ್ಮ ಕೀರ್ತಿಸ್ತಂಭವು ಚಿರಕಾಲ ನಿಲ್ಲುವಂತ ಮಾಡಿದರು! ಅದನ್ನು ನಪುಂಸಕರಾದ ನೀವು ನಾಶಗೊಳಿಸಿದಿರಿ! ನಮ್ಮ ಈ ಪರಮ ಪವಿತ್ರವಾದ ಕುಲವನ್ನು ಕಲಂಕಗೊಳಿಸುವುದಕ್ಕೋಸ್ಕರವಾಗಿಯೆ ನೀವು ಜನ್ಮತಾಳಿದಂತಾಯಿತು! ಶೂರಕ್ಷತ್ರಿಯರ ಹೆಸರಿಗೆ ಕುಂದನ್ನುಂಟು ಮಾಡುವ ತಮ್ಮಂಥ ಸಟಗಳು ಹುಟ್ಟದಿದ್ದರೆ ಒಳಿತಾಗಿತ್ತು! ನಮ್ಮ ನಿರ್ಮಲವಾದ ಕುಲಕ್ಕೆ ಈ ತರಹದ ಕಲಂಕವು ಬರುತ್ತಿದ್ದಿಲ್ಲ"

ತಿರಸ್ಕಾರದ ಈ ಮಾತುಗಳನ್ನು ಕೇಳಿದ ಕೂಡಲೆ ವಿಕ್ರಮಸಿಂಹನು ಕ್ರೋಧಾವೇಶದಿಂದ ಪ್ರತಾಪನನ್ನು ಹೊಡೆದುಹಾಕಬೇಕೆಂದು ಕತ್ತಿಯನ್ನು ತೆಕ್ಕೊಂಡು ಸಿಂಹಾಸನದಿಂದಿಳಿದು ಬಂದನು. ಆದರೆ ಸಭೆಯೊಳಗಿನ ಪ್ರಧಾನರು ಆತನನ್ನು ತಡೆದು ನಿಲ್ಲಿಸಿದರು. ಕೂಡಲೆ ವಿಕ್ರಮಸಿಂಹನು "ಈ ದುಷ್ಟನನ್ನು ಕಾರಾಗೃಹಕ್ಕೆ ತೆಗೆದುಕೊಂಡೊಯ್ದು, ಬಂಧಿಸಿರಿ" ಎಂದು ಆಜ್ಞಾಪಿಸಿದನು. ಶಿಪಾಯಿಗಳು ಆತನನ್ನು ಒಯ್ಯುವಾಗ್ಗೆ "ಎಲೆ ಧರ್ಮಭ್ರಷ್ಟ, ಯವನ! ನಾನು ಈಗ ನಿನಗೆ ಯೋಗ್ಯಶಿಕ್ಷೆಯನ್ನು ಮಾಡದಿದ್ದರೂ, ಮುಂದೆ ಸಮಯದೊರೆತಾಗ್ಗೆ ಈ ಅಪಮಾನದ ಸೇಡು ತೀರಿಸಿಕೊಳ್ಳುವೆನು. ಒಂದುವೇಳೆ ನಿನ್ನಲ್ಲಿ ಶೌರ್ಯದಭಿಮಾನವಿದ್ದರೆ ನನ್ನ ಈ ಕತ್ತಿಯನ್ನು ತೆಗೆದುಕೊ. ಹೊತ್ತುದೊರೆತಾಗ್ಗೆ ನೋಡುತ್ತೇನೆ" ಎಂದು ಪ್ರತಾಪನು ಗರ್ಜಿಸಿದನು.

ಪ್ರತಾಪನ ಈ ಗರ್ವೋಕ್ತಿಯನ್ನು ಕೇಳಿದಕೂಡಲೆ ದಿಲೇರಖಾನನಿಗೆ ಹಿಡಿಸಲಾರದಷ್ಟು ಸಿಟ್ಟುಬಂತು "ಮೂರ್ಖ! ಈ ಬಂಗೀ ದಿಲೇರಖಾನನು ಮಹಮ್ಮದೀಯ ವಂಶದ ಪ್ರಸಿದ್ಧಪುರುಷನಿರುವನು. ಯುದ್ಧದಲ್ಲಿ ಇತನು ಎಂದೂ ಹಿಂದರಿಯುವವನಲ್ಲ, ನನಗೆ ಪ್ರಾಣದ ಭಯವು ಸ್ವಲ್ಪವೂ ಇಲ್ಲ, ನಿನಗೆ ಸಮಯದೊರೆತಾಗ್ಗೆ ಬಂದು ನಿನ್ನ ಇಚ್ಛೆಯನ್ನು ಪೂರ್ಣಮಾಡಿಕೊಳ್ಳಬಹುದು. ಅಂದರೆ ಮುಂದೆ ನೀನು ಎಂದೂ ಯುದ್ಧವನ್ನು ಬಯಸದಂತೆ ತುಂಬಾ ಸಂತೋಷಗೊಳಿಸುವೆನು" ಎಂದು ಸಮೀಪದಲ್ಲಿ ಬಿದ್ದಿರುವ ಕತ್ತಿಯನ್ನು ಎತ್ತಿಕೊಂಡನು. ಕೂಡಲೆ ಶಿಪಾಯಿಗಳು ಪ್ರತಾಪನನ್ನು ಕಾರಾಗೃಹಕ್ಕೊಯ್ದರು.

# ಎರಡನೆಯ ಪ್ರಕರಣ.

## ಚಿತ್ರಮಾರುವವಳು

ಒಳ್ಳೇ ಮಧ್ಯಾನ್ಹದ ಸಮಯ ಸೂರ್ಯನು ನೆತ್ತಿಯಮೇಲೆ ತನ್ನ ಉಜ್ವಲವಾದ ಕಿರಣಗಳಿಂದ ಪ್ರಜ್ವಲಿಸುತ್ತಿರುವನು ಮಾನವ ಪ್ರಾಣಿಯೊತ್ತಟ್ಟಿಗಿರಲಿ, ಪಶುಪಕ್ಷಿಗಳು ತಮ್ಮ ತಮ್ಮ ಉದರಪೋಷಣೆ ಯನ್ನು ಬಿಟ್ಟು ವೃಕ್ಷಗಳ ನೆರಳಲ್ಲಿ ಸ್ವಸ್ಥ ಕುಳಿತಿರುತ್ತವೆ ಈ ಸಮಯ ದಲ್ಲಿ ರೂಪನಗರದ ರಾಜಮಾರ್ಗದಲ್ಲಿ ಒಬ್ಬ ಮುಸಲ್ಮಾನ ಜಾತಿಯ ವೃದ್ಧೆಯು ಒಗಲಲ್ಲಿ ಗಂಟಿಟ್ಟುಕೊಂಡು ತ್ವರೆಯಿಂದ ರಾಜಮಹಾಲಿನ ಕಡೆಗೆ ನಡೆದಿರುತ್ತಾಳೆ ಏಳು ತಾಸು ಹೊತ್ತೇರಿದ್ದರಿಂದ ಕಾಲುಗಳು ಹುರಪಳಿಸುತ್ತಿದ್ದವು ಆದರೆ ಕಾಲಲ್ಲಿ ಜೋಡು ಇದ್ದದ್ದರಿಂದ ಆಕೆಗೆ ಅದರ ಅನುಭವವಾಗುತ್ತಿದ್ದಿಲ್ಲ ಪ್ರಖರವಾದ ಸೂರ್ಯತಾಪದಿಂದ ಮೈಯಲ್ಲ ಬೆವರು ಸುರಿಯುತ್ತಿರುವುದರಿಂದ ಅರಿವೆಗಳೆಲ್ಲ ಮಾತ್ರ ಒದ್ದೆ ಯಾಗಿದ್ದವು , ಮತ್ತು ಮುಖಮುದ್ರೆಯಿಂದ ಆಕೆಯು ಬಹುದೂರದಿಂದ ನಡೆದು ಬಂದಿರಬೇಕೆಂದೂ ಆಕೆಗೆ ವಿಶ್ರಾಂತಿಯು ಬೇಕಾಗಿತ್ತೆಂದೂ ಸಹಜ ಕಂಡುಬರುತ್ತಿತ್ತು ಸುದೈವದಿಂದ ರಾಜವಾಡೆಯು ಸಮೀಪಿಸಿದ್ದರಿಂದ ಅವಳಿಗೆ ಬಹಳ ಆನಂದವಾಯಿತು ಆದಷ್ಟು ತೀವ್ರವಾಗಿ ನಡೆದು ಅರಮ ನೆಯ ಹೆಬ್ಬಾಗಿಲಿಗೆ ಬಂದು ಮುಟ್ಟಿದಳು

ರೂಪನಗರವು ಸಣ್ಣ ಊರಿದ್ದಾಗ್ಯೂ ಅರಮನೆಯ ಸೌಂದರ್ಯವು ನೋಡತಕ್ಕಂಥದಿತ್ತು ಎಷ್ಟೋ ಕಲಾಕೌಶಲ್ಯದ ಕೆಲಸಗಳು ಅಲ್ಲಿ ಶೋಭಿ ಸುತ್ತಿದ್ದುವು. ಅದರೊಳಗೂ ದಿವಾಣಖಾನೆಯ ಶೃಂಗಾರವು ಪ್ರೇಕ್ಷ ಣೀಯವಾಗಿತ್ತು. ವಾಚಕರ, ನಿಮ್ಮ ಆಯುಷ್ಯದಲ್ಲಿ ಒಮ್ಮೆಯಾದರೂ ಅದನ್ನು ಕಂಡು ನಿಮ್ಮ ಜನ್ಮವನ್ನು ಸಾರ್ಥಕಮಾಡಿಕೊಳ್ಳಿರಿ.

ದಿವಾಣಖಾನೆಯಲ್ಲಿ ರತ್ನಗಂಬಳಿಯನ್ನು ಹಾಸಿದ್ದರು ಮೇಲೆ ಹತ್ತು ಹದಿನೈದು ತರುಣಿಯರು ಕುಳಿತು ನಗೆಮಾತುಗಳನ್ನಾಡುತ್ತಿದ್ದರು. ವಿಷಯವಿಂಥದೇ ಎಂದು ಹೇಳಲಿಕ್ಕಾಗದು ಆದರೆ ವಿಶೇಷವಾಗಿ ಅವರೆಲ್ಲರೂ ತರುಣಿಯರೇ ಇದ್ದದ್ದರಿಂದ ಹಾಸ್ಯರಸಪ್ರಧಾನವಾಗಿದ್ದದ್ದು ಸ್ವಾಭಾವಿಕವು ಆ ಚಿತ್ರಮಾರುವವಳು ದ್ವಾರಪಾಲಕರ ಅನುಮತಿಯಿಂದ ಅಲ್ಲಿಗ ಬಂದಕೂಡಲೆ ಈ ತರುಣಿಯರ ನಗೆಗಂತೂ ಮಿತಿಯಿಲ್ಲದಾಯಿತು

ಮುದುಕೆಯು ಇವರ ನಗೆಯನ್ನು ಲಕ್ಷಿಸದೆ, ಹಸ್ತಿದಂತದ ಹಲಗೆಗಳಮೇಲೆ ತೆಗೆದಿರುವ ಚಿತ್ರವಿಚಿತ್ರವಾದ ತಸಬೀರುಗಳನ್ನು ತೋರಿಸಹತ್ತಿದಳು ಚಿತ್ರಗಳು ಸಣ್ಣವಿದ್ದಾಗ್ಯೂ ಬಹಳ ಉತ್ಕೃಷ್ಟವಾಗಿದ್ದವು. ಮಾರುವ ಉದ್ದೇಶದಿಂದ ಆ ಮುದುಕಿಯು ಒಂದೊಂದೇ ಚಿತ್ರವನ್ನು ತೋರಿಸುವದಕ್ಕ ಆರಂಭಿಸಿದಳು. ಆಕೆ ಅವುಗಳನ್ನು ತೋರಿಸಿದಂತೆ ಆ ತರುಣಿಯರು, ಯಾರದು? ಏನು ? ಮುಂತಾದ ಪ್ರಶ್ನ ಮಾಡಹತ್ತಿದರು. ಎಷ್ಟೋ ತಸಬೀರುಗಳನ್ನು ನೋಡಿ, ಅವುಗಳಮೇಲ ಟೀಕಾಮಾಡಿದ ಮೇಲ ಮುದುಕೆಯು ಜಹಾಂಗೀರಬಾದಷಹನ ಚಿತ್ರವನ್ನು ತೋರಿಸಿದಳು. ಒಬ್ಬ ಬಾಲೆಯು ಅದರ ಬೆಲೆಯನ್ನು ಕೇಳಿದಳು ಅದಕ್ಕೆ ಆ ಮುದುಕಯು ವಿಶೇಷ ಬೆಲೆ ಹೇಳಿದಳು ಆ ಬಾಲೆಯು “ ಚಿತ್ರಕ್ಕೆ ಇಷ್ಟು ಬೆಲಯಾದಮೇಲೆ ನಿಜವಾದ ಮನುಷ್ಯನಿಗ ನೂರ್‌ಜಹಾನ ಬೇಗಮ್ಮಳು ಎಷ್ಟು ಬೆಲೆಯನ್ನು ಕೊಟ್ಟಿದ್ದಳು ? ” ಎಂದು ಕೇಳಿದಳು

ಆ ಮುದುಕಯಾದರೂ ಜೇಷ್ಟೆಯಲ್ಲಿ ಕಡಿಮೆಯಾಗಿದ್ದವಳಲ್ಲ. ಆ ತರುಣಿಯ ಪ್ರಶ್ನಕ್ಕೆ ಕೂಡಲೆ “ ದುಡ್ಡಿಲ್ಲದ ” ಎಂದು ಉತ್ತರವಿತ್ತಳು ಬಾಲೆಯು “ ಅಸಲಿಗೆ ಬೆಲ ಇಲ್ಲದಮೇಲೆ ಅದರ ನಕಲನ್ನು ಒಂದು ಪೈಗ ಕೊಟ್ಟು ಹೋಗು. ” ಇದನ್ನು ಕೇಳಿದಾಗ ಎಲ್ಲರೂ ನಗಹತ್ತಿದರು ಮುದುಕೆಯು ವಿಶೇಷ ಗಾಬರಿಯಾದಳು. ತನ್ನ ಚಿತ್ರಗಳನ್ನಲ್ಲ ತಿರಿಗಿ ತೆಗೆದುಕೊಂಡು “ ನಿಮ್ಮ ನಗೆಯಿಂದ ನನ್ನ ಚಿತ್ರಗಳನ್ನು

ಕೊಂಡಂತಾಗಲಿಲ್ಲ ರಾಜಕನ್ನೆಗೆ ತಿಳಿಸಿರಿ ಅಂದರೆ ಮೇಲಾದ ಮಾಲನ್ನು ತೋರಿಸುತ್ತೇನೆ ಆಕೆಗೋಸ್ಕರವಾಗಿಯೆ ಈ ಎಲ್ಲ ತಸಬೀರುಗಳನ್ನು ತಂದಿರುತ್ತೇನೆ ಇದನ್ನು ಕೇಳಿದಕೂಡಲೆ ಎಲ್ಲರೂ ನಾಲ್ಕು ಕಡೆಯಿಂದ "ಅಮ್ಮಾ! ನಾನೇ ಆ ರಾಜಕನ್ನೆಯು" "ಅಲ್ಲ, ಅವಳಲ್ಲ ಮುದುಕಮ್ಮ, ನಾನು ರಾಜಕನ್ನೆಯು" ಎಂದು ಹೇಳುತ್ತಿದರು ಇದನ್ನು ಕಂಡು ಆ ಮುದುಕಯು ತೀರ ಗಾಬರಿಯಾಗಿ ಸುತ್ತಲೂ ನೋಡುತ್ತಿದಳು ಆ ತರುಣಿಯರೆಲ್ಲರೂ ವಿಶೇಷವಾಗಿ ನಗುತ್ತಿದರು

ಇಷ್ಟರಲ್ಲಿ ಅವರು ಒಮ್ಮೆಂದೂಮ್ಮೆ ಸ್ತಬ್ಧರಾದರು ಎಲ್ಲ ಗೊಂದಲವೂ ಕಟ್ಟಾಯಿತು ಎಲ್ಲರೂ ಒಬ್ಬರನ್ನೊಬ್ಬರು ನೋಡಹತ್ತಿದರು ಮುದುಕಿಗೆ ಇದರ ಕಾರಣವು ಗೊತ್ತಾಗಲಿಲ್ಲ ಹಿಂದಕ್ಕೆ ಮರಳಿ ನೋಡಿದಳು ಒಬ್ಬ ಲೋಕಸುಂದರಿಯು ಅಲ್ಲಿ ನಿಂತಿದ್ದಳು ಮುದುಕೆಯು ಏಕಾಗ್ರಚಿತ್ತದಿಂದ ದಿಟ್ಟಿಸಿ ನೋಡಹತ್ತಿದಳು ಆ ಮೂರ್ತಿಯ ಮೋಹಕತೆಯನ್ನು ನೋಡಿ ಮುದುಕಿಗೆ ಬಹಳ ಆಶ್ಚರ್ಯವೆನಿಸಿತು ಮುದುಕೆಯು ಆ ಮೂರ್ತಿಯನ್ನು ದಿಟ್ಟಿಸಿ ನೋಡಹತ್ತಿದ ಕೂಡಲೆ ಒಬ್ಬ ಬಾಲಿಕೆಯು ನಗಹತ್ತಿದಳು ಕಡೆಗೆ ತಡೆಯಲಾರದ ವಿಶೇಷ ಘಟ್ಟಿಯಾಗಿಯೇ ನಗಹತ್ತಿದಳು ನಗುನಗುತ್ತ ನೆಲಕ್ಕೆ ಕುಳಿತುಬಿಟ್ಟಳು ಇದನ್ನು ಕಂಡು ಮುದುಕೆಯು ಅಳಹತ್ತಿದಳು

ಇದನ್ನು ಕಂಡು ಆ ಮೂರ್ತಿಮಂತಳಾದ ಮೋಹಿನಿಯು "ಅಮ್ಮಾ! ಅಳುವದೇಕೆ" ಎಂದಳು ಕೂಡಲೆ ಆಕೆಯು ರಾಣಿಯಾಗಲಿ ರಾಜಕನ್ನೆಯಾಗಲಿ ಇರಬಹುದೆಂದು ಮುದುಕೆಯು ಪ್ರಣಾಮಮಾಡಿದಳು

ಆ ಲೋಕಸುಂದರಿಯು ವಿಕ್ರಮಸಿಂಹನ ಮಗಳಾದ ಚಂಚಲಕುಮಾರಿಯು ಮುದುಕೆಯೊಡನೆ ಈವರೆಗೆ ನಗೆಯಾಟವಾಡಿದ ಬಾಲಿಕೆಯು ಆಕೆಯ ಸಖಿಯು ದಿವಾಣಖಾನೆಯಲ್ಲಿ ರಾಜಕುಮಾರಿಯು ಬಂದಕೂಡಲೆ ಅಲ್ಲಿಯ ಸ್ಥಿತಿಯನ್ನು ಕಂಡು ಆಕೆಗೆ ಸ್ವಲ್ಪ ನಗೆಯುಂಟಾ

ಗಿತ್ತು ಈಗ ಮುಗುಳುನಗೆಯಿಂದ 'ಅಮ್ಮಾ! ಇಲ್ಲಿಗೆ ಯಾಕೆಬಂದಿದ್ದಿ' ಎಂದು ಕೇಳಿದಳು "ಆಕೆಯು? ಚಿತ್ರಮಾರುವವಕ್ಕೆ ಬಂದಿರುವಳು" ಎಂದು ಈವರೆಗೆ ಚೇಷ್ಟೆಮಾಡಿದ ಬಾಲಿಕೆಯು ಉತ್ತರಕೊಟ್ಟಳು

"ಹಾಗಾದರ ನಿಮಗಿಷ್ಟು ನಗಯೇಕೆ?" ಎಂದು ರಾಜಕುಮಾರಿಯು ಸಿಟ್ಟಿನಿಂದ ಕೇಳಿದಳು ಅದಕ್ಕ ಎಲ್ಲರೂ ಗಾಬರಿಯಾದರು ಅವರೊಳಗಿನವಳೊಬ್ಬ ತರುಣಿಯು ಸ್ವಲ್ಪ ಧಿಟ್ಟತನದಿಂದ "ಅದಕೊನಗೇನೂ ನಮ್ಮ ತಪ್ಪಿಲ್ಲ ಈಕೆ ಯಾವತ್ತು ಬಾದಷಹರ ಚಿತ್ರಗಳನ್ನು ಮಾರಲಿಕ್ಕೆತಂದಿದ್ದಾಳ ಇಂಥ ಚಿತ್ರಗಳೇನು ನಮ್ಮಲ್ಲಿಲ್ಲವ?" ಎಂದದ್ದಕ್ಕೆ ಆ ಮುದುಕೆಯು "ನಿಮ್ಮಲ್ಲಿರಲಿಕ್ಕಿಲ್ಲೆಂದು ನಾನು ಅನ್ನುವದಿಲ್ಲ ಒಂದಿದ್ದರೆ ಮತ್ತೊಂದನ್ನು ತಗದುಕೊಳ್ಳಬಾರದೇನು? ತಮ್ಮಂಥವರೆ ಹೀಗ ಹೇಳಿದಮೇಲೆ ನಮ್ಮಂಥ ಒಡವರ ಹೊಟ್ಟೆ ತುಂಬುವ ಬಗ ಹ್ಯಾಗ?"

ಈ ಅಂತಃಕರಣದ ಮಾತು ಹೇಳಿದಕೂಡಲೆ ರಾಜಕನ್ನಿಗೆ ಆ ಭಾವಪಟಗಳನ್ನು ನೋಡುವ ಲವಲವಿಕೆಯುಂಟಾಯಿತು ಕೂಡಲೆ ಮುದುಕೆಯು ಒಕಬರ, ಜಾಹಂಗೀರ, ಷಹಜಹಾನ, ನೂರ್‌ಜಹಾನ ಮೊದಲಾದವರ ಚಿತ್ರಗಳನ್ನು ತೋರಿಸಿದಳು ಅವುಗಳನ್ನು ಕಂಡು, ಅರಸುಮಗಳು "ಇವರೆಲ್ಲರೂ ನಮ್ಮ ರಾಜಪುತ್ರರ ಸಂಬಂಧಿಕರಾದದ್ದರಿಂದ ಇವರೆಲ್ಲರ ಭಾವಪಟಗಳು ನಮ್ಮಲ್ಲಿ ಬೇಕಾದಷ್ಟು ಅವೆ ನಿನ್ನಲ್ಲಿ ಹಿಂದೂ ಅರಸರ ಭಾವಪಟಗಳೇನಾದರೂ ಇದ್ದರೆ ತೆಗ" "ಓ, ಹೂ, ಬೇಕಾದಷ್ಟು" ಎಂದು ರಾಜಾಮಾನಸಿಂಹ, ರಾಜಾಜಗತ್‌ಸಿಂಹ, ಬೀರಬಲ್ಲ ಮೊದಲಾದವರ ಚಿತ್ರಗಳನ್ನು ತೋರಿಸಿದಳು ಅವುಗಳನ್ನಾದರೂ ರಾಜಪುತ್ರಿಯು ನೋಡಿ ಹಿಂದಕ್ಕೆ ಕೊಟ್ಟು "ನನಗೆ ಇವು ಬೇಕಾಗಿಲ್ಲ. ಇವರೆಲ್ಲರು ಹಿಂದುಗಳಲ್ಲ, ಯವನರ ಸೇವಕರು" ಎಂದಳು.

ಅದಕ್ಕೆ ಮುದುಕೆಯು ನಕ್ಕು "ಅಮ್ಮಾ, ಯಾರು ಯಾರ ಸೇವಕರೊ ನನಗೆ ಗೊತ್ತಿಲ್ಲ ನನ್ನಲ್ಲಿರುವವುಗಳನ್ನು ತೋರಿಸಿದೆನು. ನಿಮಗೆ

ಸರಿಕಂಡವುಗಳನ್ನು ತೆಗೆದುಕೊಳ್ಳಿರಿ " ಎಂದು ಪುನಃ ಕೆಲವು ಚಿತ್ರಗಳನ್ನು ತೋರಿಸುವದಕ್ಕಾರಂಭಿಸಿದಳು ರಾಣಾಪ್ರತಾಪಸಿಂಹ, ರಾಣಾ ಅಮರಸಿಂಹ, ಕರ್ಣಸಿಂಹ, ಜಸವಂತಶಿಂಗ, ಮುಂತಾದವರ ಕೆಲವು ಪಟಗಳನ್ನು ಆರಿಸಿದಳು ಮುದುಕೆಯು ಒಂದು ಚಿತ್ರವನ್ನು ಮಾತ್ರ ತೋರಿಸದೆ ಮುಚ್ಚುತ್ತಿದ್ದಳು. ಅದನ್ನು ಕಂಡು ಅರಸುಮಗಳು " ಅದನ್ನೇಕೆ ಮುಚ್ಚುವಿಯೆ? " ಎಂದಕೂಡಲೆ ಮುದುಕೆಯು ಹೆದರುತ್ತ " ಅದು ತಪ್ಪಿಬಂದದೆ. ಅದನ್ನು ತಮಗೆ ತೋರಿಸುವಂತಿಲ್ಲ ಅದು ನಿಮ್ಮ ತಂದೆಯ ಶತ್ರುವಿನ ಚಿತ್ರವು " ಆದಕ್ಕೆ ರಾಜಕನ್ನಿಕೆಯು ವಿಚಾರದಲ್ಲಿ ಮಗ್ನಳಾಗಿ " ನನ್ನ ತಂದೆಯ ವೈರಿಯು ಯಾರು? ಆತನಹೆಸರೇನು?" ಮುದುಕೆಯು ಅಂಜಂಜುತ್ತ " ಮಹಾರಾಣಾ ರಾಜಸಿಂಹ " ಇದನ್ನು ಕೇಳಿದ ಕೂಡಲೆ ರಾಜಪುತ್ರಿಯು ಮುಗುಳು ನಗೆನಗುತ್ತ " ಪ್ರತಾಪಶಾಲಿಗಳು ಸ್ತ್ರೀಯರಿಗೆ ಎಂದೂ ವೈರಿಗಳಲ್ಲ ಇದನ್ನು ನಾದು ತಗದುಕೊಳ್ಳುತ್ತೇನೆ " ಎಂದು ಅದನ್ನು ಕೈಯಲ್ಲಿ ತಕ್ಕೊಂಡು ಬಹಳಹೊತ್ತಿನವರೆಗೆ ದಿಟ್ಟಿಸಿ ನೋಡಹತ್ತಿದಳು ನೋಡುತ್ತ, ನೋಡುತ್ತ, ಅವಳ ಮುಖವು ಪ್ರಫುಲ್ಲಿತವಾಯಿತು.

ರಾಜಕನ್ನಿಕೆಯು ರಾಜಸಿಂಹನ ಭಾವಪಟವನ್ನು ನೋಡಿ ಸಂತೋಷಪಟ್ಟದ್ದಕ್ಕೆ ಮುದುಕಿಗೆ ಬಲು ಆನಂದವಾಯಿತು ಆಮೇಲೆ ಅವಳು " ಅಮ್ಮಾ, ಪ್ರತಾಪಶಾಲಿಗಳ ಭಾವಪಟಗಳನ್ನು ತಗದುಕೊಳ್ಳುವ ಮನಸ್ಸಿದ್ದರೆ ಮತ್ತೊಬ್ಬ ವೀರಪುರುಷನ ಚಿತ್ರವನ್ನು ತೋರಿಸುತ್ತೇನೆ. ಆತನಿಗೆ ಸಮಾನರು ಈ ಪೃಥ್ವಿಯಲ್ಲಿ ಯಾರೂ ಇಲ್ಲ. ' ಎಂದು ಒಂದು ಚಿತ್ರವನ್ನು ತೋರಿಸಿದಳು. ಅದನ್ನುಕಂಡು ಅರಸುಮಗಳು " ಇದು ಯಾರದು? " ಎಂದದ್ದಕ್ಕೆ ಮುದುಕೆಯು " ಆಲಂಗೀರ ಬಾದಶಹನದು " ಎಂದಳು ಅದಕ್ಕೆ ರಾಜಪುತ್ರಿಯು " ಇದೂ ಇರಲಿ, ಎಂದು ಚಿತ್ರಗಳನ್ನು ತಕ್ಕೊಂಡು ಅವುಗಳ ಬೆಲೆಯನ್ನು ಕೊಡುವದಕ್ಕೆ ದಾಸಿಗೆ ಅಪ್ಪಣೆಯನ್ನು ಕೊಟ್ಟಳು ದಾಸಿಯು ಹಣ ತರುವದಕ್ಕ ಹೋದಳು.

ಆಮೇಲೆ ಅರಸುಮಗಳು, “ ಗೆಳತಿಯರೆ, ನಾವೆಲ್ಲರು ಒಂದು ವಿನೋದದ ಆಟವಾಡೋಣ ಬನ್ನಿರಿ. ” ಎಂದು ಎಲ್ಲರನ್ನು ಕರೆದಳು ಕೂಡಲೆ ಅವರೆಲ್ಲರು ಒಟ್ಟಾಗಿಬಂದು “ ಯಾವಆಟ ” ಎಂದು ಕೇಳಿದರು. ಅದಕ್ಕೆ ರಾಜಕನ್ನೆಯು “ ಈ ಔರಂಗಜೇಬನ ಚಿತ್ರವನ್ನು ನೆಲದಮೇಲಿಟ್ಟು, ಎಲ್ಲರೂ ಒಂದೊಂದುಸಾರೆ ನಮ್ಮ ಎಡಗಾಲ ಹಿಮ್ಮಡದಿಂದ ಒದಯೋಣ, ಯಾರಪೆಟ್ಟಿನಿಂದ ಅದರ ಮೂಗು ನಾಶವಾಗುವದೋ ಅವರೇ ಶ್ರೇಷ್ಠರು ”

ಇದನ್ನು ಕೇಳಿ ಎಲ್ಲರ ಮುಖಗಳು ಒಣಗಿದವು ಆಕೆಯ ಎದುರಿಗೆ ಮಾತಾಡಲಿಕ್ಕೆ ಯಾರದೂ ಎದೆಯಾಗಲೊಲ್ಲದು ಆದರೆ ಅವಳ ಪ್ರಿಯಸಖಿಯಾದ ನಿರ್ಮಲಕುಮಾರಿಯು “ ಗಳತಿ, ಹಾಗೆ ಹೇಳಬಾರದು, ಒಂದುವೇಳೆ ಆ ಧೂರ್ತನ ಕಿವಿಯಮೇಲೆ ಈ ಮಾತು ಬಿದ್ದರೆ ನಮ್ಮ ರೂಪನಗರದ ಒಂದು ಕಲ್ಲುಸಹ ನೋಡಲಿಕ್ಕೆ ಸಿಗಲಿಕ್ಕಿಲ್ಲ, ” ಎಂದಳು ಇದನ್ನು ಕೇಳಿ, ರಾಜಪುತ್ರಿಯು ನಗುತ್ತ ಚಿತ್ರವನ್ನು ನೆಲದ ಮೇಲೆ ಇಟ್ಟು “ ಇವನನ್ನು ಒದಯುವ ಪ್ರೀತಿಯಿರುವವರೆಲ್ಲರೂ ಬನ್ನಿರಿ ” ಎಂದು ಹೇಳುವಷ್ಟರಲ್ಲಿ ನಿರ್ಮಲಕುಮಾರಿಯು ಎದ್ದು ಒಂದು ಚಂಚಲಕುಮಾರಿಯ ಬಾಯನ್ನು ಘಟ್ಟಿಯಾಗಿ ಮುಚ್ಚಿದಳು. ಮತ್ತು “ ಸಖಿ, ಹಾಗೆ ಹೇಳಬಾರದು” ಎಂದು ಆಗ್ರಹಮಾಡಿದರೂ ಚಂಚಲಕುಮಾರಿಯು ಅದನ್ನು ಕೇಳದೆ ಆ ಔರಂಗಜೇಬನ ಚಿತ್ರದ ಮೇಲೆ ತನ್ನ ಎಡಗಾಲ ಹಿಂಬಡವನ್ನಿಟ್ಟು ಕಸುವಿನಿಂದ ತನ್ನ ಕಾಲಿನಲ್ಲಿ ಸುತ್ತಲೂ ತಿರುಗಿಸಿ ಅದನ್ನು ಕೆಡಸಿ ಚಲ್ಲಿಕೊಟ್ಟಳು.

“ ಸಖಿ, ಇದೇನು ತುಚ್ಛಕೆಲಸಮಾಡಿದಿ ? ” ಎಂದು ನಿರ್ಮಲಕುಮಾರಿಯು ಮೊದಲಾದ ಯಾವತ್ತು ಸಖಿಯರು ಭೀತಿಯಿಂದ ನಡುಗಹತ್ತಿದರು. ಆಮೇಲೆ ರಾಜಕನ್ನೆಯು “ ಸಣ್ಣಮಕ್ಕಳು ಗೊಂಬೆಯೊಡನೆ ಆಡುತ್ತ ಆಡುತ್ತ ಸಂಸಾರದೊಳಗಿನ ಮಾತುಗಳಿಂದ ತಮ್ಮ ಇಚ್ಛೆಯನ್ನು ಪೂರ್ಣಮಾಡಿಕೊಳ್ಳುವಂತೆ ಈ ದುರುಳನ ತಲೆಗೆ ಒದ್ದು ನನ್ನ

ಇಚ್ಛೆಯನ್ನು ಪೂರ್ಣಮಾಡಿಕೊಂಡೆ" ಆಮೇಲೆ ಸ್ವಲ್ಪಹೊತ್ತಿನವರೆಗೆ ನಿರ್ಮಲೆಯನ್ನು ನೋಡಿ ಮತ್ತೆ "ನಿರ್ಮಲೆ, ಬಾಲ್ಯದೊಳಗಿನ ಕ್ರೀಡೆಯನ್ನು ಸಂಸಾರದಲ್ಲಿ ಅನುಭವಿಸುವಂತೆ ನಾನು ನನ್ನ ಈ ಕ್ರೀಡೆಯನ್ನು.." ಈ ವಾಕ್ಯವು ಪೂರ್ಣವಾಗುವುದರೊಳಗಾಗಿ ನಿರ್ಮಲೆಯು ಆಕೆಯ ಬಾಯನ್ನು ಒತ್ತಿಹಿಡಿದಳು. ಆದರೆ ಆ ವಾಕ್ಯದ ಅರ್ಥವು ಎಲ್ಲರಿಗೂ ತಿಳಿಯಿತು ಭಯದಿಂದ ಮುದುಕೆಯ ಅರಿವೆ ಬಿಚ್ಚಿಹೋಗಿತ್ತು ತಾನು ಯಾವಾಗ್ಗೆ ಹೊರಬಿದ್ದು ಹೋದೇನೆಂಬ ವಿಚಾರದಲ್ಲಿ ಅವಳು ಮಗ್ನಳಾಗಿದ್ದಳು ಇಷ್ಟರಲ್ಲಿ ದಾಸಿಯು ಹಣವನ್ನು ತಂದಳು ಕೈಯಲ್ಲಿ ಹಣಬಿದ್ದಕೂಡಲೆ ಮುದುಕೆಯು ಹೋದಳು.

ಮುದುಕೆಯು ಹೊರಬಿದ್ದ ಕೂಡಲೆ ನಿರ್ಮಲಕುಮಾರಿಯು ಓಡುತ್ತ ಅವಳ ಹತ್ತರಹೋಗಿ ಅವಳ ಕೈಯಲ್ಲಿ ಒಂದು ಮೋಹರವನ್ನು ಕೊಟ್ಟು "ಅಮ್ಮಾ, ಈವರೆಗೆ ಆದ ಸಂಗತಿಯನ್ನು ಯಾರಮುಂದ ಹೇಳಬೇಡ ಎಲುವಿಲ್ಲದ ನಾಲಿಗ, ಕಾರಣ ಅರಸುಮಗಳು ಬಾಯಿಗ ಬಂದಂತೆ ಮಾತಾಡುತ್ತಾಳೆ ಮುದುಕಿಯು ಮೋಹರವನ್ನು ತನ್ನ ಸಣ್ಣ ಕೈಚೀಲದಲ್ಲಿ ಹಾಕುತ್ತ "ತಾಯಿ, ಇದು ಯ್ಯಾರಮುಂದಾದರೂ ಹೇಳುವ ಮಾತ? ನಾನು ಯಾವಾಗಲೂ ನಿಮ್ಮ ದಾಸಿ, ಯಾರ ಮುಂದೂ ಹೇಳುವುದಿಲ್ಲ." ನಿರ್ಮಲಕುಮಾರಿಯು ಸಂತುಷ್ಟಳಾಗಿ ಹಿಂದಕ್ಕೆ ತಿರುಗಿದಳು.

# ಮೂರನೆಯ ಪ್ರಕರಣ

## ಔರಂಗಜೇಬನ ಮನೋನಿಶ್ಚಯ

ಚಿತ್ರ ಮಾರುವವಳು ಮನಗೆ ಬಂದು ಮುಟ್ಟಿದಳು ಆಕೆಯ ಮನೆಯು ಆಗ್ರಾಪಟ್ಟಣದಲ್ಲಿತ್ತು ಆದೇ ಅವಳ ಉದ್ಯೋಗವಾದ್ದರಿಂದ ಎಲ್ಲಿಬೇಕಾದಲ್ಲಿ ವಸತಿಯನ್ನು ಮಾಡುತ್ತಿದ್ದಳು ಮರುದಿವಸ ತನ್ನ ವ್ಯಾಪಾರಾಟವನ್ನು ಮುಗಿಸಿಕೊಂಡು ಮನೆಗ ಬರುತಿದ್ದಳು ಆದರೆ ಈ ಹೊತ್ತು ಎಲ್ಲಿಯೂ ನಿಲ್ಲದೆ ಹೊರಟು ಮನೆಗೆ ಬಂದಳು ಆಕೆ ಮನೆಗೆ ಬಂದುದರಿಂದ ಆಕೆಯ ಮಗನಿಗೆ ಅತ್ಯಂತ ಆನಂದವಾಯಿತು ಆ ಮಗ ನಾದರೂ ದಿಲ್ಲಿಯಲ್ಲಿ ಚಿತ್ರಗಳ ಅಂಗಡಿಯನ್ನು ಇಟ್ಟಿದ್ದನು

ರೂಪನಗರದ ರಾಜಕನ್ನೆಯ ವರ್ತನವನ್ನು ಮುದುಕಿಯು ಈ ವರಿಗೆ ಯಾರಮುಂದೂ ಹೇಳಿದ್ದಿಲ್ಲ ಆದ್ದರಿಂದ ಅವಳ ಮನಸ್ಸಿನಲ್ಲಿ ಸಮಾಧಾನವಿದ್ದಿಲ್ಲ ಯಾರಮುಂಗಾದರೂ ಹೇಳಬೇಕೆಂದು ಆತುರ ಳಾಗಿದ್ದಳು ಆದರೆ ಯಾರಿಂದಲಾದರೂ ಈ ಸುದ್ದಿಯು ಬಾದಷಹನಿಗೆ ತಿಳಿದರೆ ಅರಸುಮಗಳ ಗತಿಯು ನೆಟ್ಟಗಾಗಲಿಕ್ಕಿಲ್ಲೆಂದು ಹಳಹಳಿಸುತ್ತಿದ್ದಳು ಅದಕ್ಕಾಗಿ ಮನಸ್ಸನ್ನು ಸ್ವಲ್ಪ ಬಿಗಿಹಿಡಿಯಬೇಕಾಗುತ್ತಿತ್ತು. ಆದರೆ ಆಕೆಗೆ ರಾತ್ರಿ ನಿದ್ರೆಬರಲೊಲ್ಲದು ಊಟವು ಸೇಯನಿಸಲೊಲ್ಲದು, ಇದೇ ವಿಚಾರದಲ್ಲಿ ಯಾವಾಗಲೂ ಮಗ್ನಳಾಗಿದ್ದಳು ಇದರಿಂದ ಅವಳ ಸ್ಥಿತಿಯಲ್ಲಿ ಬಹಳ ಹೆಚ್ಚುಕಡಿಮೆಯಾಯಿತು ಇದನ್ನು ಕಂಡು ಮಗನು "ಅಮ್ಮಾ, ಹೀಗೇಕೆಗಾಬರಿಯಾಗಿರುವೆಯೆ?" ಎಂದು ಕೇಳಿದನು ಅದಕ್ಕೆ ಮುದುಕಿಯು "ಅಪ್ಪಾ, ಇಲ್ಲ, ನಾನು ಗಾಬರಿಯಾಗಿಲ್ಲ. ರೂಪನಗರದಲ್ಲಿ ಒಂದು ಚಮತ್ಕಾರವನ್ನು ಕಂಡೆನು." ಅದಕ್ಕೆ ಮಗ

ನು—“ಏನದು ?” ಮುದುಕಿಯು “ತಮ್ಮಾ, ಇಲ್ಲ. ಏನೂ ಇಲ್ಲ ನಮ್ಮಂಥವರು ಅಂಥ ಮಾತುಗಳನ್ನು ಮರೆತುಬಿಡಬೇಕು ದೊಡ್ಡವರ ಸಂಗತಿಯು ನಮಗೇಕೆಬೇಕು ?” ಹೀಗೆ ಮಾತಾಡುತ್ತ ಮಾತಾಡುತ್ತ, ಮುದುಕಿಯು ಸವರಿಸಿಕೊಳ್ಳಹತ್ತಿದಳು. ಅದಕ್ಕೆ ಮಗನು “ಏನೆಂಬು ದನ್ನು ಹೇಳುವಿಯೊ, ಇಲ್ಲವೋ ?” ಈನಿಷ್ಟುರದಮಾತಿಗೆ ಮುದು ಕಿಯು “ಅಪ್ಪಾ, ಮತ್ತೇನೂ ಇಲ್ಲ, ರೂಪನಗರದ ರಾಜಕನ್ನಿಕೆಯ ಮಾತು”

“ಸರಿ, ಒಳ್ಳೇ ಸುಂದರಿಯು ಇದನ್ನು ಹೇಳುವುದಕ್ಕೆ ಇಷು ಹೊತ್ತು ಮಾಡಿದಿಯಾ”

“ಅದೇನೂ ಅಲ್ಲ, ಆ ರಂಡೆಗೆ ಬಹಳಸೊಕ್ಕು, ಅಲ್ಲಾ! ನನ್ನಿಂದ ಅದು ಹೇಳುವ್ರದಾಗದು”

“ಎಲ್ಲಿಯ ರೂಪನಗರ ? ಏನು ಸೊಕ್ಕು ? ಅದರಿಂದ ನಮಗೇನು ಪ್ರಯೋಜನ ?”

“ಬರೇ ಸೊಕ್ಕು ಅಲ್ಲ. ಆ ತೊತ್ತಿನಮಗಳು ಬಾದಶಹ ಅಲಂ ಗೀರನನ್ನು ಸಹ ಮನ್ನಿಸುವುದಿಲ್ಲ”

“ಬಾದಶಹನನ್ನು ಬಯ್ದಳೆ ?”

“ಬರೆ ಬಯ್ದಳೇಕೆ, ಅದಕ್ಕೂ ಹೆಚ್ಚು”

“ಅದಕ್ಕೂ ಹೆಚ್ಚೇನು ? ಆತನನ್ನು ಹೊಡೆಯಲಿಲ್ಲವಲ್ಲ ?”

“ಅದಕ್ಕೂ ಹೆಚ್ಚು!”

“ಹೊಡೆಯುವುದಕ್ಕಿಂತಲೂ ಹೆಚ್ಚಿನದೆ ?”

“ಅಪ್ಪಾ, ಅದನ್ನು ಕೇಳಬೇಡ, ಆಕೆಯ ಉಪ್ಪುಂಡಿರುತ್ತೇನೆ”

“ಏನದು ?”

“ಮೊಹರುಕೊಟ್ಟಿರುವಳು”

“ಯಾಕೆ ?”

“ತನ್ನ ತಪ್ಪನ್ನು ಯಾರಮುಂದೂ ಹೇಳಬೇಡವೆಂದು”

" ಹಾಗಾದರೆ ನನಗೊಂದು ಮೊಹರವನ್ನು ಕೊಡು

" ಎಲ್ಲಿದೆ ? "

" ಇಲ್ಲದಿದ್ದರೆ ಅದನ್ನು ಹೇಳು "

" ಮತ್ತೇನೂ ಇಲ್ಲ ಬಾದಶಹನ ಚಿತ್ರ, ಛಿ ಛಿ ! ಅದನ್ನೇ ಹೇಳ ಬಾರದಾಗಿತ್ತು "

" ಬಾದಶಹನ ಚಿತ್ರವನ್ನು ಹರಿದಳೆ ? "

" ಕಾಲಿಂದ ತುಳಿದು ಹರಿದಳು ಅಯ್ಯೋ ! ಕೃತಘ್ನಳಾದೆನು "

" ಇದರೊಳಗೇನು ಕೃತಘ್ನತೆಯು ? ನಾನು ನಿನ್ನ ಮಗನಲ್ಲವೆ ?"

" ಅಪ್ಪಾ ! ಯಾರಮುಂದೂ ಹೇಳಬೇಡ "

" ಇಲ್ಲ, ಹೇಳುವದಿಲ್ಲ ಬೇರೆಯವರಿಗೆ ಹೇಳುವದರಿಂದ ನಮ ಗೇನು ಬರುತ್ತದೆ ? "

ಆಮೇಲೆ ಮುದುಕಿಯು ಆ ಭಾವಪಟವನ್ನು ಬಂಜುಬಾಮಾ ರಿಯು ಹರಿದ ಸಂಗತಿಯನ್ನೆಲ್ಲ ಇಪ್ಪುಕಾರ ಹಚ್ಚಿ ಹೇಳಿಬಿಟ್ಟಳು

ಮುದುಕಿಯ ಮಗನಾದ ಪಿಜರಖಾನನು ಆಮೇಲೆ ಎರಡು ದಿವಸ ಗಳವರೆಗೆ ಅಲ್ಲಿನಿಂತು ದಿಲ್ಲಿಯಲ್ಲಿರುವ ತನ್ನ ಅಂಗಡಿಗೆ ಬಂದನು " ಯಾವದಾದರೊಂದು ಗುಪ್ತಸಂಗತಿಯನ್ನು ಕೇಳಿದಕೂಡಲೆ ಎರಡನೆ ಯವರ ಮುಂದೆ ಯಾವಾಗ್ಗೆ ಹೇಳ್ವೆನೆಂಬ ಕುತೂಹಲವು ಎಲ್ಲರಲ್ಲಿಯೂ ಹುಟ್ಟುತ್ತದೆ ಇದು ಮನುಷ್ಯಸ್ವಭಾವವು ಪಿಜರಖಾನನಾದರೂ ಈ ನಿಯಮಕ್ಕೆ ವಿರುದ್ಧವಾಗಿ ಯಾಕೆ ನಡೆದಾನು ? ದಿಲ್ಲಿಗೆ ಹೋದಕೂಡಲೆ ತನ್ನ ಒಬ್ಬ ಪರಮ ಆಪ್ತನಮುಂದೆ ಹೇಳಿಬಿಟ್ಟನು ಆಮೇಲೆ ಈ ಸುದ್ದಿ ಯಿಂದ ಹಣದೊರಕಿಸುವ ಯುಕ್ತಿಯನ್ನು ಹುಡುಕಹತ್ತಿದನು

ವಾಚಕರೆ, ಈವರೆಗೆ ನಾವು ಬಂದೆವು ಇನ್ನುಮೇಲೆ ಬಾದ ಶಹನಕಡೆಗೆ ಹೋಗಬೇಕಾಗಿದೆ ಆ ಮೊಗಲ ಬಾದಶಹನ ಅಂತಃಪುರದ ಮತ್ತು ದೇಶದ ಸ್ಥಿತಿಯು ಹ್ಯಾಗಿತ್ತೆಂಬದನ್ನು ತಿಳಿದುಕೊಳ್ಳದಿದ್ದರೆ ಕಥೆ ಯ ರಹಸ್ಯವು ಅಷ್ಟು ಚನ್ನಾಗಿ ಬಿಂಬಿಸಲಿಕ್ಕಿಲ್ಲ, ಆದ್ದರಿಂದ ಆಕಾಲದ ರಾಜ್ಯಸೂತ್ರದ ಕಡೆಗೆ ಸ್ವಲ್ಪ ಲಕ್ಷ್ಯಕೊಡುವದು ಅವಶ್ಯವಾದದ್ದು

ಪ್ರಾಚೀನ ಮತ್ತು ಅರ್ವಾಚೀನ ಕಾಲದೊಳಗೆ ನಮ್ಮ ಭರತಖಂಡದಲ್ಲಿ ರಾಜಕಾರ್ಯಧುರಂಧರರಾದ ಪುರುಷಶ್ರೇಷ್ಠರು ಆಗಿಹೋದರು, ಅದರಂತೆ ಅಬಲೆಯರೆಂದು ಹೇಳಿಸಿಕೊಳ್ಳುವ ಸ್ತ್ರೀಯರೂ ಕೂಡ ತಮ್ಮ ರಾಜಕರಣಪಟುತ್ವದಿಂದಲೂ, ಅನುಪಮ ಚಾತುರ್ಯದಿಂದಲೂ ಪುರುಷವರ್ಗವನ್ನು ಚಕಿತಗೊಳಿಸಿ ಆ ಕಾಲದ ಇತಿಹಾಸದಲ್ಲಿ ತಮ್ಮ ಹೆಸರು ಸ್ಥಿರವಾಗುವಂತೆ ಮಾಡಿದ್ದಾರೆ. ನಮ್ಮ ಕಥೆಯ ಕಾಲಕ್ಕೆ ಸ್ವಲ್ಪ ಪೂರ್ವದಲ್ಲಿ ಮುಸಲ್ಮಾನರ ಇತಿಹಾಸದಲ್ಲಿ ಒಬ್ಬ ಪ್ರಸಿದ್ಧಸ್ತ್ರೀಯು ಆಗಿಹೋದಳು. ಆಕೆಯ ಹೆಸರು ಚಾಂದ ಬೀಬಿ, ಹಾಗೆಯೆ ಮೊಗಲರರಾಜಮನೆತನದಲ್ಲಿ ಎಷ್ಟೋ ರಾಜಕಾರಣಕುಶಲೆಯರು ಆಗಿಹೋದರು. ಔರಂಗಜೇಬನಿಗೆ ಇಬ್ಬರು ತಂಗಿಯರಿದ್ದರು. ಅವರಲ್ಲಿ ಹಿರಿಯವಳಾದ ಜಹಾನ ಆರಾಳ ಅಧಿಕಾರವು ಶಹಾಜಾನನ ದರಬಾರದಲ್ಲಿ ವಿಶೇಷವಾಗಿತ್ತು. ಶಹಜಾನನಾದರೂ ಬಹುಶಃ ಆಕೆಯು ಹೇಳಿದಂತೆಯೆ ನಡೆಯುತ್ತಿದ್ದನು. ಎರಡನೆಯವಳಾದ ರೋಷನ ಆರಾಳಳಲಕ್ಷ್ಯವು ತಂದೆಯ ಕಡೆಗೆ ಅಷ್ಟು ಸರಿಯಾಗಿ ಇದ್ದಿಲ್ಲ. ಆದರೆ ಅಣ್ಣನಾದ ಔರಂಗಜೇಬನ ಬಗ್ಗೆಯೇ ಅವಳ ಪ್ರೀತಿಯು ವಿಶೇಷವಾಗಿತ್ತು. ಔರಂಗಜೇಬನು ಅವಳ ಸಹಾಯದಿಂದಲೆ ತಂದೆಯನ್ನು ಸೆರೆಯಲ್ಲಿಟ್ಟು ರಾಜ್ಯಸೂತ್ರವನ್ನು ಕೈಕೊಂಡಿದ್ದನು. ಔರಂಗಜೇಬನ ದರಬಾರದಲ್ಲಿ ಅವಳು ತೋರಿಸಿದ್ದ ಪೂರ್ವದಿಕ್ಕು, ಧೂರ್ತನೂ ಮಹತ್ವಾಕಾಂಕ್ಷಿಯೂ, ಯಾರಮೇಲೆ ವಿಶ್ವಾಸವಿಡದವನೂ ಆದ ಬಾದಶಹನು ರೋಷನ ಆರಾಳ ಹೇಳಿಕೆಯಂತೆ ನಡೆಯುತ್ತಿದ್ದನು. ಆದಾಗ್ಯೂ ಸಂಶಯದ ಮೂರ್ತಿಯಂತಿದ್ದ ಆ ಬಾದಶಹನು ಎಚ್ಚರದಿಂದಲೇ ನಡೆಯುತ್ತಿದ್ದನು. ಶಹಾಜಾನನಕಾಲಕ್ಕೆ ನಡೆಯುತ್ತಿದ್ದಂತೆ ಜಹಾನ ಆರಾಳ ಅಧಿಕಾರವು ಈಗ ನಡೆಯದಂತಾಗಿತ್ತು ಮತ್ತು ಅದಕ್ಕೆ ಬದಲಾಗಿ ರೋಷನ ಆರಾಳ ಕಾರಭಾರವೆ ಹೆಚ್ಚಾಗಿತ್ತು. ಔರಂಗಜೇಬನ ದರ್ಬಾರದಲ್ಲಿ ರೋಷನ ಆರಾಳ ಅಧಿಕಾರವು ಮಿತಿ ಇಲ್ಲದಷ್ಟು ಬೆಳೆದಾಗ್ಯೂ ಅವಳಿಗೊಬ್ಬ ಶತ್ರು ಉಂಟಾಗಿದ್ದಳು. ಬಾದಶಹನ

ಅಂತಃಪುರದಲ್ಲಿ ಸ್ತ್ರೀಯರ ಹೊರ್ತು ಇತರರಿಗೆ ಪ್ರವೇಶವಿದ್ದಿಲ್ಲ. ತಾರ್ತರ ದೇಶದ ಸ್ತ್ರೀಯರ ಅಲ್ಲಿ ಪಹರೆಯನ್ನು ಮಾಡುತ್ತಿದ್ದರು. ಅವರೊಳಗಿನ ಮುಖ್ಯಸ್ಥಳಿಗೆ ಸೇನಾಪತಿ ಎಂದೆನ್ನುತ್ತಿದ್ದರು. ಅಂತಃಪುರದಲ್ಲೆಲ್ಲ ಅವಳ ಅಧಿಕಾರವು ಸಂಪೂರ್ಣವಾಗಿತ್ತು. ಆಕೆಯ ಅಪ್ಪಣೆಯಹೊರ್ತು ಒಳಗೆ ಯಾರೂ ಪ್ರವೇಶಿಸುವಂತಿದ್ದಿಲ್ಲ. ಗುಪ್ತಜನರನ್ನು ಕಳಿಸಿ ಸುದ್ದಿಯನ್ನು ತರಿಸುವ ಮಹತ್ವದ ಕೆಲಸವೂ ಅವಳಕಡೆಗೆ ಇತ್ತು. ಈಸ್ಥಳದಮೇಲೆ ಬಾದಶಹನು ಕಾಮಸನ ಆರಾಳನ್ನೇ ನೇಮಿಸಿದ್ದನು.

ಔರಂಗಜೇಬನಿಗೆ ಮೂವರು ಹೆಣ್ಣುಮಕ್ಕಳು. ಅವರಲ್ಲಿ ಚಿಕ್ಕವರಿಬ್ಬರನ್ನೂ ಸೆರೆಯಲ್ಲಿರುವ ತನ್ನ ಸಹೋದರರ ಮಕ್ಕಳೊಡನೆ ಲಗ್ನಮಾಡಿ ಕೊಟ್ಟಿದ್ದನು. ಹಿರಿಯವಳುಮಾತ್ರ ಅವಿವಾಹಿತಳಾಗಿದ್ದಳು. ಅವಳ ಹೆಸರು “ಝೀಬ ಉನ್ನಿಸಾ” ಳೆಂದಿತ್ತು. ಅವಳು ಅವಿವಾಹಿತಳಿದ್ದದರಿಂದಲೆ ಆಕೆಯ ವರ್ತನವು ಸರಿಯಾಗಿದ್ದಿಲ್ಲ. ಇದರಿಂದ ಕಾಮನ ಆರಳಿಗೂ ಇವಳಿಗೂ ಸರಿಬೀಳುತ್ತಿದ್ದಿಲ್ಲ. ಅವಳು ಚಿಕ್ಕವಳಾದದ್ದರಿಂದ ಝೀಬ ಉನ್ನೀಸಳೆ ಸ್ವಲ್ಪ ಹೆದರುತ್ತಿದ್ದಳು. ಕಾಶನ ಆರಳು ತನ್ನ ಮಾರ್ಗಕ್ಕೆ ಅಡ್ಡಿಯಾಗುವಳೆಂದು ಇವಳು ತಿಳಿದಿದ್ದಳು. ಆದರಿಂದ ಇದೊಂದು ಮುಳ್ಳು ಕಿತ್ತುಹಾಕಬೇಕೆಂಬ ವಿಚಾರವು ಅವಳಲ್ಲಿ ತುಂಬಿಕೊಂಡಿತ್ತು. ಬರಬರುತ್ತ ಕಾಸನ ಆರಳ ಚಾಡಿಯು ಬಾದಶಹನ ಕಿವಿಯಲ್ಲಿ ತುಂಬಹತ್ತಿತು. ಔರಂಗಜೇಬನು ಮೊದಲೇ ಸಂಶಯಸ್ವಭಾವದವನು, ಅದರೊಳಗೆ ಈತರಹದ ಚಾಡಿಗಳು, ಮತ್ತು ಕಾಸನ ಆರಳ ಕೈಯ್ಯಲ್ಲಿ ಮಹತ್ವದ ಕೆಲಸವು ಇದ್ದದರಿಂದ ಬಾದಶಹನ ಸಂಶಯವು ಬಲವತ್ತರವಾಯಿತು. ಅವನ ಮನಸ್ಸು ಅವಳ ವಿಷಯದಲ್ಲಿ ಕಲುಷಿತವಾಗುತ್ತ ಬಂತು. ಅವನು ಕ್ರಮವಾಗಿ ಅವಳನ್ನು ದ್ವೇಷಿಸಹತ್ತಿದನು. ಬರಬರುತ್ತ ಝೀಬ ಉನ್ನೀಸಳು ಅವಳ ಎದುರಿಗೆ ಅಪಶಬ್ದಗಳನ್ನು ಮಾತಾಡಹತ್ತಿದಳು. ಅದು ಅವಳಿಗೆ ಸಹನವಾಗದಾಯಿತು.

ವಾಚಕರೆ, ಮುಂದಿನ ಸಂದರ್ಭವನ್ನು ತಿಳಿದುಕೊಳ್ಳುವದಕ್ಕೆ ಇಷ್ಟುಸಾಕು, ಇನ್ನುಮೇಲೆ ನಮ್ಮ ಕಥಾನಕದ ಕಡೆಗೆ ತೆರಳೋಣ.

ತೇಜೋನಿಧಿಯಾದ ಭಗವಾನ್ ಸೂರ್ಯನಾರಾಯಣನು ಇಡೀ ದಿವಸದವರೆಗೆ ಮಾರ್ಗಕ್ರಮಣಮಾಡಿ, ಸೃಷ್ಟಿದೇವಿಯ ಶೋಭೆಯನು ಮನಃಪೂರ್ವಕವಾಗಿ ತೀರಿಸಿ ವಿಶ್ರಾಂತಿಗಾಗಿ ಪಾತಾಳಲೋಕಕ್ಕಿಳಿದನು. ಜಗತ್ತಿನೊಳಗಿನ ಉದ್ಯೋಗಸ್ಥರೆಲ್ಲರು ತಮ್ಮ ಕೆಲಸಗಳನ್ನು ಮುಗಿಸಿ ಮನೆಯ ಮಾರ್ಗವನ್ನು ಹಿಡಿದರು. ರಾಜಸಭೆಯು ಕೆಲಸವನ್ನು ಮುಗಿಸಿ ಯಾವತ್ತು ಮುತ್ಸದ್ದಿಗಳು ಹೊರಟುಹೋದರು. ಅಂಗಡಿಕಾರರು ಮೊದ ಮೊದಲು ಸ್ವಲ್ಪ ರಾತ್ರಿಯಾಗುವವರೆಗೆ ತಮ್ಮ ಕೆಲಸವನ್ನು ಮಾಡುತ್ತಿದ್ದರು. ಕಡೆಗೆ ಅವರೂ ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಊಟ ಉಪಚಾರವಾದಮೇಲೆ ಜನರು ಒತ್ತಟ್ಟಿಗೆ ಕೂಡಿ ತಮ್ಮ ಉದ್ಯೋಗದ ಸಂಬಂಧದ ಹರಟೆಗಳನ್ನು ಸುರು ಮಾಡಿದ್ದರು. ಹೇಳಿ ಕೇಳಿ ಮೊದಲ ಹರಟೆಯು, ಅದರೊಳಗೆ ಇಂಥದೆ ವಿಷಯವು, ಇಲ್ಲಿಯೇ ಮೊದಲಿಟ್ಟು ಇಲ್ಲಿಗೇ ಮುಗಿಯುತ್ತದೆಂದು ಹೇಳಲಿಕ್ಕಾಗುವದಿಲ್ಲ. ಆದಾಗ್ಯೂ ಆಶ್ಚರ್ಯವೇನಂದರೆ ಅದು ಮಹತ್ವವಾದದ್ದೂ ಫಲವತ್ತಾದದ್ದೂ ಆಗಿರುತ್ತದೆ. ಅದರಲ್ಲಿ ದೊಡ್ಡ ದೊಡ್ಡವರ ಸಂಬಂಧದ ಸಣ್ಣ ಸಣ್ಣ ಮಾತುಗಳು ಹೊರಡುತ್ತವೆ. ಇರಲಿ. ಅವು ತೀರ ನಿಜವಾದ ಸಂಗತಿಗಳಾಗಿದ್ದರೂ ಗೋಡೆಯೂ ಕೂಡಾ ಕೇಳಬಾರದಷ್ಟು ಮೆಲ್ಲಗೆ ಮಾತಾಡುತ್ತಿರುವರು. ರಾತ್ರಿ ಹೆಚ್ಚಾದಂತೆ ಮನೆಗಳೊಳಗಿನ ಕೆಲಸ ಬೊಗಸೆಗಳು ಕಡಿಮೆಯಾಗುತ್ತ ಬಂದುವು. ಎಳೆಮಕ್ಕಳ ಅಳುವೂ ಶಾಂತವಾಯಿತು. ಹೆಂಗಸರು ಉಪಕರಣಸಾಹಿತ್ಯಗಳನ್ನು ತೊಳೆದು ವ್ಯವಸ್ಥೆಯಿಂದ ಇಡುತ್ತಿದ್ದರು. ಬರಬರುತ್ತ ತೀರ ನಿಃಶಬ್ದವಾಗುತ್ತಬಂತು. ಬೀದಿಕಾಯುವ ನಾಯಿಗಳ ಬೊಗಳುವಿಕೆಯ ಹೊರತು ಬೇರೆ ಶಬ್ದಗಳಾವವೂ ಸ್ಪಷ್ಟವಾಗಿ ಕೇಳಬರುತ್ತಿರಲಿಲ್ಲ. ಪಹರೆಯವರೂ ಗಸ್ತಿಯವರೂ ಅತ್ತಿತ್ತ ತಿರುಗಾಡಹತ್ತಿದರು. ಪೋಲೀಸ ಚಾಕಿಯಲ್ಲಿ ಹನ್ನೆರಡು ಹೊಡೆದಿತು. ಇಷ್ಟಾದರೂ ಕೆಲವರು ತೀರ ಅಸ್ಪಷ್ಟವಾಗಿ ಮಾತಾಡುತ್ತಿದ್ದರು.

ವಾಚಕರೆ, ನಾವೀಗ ಗುಪ್ತವಾಗಿ ಹೋಗಿ ಅವರು ಏನೇನು ಮಾತಾಡಿಕೊಳ್ಳುತ್ತಿರುವರೊ ಕೇಳೋಣ. ಈ ದಿಲ್ಲೀ ಶಹರದ ವೈಭವವನ್ನು ಕಂಡು ಅಲ್ಲಲ್ಲಿಗೆ ಗಾಬರಿಗೊಳ್ಳಬೇಡಿರಿ. ಆಕಾಶದವರೆಗೆ ಬೆಳೆದ ಉಪ್ಪರಿಗೆಗಳನ್ನೂ ಮನೋಹರವಾದ ಮಸೀದಿಗಳನ್ನೂ ದೊಡ್ಡ ದೊಡ್ಡ ಅಂಗಡಿಗಳನ್ನೂ ನೋಡಿದರೆ ನೀವು ಆಶ್ಚರ್ಯಗೊಳ್ಳುವಿರಿ.

ಸುತ್ತಲೂ ನಿಶಾದೇವಿಯ ಸಾಮ್ರಾಜ್ಯವು ಹಬ್ಬಿಕೊಂಡಿದೆ. ಅಗಾಧವಾದ ದಿಲ್ಲೀ ಶಹರದಲ್ಲಿ ಬಾದಶಹನ ರಾಜಸ್ಥಾನಿಯಲ್ಲಿ, ಅನೇಕ ತರದ ವ್ಯವಸಾಯಗಳು ನಡೆಯುವ ಅಂಗಡಿಬೀದಿಯಲ್ಲಿ ಪೂರ್ಣ ಶಾಂತತೆಯು ನೆಲೆಗೊಂಡಿದೆ. ಎಲ್ಲೆಲ್ಲಿಯೂ ನಿಃಶಬ್ದ; ಸಂಜೆಯವರೆಗೆ ಜನಸಮುದಾಯದಿಂದ ತುಂಬಿದ ಬೀದಿಗಳು ಶೂನ್ಯವಾಗಿವೆ. ಪಹರೆಯವರೂ ಬೇಕಂತಲೆ ಜಾಗರಣವನ್ನು ಮಾಡುವವರೂ ಮಾತ್ರ ಎಚ್ಚರವಿರುವರು. ಉಳಿದವರೆಲ್ಲ ನಿದ್ರಾಧೀನರಾಗಿದ್ದಾರೆ. ಇಂಥದರಲ್ಲಿ, ದಿಲ್ಲೀಶಹರದ ಹೊರವಾದ್ವ [illegible] ಭಾಗದಲ್ಲಿ [illegible] ಜೀರ್ಣವಾದ [illegible] [illegible] ಅಂತ, [illegible] ಪುರುಷ [illegible] ಬೇರೆ ಸಾಧನ [illegible] ಇಲ್ಲಿ ಎರಡೂ ವ್ಯಕ್ತಿಗಳ ನಡುವೆ ಕೆಳಗೆ ಹೇಳಿದಂತೆ ಹಿಂದೂಸ್ಥಾನಿ ಭಾಷೆಯಲ್ಲಿ ಮಾತು ಕಥೆಗಳಾದವು.

೧ ನೇ ವ್ಯಕ್ತಿ—“ ಬಾಗಿಲವು ಒಪಳ ಧ್ವನಿಮಾಡುತ್ತದೆ ಹೊರಗೆ ಹೋಗಲಿಕ್ಕೆ ನನಗೆ ಅಂಜಿಕೆ ಬರುತ್ತದೆ. ಈ ಸಪ್ಪಳವನ್ನು ಬೇರೆ ಯಾರಾದರೂ ಕೇಳಿರಬಹುದಲ್ಲವೆ

೨ ನೇ ವ್ಯಕ್ತಿ—“ ಅಷ್ಟೇನು ಧ್ವನಿಮಾಡಲಿಲ್ಲ ಸುಳ್ಳೇ ಹಾರು ಪ್ರದೇಶಕ್ಕೆ ಹಿಂದಕ್ಕೆ ಸಡಯಬಾರದೇ ”

೧ ನೇ ವ್ಯಕ್ತಿ—“ ಮುಂದಕ್ಕೆ ಹೋಗಬೇಕೆಂತಲೆ ಮನಸಾಗುತ್ತದೆ ಆದರೆ ಧೈರ್ಯವು ಸಾಲಲೊಲ್ಲದು ಯಾರಾದರು ಪಹರೆಯವರು ಬಾಕಿಲಧ್ವನಿಯನ್ನು ಕೇಳಿ ಎಲ್ಲಿಯಾದರೂ ಅಡಗಿ ನಿಂತಿರಲಿಕ್ಕಿಲ್ಲವೆ ?”

೨ ನೇ ವ್ಯಕ್ತಿ—“ ಹಾಗಾದರೆ ಹೀಗೆಮಾಡು ಇಲ್ಲಿ ಸ್ವಲ್ಪಹೊತ್ತು ಕೂಡ್ರು ಕಲಹೊತ್ತಿನಮೇಲೆ ನಿನ್ನ ಅಂಜಿಕೆಯು ತನ್ನಿಂದ ತಾನೇ ಹೋಗುವುದು ಆಮೇಲೆ ಸುಳ್ಳೆ ಹೆದರಿದೆನೆಂದು ನಿನಗೆ ಗೊತ್ತಾಗುವುದು ”

೧ ನೇ ವ್ಯಕ್ತಿ—“ ಹಾಗಾದರೆ ಸ್ವಲ್ಪಹೊತ್ತು ಇಲ್ಲಿ ಕೂಡ್ರುತ್ತೇನೆ ”

೨ ನೇ ವ್ಯಕ್ತಿ—“ ಆಮೇಲೆ ನಿನ್ನ ಮನಸ್ಸಿನ ನಿಶ್ಚಯವನ್ನು ಮಾಡು ಮುಂದಕ್ಕೆ ಹೋಗುವ ಹೊತ್ತು ಪುನಃ ಯಾವಾಗ್ಗೆ ಬರಬೇಕು ? ನಮ್ಮಂಥ ದುರ್ದೈವಿಗಳಿಗೆ ಇದೊಂದು ಭಾಗ್ಯೋದಯದ ಕಾಲವೇ ಆಗಿರುವುದು, ಇಂಥ ಹೊತ್ತಿನಲ್ಲಿ ನಾವು ನಮ್ಮ ಹಿತವನ್ನು ಮಾಡಿಕೊಳ್ಳದಿದ್ದರೆ ಮುಂದೆ ಯಾವಾಗ್ಗೆ ? ”

೧ ನೇ ವ್ಯಕ್ತಿ—“ ಅಂತೆ ನಾನಿಷ್ಟು ಎದೆಗೊಟ್ಟು ನಿಂತಿರುತ್ತೇನಲ್ಲವೆ?”

೨ ನೇ ವ್ಯಕ್ತಿ—“ ನೋಡಿದಿಯಾ, ಎಂಥ ಉತ್ತಮಹೊತ್ತು ದೊರೆದದೆ ಈಹೊತ್ತು ಮುಂಜಾವಿನಿಂದ ಕಾಶನ ಅರಸು ಎಲ್ಲಿಯೊ ಇಲ್ಲದಂತಾಗಿರುವಳು ಅವಳ ಅಧಿಕಾರವು ಝೇಬಉನ್ನಿಸೆಳಿಗೆ ಈ ಹೊತ್ತೆ ಬಂದದೆ ನಮಗಾದರೂ ಈಹೊತ್ತೇ ಇಂಥ ಗುಪ್ತ ಸಂಗತಿಯೂ ದೊರೆದದೆ ”

೧ ನೇ ವ್ಯಕ್ತಿ—ಅಲ್ಲಾನ ಮನಸಿನಲ್ಲಿ ನಮ್ಮನ್ನು ಬಹುದಿವಸ ಈ ದರಿದ್ರಾವಸ್ಥೆಯಲ್ಲಿ ಇಡಗೊಡಬಾರದೆಂದು ಒಂದಂತೆ ತೋರುತ್ತದೆ

೨ ನೇ ವ್ಯಕ್ತಿ,—ಕಾಶನ ಅರಳು ಇಲ್ಲದಂತಾಗಲಿಕ್ಕೆ ಬಾದಶಹನೆ ಕಾರಣ ಇಷ್ಟರಲ್ಲಿ ೧ ನೇ ವ್ಯಕ್ತಿ,—ಛಿ, ಮಲ್ಲಗ ಮಾತಾಡು ನಾವು ಯಾರಸಂಬಂಧದಿಂದ ಯಾವಕಾಲದಲ್ಲಿ ಮಾತಾಡುತ್ತೇನೆಂಬದು ನಿನಗ ಗೊತ್ತಿದೆಯ ? ನೀನನ್ನುವಂತೆಯೆ ನನಗೂ ತೋರುತ್ತದ ಯಾಕಂದರ ಇತ್ತ ಆಕೆಯ ಶೋಧಕ್ಕಾಗಿ ಬಾದಶಹನು ಮನುಷ್ಯರನ್ನು ಕಳಿಸಿರುವನು ಅತ್ತ ಸಂಗಡಲೆ ಈಷೂತ್ತ ಅಕಯ ಸ್ಥಳದಲ್ಲಿ ಝೇಬ ಉನ್ನೀಸಳನ್ನು ನೇಮಿಸಿರುವನು ಹೋಗಲಿ, ನಮಗೆ ಯಾತಕ್ಕೆ ಬೇಕು ಆದರೆ ಆಮಾತಿನ ಸಂಬಂಧದಿಂದ ನೋಡಿದರೆ ಅಂತರಂಗದ ಸ್ಥಿತಿಯು ಬೇರೆಯಾಗಿದೆ

೧ ನೇ ವ್ಯಕ್ತಿ—ಅಜೋಧಪುರದ ಬೇಗಮ್ಮಳಮೇಲ ಬಾದಶಹನ ಪ್ರೇಮವು ವಿಶೇಷವಾಗಿಲ್ಲ, ಆಕೆ ಶ್ರೇಷ್ಠರಜಪೂತವಂಶದವಳಿರುವುದಲ್ಲದೆ ಪಟ್ಟದರಾಣಿಯೂ ಆಗಿರುವಳು ಹೀಗಿದ್ದರೂ ಬಾದಶಹನ ಪ್ರೀತಿಯು ಉದೇಪುರದ ಬೇಗಮ್ಮಳಲ್ಲಿಯ ಹೆಚ್ಚಾಗಿದೆ ಉದೇಪುರದ ಬೇಗಮ್ಮಳು ಕ್ರಿಸ್ತಳು ಆದರೆ ರಜಪೂತರ ಮನೆತನದವಳೆಂದು ಜನರಿಗ ಗೊತ್ತಾಗಲಂದು ಬಾದಶಹನು ಈ ಹಸರಿಟ್ಟಿರುವನಲ್ಲದೆ, ಅವಳು ನಿಜವಾಗಿ ಉದೇಪೂರದ ಮನೆತನದವಳಲ್ಲ

೨ ನೇ ವ್ಯಕ್ತಿ--ಆದೀಗ ಸಾಕು. ಹೊತ್ತಾಗಲಿಲ್ಲವೆ ? ಇನ್ನು ಮೇಲೆ ನಮ್ಮ ಕೆಲಸಕ್ಕೆ ಆರಂಭಿಸೋಣ

" ಸರಿ ಬಹಳ ಹೊತ್ತಾಯಿತು'' ಎಂದು ಆಕಪ್ಪನ್ನ ಆವರಣದಿಂದ ಆಚ್ಛಾದಿತವಾದ ಮೂರ್ತಿಯು ಕೂತಸ್ಥಳದಿಂದೆದ್ದು ಮೆಲ್ಲಗೆ ಬಾಗಿಲವನ್ನು ತರೆದು ಹೂರಬಿದ್ದಿತು ವಾಚಕರೆ, ಅವರು ಮಾತಾಡುವುದರ ಮೇಲಿಂದ ೧ ನೇ ವ್ಯಕ್ತಿಯು ಪುರುಷನಿರಬಹುದೆಂತಲೂ ಎರಡನೇ ವ್ಯಕ್ತಿಯು ಸ್ತ್ರೀಯಳಿರಬಹುದೆಂತಲೂ ತಿಳಿದಿದ್ದೀರಾದೀತು. ಕೂಡಲೆ ಬಾಗಿಲು

ಒಳಗಿನಿಂದ ಮುಚ್ಚಿತು ಆ ಆಚ್ಛಾದಿತವಾದ ಮೂರ್ತಿಯು ಅತಿಶಯ
ಮೆಲ್ಲನೆ, ಸ್ವಲ್ಪವೂ ಸಪ್ಪಳವಾಗದಂತೆ ಮನೆಯ ಗೋಡೆಯ ಮಗ್ಗಲಿ
ನಿಂದಲೆ ನಡೆಯತೊಡಗಿತು ನಡೆಯತೊಡಗಿತೆಂದು ಹೇಳುವುದಕ್ಕಿಂತ
ಮುಂದೆ ಮುಂದೆ ಸರಿಯಹತ್ತಿತೆಂದು ಹೇಳಿದರೆ ಹೆಚ್ಚು ಸರಿಯಾಗುವುದು
ಯಾಕಂದರೆ ಆ ಆಚ್ಛಾದನೆಯು ಭೂಮಿಯಮೇಲೆ ಎಳೆಯುತ್ತಿತ್ತು
ಕಾಲು ಮೊದಲಾದದ್ದೇನೂ ಕಾಣುತ್ತಿದ್ದಿಲ್ಲ ಈರೀತಿಯಿಂದ ಸರಿ
ಯುತ್ತ ಸ್ವಲ್ಪದೂರಹೋಗಿ ಒಂದು ತೋಟದ ಗೋಡೆಗೆ ನಿಂತು
ಗೋಡೆಯ ಮೇಲಿಂದ ಮೆಲ್ಲಗೆ ಹಣಿಕಿನೋಡಿದುದಾಯಿತು ಕೂಡಲೆ
'ಯಾರವರು?' ಎಂಬ ಪ್ರಶ್ನವು ಕೇಳಬಂತು ಅದಕ್ಕೆ ಇಂಥವನೆಂಬ
ಗುರ್ತಿನ ಉತ್ತರವೂ ದೊರೆಯಿತು ಆಮೇಲೆ ಆ ತೋಟದ ಖಿಡ್ಕಿಯ
ಬಾಗಿಲು ಮೆಲ್ಲಗೆ ತೆಗೆದದ್ದಾಯಿತು ವ್ಯಕ್ತಿಯು ಒಳಗೆ ಪ್ರವೇಶಿಸಿದ
ಕೂಡಲೆ ಬಾಗಿಲವೂ ಮುಚ್ಚಿತು ಒಳಗಿನ ವ್ಯಕ್ತಿಯು ಪುನಃ ಒಂದು
ಗುರ್ತಿನ ವಸ್ತುವನ್ನು ಕೇಳಿಕೊಂಡು, ನಿಶ್ಚಯಿಸಿದಮೇಲೆ ಈಗೇನು
ಕೆಲಸವೆಂದು ಕೇಳಿದುದಾಯಿತು ಈಗಿಂದೀಗಲೇ ಬೇಗಮ್ಮಸಾಹೇಬರಿಗೆ
ಭೆಟ್ಟಿಯಾಗತಕ್ಕದ್ದಿದೆ ಕೆಲಸವಾದರೂ ಅಂಥ ಮಹತ್ವದ್ದು ಮತ್ತು
ತ್ವರಿತ ನಾನು ಅಲ್ಲಿಗೆ ಹೋಗಬೇಕಾಗಿದೆ ಎಂದು ಉತ್ತರ ಬಂದಕೂಡಲೆ
“[illegible]” ಎಂದು ಒಳಗಿನ ವ್ಯಕ್ತಿಯು ಆ ಗಂತುಕ
ವ್ಯಕ್ತಿಯನ್ನು ಕರಕೊಂಡು ನಡೆದು ಕೆಲಹೊತ್ತು ಅತ್ತಿತ್ತ ಅಡ್ಡಸಾಗಿ
ಬಂದ ಹೋದಮೇಲೆ ಒಂದು ದೊಡ್ಡದಾದ ಇಮಾರತಿಯು ಕಣ್ಣಿ
ಗೆ ಬಿತ್ತು ಇಮಾರತಿಯ ಬಾಗಿಲಲ್ಲಿ ಜಾಗ್ರತಿಯವರ ಪಹರೆಯಿತ್ತು
ಸಾಂಕೇತಿಕಶಬ್ದವಹೊರ್ತು ಬೇರೆ ಏನೂ ಅವರು ಕೇಳಲಿಲ್ಲ ಇಬ್ಬರಿಗೂ
ಎಲ್ಲಿಯೂ ಅಡ್ಡಿಯಾಗಲಿಲ್ಲ ಮತ್ತು ಯಾವ ಪಹರೆಯವರಿಗೂ ಸಂಶ
ಯವು ಬರಲಿಲ್ಲ ಹೀಗೆ ಅನೇಕ ಬಾಗಿಲುಗಳನ್ನು ದಾಟಿದಮೇಲೆ ಒಂದು
ಭವ್ಯವಾದ ದಿವಾಣಖಾನೆಗೆ ಬಂದು ಮುಟ್ಟಿದರು ಅಲ್ಲಿಂದ ಒಬ್ಬ ದಾಸಿ
ಯೊಡನೆ ತಾವು ಬಂದ ಸುದ್ದಿಯನ್ನು ತಿಳಿಸಿದರು. ಸ್ವಲ್ಪಹೊತ್ತಿನಲ್ಲೆ

ಬೇಗಮ್ಮ ಸಾಹೇಬರು ಹೊರಗೆಬಂದರು ಮೇಲಿಂದಮೇಲೆ ಆಕಳಿಕೆಗಳು ಬರುತ್ತಿದ್ದವು ಕಣ್ಣುಗಳು ಕೆಂಡದಂತೆ ಕಂಪಾಗಿದ್ದುವು ಅಲ್ಲಿಬಂದು ಕುಳಿತಮೇಲೆ ದೊಡ್ಡದೂ ಅಧಿಕಾರಯುಕ್ತವೂ ಆದ ಕರ್ಕಶಧ್ವನಿಯಿಂದ ಯಾರು ಬಂದವರು ? ಎಂದು ಕೇಳಿದರು ಕೂಡಲೆ ಆಚ್ಛಾದಿತವಾದ ಮೂರ್ತಿಯು ತನ್ನ ಆಚ್ಛಾದನವನ್ನು ತಗೆದುಬಿಟ್ಟಿತು. ಆಗ ಬೇಗಮ್ಮಳು—“ ಯಾರು ಖಿಜರ ಖಾನನ ? ಮಹತ್ವದ ಸಂಗತಿಯನ್ನೇನು ತಂದಿರುವಿ ” ಹೀಗೆಂದು ಕೇಳಿದಮೇಲೆ ಆತನು ಕಿವಿಯಲ್ಲಿ ಮೆಲ್ಲನೆ ಏನೇನೋ ಹೇಳಿದನು ಕೂಡಲೆ ಬೇಗಮ್ಮರ ಮುಖದಮೇಲೆ ಆನಂದದ ಕಳೆಯು ಸ್ಪಷ್ಟವಾಗಿ ಕಂಡುಬರಹತ್ತಿತು ಪೂರ್ಣಸಂಗತಿಯನ್ನು ತಿಳಕೊಂಡಮೇಲೆ ಖಿಜರಖಾನನಿಗೆ ಅಪ್ಪಣೆಯಾಯಿತು ಬೇಗಮ್ಮರ ಮೈಯ್ಯೊಳಗಿನ ಆಲಸ್ಯವು ಪೂರ್ಣವಾಗಿ ಇಲ್ಲದಂತಾಯಿತು, ಆಮೇಲೆ ಯಾವುದೋ ಒಂದನ್ನು ನಿಶ್ಚಯಿಸಿ ಮಹಲಿನಮೇಲೆ ಹೊರಟುಹೋದಳು.

ನಿಸಿದ್ದವಿದ್ದರಲಿ ಈಹೊತ್ತು ಔರಂಗಜೇಬ ಬಾದಶಹನಿಗೆ ನಿದ್ರೆಯು ಬಹಳಹೊತ್ತಿನವರೆಗೆ ಬರಲಿಲ್ಲ ನಿದ್ರೆಬರಬೇಕೆಂದು ತನ್ನಿಂದಾದಷ್ಟು ಪ್ರಯತ್ನವನ್ನು ಮಾಡಿದನು ಇದರ ಆದಲ್ಲ ನಿಷ್ಫಲವು, ಒಬ್ಬ ವ್ಯಥೆರೋಗಿಯಂತೆ ಈಹೊತ್ತು ಬಾದಶಹನ ಸ್ಥಿತಿಯಾಗಿತ್ತು ಸುಮ್ಮನೆ ಕೂಡ್ರಲಾರದೆ ಜೋಧಪುರದ ಬೇಗಮ್ಮಳ ಕಡೆಗೆ ಹೊರಟುಹೋದನು ಅಲ್ಲಿ ಬಹಳಹೊತ್ತಿನವರೆಗೆ ಇದ್ದರೂ ಮನಸ್ಸಿಗೆ ಸಮಾಧಾನವಾಗಲಿಲ್ಲ ಪುನಃ ಸುಮ್ಮನೆ ಬಾದಶಹರ ಬೇಗಮ್ಮಳ ಕಡೆಗೆ ಹೊರಟುಬಂದನು ಆತನು ಬಂದಿರುವುದನ್ನು ಕೇಳಿದಕೂಡಲೆ ಒಳಗಿನಿಂದ ಯಾರೊ ಒಬ್ಬ ಬೇಗದಿಂದ ಹೊರಗೆ ಹೋದರು ಹೋದವರು ಪುರುಷರು ಇಂದವರೇ ಎಂಬುದು ಬಸನ್ನಾಗಿ ಗೊತ್ತಾಗಲಿಲ್ಲ

ಬಾದಶಹನು ಒಳಗೆ ಹೋದನು ಆಹೊತ್ತು ರಾತ್ರಿಯನ್ನು ಅಲ್ಲಿಯೇ ಕಳೆದನು ಪ್ರಾತಃಕಾಲದಲ್ಲಿ ಮಹಾಲಿನಿಂದ ಹೊರೆಗೆಬರುವಾಗ್ಗೆ ಆತನಿಗೊಂದು ಒಳ್ಳೇ ಸಿಟ್ಟಿನ ಸುದ್ದಿಯು ಹತ್ತಿರುವಂತೆ, ಆತನ

ಮುಖಚರ್ಯೆವು ತಾನೆ ಹೇಳುತ್ತಿತ್ತು "ಯಃಕಶ್ಚಿತನಾದ ಒಬ್ಬ ಮಾಂಡಲಿಕನ ಮಗಳು ನನ್ನ ಚಿತ್ರವನ್ನು ತುಳಿದು ಹರಿದಳೆ ಇದನ್ನು ನಾನು ಜೀವದಿಂದ ಬದುಕಿರುವಾಗಲ ಕೇಳಬೇಕೆ? ಈ ಅಲಂಗೀರ ಬಾದಶಹನು ಅದರ ಪ್ರತೀಕಾರವನ್ನು ತೀರಿಸದ ಎಂದೂ ಬಿಡಲಿಕ್ಕಿಲ್ಲ" ಎಂದು ಸಂತಾಪದಿಂದ ಬಾದಶಹನ ಸರ್ವಾಂಗವು ಕಂಪಿಸತೊಡಗಿತು ಸಿಟ್ಟಿನ ಭರದಲ್ಲಿ ಆತನ ಮುಖದೊಳಗಿಂದ ಶಬ್ದಗಳು ಸಹ ಸ್ಪಷ್ಟವಾಗಿ ಹೊರಡಲೊಲ್ಲವು ರಾತ್ರಿಯ ಜಾಗರಣೆಯಿಂದ ಕಣ್ಣುಗಳು ಮೊದಲೆ ಕೆಂಪಾಗಿದ್ದವು ಇಂಥದರಲ್ಲಿ ಈ ಸಂಗತಿಯು ಗೊತ್ತಾದಮೇಲೆ ಆತನ ಶರೀರವು ಕೋಪಾಗ್ನಿಯಿಂದ ಬೆಂದುಹೋಯಿತು ವಾಚಕರೆ, ಅದು ನಿಜವಾದ ಅಗ್ನಿಯು ಒಂದುವೇಳೆ ಆಗಿದ್ದರೆ ಆತನ ಮೈಯೊಳಗಿನಿಂದ ಜ್ವಾಲೆಯೂ ಹೊರಡುತ್ತಿತ್ತು ಮತ್ತು ಅದು ಆತನ್ನ ಮೈಯನ್ನು ಆಗಲೆ ಸುಟ್ಟುಬಿಡುತ್ತಿತ್ತು

ಆ ಸಿಟ್ಟನ್ನು ಕಂಡು ಉದೇಪುರದ ಬೇಗಮ್ಮಳೂ ಉಳಿದ ದಾಸಿಯರೂ ಅತ್ಯಂತ ಭಯಚಕಿತರಾದರು ಇನ್ನುಮುಂದೆ ಬಾದಶಹನು ಏನುಮಾಡುವನೊ ಏನೂ ಎಂಬ ಅಂಜಿಕೆಯು ಎಲ್ಲರಲ್ಲಿ ಮನೆಮಾಡಿಕೊಂಡಿತು

ಸ್ವಲ್ಪಹೊತ್ತಿನಮೇಲೆ ನಿಶ್ಚಯಮಾಡಿದ ಮುಖಮುದ್ರೆಯಿಂದ ಬಾದಶಹನು ಅಲ್ಲಿಂದ ಹೊರಟುಹೋದನು ಹಾಗೇ ನೆಟ್ಟಗ ಸಭಾಸ್ಥಾನಕ್ಕೆ ಹೋಗಿ, ಯಾರಿಗೂ ಕೇಳದ ತಾನೇ ತನ್ನ ಕೈಯಿಂದ ಒಂದು ಪತ್ರವನ್ನು ಬರೆದನು ಅದನ್ನು ಮೊಹರಬಂದ ಮಾಡಿದಮೇಲೆ ಸರದಾರನಾದ ದಿಲೇರಖಾನನನ್ನು ಕರೆಸಿದನು ಆತನು ಬಂದಕೂಡಲೆ ಅವಶ್ಯವಾದದ್ದನ್ನು ಹೇಳಿ ಆ ಪತ್ರವನ್ನು ಆತನ ಕೈಯ್ಯಲ್ಲಿ ಕೊಟ್ಟನು ಮತ್ತೆ "ಕ್ಷಣಸಹ ವಿಲಂಬಮಾಡದೆ ಈಪತ್ರವನ್ನು ಆತನಕೈಯ್ಯಲ್ಲಿ ಕೊಡು ಮತ್ತು ಅದರಲ್ಲಿ ಬರೆದಂತೆ ಈಗ ಸದ್ಯಕ್ಕೆ ನಡೆಯಲೇ ಬೇಕಂದು ಹೇಳು ಮತ್ತು ಇದಕ್ಕೆ ಆಲಂಗೀರಬಾದಶಹನ ಸಕ್ತ ತಾಕೀದಿಯದೆ ಎಂದು

ಹೇಳು ಅದನ್ನು ಆತನು ಕೇಳದಿದ್ದರೆ ನಿನಗೆ ಹೇಳಿದಂತೆ ನೀನು ಮಾಡು'' ಇಷ್ಟು ಹೇಳಿದಮೇಲೆ ದಿಲೇರಖಾನನು ಅಲ್ಲಿಂದ ಕೂಡಲೆ ಹೊರಟು ಹೋದನು

# ನಾಲ್ಕನೆಯ ಪ್ರಕರಣ.

## ಸ್ಪಷ್ಟೀಕರಣ.

ಪ್ರಿಯವಾಚಕರೆ! ಇನ್ನುಮೇಲೆ ಪುನಃ ನಾವು ರೂಪನಗರಕೆ ಹೋಗೋಣ ರೂಪನಗರದ ರಾಜಸಭಯಲ್ಲಿ ಗೊಂದಲವಾಗಿ ಕುಮಾರ ಪ್ರತಾಪಸಿಂಹನನ್ನು ವಿಕ್ರಮಸಿಂಹನ ಅಪ್ಪಣೆಯಪ್ರಕಾರ ಕಾರಾಗೃಹಕ್ಕೆ ಒಯ್ದರು ಆಮೇಲೆ ರಾಜಸಭೆಯಲ್ಲಿ ತೀರ ಶಾಂತತೆಯಾಯಿತು ಸಭೆಯಲ್ಲಿ ಜನಸಮುದಾಯವಿದ್ದಾಗ್ಯೂ ಶ್ವಾಸೋಚ್ಛ್ವಾಸದ ಹೊರ್ತು ಬೇರೆ ಯಾವ ಸಪ್ಪಳವೂ ಕೇಳಬರುತ್ತಿದ್ದಿಲ್ಲ. ಎಲ್ಲರ ಮೋರೆಯಮೇಲೆಯೂ ಚಿಂತಯ ಲಕ್ಷಣವು ಎದ್ದು ಕಾಣುತ್ತಿತ್ತು ಈಹೊತ್ತು ಈ ತುಂಬಿದ ಸಭೆಯಲ್ಲಿ ದಿಲ್ಲೀಶ್ವರನ ಸರದಾರನಿಗೆ ಅಪಮಾನವಾದದ್ದು ಪ್ರತಿಯೊಬ್ಬನಿಗೂ ಕಾಳಜಿ ಬದ್ದಿತ್ತು. ಇದರ ಪರಿಣಾಮವು ಹ್ಯಾಗಾಗುವದು! ಇದರಿಂದ ರೂಪನಗಂದ ಸಭೆಗೆ ಎಷ್ಟು ತ್ರಾಸವಾಗಬಹುದು? ಎಂಬದೇ ಎಲ್ಲರಲ್ಲಿಯೂ ತುಂಬಿಕೊಂಡಿತ್ತು ಈ ಸ್ತಬ್ಧವಾದ ಸಭೆಯಲ್ಲಿ ಬಹಳಹೊತ್ತಿನವರೆಗೆ ರಾಣಾ ವಿಕ್ರಮಸಿಂಹನಾಗಲಿ, ದಿಲೇರಖಾನನಾಗಲಿ, ಒಂದು ಅಕ್ಷರಸಹ ನುಡಿಯಲಿಲ್ಲ. ರಾಣಾ ವಿಕ್ರಮಸಿಂಹನ

ಮುಖವು ನಿಸ್ತೇಜವಾಗಿತ್ತು. ಯಾವ ತರಹದ ಸ್ಮೃತಿಯೂ ಇಲ್ಲದ ಅವನು ಸ್ತಬ್ಧನಾಗಿ ಕುಳಿತಿದ್ದನು. ಅಕಸ್ಮಾತ್ತಾಗಿ ಒದಗಿದ ಈ ಪ್ರಸಂಗದಿಂದ ಅತಿಶಯ ಭಯಭೀತನಾಗಿದ್ದನು. ದಿಲ್ಲೀಶ್ವರನಿಂದ ಪತ್ರವನ್ನು ತಂದ ಸರದಾರನಿಗೆ ಬಹುಮಾನ ಮಾಡುವದಕ್ಕೋಸ್ಕರವಾಗಿ ಕುಮಾರ ಪ್ರತಾಪನ ಆಸನದಮೇಲೆ ಕುಳ್ಳಿರಿಸಿದನು. ಅದರ ಪರಿಣಾಮವು ಎಷ್ಟು ಭಯಂಕರವಾಯಿತೆಂಬ ಅಂಜಿಕೆಯಿಂದ ಚಕಿತನಾಗಿದ್ದನು. ಖಾನನ ಆಗಮನದಿಂದ ಪ್ರತಾಪನನ್ನು ಹಿಡಿದೊಯ್ಯುವವರೆಗೆ ನಡೆದ ಸಂಗತಿಯು ರಾಣಾನು ವಿಚಾರಮಾಡುವಷ್ಟು ಅತ್ಯಲ್ಪಕಾಲದೊಳಗೆ ಮುಗಿದುಹೋಯಿತು. ರಾಣಾನು ವಿಚಾರದಲ್ಲಿ ಮಗ್ನನಾಗಿರಲು ಇತ್ತ ಖಾನನು ರುದ್ರಸ್ವರೂಪವನ್ನು ಧಾರಣಮಾಡಿದನು. ಸಂತಾಪದಿಂದ ಖಾನನ ಮೈಯು ನಡುಗುತ್ತಿದೆ. ಕಣ್ಣುಗಳು ಕೆಂಪೇರಿವೆ, ಎರಡುಮೂರು ಆವರ್ತಿ ಖಾನನು ಮಾತಾಡಬೇಕೆಂದು ಪ್ರಯತ್ನಮಾಡಿದನು. ಆದರೆ ಸಂತಾಪದ ಭರದಿಂದ ಅವನ ತುಟಿಗಳಷ್ಟೇ ನಡುಗುತ್ತಿದ್ದವಲ್ಲದೆ, ಬಾಯಿಂದ ಅಕ್ಷರಗಳು ಹೊರಡಲಿಲ್ಲವು. ಕಡೆಗೆ ಅವನು ಬಿಡುಗಟ್ಟಿ ದೊಡ್ಡ ಸ್ವರದಿಂದ ಗರ್ಜಿಸಿ—

"ರಾಣಾಜಿ, ಈಹೊತ್ತು ತುಂಬಿದ ಸಭೆಯಲ್ಲಿ ನಿಮ್ಮ ಮಗನು ನನಗೆ ಅಪಮಾನಮಾಡಿದನೆಂದು ನೀವು ತಿಳಿದಿದ್ದೀರಿ. ಆದರೆ ನಾನು ಮಾತ್ರ ಹಾಗೆ ತಿಳಿದಿಲ್ಲ. ಆ ಅಪಮಾನವು ನನ್ನದಲ್ಲ. ಬಾದಶಹ ಆಲಂಗೀರಬಾದಶಹನದು. ಈ ಅಪಮಾನದ ಪ್ರತೀಕಾರವನ್ನು ನಾನು ತೀರಿಸಿಕೊಳ್ಳುವೆನಲ್ಲದಿರಲಾರೆ। ಆಲಂಗೀರ ಬಾದಶಹನ ತೀರಿಸಿ ಕೊಳ್ಳುವಂತೆ ಮಾಡುತ್ತೇನೆ. ಇನ್ನುಮೇಲೆ ನಿಮ್ಮೆಲ್ಲರ ಅಂತ್ಯಕಾಲವು ಸಮೀಪಿಸಿತೆಂದು ಹೇಳಿದರೆ ಅಡ್ಡಿಯಿಲ್ಲವೇನು?"

ಖಾನನ ಈ ತರದ ಸಿಟ್ಟಿನಹಾಗು ನಿಶ್ಚಯದ ಮುದ್ರೆಯನ್ನು ನೋಡಿ ರಾಣಾನು ನಡುಗಿದನು. ರಾಣಾ ವಿಕ್ರಮಸಿಂಹನು ಕೂಡಲೆ ಎದ್ದು ಖಾನನ ಕೈಹಿಡಿದೆಬ್ಬಿಸಿ, ತನ್ನ ಸಿಂಹಾಸನದಮೇಲೆ ಕುಳ್ಳಿರಿಸಿದನು. ಆಮೇಲೆ "ಖಾನಸಾಹೇಬರೆ, ಶಾಂತರಾಗಿರಿ, ಅಜ್ಞಾನಿಯಾದ ಹುಡುಗನ

ವೃತ್ತಿಯುಳ್ಳ ತರುಣ ಹುಡುಗನನ್ನು ತಾವು ಲಕ್ಷಿಸಬೇಡಿರಿ ಸ್ವತಃ ನನ್ನ ವರ್ತನವು ತಮ್ಮಲ್ಲಿ ಹ್ಯಾಗಿರುವದೆಂಬುದನ್ನು ಲಕ್ಷಿಸಿ, ತಮ್ಮ ಕ್ರೋಧವನ್ನು ಆವರಿಸಿರಿ ಈ ಅಪಮಾನವು ಒಬ್ಬ ಹುಡುಗನಿಂದಾಗಿರುವವಲ್ಲದೆ ಈ ಸಭೆಯಿಂದಾಗಿಲ್ಲ ಒಬ್ಬ ವ್ಯಕ್ತಿಯಿಂದಾದದ್ದನ್ನು ಇಡೀ ಸಭೆಯಮೇಲೆ ಹಾಕಕೂಡದು ಎಲ್ಲವೂ ತಮಗೆ ಗೊತ್ತುಂಟು ಇದಕ್ಕೂ ಹೆಚ್ಚು ನಾನು ಹೇಳುವದೇನು ?'' ಇಷ್ಟಾದನಂತರ ಖಾನನು ಶಾಂತತೆಯನ್ನು ಸ್ವೀಕರಿಸಿ "ರಾಣಾಜಿ ತಮ್ಮಲ್ಲಿ ಭಿನ್ನಭಾವವನ್ನು ಕಲ್ಪಿಸಬೇಕೆಂದು ನಾನು ಬಂದಿರುವದಿಲ್ಲ ತಮಗೂ ಬಾದಶಹನಿಗೂ ಇರುವ ಸ್ನೇಹವು ಎಲ್ಲರಿಗೂ ಗೊತ್ತಿರುವದು ಅದನ್ನು ವೃದ್ಧಿಗೊಳಿಸಬೇಕೆಂಬದೇ ನನ್ನ ಉದ್ದೇಶವು ತಮಗೂ ಪ್ರಧಾನ ಶಹಾಬಾದಶಹನಿಗೂ ಇರುವ ಉಚ್ಚನೀಚವೆಂಬ ಭೇದಭಾವವು ಇಲ್ಲದಂತಾಗಿ ನಿಮ್ಮಿಬ್ಬರಲ್ಲಿ ಚಿರಕಾಲ ಸ್ನೇಹವುಂಟಾಗಬೇಕೆಂತಲೆ ನಾನು ಬಂದಿರುತ್ತೇನೆ.''

ಇದನ್ನು ಕೇಳಿ ರಾಣಾನಿಗೆ ಬಹಳ ಚಮತ್ಕಾರವೆನಿಸಿತು ತನಗೆ ಬಾದಶಹನಂಬ ಸ್ಥಿತಿಯೂ ಉಚ್ಚನೀಚವೆಂಬಭಾವವೂ ಇಲ್ಲದಂತಾಗಿ ಚಿರಕಾಲ ಸ್ನೇಹವೃದ್ಧಿಯಾಗಬಹುದಾದ ಸಂಗತಿಯು ಯಾವದಿರಬಹುದೆಂಬ ವಿಚಾರದಲ್ಲಿ ಮುಳುಗಿಹೋದನು ಅಷ್ಟರಲ್ಲಿ ಖಾನಸಾಹೇಬನು "ಮತ್ತೆ ರಾಣಾಜಿ, ಇಷ್ಟೊಂದು ದೊಡ್ಡ ವಿಚಾರವೇಕೆ ? ತಮ್ಮ ವಿಷಯ ಸುಖದ ವಿನೋದಕ್ಕೆ ಕೊರತೆಯಾಗಬೇಕೆಂದಾಗಲಿ, ತಮಗ ತ್ರಾಸವಾಗಬೇಕೆಂದಾಗಲಿ ಬಾದಶಹನ ಮನಸ್ಸಿನಲ್ಲಿಲ್ಲ ರಾಜಪ್ರಕರಣದಂಥ ಯುದ್ಧ ಒಡಂಬಡಿಕೆಗಳ ಕೆಲಸವೂ, ಅಲ್ಲ ತೀರಸಹಜವಾಗಿ ಮಾಡಬಹುದಾದ ಮನೆಕೆಲಸವದೆ'' ಇಷ್ಟರಲ್ಲಿ ರಾಣಾನು ನಡುವೆ ಬಾಯಿಹಾಕಿ "ಖಾನಸಾಹೇಬರೆ, ಅಂಥ ಕೆಲಸವೇನು ? ಅದನ್ನು ಒಮ್ಮೆ ಹೇಳಿಬಿಡಿರಿ ನೋಡುತ್ತೇನೆ.''

ತಾವು ಆಕಾರ್ಯವನ್ನು ಒಂದುವೇಳೆ ನಡಿಸಿಕೊಟ್ಟರೆ ನಮ್ಮಂಥ ಸಣ್ಣವರನ್ನು ನೀವೆಲ್ಲಿ ವಿಚಾರಿಸುವಿರಿ? ಆಮೇಲೆ ತಮ್ಮ ಅಧಿಕಾರವೆತ್ತ !

ಹೇಳಿದಕೆಲಸವನ್ನು ಮಾಡುವದಕ್ಕೆ ಸಿದ್ಧರಾಗಿ ಕೈಜೋಡಿಸಿಕೊಂಡು ನಿಂತ ನಮ್ಮ ಸ್ಥಿತಿಯೆತ್ತ? ಇಂಥ ಉತ್ತಮಕೆಲಸವನ್ನು ಬಿಟ್ಟು.. .. ಮುಂದೆ ಹೇಳಗೊಡದೆ ರಾಣಾನು ನಡುವ ಬಾಯಿಹಾಕಿ, ಖಾನಸಾಹೇಬರೆ, ವಿನಾಕಾರಣ ಇಷ್ಟು ಛೇಡಿಸುವದಕ್ಕಿಂತ ತಮ್ಮ ಕಾರ್ಯವೇನೆಂಬದನ್ನು ಹೇಳಿಬಿಡಿರಿ. ವ್ಯರ್ಥವಾಗಿ ಕಾಲವಿಳಂಬ ಮಾಡುವದರಿಂದ ಮಾತಿನ ಮಹತ್ವವು ಕಡಿಮೆಯಾಗುವದಿಲ್ಲವೆ?'' ಇದಕ್ಕೆ ಖಾನಸಾಹೇಬರು ಗಂಭೀರಮುದ್ರೆಯಿಂದ "ರಾಣಾಜಿ, ಅಧೀರರಾಗಬೇಡಿರಿ ತಡಮಾಡದ ತಮಗೆ ಮೊದಲು ಬಾಯಿಂದ ಹೇಳುತ್ತೇನೆ ಆಮೇಲೆ ಅದರಂತೆ ಪತ್ರವನ್ನೂ ಕೊಡುತ್ತೇನೆ ನಿಮ್ಮ ದೈವವೇ ದೊಡ್ಡದು ಇದರಲ್ಲಿ ಸಂಶಯವಿಲ್ಲ ಬಾದಶಹನ ರಾಣಿವಾಸದಲ್ಲಿ ಜೋಧಪುರದ ಬೇಗಮ್ಮ, ಉದೇಪುರದ ಬೇಗಮ್ಮ ಮೊದಲಾದ ಜಗತ್ಸುಂದರಿಯರಿದ್ದಾಗ್ಯೂ ತಮ್ಮ ಕನ್ನೆಯ ರೂಪಲಾವಣ್ಯಗಳನ್ನು ಕರ್ಣೋಪಕರ್ಣದಿಂದ ಕೇಳಿ ಆಕೆಯನ್ನು ಲಗ್ನವಾಗಬೇಕೆಂದು ಬಾದಶಹರು ಒಯಸಿರುವರು ಅದರಂತೆ ತಮ್ಮನ್ನು ಕೇಳುವದಕ್ಕೆ ನನ್ನನ್ನು ಕಳಿಸಿರುತ್ತಾರೆ.'' ಇದನ್ನು ಕೇಳಿದಕೂಡಲೆ ರಾಣಾನಿಗೆ ಕಡುತರವಾಗಿ ಕಾಯ್ದ ಎಣ್ಣೆಯನ್ನು ಕಿವಿಯಲ್ಲಿ ಸುರಿದಂತಾಯಿತು ಖಾನನಮಾತು ಮುಗಿಯುವದರೊಳಗಾಗಿ, ವಿಕ್ರಮಸಿಂಹನು, ಘಟ್ಟಿಸಿ ಒಳ್ಳೆ ದೊಡ್ಡಧ್ವನಿಯಿಂದ "ಏನು ? ಈ ಸಾಳೂವೀವಂಶದ ರಜಪೂತ ಶರೀರ ಸಂಬಂಧವು ಪರಧರ್ಮಿಯರಾದ ಮೊಗಲರೊಡನೆಯೊ? ಇಲ್ಲ, ನಾನು ಈ ಶಬ್ದವನ್ನು ಸಹಕೇಳುವದಿಲ್ಲ ಸಿಂಹದ ಮರಿಯ ಸಂಬಂಧವು ಜಂಬುಕದೊಡನುಂಟಾಗುವದೆ? ಖಾನಸಾಹೇಬ, ಆಲಂಗೀರನಿಗೆ ಹೇಳು, ನಾನಂತೂ ಈಮಾತಿಗೆ ಎಂದೂ ಒಪ್ಪಲಾರೆ'' ಇದನ್ನು ಕೇಳಿ ಖಾನನು ಅಂಗಿಯ ತೋಳನ್ನು ಮುಂದಕ್ಕೆ ಏರಿಸುತ್ತ, ಒಳ್ಳೇ ಕೋಪಾವೇಶದಿಂದ "ರಾಣಾಜಿ, ಈಕಾರ್ಯವು ಸರಳಮಾರ್ಗದಿಂದ ಪೂರ್ಣವಾದರಾಯಿತು. ಇಲ್ಲದಿದ್ದರೆ ಆಯುಧಬಲದಿಂದ ಪೂರ್ಣಮಾಡಿಕೊಳುವೆವೆಂದು ನಿಶ್ಚಯದಿಂದ ನಂಬು. ಇದು ಬಾದಶಹನು ಬಾಯಿಂದ ಹೇಳ್ಳಿ

ನ್ನಾಯಿತು ಇನ್ನು ಮೇಲೆ ಮೂರು ದಿವಸಗಳವರೆಗೆ ಅವಧಿಯನ್ನು ಕೊಡು
ತ್ತೇನೆ ಇಷ್ಟರಲ್ಲಿ ಚನ್ನಾಗಿ ವಿಚಾರಮಾಡಿ ಹೇಳು ನನಗೆ ಉತ್ತರವನ್ನು
ಕೊಡುವದಕ್ಕೆ ಮೂರುದಿವಸ ಅವಧಿಯು ಹೆಚ್ಚಾಯಿತು ಈ ಅವಧಿ
ಯಲ್ಲಿ ಉತ್ತರ ದೊರೆಯದಿದ್ದರೆ ಮುಂದೆ ಅದರ ಪರಿಣಾಮವೇನಾಗಬ
ಹುದೆಂದು ಈಗಲೆ ವಿಚಾರಮಾಡು ಕೈಮೀರಿ ಹೋದಮೇಲೆ ತಮ್ಮ
ವಿಷಯ ವಿನೋದ, ರಾಜವೈಭವ, ಆಪ್ತಸ್ವಕೀಯ ಮೊದಲಾದ ಯಾವತ್ತೂ
ಗಳ ಕ್ಷಯಕ್ಕೆ ಪ್ರಳಯಕಾಲವು ಒದಗುವದೆಂದು ನಿಶ್ಚಯವಾಗಿ ನಂಬು.
ಆಯಿತು, ನಾನು ಹೇಳುವಷ್ಟು ಹೇಳಿದೆನು ತಗೆದುಕೊ, ಇದು ಬಾದ
ಷಹನ ಪತ್ರವು ಇದರೊಳಗೇನದೆಯೋ ಓದಿನೋಡು, ಮೂರುದಿವಸಗ
ಳಲ್ಲಿ ಉತ್ತರವು ಬೇಕು '' ಹೀಗೆ ಹೇಳುತ್ತ ಒಳ್ಳೇ ಆಡಂಬರದಿಂದೆದ್ದು
ಖಾನಸಾಹೇಬನು ಹೊರಟು ಹೋದನು

## ಐದನೆಯ ಪ್ರಕರಣ.

### ವಿಷಯಸುಖವು ಹೆಚ್ಚೋ, ಅಪತ್ಯಸುಖವು ಹೆಚ್ಚೋ ?

ಖಾನನು ಹೊರಬಿದ್ದು ಹೋದಮೇಲೆ ಸಭೆಯು ವಿಸರ್ಜಿತವಾಯಿತು. ರಾಣಾವಿಕ್ರಮಸಿಂಹನು ಒಬ್ಬನೆ ಒಂದು ದಿವಾಣಖಾನೆಯಲ್ಲಿ ಬಂದು ಕುಳಿತನು ಅಲ್ಲಿ ಆಪತ್ರವನ್ನು ಬಿಚ್ಚಿ ಓದಹತ್ತಿದನು ಓದುವಾಗ್ಗೆ ರಾಣಾನ ಇಡೀ ಶರೀರವೆಲ್ಲ ನಡುಗುತ್ತಿತ್ತು ಪತ್ರವೆಲ್ಲ ಓದಿ ತೀರಿದ ಮೇಲೆ, ಮುಖಮುದ್ರೆಯು ವಿಚಿತ್ರವಾಯಿತು. ನಿರಭ್ರವಾದ ಆಕಾಶ

ದಲ್ಲಿ ಒಮ್ಮಿಂದೊಮ್ಮೇಲೆ ಕಪ್ಪು ಮೋಡವು ಕವಿದಂತೆ ಆತನಮುಖದಮೇ
ಚಿಂತೆಯ ಚಿನ್ಹವು ಕಾಣಹತ್ತಿತು ನಡುವೆ ಏನೇನೊ ಮಾತಾಡಿಕೊಳ
ತ್ತಿದ್ದನು ಪುನಃ ಆಪತ್ರವನ್ನು ಓದುತ್ತಿದ್ದನು ಕೋಪಾವೇಶದಿಂ
ಸ್ತಬ್ಧನಾಗುತ್ತಿದ್ದನು ಪುನಃ ಏನೋ ಒಂದು ವಿಚಾರವು ಬಂದಂತೆ ಮಾಡ
ತಿದ್ದನು ಪುನಃ ವಿಚಾರದಲ್ಲಿ ಮಗ್ನನಾಗುತ್ತಿದ್ದನು ಕೆಲವು ಹೊತ್ತಿ
ನಮೇಲೆ ಆನಂದವುಳ್ಳವನಂತೆ ಕಾಣುವನು ಪುನಃ ಸಂತಾಪಯುಕ್ತನಾ
ಗುತ್ತಿದ್ದನು ಇದೇರೀತಿಯಿಂದ ಕೆಲವು ಕಾಲವು ಕಳೆದನಂತರ ಆತ
ಬಾಯಿಂದ “ ಆಹಾ, ಈಸ್ಥಿತಿಯು ಎಂಥ ಚಮತ್ಕಾರವಾದದ್ದು! ಎ
ಡೂ ಸಂಗತಿಗಳು ಎಷ್ಟು ತಾಪದಾಯಕವಾದವುಗಳು! ಪ್ರಾಣಕ್ಕಿ
ತಲೂ ಹೆಚ್ಚಾಗಿ ಸಲಹಿದ ಮುದ್ದುಮಗಳನ್ನು ಮೊಗಲರ ಕೈಯ
ಹ್ಯಾಗೆ ಕೊಡಬೇಕು? ಹೇಳಿ ಕೇಳಿ ಆತನು ಮುಸಲ್ಮಾನನು ನಾನ
ರಜಪೂತನು, ಒಂದುವೇಳೆ ನಾನು ಕೊಡದಿದ್ದರೆ ಈಹೊತ್ತು ಉಪಯೋ
ಗಿಸುತ್ತಿರುವ ರಾಜವೈಭವವು ನಿಶ್ಚಯವಾಗಿ ನಾಶವಾಗುವದು ಮತ್ತು
ಆಪ್ತಬಾಂಧವರ ಪ್ರಾಣಹಾನಿಯೂ ಆಗುವದು ಈ ಸುಶೋಭಿತವಾ
ರಾಜವಿಲಾಸಮಂದಿರವು ಕಣ್ಣೆದುರಿಗೆ ನೋಡ ನೋಡುವದರೊಳಗೆ ಪ
ಣ್ಣುಪಾಲಾಗುವದು ” ಎಂದು ತನ್ನಷ್ಟಕ್ಕೆ ತಾನೆ ಅಂದುಕೊಳ್ಳುತ್ತ ದಿವಾ
ಣಖಾನೆಯಲ್ಲಿ ಅತ್ತಿತ್ತ ತಿರುಗಾಡಹತ್ತಿದನು ಮತ್ತ ನಡುನಡುವೆ, “ಏನು
ಕ್ಷತ್ರಿಯಕುಲದಲ್ಲಿ ಹುಟ್ಟಿ ನನ್ನ ಕನ್ನೆಯನ್ನು ಮೊಗಲನಿಗೆ ಕೊಟ್ಟು ಪ್ರ
ದ್ಧವಾದ ಕುಲಕ್ಕೆ ಕಲಂಕವನ್ನು ತಂದುಕೊಳ್ಳುವದೆ? ನಾನು ಎಂ
ಮೂರ್ಖನು! ಪ್ರತಾಪನ ಮಾತನ್ನೇಕೆ ಕೇಳಲಿಲ್ಲ? ಆಹಾ, ಬಾಳಾ
ಪ್ರತಾಪ, ನೀನೇ ನಿಜವಾದ ವೀರನು ಸಭೆಯಲ್ಲಿ ನೀನಾಡಿದ ಮಾತ
ಗಳು ಈವರೆಗೂ ಕಿವಿಯಲ್ಲಿ ಉದ್ಘೋಷಿಸುತ್ತವೆ ಮೊದಲಿನಿಂದಲೂ
ನಿನ್ನಮಾತು ಕೇಳದ್ದರಿಂದ ನನಗೀ ಅನಿಷ್ಟ ಪ್ರಸಂಗವು ಒದಗಿರುವದು
ನಿನ್ನ ಅನುಮತಿಯಂತೆ ನಡೆದಿದ್ದರೆ ಈಪ್ರಸಂಗವು ಹ್ಯಾಗೆ ಬರುತ್ತಿತ್ತು!
ಎಂದು ಕೆಲವು ಕೇಳಬರದಂತೆಯೂ, ಕೆಲವು ಕೇಳಬರುವಂತೆಯೂ ಅ

ಷ್ಟಿ ಶಬ್ದಗಳು ಹೊರಡುತ್ತಿದ್ದವು. ಇಷ್ಟರಲ್ಲಿ ಯಾರದೋ ಸ್ಪರ್ಶವಾದಂತಾಗಿ ಮರಳಿ ನೋಡಿದನು. ಚಂಚಲಕುಮಾರಿಯು ಮಗ್ಗಲಲ್ಲಿ ನಿಂತಿದ್ದಳು. ವಿಕ್ರಮಸಿಂಹನು ಮಗಳನ್ನು ಕಂಡು "ಬಾಳಾ, ಇಲ್ಲಿಗೆ ಯಾವಾಗ ಬಂದೆ?" ಎಂದು ಕೇಳಿದ್ದಕ್ಕೆ "ಅಪ್ಪಾ, ನಾನು ಬಹಳ ಹೊತ್ತಿನಿಂದಲೂ ಇಲ್ಲಿ ತಮ್ಮ ಚಮತ್ಕಾರದ ವೃತ್ತಿಯನ್ನು ನೋಡುತ್ತಿದ್ದೇನೆ. ಈ ಹೊತ್ತು ತಮ್ಮ ಚಿತ್ತವು ಸರಿಯಾಗಿದ್ದಂತೆ ತೋರುವುದಿಲ್ಲ. ಈಹೊತ್ತು ಸಭೆಯಲ್ಲಿ ಏನಾದರೂ ವಿಶೇಷ ಹೆಚ್ಚುಕಡಮೆಯಾಯಿತೇನು? ಇಲ್ಲವೆ ತಲೆನೋಯುತ್ತಿದೆಯೊ? ರಾಜವೈದ್ಯನನ್ನು ಕರೆಯಿಸಲೆ?" ಎಂದು ಚಂಚಲೆಯು ಆತನ ತಲೆಯನ್ನು ಹಿಡಿದು ನೋಡಹತ್ತಿದಳು.

"ಬಾಳಾ, ನನ್ನ ಮೇಲೆ ಈಹೊತ್ತು ಬಹು ದೊಡ್ಡ ಸಂಕಟವು ಬಂದಿರುವದು. ಪ್ರತಾಪನನ್ನು ಕಾರಾಗೃಹಕ್ಕೆ ಕಳುಹಿಸಬೇಕಾಯಿತು"— "ಏನು! ಅಣ್ಣನನ್ನೆ?" "ಸರಿ–ಕಳಿಸಿದ್ದೇನೋ ನಿಜವು" ಆದರೆ ಆಗ ಈ ಮುದುಕನಿಗೆ ಸರಿಯಾಗಿ ಮೈಮೇಲೆ ಸ್ಮೃತಿ ಇರಲಿಲ್ಲ. "ಪ್ರತಾಪನನ್ನು ಕಾರಾಗೃಹಕ್ಕೆ ಕಳುಹಿಸದಿದ್ದರೆ ಬೇರೆ ಉಪಾಯವೇ ಇದ್ದಿಲ್ಲ. ಎರಡನೆಯದೊಂದು ಉಪಾಯವಿತ್ತು. ಆದರೆ" . ರಾಜನು ಮಾತಾಡದ್ದನ್ನು ಕಂಡು ಚಂಚಲೆಯು "ಅಪ್ಪಾ, ಹೀಗೇಕೆ ತಡವರಿಸುವಿರಿ? ಅಣ್ಣನನ್ನೇಕೆ ಕೈದುಮಾಡಿದಿರಿ? ಬೇರೆಮಾರ್ಗವೇ ಇದ್ದಿಲ್ಲವೆಂದು ಇದೇ ಈಗ ನೀವೇ ಹೇಳಿದಿರಿ, ಮತ್ತು ಎರಡನೇ ಉಪಾಯವಿತ್ತೆಂದು ಹೇಳುವದರೊಳಗಾಗಿಯೇ ನಿಂತುಬಿಟ್ಟಿರಿ" ಎಂದದ್ದಕ್ಕೆ ವಿಕ್ರಮಸಿಂಹನು "ಮಗಳೆ, ನಾನು ತೀರ ಭ್ರಮಿಷ್ಟನಾಗಿದ್ದೇನೆ. ಏನು ಮಾತಾಡಿದೆ? ಏನು ಮಾತಾಡಬೇಕೆಂಬದು ಸಹ ತಿಳಿಯಲೊಲ್ಲದು. ತೀವ್ರವಾಗಿ ನನ್ನಮೇಲೊಂದು ಅತಿ ಭಯಂಕರವಾದ ಪ್ರಸಂಗವು ಬರತಕ್ಕದ್ದದೆ" ಎಂದು ಹೇಳಿದನು. ಅದಕ್ಕೆ "ಅಪ್ಪಾ, ಅಂಥ ಸಂಕಟವೇನು?" "ಮಗಳೆ, ಸ್ವಲ್ಪಹೊತ್ತಿನಲ್ಲಿ, ರೂಪನಗರವು ನಾಮಶೇಷವಾಗುವದೆಂದು ನನಗೆ ತಿಳಿಯುತ್ತದೆ. ನಮಗೆಲ್ಲರಿಗೂ ಯಮಧರ್ಮನ ಆಮಂತ್ರಣವಾಗಿದೆ."

ಎಂದು ಹೇಳಿದನು ಅಷ್ಟರಲ್ಲಿ ಮಗಳು "ಅಪ್ಪಾ, ಅಪ್ಪಾ, ಹೀಗೇಕೆ ಅಮಂಗಲವನ್ನು ಉಚ್ಚರಿಸುವಿರಿ?" "ಬಾಳಾ, ಈ ಅಮಂಗಲೋಚ್ಚಾರವು ಸುಳ್ಳಲ್ಲ. ಔರಂಗಜೇಬ ಬಾದಶಹನ ಮನಸ್ಸಿನಲ್ಲಿ ಸರ್ವಸ್ವವಾಗಿ ನಮ್ಮನ್ನು ನಾಶಮಾಡಬೇಕೆಂದು ಬಂದಿರುವುದು" ಎಂದು ರಾಣಾನು ಉದಾಸೀನವೃತ್ತಿಯಿಂದ ಸುಮ್ಮನಾದನು ಅದಕ್ಕೆ ಚಂಚಲಕುಮಾರಿಯು "ಅಪ್ಪಾ, ನೋಡಿರಿ, ಹಿಂದಕ್ಕೆ ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೊದಲು ತಮಗೆ ನಾನೆಷ್ಟು ಹೇಳಿದೆನು? ಅದನ್ನಲ್ಲಿ ಕೇಳಿದಿರಿ' ಈಗ ಮತ್ತೂ ಅದೇ ಅಲ್ಲವೇನು? ಭವಿತವ್ಯವನ್ನು ತಪ್ಪಿಸಿ ಯಾರು ಓಡುವವರು? ಬುದ್ಧಿಯು ಅದೃಷ್ಟವನ್ನೇ ಅನುಸರಿಸುವುದು ಇನ್ನು ಮೇಲಾದರೂ ಎಚ್ಚರಗೊಳ್ಳಿರಿ ಆ ಯವನನ ಅಪ್ಪಣೆಯಂತೆ ನಡೆಯಬೇಡಿರಿ. ಕ್ಷತ್ರಿಯರ ರಾಜವೃತ್ತಿಯು ಹ್ಯಾಗಿರುತ್ತದೆಂಬದನ್ನು ಹೇಳಬೇಕಾಗಿಲ್ಲ ಪ್ರಸಂಗಬಂದರೆ ಯವನನೊಡನೆ ಯುದ್ಧಮಾಡಿರಿ. ಅವನನ್ನು ಸೋಲಿಸಿ ನಿಮ್ಮ ಕುಲದ ಗೌರವವನ್ನು ಕಾಯ್ದುಕೊಳ್ಳಿರಿ, ಅಂದರೆ ನಿಮ್ಮ ಕೀರ್ತಿಯು ಅಚಲವಾಗುವುದು ಇದೆಲ್ಲವನ್ನೂ ಹೆಣ್ಣು ಮಗಳಾದ ನಾನೇನು ಹೇಳಬಲ್ಲೆನು?" ಇದನ್ನು ಹೇಳುತ್ತಿರುವಾಗ್ಗೆ ಚಂಚಲಕುಮಾರಿಗೆ ಒಳ್ಳೇ ಆವೇಶವೂ ಬಂದಿತ್ತು ಅವಳ ಮುಖದ ಮೇಲೆ ಬೆವರಿನ ಹನಿಗಳು ಸಾಲಿಟ್ಟಿದ್ದವು ಸಿಟ್ಟಿನಿಂದ ಅವಳ ಮುಖವು ಆರಕ್ತವಾಗಿತ್ತು. ಆಕಾಲಕ್ಕ ಅವಳ ರೂಪು ವರ್ಣಿಸುವಂತಿತ್ತು ಚಂಚಲಕುಮಾರಿಯು ಅತ್ಯಂತ ಕೋಮಲಗಾತ್ರಿಯು ಅದರೊಳಗೆ ಸಿಟ್ಟಿನಿಂದ ಅವಳ ಸಹಜವಾದ ಮನೋಹರಸ್ವರೂಪವು ಅಧಿಕ ತೇಜವುಳ್ಳದ್ದಾಗಿತ್ತು ಸ್ವಲ್ಪ ಅತ್ತಿತ್ತ ಚದರಿದ ಅವಳ ಉಂಗುರಗೂದಲುಗಳು ಗಾಳಿಯಿಂದ ಮುಖದಮೇಲ ಹಾರಾಡುತ್ತಿದ್ದವು ತುಟಿಯು ನಡುಗುತ್ತಿತ್ತು. ಮಂಜುಳವಾದ ಸ್ವರವು ಆವೇಶದಿಂದ ಹೆಚ್ಚು ಮನೋಹರವಾಗಿ ಕರ್ಣಾನಂದವನ್ನುಂಟುಮಾಡುವಂತಿತ್ತು. ಯಾವನಾದರೊಬ್ಬ ಉತ್ತಮ ಚಿತ್ರಕಾರನು ಆಕಾಲದ ಅವಳ ಚಿತ್ರವನ್ನು

ಚಿತ್ರಿಸಿದ್ದರೆ, ಈ ನಿಸರ್ಗಸುಂದರಿಯ ಚಿತ್ರವು ಅತ್ಯಂತ ಲೋಕ ಪ್ರಿಯವಾಗುತ್ತಿತ್ತು. ರಾಣಾನು ಏನೂ ಮಾತಾಡದೆ, ಸುಮ್ಮನೆ ನಿಂತಿದ್ದನು. ಕೆಲಹೊತ್ತಿನಮೇಲೆ ಚಂಚಲಕುಮಾರಿಯು "ಅಪ್ಪಾ, ತಮಗ ವಿಕ್ರಮಸಿಂಹನೆಂಬ ಹೆಸರುಂಟು. ಮೊಗಲರ ಈ ಕಪಟಕೃತ್ಯ ವನ್ನು ಉದೇಪುರಾಧಿಪತಿಗೆ ತಿಳಿಸಿರಿ. ನೀವೂ ಅವರೂ ಕೂಡಿ ಯುದ್ಧದ ಸಿದ್ಧತೆಯನ್ನು ಮಾಡಿರಿ. ತಮ್ಮ ಕುಲದ್ದಾಗಲಿ ಹೆಸರಿನದಾಗಲಿ ಕೀರ್ತಿ ಯನ್ನು ಕಾಯ್ದುಕೊಳ್ಳಿರಿ, ನಿಮ್ಮ ಪರಾಕ್ರಮವನ್ನು ಶತ್ರುವಿಗೆ ತೋರಿ ಸಿರಿ. ಈ ಕೆಲಸದಲ್ಲಿ ಶ್ರೀಭಗವತಿ ಚಿತೋಡದ ದೇವಿಯು ತಪ್ಪದೆ ತಮಗ ಕೀರ್ತಿಯನ್ನು ಕೊಡುವಳು. ಮತ್ತು ಆ ಮೊಗಲರಿಗೆ ತಮ್ಮ ಕಪಟಕೃತ್ಯದ ಫಲವೂ ದೊರೆಯುವದು" ಎಂದು ಹೇಳುತ್ತಿರಲು ರಾಣಾನು ಚಕಿತಮುದ್ರೆಯಿಂದ "ಚಂಚಲೆ, ಮೊಗಲಸೇನೆಯೊಡನೆ ಯುದ್ಧಮಾಡಬೇಕೆಂಬ ಮಾತು ಸಾಮಾನ್ಯವಾದದ್ದಲ್ಲ. ನೀನನ್ನುವಂತೆ ಉದೇಪುರದ ರಾಣಾನ ಸಹಾಯವನ್ನು ಪಡೆಯುವುದು ಕಾಲತ್ರಯ ದಲ್ಲಿಯೂ ಸಾಧ್ಯವಲ್ಲ. ಉದೇಪುರದ ಮನೆತನದವರು ನಮಗೆ ವಂಶ ಪರಂಪರಾಗತವಾದ ಶತ್ರುಗಳು. ಆತನಿಗೆ ಶರಣುಹೋಗಿ ಆತನ ಆಶ್ರಯ ದಿಂದ ನನ್ನ ವೈಭವವನ್ನು ರಕ್ಷಿಸಿಕೊಳ್ಳಲೇನು? ಒಲ್ಲೆ, ಉದೇಪುರದವರಿಗೆ ಶರಣುಹೋಗಲೊಲ್ಲೆನು. ಬೇಕಾದಂಥ ಸಂಕಟಗಳೊದಗಿದರೂ ಸಹಿ ಸುತ್ತೇನೆ. ಆದರೆ ಅವರಿಗೆ ಮಾತ್ರ ತಲೆ ಬಗ್ಗಿಸಲಾರೆನು" ಇಷ್ಟು ಹೇಳಿ ವಿಕ್ರಮಸಿಂಹನು, ದೊಡ್ಡದೊಂದು ಉಸುರುಗರೆದು ಸುಮ್ಮನಾದನು.

ತಂದೆಯ ಈ ಶೋಕಮಯವಾದ ಸ್ಥಿತಿಯನ್ನು ಕಂಡು ಚಂಚಲ ಕುಮಾರಿಯು ಅತಿಶಯ ಸಂತಾಪಗೊಂಡು "ಅಪ್ಪಾ, ಇಲ್ಲದಿದ್ದರೆ ಪ್ರತಾಪಣ್ಣನನ್ನು ಸೆರೆಯಿಂದ ಬಿಡಿಸಿ ಯುದ್ಧದ ಸಿದ್ಧತೆಯನ್ನು ಮಾಡಿರಿ. ಪ್ರತಾಪನಂಥ ವೀರನ ಕತ್ತಿಯಮೇಲೆ ವಿಶ್ವಾಸವನ್ನಿಡಿರಿ. ಆತನ ಶಕ್ತಿಯು ಎಂದೂ ಹಿಂಜರಿಯುವದಲ್ಲ. ಒಂದುವೇಳೆ ತಮಗೆ ಅಪಜಯವಾಗಿ ರಣದಲ್ಲಿ ಬಿದ್ದು ಸತ್ತದ್ದಾದರೆ ಒಂದು ಕ್ಷತ್ರಿಯೋಚಿತ ಕರ್ಮವನ್ನು

ಮಾಡಿದಂತಾಗುವುದು ತಮ್ಮ ಕೀರ್ತಿಯು ದಿಗಂತವಾಗುವುದು ಸ್ವರ್ಗದಲ್ಲಿ ತಮಗೆ ಉತ್ತಮಗತಿಯು ದೊರೆಯುವುದು. ಮೊಗಲರೊಡನೆ ಒಪ್ಪಂದಮಾಡಿಕೊಂಡು ತಮ್ಮ ಸ್ವತಂತ್ರ್ಯಯನ್ನು ಮಾರಿಕೊಳ್ಳಬೇಡಿರಿ ಮುಂದೆ ನಿಮ್ಮ ದೈವದಲ್ಲಿದ್ದಂತಾಗುವುದು '' ಎಂದು ಹೇಳಿದ್ದಕ್ಕೆ ವಿಕ್ರಮಸಿಂಹನು "ಚಂಚಲ ನೀನಿನ್ನೂ ಚಿಕ್ಕವಳು ಜಗತ್ತಿನೊಳಗಿನ ಎಷ್ಟೋ ಸಂಗತಿಗಳನ್ನು ನೀನು ಇನ್ನೂ ಕಲಿಯಬೇಕಾಗಿದೆ ರಾಜಕರಣದಲ್ಲ ನಿನಗೇನು ತಿಳಿಯುತ್ತದೆ?'' ಎಂದದ್ದಕ್ಕೆ "ಹಾಗಾದರೆ ಅದಕ್ಕೆ ಉಪಾಯವೇನು?'' "ಮಗಳೆ, ಒಂದು ಉಪಾಯವುಂಟು ಅದರಂತೆ ಒಂದು ನೇಳೆ ವರ್ತಿಸಿದ್ದಾದರೆ ರಾಜವೈಭವವು ಹಾನಿಯಾಗದೆ ಮರಳಿ ವೃದ್ಧಿಯಾಗುವುದು ಯಾರ ಪ್ರಾಣಹಾನಿಯೂ ಆಗುವುದಿಲ್ಲ ಮತ್ತು ಬಂದಿರುವ ಸಂಕಟವೂ ತಪ್ಪುವುದು ಆದರೆ ಅದಲ್ಲವೂ ನಿನ್ನನ್ನೇ ಅವಲಂಬಿಸಿರುವುದು '' ಎನಲು ಆತುರದಿಂದ ಚಂಚಲಕುಮಾರಿಯು "ಅಪ್ಪಾ ಎಲ್ಲವೂ ನನ್ನನ್ನು ಅವಲಂಬಿಸಿರುವದೆ ' ರಾಜವೈಭವದ ವೃದ್ಧಿಯಾಗಿ ಪ್ರಾಣಹಾನಿಯಿಲ್ಲದೆ ಯಾವತ್ತು ಸಂಕಟವು ಕಳದುಹೋಗುವಂಥ ಉಪಾಯವು ನನ್ನನ್ನು ಅವಲಂಬಿಸಿದ್ದರೆ, ಅದು ಏನಿದ್ದರೂ ಇರಲೊಲ್ಲದೇಕೆ, ನಾನು ಪ್ರೀತಿಯಿಂದ ಒಪ್ಪಿಕೊಳ್ಳುತ್ತೇನ ಆದ್ದರಿಂದ ಮೊದಲು ನನಗೆ ಉಪಾಯವ್ಯಾವದೆಂಬುದನ್ನು ತಿಳಿಸಿರಿ '' ಎಂದು ಕೇಳಿದಳು. ಅದಕ್ಕೆ " ಚಂಚಲೆ, ನನ್ನ ಅಪ್ಪಣೆಯನ್ನು ಪಾಲಿಸುವೆಯೂ ಇಲ್ಲವೊ ಎಂಬ ಸಂಶಯವು ವಿಶೇಷವಾಗಿರುತ್ತದೆ '' ಎಂದು ಹೇಳಿದನು. ಇದನ್ನು ಕೇಳಿ ಚಂಚಲೆಯು "ಅಪ್ಪಾ, ತಮಗ ಸಂಶಯವೇಕೆ ಬರುತ್ತದೆ? ಧರ್ಮವಿರುದ್ಧವಾದದ್ದೂ ಕ್ಷತ್ರಿಯಕುಲಕ್ಕೆ ಅಯೋಗ್ಯವಾದದ್ದೂ ಆದ ಉಪಾಯವಿದ್ದರೆ ಮಾತ್ರ ನಾನು ಮಾನ್ಯಮಾಡಲಾರೆನು.'' "ಚಂಚಲೆ, ಈ ನಿನ್ನ ಮುಪ್ಪಿನತಂದೆಯ ಮಾತನ್ನು ಲಕ್ಷ್ಯಕ್ಕೆತಂದು ನನ್ನ ಆಯುಷ್ಯದ ಕಡೆಗಾಲದ ಈ ಅಪ್ಪಣೆಯನ್ನು ಮಾನ್ಯಮಾಡು. ವೃದ್ಧಾಪ್ಯದಲ್ಲಿ ರಾಜವೈಭವವು ನಾಶವಾಗಬಾರದೆಂದು ನಿನಗಿದನ್ನು ಹೇಳುತ್ತೇನೆ. ಈಗ

ನಿನ್ನ ಪಿತೃಭಕ್ತಿಯನ್ನು ಒರೆಗಲ್ಲಿಗೆ ಹಚ್ಚಿನೋಡುವ ಪ್ರಸಂಗವು ಒಂದಿರುವುದು'' ಆಮೇಲ ವಿಕ್ರಮಸಿಂಹನು ಕಕ್ಕುಲತೆಯಿಂದ ''ಚಂಚಲೆ ಈ ಹೊತ್ತು ಬಂದಿರುವ ಬಾದಶಹನ ಪತ್ರದಲ್ಲಿ ನಿನ್ನ ಸಂಬಂಧವಾಗಿ......'' ಎಂದು ಹೇಳುವುದರೊಳಗೆ ಚಂಚಲಕುಮಾರಿಯು ಗಾಬರಿಯಾಗಿ ''ಆ ಪತ್ರದಲ್ಲಿ ನನ್ನದೇನು ಸಂಬಂಧವು ?'' ಎಂದು ಬಹಳ ಭೀತಳಾದಳು ಬಹಳ ಹೊತ್ತಿನವರೆಗ ವಿಕ್ರಮಸಿಂಹನು ಸ್ತಬ್ಧನಾದನು ಆಮೇಲೆ ಮತ್ತೆ ನಿಶ್ಚಯದ ಮುದ್ರೆಯಿಂದ ''ಚಂಚಲೆ, ನೀನು ಬೇಕಾದಷ್ಟು ಹೇಳು ಆದರೆ ನನ್ನ ಮಾತು ಮಾನ್ಯಮಾಡಲೇಬೇಕು ಸಾಕಷ್ಟು ವಿಚಾರ ಮಾಡಿಯೆ ನಾನು ಹೇಳುತ್ತೇನೆ ವಿಚಾರಾಂತದಲ್ಲಿ ನಾನು ಮಾಡುವ ಕೆಲಸವು ಸರಿಯಾದದ್ದೆಂದು ನನ್ನ ಮನೋದೇವತೆಯು ನನಗ ಹೇಳುತ್ತದೆ ಜೋಧಪುರ, ಅಂಬರ ಮೊದಲಾದ ದೊಡ್ಡದೊಡ್ಡ ಕುಲತಿಲಕರ ಕೃತಿಸ್ಥಿತಿಗಳನ್ನು ವಿಚಾರಿಸಿದರೆ ನನ್ನ ನಿಶ್ಚಯವು ಜಾಣತನದ್ದೆಂದು ತೋರುವದು. ರಾಜವೈಭವದ ವೃದ್ಧಿಯಾಗುವದಲ್ಲದ ಪ್ರಾಣಹಾನಿಯ ಪಾಪವೂ ನನಗ ಬರುವದಿಲ್ಲ ಚಂಚಲೆ, ನಾನು ರೂಪನಗರಾಧಿಪತಿಯೂ ನಿನ್ನ ಜನ್ಮದಾತನೂ ಇರುವುದರಿಂದ ನಿನಗ ಅಧಿಕಾರದಿಂದ ಹೇಳುತ್ತೇನೆ ನೀನು ನನ್ನ ಅಪ್ಪಣೆಯ ಪ್ರಕಾರ ನಡೆಯಲೇ ಬೇಕು ದಿಲ್ಲೀಶ್ವರನಾದ ಔರಂಗಜೇಬನು ನಿನ್ನನ್ನು ಬಯಸಿರುವನು ಆದ್ದರಿಂದ ನೀನು ನನ್ನ ಅಪ್ಪಣೆಯ ಮೇರಿಗೆ ಅಲ್ಲಿಗ ಹೋಗಬೇಕು ''

ಈ ಮಾತು ಕಿವಿಯಲ್ಲಿ ಬಿದ್ದಕೂಡಲ ಚಂಚಲಕುಮಾರಿಗೆ ಸಿಡಿಲು ಹೊಡೆದಂತಾಯಿತು ಒಮ್ಮಿಂದೊಮ್ಮೆ ಆ ಬಾಲಿಕೆಯ ಮುಖವು ಕಪ್ಪಾಯಿತು ನಾನು ನಿದ್ರೆಯಲ್ಲಿರುವನೊ, ಜಾಗ್ರತೆಯಲ್ಲಿರುವೆನೊ ಎಂಬದು ಸಹ ಆಕೆಗ ತಿಳಿಯದಂತಾಯಿತು ವಿಕ್ರಮಸಿಂಹನು, ಮುಂದೆ ಹೇಳಹತ್ತಿದನು '' ಔರಂಗಜೇಬನು ನಿನ್ನನ್ನು ತನ್ನ ವಿಲಾಸಮಂದಿರದಲ್ಲಿ ಸುಖಸ್ತ್ರೀಯನ್ನಾಗಿ ಮಾಡಿಕೊಳ್ಳುವದಿಲ್ಲ ಆತನು ನಿನ್ನ ರೂಪಕ್ಕೆ ಮರುಳಾಗಿರುವನು. ನಿನ್ನನ್ನು ವಿಧಿಪೂರ್ವಕವಾಗಿ ಲಗ್ನವಾಗುವನು.

ನಿನ್ನನ್ನೆ ಪಟ್ಟದ ರಾಣಿಯಾಗಿ ಮಾಡುವನು. ಇದಕ್ಕಾಗಿಯೆ ಆತನ ಸರದಾರನಾದ ದಿಲೇರಖಾನನು ಪತ್ರತೆಗೆದುಕೊಂಡು ಯಾವತ್ತು ಸೇನಾಸಂಭಾರದೊಡನೆ ಬಂದಿದ್ದಾನೆ. ಈ ಮಾತಿಗೆ ನಾನು ಒಪ್ಪಿಕೊಳ್ಳದಿದ್ದರೆ ಎಷ್ಟು ಅನರ್ಥವಾಗುವದೆಂಬುದನ್ನು ನಿನಗೆ ಮೊದಲೆ ಹೇಳಿರುತ್ತೇನೆ. ಇದಕ್ಕೂ ಹೆಚ್ಚು ಮಾತಾಡಲಿಕ್ಕೆ ನನ್ನ ಮನಸ್ಸಿಲ್ಲ. ನಿನ್ನ ಅಭಿಪ್ರಾಯವನ್ನು ನಾನು ಕೇಳುವದಿಲ್ಲ. ನಿನಗೆ ಎಂಟು ದಿವಸದ ಅವಧಿಯನ್ನು ಕೊಟ್ಟಿರುತ್ತೇನೆ. ಇಷ್ಟರಲ್ಲಿ ನೀನು ಹೊರಡಲು ಸಿದ್ಧತೆಯನ್ನು ಮಾಡಿಕೊಳ್ಳಬೇಕು '' ಹೀಗೆ ಹೇಳಿದ್ದಕ್ಕೆ ಚಂಚಲಕುಮಾರಿಯು " ಅಪ್ಪಾ, ನೀವೇ ಕೂತು ನನಗೆ ಹೀಗೇಕೆ ಹೇಳುವಿರಿ? ನೀವು ಶ್ರೇಷ್ಠವಾದ ಕ್ಷತ್ರಿಯ ಕುಲೋತ್ಪನ್ನರಲ್ಲವೇನು? ನಿಮ್ಮದೇ ಈ ತರಹದ ಅಪ್ಪಣೆಯೇನು? ಅಪ್ಪಾ, ಈ ಹೊತ್ತಿನವರಿಗೆ ಒಳ್ಳೇ ಮಮತೆಯಿಂದ ಸಂರಕ್ಷಿಸಿದಿರಿ. ಸಿಟ್ಟಿನಿಂದ ಎಂದೂ ಒಂದು ಮಾತು ಸಹ ಆಡಲಿಲ್ಲ ಅನೇ ತಂದೆಗಳಾದ ನೀವು ಪರಧರ್ಮೀಯನಾದ ಮೊಗಲನಿಗೆ ಈ ದೇಹವನ್ನು ಅರ್ಪಿಸೆಂದು ಅಪ್ಪಣೆಯನ್ನು ಕೊಡುತ್ತೀರಲ್ಲವೆ? '' " ಚಂಚಲೆ, ಈಗ ನಿನ್ನ ಮಾತನ್ನು ನಾನು ಕೇಳುವದಿಲ್ಲ ಹಾಗೆ ನಿಶ್ಚಯವನ್ನೇ ಮಾಡಿರುವೆನು ಎಷ್ಟು ಬೇಕಾದಷ್ಟು ಮಾತಾಡು, ನಾನು ಸ್ವಲ್ಪವೂ ಲಕ್ಷಿಸುವದಿಲ್ಲ '' ಹೀಗೆ ಹೇಳುವ ತಂದೆಯ ಮಾತುಗಳನ್ನು ಕೇಳಿ ಚಂಚಲಕುಮಾರಿಯು ನಾಗರ ಹಾವಿನಂತೆ ಉರಿದೆದ್ದು " ಅಪ್ಪಾ, ಈ ಕ್ಷತ್ರಿಯ ಕನ್ಯೆಯು ತನ್ನ ನಿಜಾಗ್ರವನ್ನೂ ಆ ದುಷ್ಟ ಮುಸಲ್ಮಾನನಿಗೆ ತೋರಿಸಲಿಕ್ಕಿಲ್ಲವೆಂಬುದನ್ನು ಲಕ್ಷ್ಯದಲ್ಲಿಡಿರಿ ಸ್ವಂತಕುಲದ ಅಭಿಮಾನವನ್ನು ಬಿಟ್ಟು ಪರಧರ್ಮೀಯರ ಪಟ್ಟದರಾಣಿಯಾಗೆನ್ನುವಿರಿ? ಅದಕ್ಕೂ ಮರಣವು ಶ್ರೇಷ್ಠವಾದದ್ದಲ್ಲವೆ? ನಾನೆಂದೂ ಈ ಮಾತಿಗೆ ಒಪ್ಪಲಾರೆನು. ''

" ನಿನ್ನ ಸಮ್ಮತಿಯು ಬೇಕಾಗಿಲ್ಲ. ನಾನು ಹೇಳಿದಂತೆ ಕೇಳಬೇಕು. ನಾವು ನಮ್ಮ ಸಿದ್ಧತೆಯನ್ನು ಮಾಡುವೆವು. ಇನ್ನೂ ಎಂಟು ದಿವಸಗಳ ಮೇಲೆ ಚಂಚಲಕುಮಾರಿಯೊಡನೆ ಇಲ್ಲಿಂದ ಹೊರಡಬಹುದೆಂದು

ದಿಲೇರಖಾನನಿಗೆ ಈಗ ಹೇಳುತ್ತೇನೆ." ಎಂದು ವಿಕ್ರಮಸಿಂಹನು ಹೊರಟುಹೋದನು

ಒಳಿಕ ಚಂಚಲಕುಮಾರಿಯು ಬಾಯಲ್ಲಿಯೆ ಏನೇನೋ ಅಂದುಕೊಂಡಳು ಕಡೆಗೆ ಏನೋ ಒಂದು ವಿಚಾರದೊರೆತವಳಂತೆ ನಿಶ್ಚಯದ ಮುದ್ರೆಯಿಂದ ಅಲ್ಲಿಂದ ಹೊರಟುಹೋದಳು

# ಆರನೆಯ ಪ್ರಕರಣ.

## ರಾಜೋಪಾಧ್ಯಾಯ.

ಸಾಯಂಕಾಲದ ಐದು ಘಂಟೆಯ ಸಮಯ ಪಶ್ಚಿಮ ದಿಗ್ವಧುವು ಬೇಗನೆ ಪತಿದರ್ಶನವಾಗುವದೆಂದು ಆನಂದಾತಿಶಯದಿಂದ ಪತಿಪರಾಯಣಳಾದ ರಮಣೀಮಣಿಯಂತ ಉಲ್ಲಾಸದಿಂದಿರುವಳು ಮುಖವು ಲಜ್ಜೆಯಿಂದಲೋ ಏನೋ ಎಂಬಂತೆ ಆರಕ್ತವರ್ಣವಾಗಿದೆ. ಅದನ್ನು ಕಂಡು ಯಾರಿಗೆ ಆನಂದವಾಗಲಿಕ್ಕಿಲ್ಲ? ಆ ಆರಕ್ತವರ್ಣದ ಪ್ರಕಾಶವು ರೂಪನಗರದ ಕೋಟೆಯ ಮೇಲೆಯೂ ಬದ್ದದರಿಂದ ಅದೂ ಅತ್ಯಂತ ಮನೋಹರವಾಗಿ ಕಾಣುತ್ತಿತ್ತು

ಈ ಕಾಲದಲ್ಲಿ ಕೋಟೆಯೊಳಗಿನ ಅಂತಃಪುರದಲ್ಲಿ ಒಬ್ಬ ಯುವತಿಯು ಚಿತ್ರಗಳನ್ನು ನೋಡುತ್ತಿದ್ದಳು ಕೆಲವು ಚಿತ್ರಗಳನ್ನು ನೋಡಿದ ಮೇಲೆ ಮತ್ತೊಂದು ಚಿತ್ರವನ್ನು ತೆಗೆದುಕೊಂಡು, ಏಕಾಗ್ರಚಿತ್ತದಿಂದ ನೋಡಹತ್ತಿದಳು ಎಷ್ಟು ಹೊತ್ತಿನವರೆಗೆ ನೋಡಿದರೂ ತೃಪ್ತಿಯಾಗಲೊಲ್ಲದು ಪುನಃಪುನಃ ಅದೇಚಿತ್ರವನ್ನು ನೋಡಹತ್ತಿದ್ದಳು. ನೋಡುತ್ತ ನೋಡುತ್ತ, ಚಿತ್ರವಶಳಾಗಿ ಹೋದಳು ಅವಳ ಸಮವಯಸ್ಕಳಾದೊಬ್ಬ ತರುಣಿಯು ಬೆನ್ನಹಿಂದೆ ನಿಂತು ಈಕೆಯ ಕೃತಿಯನ್ನು ಲಕ್ಷ್

ಪೂರ್ವಕವಾಗಿ ನೋಡುತ್ತಿದ್ದಳು ತನ್ನ ಕಾಲಸಪ್ಪಳದಿಂದ ಆಕೆಯು ಎಚ್ಚರಗೊಳ್ಳಬಹುದೆಂದು ಎರಡನೇ ತರುಣಿಯು ತಿಳಿದಿದ್ದಳು ಆದರೆ ಅವಳ ಮೈಮೇಲೆ ನಿಜವಾಗಿಯೂ ಸ್ಮೃತಿಯಿದ್ದಿಲ್ಲ ತಾನು ಎಷ್ಟು ಹೊತ್ತಿನವರೆಗೆ ನಿಂತರೂ ಮರಳಿ ನೋಡುವದಿಲ್ಲೆಂದು ಎರಡನೇ ತರುಣಿಯು ಎದುರಿಗೆ ಬಂದು "ಬಾಯಿಯವರೆ, ಈ ಮೂರ್ತಿಯ ಧ್ಯಾನ ಮಾಡುತ್ತಿರುವಿರೇನು? ಚಿತ್ರಕೊಂಡಂದಿನಿಂದ ದಿನಾಲು ಏಕಾಂತದಲ್ಲಿ ತಾವು ಏನು ಮಾಡುತ್ತಿರುವಿರೆಂಬದು ಗೊತ್ತಾಗಿದ್ದಿಲ್ಲ ಈಗ ತಿಳಿಯಿತು"

"ಸಖಿ, ಇದು ಹುಡುಗಾಟಿಕೆಯು ಗೊತ್ತಿಲ್ಲ ನನ್ನ ಮನಸ್ಸಿಗೆ ಸ್ವಸ್ಥವಿಲ್ಲ ತಂದೆಯು ಆ ಸಂಗತಿಯನ್ನು ಹೇಳಿದಂದಿನಿಂದ ನನಗೆ ಹ್ಯಾಗೂ ಆಗುತ್ತದೆ ಇದಕ್ಕೆ ಬೇರೆ ಏನಾದರೂ ಉಪಾಯವಿರುವದ?"

"ಏನೆ? ಬೇರೆವಿಚಾರವು ಯಾತಕ್ಕೆ ಬೇಕು? ನಿನಗ ಔರಂಗಜೇಬನ ಪಟ್ಟದರಾಣಿಯಾಗುವ ಮನಸ್ಸಿಲ್ಲದಿದ್ದರೆ, ತಂದೆಯವರೇನು ಮಾಡುವರು? ಬಾದಶಹನ ಬೇಡಿಕೆಯು ಮಾತ್ರ ವ್ಯರ್ಥವಾಗುವುದು ತಂದೆಯವರಿಗಂತೂ ಅಪ್ಪಣೆಯನ್ನು ಮನ್ನಿಸಬೇಕಾಗಿದೆ ನೀನಾದರೂ ಒಂದುವೇಳೆ ಒಪ್ಪಿಗೆಯನ್ನು ಕೊಟ್ಟರೆ ನಮ್ಮ ಭಾಗ್ಯಕ್ಕೆ ಮರ್ಯಾದೆಯು ಇಲ್ಲದಂತಾಗುವದು ಜೋಧಪುರ, ಅಂಬರ ಮೊದಲಾದ ರಾಜಕನ್ನಿಕೆಯರಿಗೆ ಬಾದಶಹನ ಪಟ್ಟದರಾಣಿಯಾಗಲಿಕ್ಕೆ ಮನಸ್ಸಿಲ್ಲವೇ? ನಿನಗೇಕೆ ಇಷ್ಟು ಹಟವಾರಿತನವು?"

ಇವರು ಯಾರೆಂಬದು ವಾಚಕರಿಗೆ ಗೊತ್ತಾಗಿರಬಹುದು ಒಬ್ಬಳು ಚಂಚಲಕುಮಾರಿಯು, ಮತ್ತೊಬ್ಬಳು ಅವಳ ಸಖಿಯಾದ ನಿರ್ಮಲಕುಮಾರಿಯು

ನಿರ್ಮಲೆಯ ಮಾತುಗಳನ್ನು ಕೇಳಿ ಚಂಚಲಕುಮಾರಿಯು ಬಳ್ಳೇ ಸಿಟ್ಟಿನಿಂದ "ಇಲ್ಲಿಂದ ಎದ್ದುಹೋಗು, ನಿನಗಿಂಥ ಮರ್ಮಭೇದಕ ಮಾತುಗಳಿಂದಲೆ ಬಹಳ ಬೇಸರ ಬಂದಿದ" ಎಂದಳು

"ತಾಯಿ, ನನ್ನಮಾತಿನಿಂದ ನಿನಗೊಳ್ಳೆ ಸಿಟ್ಟು ಬಂದಿರುವದು. ಆದರೆ ನೀನು ದಿಲ್ಲಿಗೆ ಹೋಗುವದಕ್ಕೆ ಒಡಂಬಡದಿದ್ದರೆ ತಂದೆಯ ಗತಿಯೇನಾಗುವದೆಂದು ವಿಚಾರಿಸಿರುವಿಯಾ?" ಎಂದು ನಿರ್ಮಲೆಯು ಹೇಳಿದಳು

"ಇದನ್ನು ವಿಚಾರಮಾಡುವದೇನು? ನಾನು ದಿಲ್ಲಿಗೆ ಹೋಗದಿದ್ದರೆ ರೂಪನಗರದ ಕೋಟೆಯ ಒಂದು ಕಲ್ಲೂ ಕಣ್ಣಿಗೆ ಬೀಳುವದಿಲ್ಲೆಂದು ಪೂರಾ ತಿಳಿದಿದ್ದೇನೆ. ಅಂತೆ ತಂದೆಯನಾಶಕ್ಕೆ ಕಾರಣಳಾಗದೆ ದಿಲೇರಖಾನನೊಡನೆ ಹೊರಟು ಹೋಗಬೇಕೆಂದು ವಿಚಾರಮಾಡಿರುತ್ತೇನೆ" ಎಂದು ಚಂಚಲೆಯು ನುಡಿದಳು

ಅದಕ್ಕೆ ನಿರ್ಮಲಕುಮಾರಿಯು ಆನಂದದಿಂದ—"ನಾನೂ ಅದನ್ನೇ ಹೇಳುತ್ತೇನೆ"

ರಾಜಕನ್ಯೆಯು ಸಿಟ್ಟಿನಿಂದ—"ಹೌದೆ, ಒಳ್ಳೇ ಸರಿಯಾಗಿ ಹೇಳಿದಿ ನಿನ್ನ ಅನುಮತಿಯಂತೆ ನಾನು ದಿಲ್ಲಿಗೆಹೋಗಿ ಆ ಮುಸಲ್ಮಾನನ ದಾಸಿಯಾದರೆ ನಿನಗೆ ಬಲು ಸಂತೋಷವೆ? ಹಂಸಿಯು ಎಂದಾದರೂ ಬಕನಿಗೆ ಮಾಲೆಯನ್ನು ಹಾಕುವದುಂಟೆ?"

ನಿರ್ಮಲಕುಮಾರಿಯು ಗೊಂದಲದಲ್ಲಿ ಬಿದ್ದು—"ಹಾಗಾದರೆ ನೀನು ಮಾಡುವುದೇನು?"

ಚಂಚಲಕುಮಾರಿಯು ಕೈಯೊಳಗಿನ ಉಂಗುರವನ್ನು ತೋರಿಸಿ—"ಇದು ನನ್ನ ರಕ್ಷಣೆಯನ್ನು ಮಾಡುತ್ತದೆ?"

"ನೀನು ಈರೀತಿಯಿಂದ ಆತ್ಮಹತ್ಯವನ್ನು ಮಾಡಿಕೊಳ್ಳುವಿಯಾ? ಇದರಹೊರ್ತು ಬೇರೆ ಉಪಾಯವಿಲ್ಲವೆ?"

ಚಂಚಲೆ—"ನಿರ್ಮಲೆ, ಇದಕ್ಕೂ ಹೆಚ್ಚಿನ ಉಪಾಯವೇನು? ನನಗೋಸುಗ ದಿಲ್ಲೀಶ್ವರನೊಡನೆ ವೈರವನ್ನು ಬೆಳೆಸುವ ವೀರರು ಈ ರಜಪೂತಸ್ಥಾನದಲ್ಲಿ ಯಾರಾದರೂ ಉಂಟೆ? ಸಾಂಪ್ರತಕ್ಕೆ ರಾಜಸ್ಥಾನದಲ್ಲಿ ರಜಪೂತ ಕುಲಾಂಗಾರರು ಮೊಗಲರ ದಾಸರಾಗಿ ಬಿದ್ದುಕೊಂಡಿ

ರುವರು. ರಾಣಾ ಸಂಗ್ರಾಮಸಿಂಹನಾಗಲಿ, ರಾಣಾ ಪ್ರತಾಪಸಿಂಹ ನಾಗಲಿ, ಈಗ ಎಲ್ಲಿರುವರು ? ''

ನಿರ್ಮಲೆ—'' ರಾಣಾ ಸಂಗ್ರಾಮನಾಗಲಿ, ಪ್ರತಾಪನಾಗಲಿ ಇರುತ್ತಿದ್ದರೆ, ನಿನಗೋಸುಗ ತಮ್ಮ ಸರ್ವಸ್ವವನ್ನು ನಾಶಮಾಡಿಕೊಳ್ಳು ತ್ತಿದ್ದರೆ ? ಹಾಗಾದರೆ ರಾಜಸಿಂಹ ಇಲ್ಲವೇನು ? ಆತನು ನಿನ್ನ ಗೋಸುಗ ಏನೂ ಮಾಡಲಿಕ್ಕಿಲ್ಲವೆ ?,,

ಚಂಚಲೆ—'' ನಿರ್ಮಲೆ, ಏನುಹೇಳಿದಿ? ಮೈಯ್ಯಲ್ಲಿ ಶಕ್ತಿಯಿದ್ದ ರಜಪೂತಕುಲಶ್ರೇಷ್ಠರು ಇರುವದು ಶರಣಾಗತರನ್ನು ರಕ್ಷಿಸಲಿಕ್ಕಲ್ಲವೇ ? ಈ ಸಂಕಟದೊಳಗಿಂದ ಪಾರಾಗಲಿಕ್ಕೆ ರಾಣಾಸಂಗ್ರಾಮ, ಹಾಗು ಪ್ರತಾ ಪರ ಕುಲದೀಪಕನ ಆಶ್ರಯವನ್ನೇ ಹೊಂದಬೇಕೆಂದು ನಿಶ್ಚಯಿಸಿರು ವೆನು ಆತನು ನನ್ನ ರಕ್ಷಣೆಯನ್ನು ಮಾಡಲಿಕ್ಕಿಲ್ಲವೆ ? '' ಎಂದು ಹೇಳುತ್ತ ತನ್ನಲ್ಲಿರುವ ರಾಜಸಿಂಹನ ಚಿತ್ರವನ್ನು ತೆಗೆದು ಅದರಕಡೆ ನೋಡುತ್ತ ''ಗೆಳತಿ, ಈ ಮೂರ್ತಿಯ ತೇಜವನ್ನಾದರೂ ನೋಡು. ನನ್ನನ್ನು ಈ ಸಂಕಟದೊಳಗಿಂದ ಪಾರುಮಾಡುವವರು ಯಾರಾದರೂ ಇದ್ದರೆ, ಇವರೇ ಎಂದು ನಾನು ಪೂರ್ಣವಾಗಿ ನಂಬುತ್ತೇನೆ ,,

ರಾಜಕನ್ನಿಕೆಯ ಯಾವತ್ತು ಗೆಳತಿಯರಲ್ಲಿ ನಿರ್ಮಲೆಯು ಪ್ರಮು ಖಳೂ ಬುದ್ಧಿವಂತಳೂ ಇದ್ದಳು ಚಂಚಲಕುಮಾರಿಯು ಅವಳನ್ನು ತನ್ನ ತಂಗಿಯಂತೆ ಪ್ರೀತಿಸುತ್ತಿದ್ದಳು ಸ್ವಲ್ಪ ಹೊತ್ತು ವಿಚಾರಮಾಡಿ ನಿರ್ಮಲೆಯು—'' ಹಾಗಾದರೆ ನಿನ್ನನ್ನು ಈ ಸಂಕಟದೊಳಗಿಂದ ಬಿಡಿ ಸಿದ ವೀರನಿಗೆ ನೀನು ಕೊಡುವದೇನು? ,,

ರಾಜಕನ್ನೆಗೆ ಆಕೆಯ ಮರ್ಮಭೇದಕವಾದ ಮಾತಿನ ಸ್ವಾರ್ಥವು ತಿಳಿದರೂ ತಿಳಿಯದವಳಂತೆ '' ನಿರ್ಮಲೆ, ಕೊಡುವದೇನು? ಕೊಡ ತಕ್ಕಂಥ ವಸ್ತುವು ನನ್ನ ಅಧಿಕಾರದಲ್ಲಿ ಏನಿರುವುದು ? ಹೇಳಿಕೇಳಿ ನಾನು ಅಬಲೆಯು, ವೀರಪುರುಷರು ತಮ್ಮ ಉಪಕಾರದ ಪ್ರತೀಕಾರವನ್ನು ಅಬಲೆಯರಿಂದ ಬೇಡುತ್ತಾರೆಯೆ? ,,

ನಿರ್ಮಲೆಯು—“ ಚಂಚಲೆ, ನೀನು ಅಬಲೆಯಾದರೇನಾಯಿತು? ನಿನ್ನ ದೇಹದಮೇಲೆ ನಿನ್ನ ಪೂರ್ಣಅಧಿಕಾರವಿಲ್ಲವೆ? ನೀನು ರುಕ್ಮಿಣಿಯಾದರೆ ಕೃಷ್ಣನು ಎಲ್ಲಿದ್ದರೂ ಬಂದು ನಿನ್ನನ್ನು ಬಿಡಿಸಿಕೊಳ್ಳುವನು.”

ಸಲಜ್ಜಾಂತಃಕರಣದಿಂದ ಚಂಚಲಕುಮಾರಿಯು ಮುಖವನ್ನು ತಗ್ಗಿಸಿ ನೆಲದಕಡೆಗೆ ನೋಡಹತ್ತಿದಳು ಆಕೆಯ ಸುಂದರವಾದ ಮುಖಕಮಲದಮೇಲೆ ಆಶೆ ಹಾಗು ನಿರಾಶೆ ಆನಂದ ಹಾಗು ದುಃಖ ಇವೇ ಮನೋವಿಕಾರಗಳು ಕ್ಷಣಮಾತ್ರದಲ್ಲಿ ತೋರಿ ಅಡಗಿದವು. ಆಮೇಲೆ ‘ನಿರ್ಮಲೆ, ನನ್ನ ದೈವವು ಅಷ್ಟು ಬಲವತ್ತರವಾಗಿ ಎಲ್ಲಿರುವುದು? ನನ್ನ ಪೂರ್ವದ ಪುಣ್ಯವೇನಾದರೂ ಇದ್ದರೆ ಮಾತ್ರ ಒಂದುವೇಳೆ ಹಾಗಾಗಬಹುದು, ಅಂಥ ಯೋಗವೂ ಕೂಡಿಬರಬಹುದು”

ನಿರ್ಮಲೆ—“ಅಂಥಾ ಯೋಗವು ಕೂಡಿಬರದಿದ್ದರೇನಾಯಿತು? ರಾಜಸಿಂಹನ ಬಲವು ಅದ್ವಿತೀಯವಾದದ್ದು. ನಾವಾಗಿಯ ಅತ್ತಕಡೆಗೆ ಹೇಳಿಕಳಿಸಿದರಾಯಿತು”

ಚಂಚಲೆ—“ ಸರಿ, ಮನುಷ್ಯನನ್ನು ಕಳುಹಿಸಿದ ಹೊರ್ತು ಈ ಕಾರ್ಯವು ಸಾಧ್ಯವಾಗದು. ಉಪಾಧ್ಯಾಯನನ್ನು ಕರೆ. ಆತನು ನನ್ನನ್ನು ಬಹಳ ಪ್ರೀತಿಸುವನು ಆತನ ಮನಸಿನಲ್ಲಿ ಬಂದರೆ ಈ ಕಾರ್ಯವನ್ನು ಸಹಜವಾಗಿ ಮಾಡಬಲ್ಲನು ಆತನನ್ನು ಇತ್ತ ಕರೆತರುವ ಮೊದಲು ಆತನಿಗೆ ಈ ಸಂಗತಿಯನ್ನೆಲ್ಲ ಹೇಳಿರು ಇಲ್ಲದಿದ್ದರೆ ನನಗೆ ಹೇಳುವುದಕ್ಕೆ ಲಜ್ಜೆಯನಿಸುತ್ತದೆ.” ಎಂದು ಕೆಳಗೆ ಮುಖವನ್ನು ಬೊಗ್ಗಿಸಿ ಹೇಳಿದಳು.

ಅನಂತ ಮಿಶ್ರನೆಂಬ ರಾಜೋಪಾಧ್ಯಾಯನಿದ್ದನು. ಆತನು ಚಂಚಲಕುಮಾರಿಯನ್ನು ತನ್ನ ಹೊಟ್ಟೆಯಮಗಳಂತೆ ನೋಡಿಕೊಳ್ಳುತ್ತಿದ್ದನು. ಧರ್ಮಶಾಸ್ತ್ರದಲ್ಲಿ ಬೇಕಾದಂಥ ಪಂಡಿತರೊಡನೆ ವಾದವಿವಾದ ಮಾಡುತ್ತಿದ್ದನು. ಮತ್ತು ಎಂದೂ ಸೋತು ಹಿಂಜರಿಯುತ್ತಿದ್ದಿಲ್ಲ. ಆತನ ಅಧ್ಯಯನವಾದರೂ ವಿಶೇಷವಾಗಿತ್ತು. ಇಂಥ ಜಾಣನೂ ಶಾಸ್ತ್ರಜ್ಞನೂ

ವಿದ್ಯಾವಿಭೂಷಿತನೂ ಆದ ಉಪಾಧ್ಯಾಯನಿಗೆ ರಾಜಸಭೆಯೊಳಗಿನ ಎಲ್ಲ ಜನರು ಮಾನಕೊಡುತ್ತಿದ್ದರು

ಚಂಚಲಕುಮಾರಿಯು ತನ್ನನ್ನು ಕರೆಯಿಸಿರುವಳೆಂಬದನ್ನು ಕೇಳಿದ ಕೂಡಲೆ ಆತನು ಹೊರಟು ಅಂತಃಪುರಕ್ಕೆ ಬಂದನು ಆತನನ್ನು ಯಾರೂ ತಡೆಯುತ್ತಿದ್ದಿಲ್ಲ ಮತ್ತು ಅಲ್ಲಿಗೆ ಬರುವ ಮೊದಲು ನಿರ್ಮಲಕುಮಾರಿಯು ಎಲ್ಲ ಸಂಗತಿಯನ್ನೂ ಹೇಳಿದ್ದಳು

ಉಪಾಧ್ಯಾಯನ ಆಕೃತಿಯು ಭವ್ಯವಾದದ್ದು, ಮುಖಕಾಂತಿಯು ನೋಡಿದವರಲ್ಲಿ ಆದರವನ್ನುಂಟುಮಾಡುವಂತಿತ್ತು, ವಿಶಾಲವಾದ ಹಣೆಯಲ್ಲಿ ಚಂದನದ ತ್ರಿಪುಂಡ್ರವನ್ನು ಹಚ್ಚಿದ್ದನು ಸರ್ವಾಂಗಕ್ಕೂ ಭಸ್ಮವನ್ನು ಲೇಪಿಸಿದ್ದನು. ಕೊರಳೊಳಗೆ ರುದ್ರಾಕ್ಷದ ಮಾಲೆಯನ್ನು ಹಾಕಿದ್ದನು ತಾನು ಕರೆಯಿಸಿದ ಕೂಡಲೆ ಆತನು ಬಂದದ್ದನ್ನು ಕಂಡು ಚಂಚಲಕುಮಾರಿಯ ಅಂತಃಕರಣವು ತುಂಬಿಬಂದು ಆಕೆಯ ಕಣ್ಣೊಳಗಿಂದ ಪ್ರೇಮಾಶ್ರುಗಳು ಹರಿಯಹತ್ತಿದವು ಬಂದಕೂಡಲೆ ಅನಂತ ಮಿಶ್ರನು "ರಾಜಕುಮಾರಿ, ಈಹೊತ್ತು ನನ್ನನ್ನೇಕೆ ಕರೆಯಿಸಿದಿ! ನಿನ್ನ ಮುಖ ಲಕ್ಷಣದಿಂದ ನಿನಗೇನೂ ಒಂದು ದೊಡ್ಡ ಸಂಕಟವು ಒದಗಿದಂತೆ ತೋರುತ್ತದೆ" ಎಂದನು

ಚಂಚಲೆ "ಉಪಾಧ್ಯಾಯರೇ ತಮ್ಮ ಹೇಳಿಕೆಯಂತೆ ನಾನು ನಿಜವಾಗಿ ದೊಡ್ಡ ಸಂಕಟದಲ್ಲಿ ಬಿದ್ದಿರುತ್ತೇನೆ ಆಸಂಕಟದಿಂದ ಬಿಡಿಸುವಿರೆಂತಲೆ ನಿಮ್ಮನ್ನು ಕರೆಯಿಸಿರುವೆನು ತಮ್ಮಹೊರ್ತು ನನ್ನ ಸಂಕಟವನ್ನು ದೂರಮಾಡುವವರು ಬೇರೆಯಾರು? ಸ್ವಾಮಿ, ನನ್ನ ಬಾಯಿಂದ ಸ್ತ್ರೀಜಾತಿಯ ಸ್ವಾಭಾವಿಕ ಮರ್ಯಾದೆಯನ್ನು ಮೀರಿ ಒಂದುವೇಳೆ ಶಬ್ದಗಳು ಹೊರಟರೆ, ಅದಕ್ಕೋಸುಗ ಕ್ಷಮಿಸಿರಿ"

"ಮಗಳೆ ಈಅನಂತ ಮಿಶ್ರನನ್ನು ನಿನ್ನ ತಂದೆಗೆ ಸಮಾನನೆಂದರಿತು, ಸಂಕೋಚವಿಲ್ಲದೆ ನಿನ್ನ ಸಂಕಟವನ್ನು ಹೇಳು, ಅದರ ಪರಿಹಾರಕ್ಕಾಗಿ ನನ್ನಿಂದಾದಷ್ಟು ಪ್ರಯತ್ನಮಾಡುವೆನೆಂದು ನಿಶ್ಚಯವಾಗಿ ನಂಬು."

ಚಂಚಲ—“ ಸ್ವಾಮಿ, ತಮ್ಮ ಅಮೃತಸಮವಾದ ಮಾತುಗಳಿಂದ ನನಗೆ ಸ್ವಲ್ಪಧೈರ್ಯವು ಬಂದಿದೆ. ರುಕ್ಮಿಣಿಯನ್ನು ಶಿಶುಪಾಲನಿಗೆ ಕೊಡಬೇಕೆಂದು ಅವಳ ತಂದೆಯು ನಿಶ್ಚಯಿಸಿದ್ದಾಗ್ಗೆ ರುಕ್ಮಿಣಿಯ ವಿನಂತಿಯ ಮೇರೆಗೆ ಅವಳ ಕುಲಗುರುವು ದ್ವಾರಕೆಗೆ ಶ್ರೀಕೃಷ್ಣನಕಡೆಗೆ......”

“ಅದರಂತೆ ನಾನೂ ಉದೇಪುರಕ್ಕೆ ಹೋಗಬೇಕೆಂದು ನಿಶ್ಚಯಿಸಿರುವೆನು. ನನ್ನ ಹಾದಿಯ ಖರ್ಚಿನ ಸಿದ್ಧತೆಯನ್ನು ಮಾತ್ರ ಮಾಡು” ಎಂದು ಅನಂತಮಿಶ್ರನೆ ನಡುನಡುವೆ ನಗುನಗುತ್ತ ಹೇಳಿದನು.

ಕೂಡಲೆ ಚಂಚಲಕುಮಾರಿಯು ಒಂದು ಹಣತುಂಬಿದ ಚೀಲವನ್ನು ಮುಂದಿಟ್ಟಳು. ಉಪಾಧ್ಯಾಯನು ತನಗೆ ಬೇಕಾದಷ್ಟು ತಗೆದುಕೊಂಡು ಉಳಿದವುಗಳನ್ನು ತಿರುಗಿ ಅವಳಮುಂದಿಟ್ಟು “ಮಗಳೆ, ನನಗೊಂದು ಪತ್ರವನ್ನು ಕೊಟ್ಟಿದ್ದರೆ ಒಳ್ಳೆದಾಗುತ್ತಿತ್ತು. ರಾಣಾರಾಜಸಿಂಹನು ನಿನ್ನ ಹಸ್ತಾಕ್ಷರ ಪತ್ರವನ್ನು ಕಂಡು ಹೆಚ್ಚು ಪ್ರೀತ್ಸಾಹದಿಂದ ಈಕಾರ್ಯವನ್ನು ಕೈಕೊಳ್ಳುವನು. ನಾನು ಹೇಳಿದನೆಂದು ಅಷ್ಟು ಮೈಮೇಲೆ ತಗೆದುಕೊಳ್ಳಲಿಕ್ಕಿಲ್ಲ. ರುಕ್ಮಿಣಿಯು ತನ್ನ ಉಪಾಧ್ಯಾಯನ ಕೈಯ್ಯಲ್ಲಿ ಪತ್ರವನ್ನೂ ಕೊಟ್ಟಿದ್ದಳಷ್ಟೇ.”

ಚಂಚಲಕುಮಾರಿಯು ವಿಚಾರಮಾಡತೊಡಗಿದಳು. ಮತ್ತು ಅವಳ ಕುಲೀನತೆಗೆ ಶೋಭಿಸುವಂಥ ವಿಚಾರವೆ ಅವಳಮನಸ್ಸಿನಲ್ಲಿ ಬಂದಿತ್ತು. ಅವಿವಾಹಿತಳಾದ ನಾನು ಪರಪುರುಷನಿಗೆ ಪ್ರ್ಯಾಗಪತ್ರವನ್ನು ಬರೆಯಬೇಕೆಂಬ ವಿಚಾರವು ಅವಳನ್ನು ಆವರಿಸಿಕೊಂಡಿತ್ತು. ಸ್ವಲ್ಪಹೊತ್ತು ವಿಚಾರಮಾಡಿದ ಮೇಲೆ ಪತ್ರ ಬರೆದಹೊರ್ತು ಗತಿಯಿಲ್ಲೆಂದು ಅವಳಿಗೆ ಕಂಡು ಬಂತು. ಆಮೇಲೆ ಪತ್ರವನ್ನು ಬರೆಯುವದಕ್ಕೆ ಆರಂಭಿಸಿದಳು.

“ ನೀನು ಪತ್ರಬರೆಯುವಷ್ಟರಲ್ಲಿ ನಾನು ರಾಜನ ಅಪ್ಪಣೆಯನ್ನು ತಕ್ಕೊಂಡು ಬರುತ್ತೇನೆ. ಎಂದುಹೇಳಿ ಅನಂತಮಿಶ್ರನು ರಾಜನ ಸಭಾಸ್ಥಾನಕ್ಕೆ ಬಂದು, “ರಾಣಾಜಿ ಸ್ವಲ್ಪದಿವಸಗಳವರೆಗೆ ಪ್ರವಾಸಕ್ಕೆ ಹೋಗಬೇಕೆಂದಿರುತ್ತೇನೆ, ಆಕಾರಣ ತಮಗೆ ಆಶೀರ್ವದಿಸಬೇಕೆಂದು ಬಂದಿರುತ್ತೇನೆ.”

ಎಂದು ಹೇಳಿದನು ಅದಕ್ಕೆ ರಾಣಾನು "ಎಲ್ಲಿಯವರೆಗೆ ಹೋಗುವದು" ಎಂದು ಕೇಳಲು ಅನಂತಮಿಶ್ರನು ಉದೇಪುರದವರೆಗೆ ಹೋಗಬೇಕಾಗಿದೆ? ಎಂದು, ಪ್ರಸಂಗ ಒದಗಿದರೆ ಉಪಯೋಗಕ್ಕಾಗುವದೆಂದು ಒಂದು ರಾಜ ಮುದ್ರೆಯ ಪತ್ರವನ್ನು ತಕ್ಕೊಂಡನು

ಅನಂತಮಿಶ್ರನು ಮರಳಿ ಚಂಚಲಕುಮಾರಿಯ ಕಡೆಗೆ ಬಂದನು ಇಷ್ಟರಲ್ಲಿ ಆ ಇಬ್ಬರು ಗೆಳತಿಯರೂ ಕೂಡಿ ಆಲೋಚಿಸಿ ಬರೆದಿಟ್ಟಿದ್ದ ಪತ್ರವನ್ನು ತೆಗದುಕೊಂಡನು ಚಂಚಲಕುಮಾರಿಯು ಒಂದು ಉತ್ತಮ ವಾದ ಮುತ್ತಿನ ಹಾರವನ್ನು ತೆಗೆದು ಆತನವಶಕ್ಕೆ ಕೊಟ್ಟಳು "ರಾಣಾನು ಪತ್ರವನ್ನು ಓದಿದಮೇಲೆ, ನೀವು ನನ್ನ ಕಡೆಯ ವಕೀಲರಾಗಿ ಈ ಹಾರವನ್ನು ಅವರ ಕೊರಳಲ್ಲಿ ಹಾಕಿರಿ ರಜಪೂತಕುಲದ ವೀರ ಮಣಿಯು ರಜಪೂತಕನ್ನೆಯು ಕಳಿಸಿದ ಹಾರವನ್ನು ಎಂದೂ ಸ್ವೀಕರಿಸದೆ ಬಿಡಲಿಕ್ಕಿಲ್ಲ"

ಆಮೇಲೆ ಅನಂತಮಿಶ್ರನು ಚಂಚಲಕುಮಾರಿಯನ್ನು ಆಶೀರ್ವದಿಸಿ ಹೊರಟುಹೋದನು ತರುವಾಯ ಚಂಚಲೆಯು "ಈಗ ಮನಸ್ಸಿಗೆ ಸ್ವಲ್ಪ ಸಮಾಧಾನವೆನಿಸಿತು ಇನ್ನು ಮೇಲೆ ಅಣ್ಣನನ್ನು ಕಾರಾಗೃಹ ದಿಂದ ಬಿಡಿಸುವ ಯುಕ್ತಿಯನ್ನೇನಾದರೂ ಮಾಡಬೇಕಾಗಿದೆ ಈ ಕೆಲಸ ದಲ್ಲಿ ನನಗೆ ಆತನು ವಿಶೇಷ ಸಹಾಯಮಾಡುವನು" ಎಂದು ನಿರ್ಮ ಲೆಗೆ ಹೇಳಿದಳು

ನಿರ್ಮಲೆಯು—"ನಾನು ಅದನ್ನು ಮಾಡಿಟ್ಟಿರುವನು ಯಾ ವತ್ತು ಪಹರೆಯವರನ್ನು ವಶಪಡಿಸಿಕೊಂಡಿರುತ್ತೇನೆ ನಾನು ಇಲ್ಲಿಂದ ಹೋದಕೂಡಲೆ ಆತನಿಗೆ ಬಿಡುಗಡೆಯಾಯಿತೆಂದು ತಿಳಿ"

ಚಂಚಲಕುಮಾರಿಯು ಆನಂದದಿಂದ—"ಗೆಳತಿ, ನೀನು ಒಳ್ಳೇ ಯುಕ್ತಿವಂತಳು ಈ ಮಾತಿನ ಸುದ್ದಿಯನ್ನು ನನಗೆ ಹೇಳಲಿಲ್ಲ, ಆಗಲಿ, ಮೊದಲು ಆ ಕೆಲಸವನ್ನು ಮಾಡೋಣ ನಡೆ" ಎಂದು ಇಬ್ಬರೂ ಹೊರಟುಹೋದರು.

# ಏಳನೆಯ ಪ್ರಕರಣ

## ಪರಮ ಹಂಸ

ಮಳೆಗಾಲದ ದಿವಸ, ರಾತ್ರಿಯ ಸಮಯ, ದಿಲ್ಲಿಯಲ್ಲಿ "ಶಾಹಾಬಾಗ" ವೆಂಬದೊಂದು ಬಾದಶಹನ ಅತ್ಯಂತರಮಣೀಯವಾದ ಉಪವನವು ಮನೋಹರವಾದ ನಾನಾವಿಧ ಚಿತ್ರವಿಚಿತ್ರ ಪುಷ್ಪಲತಾಯುಕ್ತವಾದ ಉಪವನದ ಅತುಲಸೌಂದರ್ಯವೂ ವೈಭವವೂ, ರಾತ್ರಿಯ ಘೋರಅಂಧಕಾರದಲ್ಲಿ ಇಲ್ಲದಾಗಿತ್ತು. ಆದೇಅಗ ಹುಟ್ಟಿದ ಚಂದ್ರನ ಅತ್ಯಲ್ಪಕೆಂಪುಪ್ರಕಾಶದಲ್ಲಿ ಮಾತ್ರ ಅಲ್ಲಲ್ಲಿಗೆ ವಿಲಕ್ಷಣ ಕೌಶಲ್ಯದಿಂದ ರಚಿಸಿದ ಗೂಂಬಗಳೊಳಗಿಂದ ಎತ್ತರವಾಗಿ ಹಾರುವ ಕಾರಂಜಿಯ ಸಹಸ್ರ ತುಷಾರಗಳು ದೃಷ್ಟಿಗೆ ಬೀಳುವುದರಿಂದ ವಿಶೇಷಆನಂದವುಂಟಾಗುತ್ತಿತ್ತು. ಎದುರಿಗೆ ಕಾಳಿಂದಿಯ ನೀಲಪ್ರವಾಹವು ಮುಂದಮುಂದವಾಗಿ ಹರಿಯುತ್ತಿತ್ತು. ಇಷ್ಟರಲ್ಲಿ ಗಗನಮಂಡಲವು ಮೇಘಾಚ್ಛಾದಿತವಾಯಿತು. ಕೃಷ್ಣವರ್ಣದ ಮೇಘಸಮೂಹವು ಅತ್ತಿತ್ತ ಸಂಚಾರಮಾಡುತ್ತಿತ್ತು. ಪ್ರಚಂಡವಾದ ವಾಯುವೂ ವೇಗದಿಂದ ಬೀಸಹತ್ತಿತು ಗಿಡಗಳು ವಿಶೇಷವಾಗಿ ಅಲ್ಲಾಡಹತ್ತಿದವು ಸುತ್ತಲೂ ಅಂಧಕಾರವು ಮತ್ತಿಷ್ಟು ದಟ್ಟವಾಯಿತು ಮಳೆಯ ಹನಿಗಳೂ ಉದುರಲಾರಂಭಿಸಿದವು, ಆಕಾಲದಲ್ಲಿ ಪಹರೆಯವರು ಮಾತ್ರ ಅಲ್ಲಲ್ಲಿ ತಿರುಗಾಡುತ್ತಿದ್ದರು ಅವರಾದರೂ ಮಳೆಯ ತ್ರಾಸದಿಂದ ಒಂದೊಂದು ಆಶ್ರಯವನ್ನು ಹುಡುಕಿಗೊಂಡು ನಿಂತುಬಿಟ್ಟಿದ್ದರು ಸ್ವಲ್ಪಹೊತ್ತಿನಲ್ಲಿ ದಿಲ್ಲಿಯ ಆ ಉಪವನ, ನದಿಯ ಘಾಟ, ಊರೊಳಗಿನ ಬೀದಿ, ಮೊದಲಾದಲ್ಲಲ್ಲ ಶೂನ್ಯತೆಯುಂಟಾಗಿತ್ತು. ಈ ಶೂನ್ಯತೆಯಾದರೊ ಬಹಳ ಹೊತ್ತಿನವರೆಗೆ ನಿಲ್ಲಲಿಲ್ಲ ಶಹಬಾದದಲ್ಲಿ ಯಾರೋ ನಡೆದುಬರುವ ಸಪ್ಪಳು ಕೇಳಬರಹತ್ತಿತು. ಇಂಥ ಪ್ರಳಯಕಾಲದಲ್ಲಿ ದಶದಿಶಗಳೂ ಭಯಂಕರವಾಗಿದ್ದವು. ಮೇಘವು ಗರ್ಜ

ಸುತ್ತದೆ ನಡು ನಡುವೆ ಮಿಂಚುತ್ತದೆ ಪ್ರಚಂಡವಾಯುವು ಭಾವಿ ವಿಪತ್ತನ್ನು ಸೂಚಿಸುವಂತೆ ' ಧೂ, ಧೂ,' ಎಂದು ಧ್ವನಿಗೈಯ್ಯುತ್ತದೆ ಇಂಥ ಭಯಂಕರವಾದ ಕಾಲದಲ್ಲಿ ಇತ್ತಕಡೆಗೆ ಬರುವವರು ಯಾರಿರಬಹುದು ? ಅವಳೊಬ್ಬ ತಾಪಸಿಯು, ಹೆಜ್ಜೆಯ ಸಪ್ಪಳಾಗದಂತೆ ಮೆಲ್ಲನೆ ಬರುತ್ತಿದ್ದಳು ವಾಚಕರೆ ಇದು ಆಶ್ಚರ್ಯವಲ್ಲವೇನು ? ಮೊಗಲಬಾದಶಹನ ಉಪವನದಲ್ಲಿ ಈ ತಾಪಸಿಯು ಯಾಕೆ ಬಂದಿರಬಹುದು? ಈ ತರಹದ ನಿಶ್ಶಬ್ದವಾದ ಮಂದಗಮನದಲ್ಲಿ ಅವಳು ತನ್ನಷ್ಟಕ್ಕೆ ಮಾತನಾಡುತ್ತಿದ್ದಳು " ಇದೇನು ? ನಾನು ಇಲ್ಲಿಗೆ ಹ್ಯಾಗೆ ಬಂದೆನು ? ಪುನಃ ನಾನು ಇದೇ ಸ್ಥಳಕ್ಕೆ ಯಾಕೆ ಬಂದೆನು ? " ಇಷ್ಟು ಮಾತಾಡಿ ಒಂದು ದೀರ್ಘವಾದ ನಿಶ್ವಾಸವನ್ನು ಕರೆದಳು ಕಣ್ಣೊಳಗಿಂದ ಅಶ್ರುಧಾರೆಗಳು ಹರಿಯಹತ್ತಿದವು ಸಂಸಾರದ ಮಾಯಾಪಾಶದಿಂದ ಮುಕ್ತಳಾದ ತಪಸ್ವಿನಿಯ ಬಾಯಿಂದ ಈ ತರದ ಶಬ್ದಗಳು ಹೊರಡುವದು ಆಶ್ಚರ್ಯವಾದದ್ದು ಹೀಗಾಗಲಿಕ್ಕೆ ಏನಾದರೊಂದು ಕಾರಣವಿರಬಹುದು ಅವಳಲ್ಲಿ ವಾಸಮಾಡಿಕೊಂಡಿದ್ದ ಗುಪ್ತದುಃಖವು ಹೊರಬಿದ್ದಂತೆ ತೋರುತ್ತದೆ ಅವಳ ದುಃಖದ ಕಾರಣವನ್ನು ತಿಳುಕೊಳ್ಳಲಿಕ್ಕೆ ನಮಗ ಸ್ವಲ್ಪ ಅವಕಾಶಬೇಕು ಗುಡುಗಿನ ಗರ್ಜನೆಯಿಂದಲೂ, ಮಿಂಚಿನ ಹೊಳಪಿನಿಂದಲೂ ಆ ಉಪವನವು ಅತ್ಯಂತ ಭಯಂಕರವಾಗಿ ಕಾಣಿಸುತ್ತಿದ್ದರೂ ಅವಳಿಗ ಸ್ವಲ್ಪವೂ ಭಯವೆನಿಸಿದ್ದಿಲ್ಲ ಒಂದು ಗಿಡದ ಬೊಡ್ಡಿಗೆ ಕುಳಿತು ಈಶ್ವರನನ್ನು ಧ್ಯಾನಮಾಡಹತ್ತಿದಳು. ಅವಳು ತನ್ನ ಆತ್ಮವನ್ನು ಪರಮಾತ್ಮನಲ್ಲಿ ಸಂಯೋಗಪಡಿಸುವಂತೆ ತೋರಿದಳು. ಜಡಿಮಳೆಯಿಂದ ಅವಳ ವಸ್ತ್ರಗಳೆಲ್ಲವೂ ತೊಯ್ದುಹೋದವು ಇಂಥದರಲ್ಲಿ ಅವಳು ಕಣ್ಣು ತೆರೆದು ಆಕಾಶದಕಡೆಗ ನೋಡಿ " ಪ್ರಭೊ, ಇದೆಲ್ಲವೂ ನಿನ್ನ ಲೀಲಾಮಾತ್ರವು, ಈ ಹೊತ್ತು ಈ ಭಯಂಕರ ಪ್ರಳಯಕಾಲವು ಒದಗಿದ್ದರಿಂದಲೆ ನಾನು ಆ ದುಷ್ಟನ ಮೋರೆಯನ್ನು ನೋಡುವ ಹೊತ್ತು ಬರಲಿಲ್ಲ. ಪರಮೇಶ್ವರಾ, ನನಗೆ ಯಾವಾಗಲೂ ಇದೇ ವೇಷದಿಂದ ತಿರುಗಾಡುವ ಪ್ರಸಂಗ

ಬರುವದೆ?" ಅಷ್ಟರಲ್ಲಿ ಒಮ್ಮಿಂದೊಮ್ಮೆ ಒಂದು ಕರುಣಾಜನಕ ರೋದನ ಧ್ವನಿಯು ಕಿವಿಗೆ ಬಿತ್ತು. ಒಡನಯೆ ಮಾತಾಡುವುದನ್ನು ತಟ್ಟನೆ ನಿಲ್ಲಿಸಿ, ಚಕಿತಳಾಗಿ ನಾಲ್ಕೂ ಕಡೆಗೆ ನೋಡಹತ್ತಿದಳು. ಕಿವಿಗೊಟ್ಟು ಕೇಳಿದ ಮೇಲೆ ಯಾರೂ ಒಬ್ಬ ಸ್ತ್ರೀಯು ಶೋಕಿಸುತ್ತಿರಬಹುದೆಂದು, ಆ ಧ್ವನಿಯು ಮೇಲಿಂದ ಗುರ್ತಿಸಿದಳು, "ಈಶ್ವರಾ, ನನ್ನ ದೈವದಲ್ಲಿ ಇದನ್ನೆ ಬರೆದಿದ್ದೀಯ? ಹೆ, ಪ್ರಭೊ, ನನ್ನಂಥ ಭಾಗ್ಯಹೀನಳನ್ನು ಯಾಕೆ ಹುಟ್ಟಿಸಿದಿ?" ಎಂಬ ವಾಕ್ಯಗಳನ್ನು ಕೇಳಿದಳು. ಈಗ ಮಾತ್ರ ತಪಸ್ವಿನಿಯು ಎದ್ದು ನಿಂತು, ನಾಲ್ಕೂಕಡೆಗೆ ಎಚ್ಚರದಿಂದ ನೋಡಿದಳು. ಯಮುನಾನದಿಯ ದಂಡೆಯಮೇಲಿಂದ ಈ ಧ್ವನಿಯು ಬರುತ್ತಿರಬಹುದೆಂದು ತರ್ಕಿಸಿ ಅತ್ತಕಡೆಗೆ ಹೊರಟಳು. ಇಷ್ಟರಲ್ಲಿ ಪುನಃ ಆ ಧ್ವನಿಯು ಕೇಳಬಂತು, "ನನಗೊಂದು ವೇಳೆ ದರ್ಶನವನ್ನು ಕೊಡಿರಿ. ನಿಮ್ಮ ಶೋಧಕ್ಕಾಗಿ ನಾನು ಅತ್ಯಂತ ಕಷ್ಟಪಟ್ಟೆನು. ಇನ್ನುಮೇಲೆ ನಾನದನ್ನು ಸಹಿಸಲಾರೆ, ನಾನು ಈಗ ಈ ಪಾಪಹಾರಿಣಿಯಾದ ಕಾಳಿಂದಿಯಲ್ಲಿ ಹಾರಿ ಯಾವತ್ತು ಕಷ್ಟದಿಂದ ಮುಕ್ತಳಾಗುತ್ತೇನೆ." ಇದನ್ನು ಕೇಳಿದ ಕೂಡಲೆ ತಪಸ್ವಿನಿಯು "ಹಾ, ಹಾ, ಬೇಡ, ಬೇಡ," ಹೀಗೆನ್ನುತ್ತ ಯಮುನಾನದಿಯ ಧಡಕ್ಕೆ ಓಡಿದಳು.

ತಪಸ್ವಿನಿಯು ಓಡಿಬಂದು ನೋಡಿದಳು. ಒಬ್ಬ ಲಾವಣ್ಯವತಿಯಾದ ಕೋಮಲಗಾತ್ರದ ರಮಣಿಯು ಮಳಲದಿಣ್ಣೆಯಮೇಲೆ ಕುಳಿತು ಹಣೆಯನ್ನೂ ಎದೆಯನ್ನೂ ಹೊಡೆದುಕೊಂಡು ಅಳುತ್ತಿದ್ದಳು.

ಆ ಯುವತಿಯ ಆ ಅಲೌಕಿಕ ಸೌಂದರ್ಯವನ್ನು ಕಂಡು ತಪಸ್ವಿನಿಗೆ ಆಶ್ಚರ್ಯವಾಯಿತು. ಈ ಕೋಮಲಾಂಗಿಯಾದ ಸೌಂದರ್ಯದ ಪುತ್ಥಳಿಯು ಯಮುನಾನದಿಯ ದಂಡೆಯಮೇಲೆ ಇಷ್ಟು ವಿಶೇಷವಾಗಿ ಯಾಕೆ ಶೋಕಿಸುತ್ತಿರಬಹುದು? ಅವಳ ಶರೀರದ ಕಾಂತಿಯಿಂದಲೇ ಅವಳು ಶ್ರೇಷ್ಠಕುಲೋತ್ಪನ್ನಳೆಂಬುದು ಸ್ಪಷ್ಟವಾಗಿತ್ತು. ಈ ಸ್ಥಿತಿಯುಂಟಾಗಲಿಕ್ಕೆ ಅವಳಮೇಲೆ ಏನಾದರೊಂದು ಭಯಂಕರ ಪ್ರಸಂಗವು ಬಂದಿರ

ಬೇಕು ಅವಳಿಗೆ ಧೈರ್ಯವನ್ನು ಕೊಡುವುದು ನನ್ನ ಮೊದಲನೇ ಕೆಲಸವು ಎಂಬ ವಿಚಾರವು ಆ ತಪಸ್ವಿನಿಯ ಮನಸಿನಲ್ಲಿ ಬಂದುದರಿಂದ ಆವಳು ಆ ದುಃಖಿತಳಾದ ಆ ಬಾಲಾಮಣಿಯ ಹತ್ತರಕ್ಕೆ ಬಂದಳು ಸಮೀಪ ಪಕ್ಕೆ ಒಂದು ನೋಡಲು ೧೮, ೧೯ ವರ್ಷದ ಸುಂದರರಮಣಿಯು ಕುಳಿತಿದ್ದಳು ಅತಿಶಯ ಕಷ್ಟದಿಂದ ಆವಳ ಶರೀರವು ಕೃಶವಾಗಿತ್ತು ಅವಳ ಶರೀರದ ಗೌರವರ್ಣವೂ ಧೂಳಿಯಿಂದ ಮಲಿನವಾಗಿತ್ತು

ತಪಸ್ವಿನಿಯು ಒಮ್ಮಿಂದೊಮ್ಮೆ ಮುಂದಕ್ಕೆ ಬಂದು ಆ ಸ್ತ್ರೀಯನ್ನು ಬಿಗಿಯಪ್ಪಿಕೊಂಡು,—“ಮಗಳೆ, ಈ ಯೌವನಾವಸ್ಥೆಯಲ್ಲಿ ಮೃತ್ಯುವನ್ನೇಕೆ ಬಯಸುವಿ ?”

ಆ ಯುವತಿಗೆ ಬಹಳ ಆಶ್ಚರ್ಯವೆನಿಸಿತು ತಪಸ್ವಿನಿಯ ವೇಷವನ್ನೂ ಆವಳ ಮಮತೆಯ ಮಾತನ್ನೂ ಕೇಳಿ ಅವಳಿಗೆ ತನ್ನ ಹಿಂದಿನ ಸಂಗತಿಯ ಸ್ಮರಣೆಯಾಯಿತು, ಆದರಿಂದ ಆವಳಿಗೆ ದುಃಖವು ಮತ್ತಿಷ್ಟು ಒತ್ತರಿಸಿತು. ಅಳುತ್ತ ಅಳುತ್ತ “ತಾಯಿ, ಈ ದುರ್ಭಾಗ್ಯಳನ್ನು ಕ್ಷಮಿಸು ನೀನು ಯಾರು ? ನನ್ನ ದುಃಖಕ್ಕೆ ಮರುಗುವ ಪ್ರಾಣಿಯು ಈ ಜಗತ್ತಿನಲ್ಲಿ ಯಾರೂ ಇಲ್ಲ” ಎಂದು ಹೇಳಿದಳು.

“ಮಗಳ, ನಾನೊಬ್ಬ ಸನ್ಯಾಸಿನಿಯು, ಇದಕ್ಕೂ ಹೆಚ್ಚಿನ ಗುರ್ತನ್ನು ಈಗ ನಾನು ನಿನಗೆ ಹೇಳಲಾರೆನು ”

“ತಾಯಿ, ಕ್ಷಮಿಸು, ನಾನಾದರೂ ಈಗ ನಿಮ್ಮ ಗುರ್ತು ಕೇಳಿ ಮಾಡುವದೇನು ? ತಮ್ಮನ್ನು ನೋಡಿದಕೂಡಲೆ ನನ್ನ ಪ್ರಿಯಮಾತೆಯ ನೆನಪಾಯಿತು ಅಯ್ಯೋ ಯಾವ ಅಪರಾಧಕ್ಕೋಸುಗ ತಾಯಿಯು ನನ್ನನ್ನು ತ್ಯಜಿಸಿರಬಹುದು ? ಅವ್ವಾ ಎಲ್ಲಿರುವಿಯ ? ಈ ಪೃಥ್ವಿಯಲ್ಲಿ ನಿನ್ನ ಹೊರ್ತು ನನಗೆ ಬೇರೆ ಯಾರುಗತಿ ?”

ತಪಸ್ವಿನಿ—“ಮಗಳೆ, ಧೈರ್ಯವನ್ನು ಹಿಡಿ, ಅಳಬೇಡ ನಿನ್ನ ತಾಯಿಯು ನಿನಗೆ ಅವಶ್ಯವಾಗಿ ಭೇಟಿಯಾಗುವಳು”

"ತಾಯಿ, ನನ್ನ ದೈವದಲ್ಲಿ ಅಷ್ಟು ಭಾಗ್ಯವೆಲ್ಲಿಯದು ? ನನ್ನ ಶರೀರವು ಒರೇ ಕಷ್ಟಕ್ಕೆಮಾತ್ರ ಗುರಿಯಾಗಿದೆ" ಹೀಗೆ ಮಾತಾಡುತ್ತ ಮಾತಾಡುತ್ತ ಆ ಹುಡುಗಿಯು ಅಳಲಾರಂಭಿಸಿದಳು ಅವಳ ಮುಖವು ನಿಸ್ತೇಜವಾಯಿತು ತುಟಿಗಳು ನಡುಗಹತ್ತಿದವು ಚಕಿತಳಾಗಿ ನಾಲ್ಕೂ ಕಡೆಗ ನೋಡಹತ್ತಿದಳು ಅವಳ ದೃಷ್ಟಿಯು ಯಮುನಾನದಿಯ ಕಡೆಗೆ ಹೋದಕೂಡಲೆ ಅತ್ತಕಡೆಗೆ ವಿಶೇಷ ಹೊತ್ತಿನವರೆಗೆ ನೋಡಹತ್ತಿದಳು ಮತ್ತು ಮನಸ್ಸಿನಲ್ಲಿಯೆ ಏನೇನೊ ಅಂದುಕೊಂಡಳು ಆಮೇಲೆ ತಪಸ್ವಿನಿಯು ಕಡೆಗೆ ತಿರುಗಿ "ತಾಯಿ, ಇನ್ನು ಸಾಕು ಈ ದೇಹವು ಈ ಯಮುನಾನದಿಯಲ್ಲಿ ವಿಶ್ರಾಂತಿಯನ್ನು ಹೊಂದಿದ ಹೊರತು ನನ್ನ ಸಂಕಟವು ನಾಶವಾಗುವಂತಿಲ್ಲ" ಇಷ್ಟು ಹೇಳಿ ಯಮುನಾನದಿಯಲ್ಲಿ ಹಾರಿಕೊಳ್ಳುವುದಕ್ಕೆ ಧಾವಿಸಿದಳು ಆದರೆ ತಪಸ್ವಿನಿಯು ಓಡುತ್ತ ಹೋಗಿ ಅವಳನ್ನು ಹಿಡಿದುಕೊಂಡಳು ಮತ್ತು ಸಿಟ್ಟಿನಿಂದ "ಈ ನಿನ್ನ ಮೂರ್ಖತನಕ್ಕೆ ಏನನ್ನಲಿ? ಸಾವಿರಾರು ಜನರು ನನಗೆ 'ತಾಯಿ' ಎಂದು ಕರೆಯುತ್ತಾರೆ, ಆದರೆ ನಿನ್ನ ಬಾಯಿಂದ ಈ ಶಬ್ದವನ್ನು ಕೇಳಿ ಆನಷ್ಟು ಆನಂದವೆಂದೂ ನನಗೆ ಆಗಿಲ್ಲ. ನಾನು ಸನ್ಯಾಸಿನಿಯು. ಗೃಹಸ್ಥಾಶ್ರಮ ದಿಂದೇನು ಪ್ರಯೋಜನವು ? ಆದರೆ ನಿನ್ನನ್ನು ನೋಡಿದಕೂಡಲೆ ಗೃಹಸ್ಥಾ ಶ್ರಮದ ಮನುಷ್ಯರಂತೆ ನನ್ನ ಸ್ಥಿತಿಯಾಗಿರುವುದು, ನಿನ್ನನ್ನು ಎತ್ತಿ ತೊಡೆಯಮೇಲಿಟ್ಟು ಅನೇಕಾವರ್ತಿ ಚುಂಬಿಸಬೇಕೆಂಬ ಅಪೇಕ್ಷೆಯುಂ ಟಾಗಿರುವುದು" ಎಂದಳು ಅದಕ್ಕೆ ಯುವತಿಯು "ತಾಯಿ, ನಿಮ್ಮ ದಯಾಪೂರ್ಣವಾದ ಶಬ್ದಗಳನ್ನೆಂದೂ ಮರೆಯುವದಿಲ್ಲ ಇದೊಂದಾ ವರ್ತಿ ನನ್ನನ್ನು ಬಿಟ್ಟುಬಿಡಿರಿ ಅಸಹ್ಯವಾದ ಸಂಕಟದಿಂದ ಮುಕ್ತಳಾಗಿ ಸುಖಿಯಾಗುತ್ತೇನೆ" ಈ ಪ್ರಕಾರ ಹೇಳಹೇಳುವದರೊಳಗಾಗಿ ಆ ತಪಸ್ವಿನಿಯ ಕೈಯೊಳಗಿಂದ ಕೊಸರಿಕೊಂಡು ಓಡಿಹೋಗಿ ಒಮ್ಮೆ ಯಮುನಾನದಿಯಲ್ಲಿ ಹಾರಿಬಿಟ್ಟಳು ಕೂಡಲೆ ತಪಸ್ವಿನಿಯೂ ಅವಳ ಹಿಂದಿಂದೆ ಓಡುತ್ತ ಹೋಗಿ ಹಾರಿಕೊಂಡು ಮುಳುಗುವದರೊಳಗಾಗಿ

ಅವಳನ್ನು ಹಿಡಿದು ದಂಡೆಗೆ ಎಳೆದುಕೊಂಡು ಬಂದಳು ಮತ್ತು– "ಛಿ, ಛಿ ಹೀಗೇಕೆ ಮೂರ್ಖತನವನ್ನು ಮಾಡುವಿ ?" ಇಷ್ಟರಲ್ಲಿ ಹಿಂದಿನಿಂದ "ಇದೇನು ಮಾಡಿದಿ? ಇದೇನು ಮಾಡಿದಿ ?" ಎಂದು ಧೀರವಾದ ಗಂಭೀರಧ್ವನಿಯು ಕೇಳಬಂತು ಕೂಡಲೆ ಇಬ್ಬರೂ ಹದರಿ ಹಿಂದಕ್ಕೆ ನೋಡಿದರು ಜಟಾಧಾರಿಯಾದೊಬ್ಬ ಮನುಷ್ಯನು ಎರಡೂ ಕೈಗಳನ್ನು ಮೇಲಕ್ಕೆತ್ತಿಕೊಂಡು ತಮ್ಮ ಕಡಿಗೆ ಓಡುತ್ತ ಒರುವಂತ ಕಂಡುಬಂತು

ಈ ಮಹಾಪುರುಷನನ್ನು ನೋಡಿದಕೂಡಲೆ ಆ ತರುಣಿಯು ಎರಡೂ ಕೈಗಳನ್ನು ಜೋಡಿಸಿ ಗದ್ಗದಸ್ವರದಿಂದ "ಪಿತಾಜಿ, ಕ್ಷಮಿಸು, ಇನ್ನು ಮೇಲೆ ಎಂದೂ ಇಂಥಮೂರ್ಖತನವನ್ನು ಮಾಡುವದಿಲ್ಲ" ಎಂದು ಹೇಳಿದಳು

ಆಮೇಲೆ ಆ ತರುಣಿಯು ಆ ಮಹಾಪುರುಷನ ಪಾದಗಳ ಮೇಲೆ ಬಿದ್ದುಬಿಟ್ಟಳು ಇದನ್ನು ನೋಡಿ ತಪಸ್ವಿನಿಗೆ ಬಹಳ ಆಶ್ಚರ್ಯವೆನಿಸಿತು

ಅವಳು ಮನಸಿನಲ್ಲಿ "ಏನಿದು, ಇದೇ ಈಗ ಈ ಹುಡಿಗೆಯು ಪ್ರಾಣಘಾತ ಮಾಡಿಕೊಳ್ಳಲಿಕ್ಕೆ ತತ್ಪರಗಳಾಗಿದ್ದಳು ಮತ್ತು ಪರಮಹಂಸನನ್ನು ನೋಡಿದಕೂಡಲೆ ಕ್ಷಮೆಯನ್ನು ಬೇಡಹತ್ತಿದಳು ಇದರ ಅಂತರಂಗವೇನಿರಬಹುದು?" ಇತ್ಯಾದಿ ನಾನಾಪ್ರಕಾರದ ತರ್ಕವಿತರ್ಕಗಳನ್ನು ಮಾಡುತ್ತ ಆ ಪರಮಹಂಸನ ಕಡೆಗೆ ಆಶ್ಚರ್ಯಚಕಿತಮುದ್ರೆಯಿಂದ ನೋಡಹತ್ತಿದಳು ಸ್ವಲ್ಪಹೊತ್ತಿನಲ್ಲಿ ಅವಳು ಪಾಷಾಣ ಮೂರ್ತಿಯಿಂತೆ ಸ್ತಬ್ಧಳಾಗಿ ನಿಂತುಬಿಟ್ಟಳು

ಇತ್ತ ಪರಮಹಂಸನು ತನ್ನ ಚರಣಗಳಮೇಲೆ ಬಿದ್ದಿರುವ ರಮಣಿಯನ್ನೆಬ್ಬಿಸಿ ಪ್ರೀತಿಯಿಂದ "ಮಗಳೆ, ಇನ್ನುಮೇಲೆ ನೀನು ಏನೂ ಚಿಂತೆಮಾಡಬೇಡ. ನನ್ನ ಸಹವಾಸದಲ್ಲಿ ಇಷ್ಟು ದಿವಸಗಳವರೆಗೆ ಇದ್ದರೂ ನಿನಗೆ ಸ್ವಲ್ಪವೂ ಜ್ಞಾನವಾಗಲಿಲ್ಲ ಇದು ಬಹಳ ಆಶ್ಚರ್ಯವಾದದ್ದು ಆದರೆ ಇದರೊಳಗ ನಿನ್ನದೇನೂ ತಪ್ಪಿಲ್ಲ ಎಲ್ಲವೂ ನನ್ನ ತಪ್ಪು ಯಾವತಂದೆಗೋಸುಗ ಪ್ರಾಣಹತ್ಯವನ್ನು ಮಾಡಿಕೊಳ್ಳಲ್ಲಿಕ್ಕೆ ತತ್ಪರಳಾಗಿದ್ದಿಯೊ ಆತನನ್ನು ತೋರಿಸುತ್ತೇನೆ ನಡೆ" ಎಂದು ಹೇಳಿದನು

“ ಏನೆಂದಿರಿ ? ನನ್ನ ತಂದೆಯನ್ನು ತೋರಿಸುವಿರಾ ! ಆಹಾ ಹಾ, ಅಪ್ಪಾಜಿ, ತಮಗೆ ಗೊತ್ತಿದ್ದರೆ ಈವರೆಗ ಯಾಕೆ ಹೇಳಲಿಲ್ಲ ? ” ಎಂದು ಯುವತಿಯು ಹರ್ಷಯುಕ್ತಳಾದಳು

“ ಮಗಳೆ, ನಿನಗದೆಲ್ಲವನ್ನು ಹಿಂದಿನಿಂದ ಹೇಳುವೆನು ” ಎಂದು ಆ ಪರಮ ಹಂಸನು ದೂರದಲ್ಲಿ ನಿಂತಿರುವ ತಪಸ್ವಿನಿಯ ಕಡೆಗೆ ನೋಡಿದನು ಎಲ್ಲಿಯೂ ಅವಳನ್ನು ನೋಡಿದಂತೆ ಭಾಸವಾಯಿತು. ಮೊದಲು ಒಂದುವೇಳೆ ನೋಡಿದವರನ್ನು ಮತ್ತೊಮ್ಮೆ ನೋಡುವಕಾಲಕ್ಕೆ ಹ್ಯಾಗೆ ಆಶ್ಚರ್ಯದಿಂದ ನೋಡುತ್ತೇವೊ. ಹಾಗ ಪರಮಹಂಸನು ಅವಳನ್ನು ನೋಡಹತ್ತಿದನು ತಪಸ್ವಿನಿಯ ಸ್ಥಿತಿಯಾದರೂ ಹಾಗೇ ಆಗಿತ್ತು ಸ್ವಲ್ಪ ಹೊತ್ತಿನಮೇಲ ಅವಳು ಒಮ್ಮೆ ಒಮ್ಮೆ “ ಪ್ರಭೋ, ಆಹಾಹಾ ಸ್ವಪ್ನದಲ್ಲಿಯಾದರೂ ಮತ್ತೊಮ್ಮೆ ತಮ್ಮ ದರ್ಶನವಾದೀತೆಂಬ ಆಶೆಯಿದ್ದಿಲ್ಲ, ಈ ದುರ್ಮಾರ್ಗಿಣಿಗೆ ತಮ್ಮ ಚರಣದರ್ಶನದ ಅಕ್ಷಯ್ಯವಾಸವು ಪ್ರಾಪ್ತವಾದದ್ದೆ ನನ್ನ ದೊಡ್ಡದೊಂದು ಭಾಗ್ಯವೆಂದೆಣಿಸುತ್ತೇನೆ ”

ಇಷ್ಟು ಮಾತಾಡಿ ಅವಳು ತನ್ನ ಹೃದಯದೊಳಗಿನ ಏನೊ ಒಂದು ಗುಪ್ತ ದುಃಖದ ವೇದನೆಯಿಂದ ವಿಹ್ವಲಳಾದಳು. ದುಃಖಭಾರವು ಸಹನವಾಗದ್ದರಿಂದ ಆ ಮಹಾಪುರುಷನ ಪಾದದ ಹತ್ತರ ಮೂರ್ಛೆಯಿಂದ ಬಿದ್ದು ಬಿಟ್ಟಳು ಇದರಿಂದ ಎರಡನೇ ಯುವತಿಗೆ ಅತ್ಯಂತ ವಿಸ್ಮಯವಾಯಿತು. ತಪಸ್ವಿನಿಯು ಹತ್ತರ ಹೋಗಿ ಅವಳ ತಲೆಯನ್ನು ಎತ್ತಿ ತನ್ನ ತೊಡೆಯಮೇಲಿಟ್ಟುಕೊಂಡು, ಅವಳನ್ನು ಸಮಾಧಾನಮಾಡಹತ್ತಿದಳು ಮತ್ತುಪರಮಹಂಸನಕಡೆಗೆ ನೋಡಿ “ ಪಿತಾಜಿ,ಈತಪಸ್ವಿನಿಯು ಮೂರ್ಛೆಯನ್ನೇಕೆ ಹೊಂದಿದಳು ? ಇವಳುಯಾರು ? ನಿಮಗೆ ಗೊತ್ತಿದೆಯು ? ” ಎಂದು ಕೇಳಿದಳು.

“ಮಗಳೆ, ಇದೆಲ್ಲವು ನಿನಗೆ ತನ್ನಿಂದ ತಾನೆ ಗೊತ್ತಾಗುವದು ಮೊದಲು ಈಕೆಯನ್ನು ಆಶ್ರಮಕ್ಕೆ ಒಯ್ದು ಎಚ್ಚರಗೊಳ್ಳುವಂತೆ ಮಾಡಬೇಕೆಂದು ಹೇಳಿ ಆತಪಸ್ವಿನಿಯನ್ನು ತನ್ನಹೆಗಲಮೇಲೆ ಹೊತ್ತುಕೊಂಡು ಶಹಾ

ಬಾಗದಿಂದ ಹೊರಬದ್ದನು ಮಳೆಯೂ ನಿಂತಿತು ಆ ಭಯಂಕರವಾದ ರಾತ್ರಿಯು ಹೋಗಿ ನಾಲ್ಕೂಕಡೆಗೆ ಸೂರ್ಯೋದಯದ ಪ್ರಕಾಶವು ಬೀಳಹತ್ತಿತ್ತು.

## ಎಂಟನೆಯ ಪ್ರಕರಣ.

### ತಪಸ್ವಿನಿಯೂ ಜಯಸಿಂಹನೂ

ಮಧ್ಯಾಹ್ನಕಾಲದ ಸಮಯ ಸೂರ್ಯನ ಪ್ರಖರ ಕಿರಣಗಳು ಅಸಹ್ಯವಾದ ತಾಪವನ್ನು ಕೊಡುತ್ತಿರುವವು. ಅನೇಕ ಪಶುಪಕ್ಷಿಗಳು ನೀರು ಹುಡುಕುತ್ತ ಅರಣ್ಯದಲ್ಲಿ ಅತ್ತಿತ್ತ ಹಾರಾಡುತ್ತಿರುವವು ಎಷ್ಟೋ ಪ್ರಾಣಿಗಳು ನದಿ, ಕೊಳ, ಕಾಲುವೆ ಮುಂತಾದ ಜಲಾಶಯಗಳಲ್ಲಿಳಿದು ತಮ್ಮ ನೀರಡಿಕೆಯನ್ನು ತೀರಿಸಿಕೊಳ್ಳುತ್ತಿರುವವು ಇಂಥ ಸಮಯದಲ್ಲಿ ದಿಲ್ಲಿಯ ಸಮೀಪದ ಒಂದು ಅರಣ್ಯದ ಮಧ್ಯದಲ್ಲಿ ಒಬ್ಬ ಸ್ವಾರನು ತನ್ನ ಕುದುರೆಯನ್ನು ಬಳ್ಳೇ ವೇಗದಿಂದ ಓಡಿಸುತ್ತ ಬರುತ್ತಿದ್ದನು ಅರಣ್ಯದೊಳಗಿನದೊಂದು ವೃಕ್ಷದ ನೆರಳಿಗೆ ತನ್ನ ಕುದುರೆಯನ್ನು ನಿಲ್ಲಿಸಿ, ಸುತ್ತಲೂ ನೋಡುತ್ತ ಆತನು ಮನಸ್ಸಿನಲ್ಲಿ “ಮೃಗವು ಎಲ್ಲಿಹೋಯಿತೋ ಗೊತ್ತಾಗಲಿಲ್ಲ ಯಾವತ್ತೂ ಸಂಗಡಿಗರು ಹಿಂದುಳಿದರು ಬೇಟೆಯ ಭರದಲ್ಲಿ ಅವರನ್ನು ಮರೆತೆನು ನೀರಡಿಕೆಯಿಂದ ಗಂಟಲು ಒಣಗಿಹೋಗಿದೆ ಎಲ್ಲಿಯಾದರೂ ನೀರು ಹುಡುಕಬೇಕು” ಎಂದು ಅತ್ತಿತ್ತ ನೋಡಹತ್ತಿದನು ಸಮೀಪದಲ್ಲಿ ಒಂದು ಪರ್ಣಶಾಲವು ಕಂಡುಬಂತು ಅದರ ಬಾಗಿಲದಲ್ಲಿ ಒಬ್ಬ ತಪಸ್ವಿನಿಯು ಕೂತಿದ್ದಳು ಅಲ್ಲಿ ನೀರು ದೊರೆಯಬಹುದೆಂಬ ಆಶೆಯಿಂದ ತನ್ನ ಕುದುರೆಯನ್ನು ಅಲ್ಲಿಯವರೆಗೆ ಒಯ್ದನು. ಕುದುರೆಯ ಗೊರಸಿನ ಸಪ್ಪಳವನ್ನು ಕೇಳಿದಕೂಡಲೇ ವಿಚಾರಮಗ್ನಳಾದ ಆ ತಪಸ್ವಿನಿಯು ಮೇಲಕ್ಕೆ ನೋರೆಯುತ್ತ ಆಶ್ಚರ್ಯದ ದೃಷ್ಟಿಯಿಂದ ಆತನನ್ನು ನೋಡಿದಳು. ಆ ಸ್ವಾರನು ೨೫ ವರ್ಷದ ತರುಣನು. ಶರೀ

ರದಿಂದ ತೆಳುವಾಗಿದ್ದರೂ ಸ್ವಲ್ಪ ಎತ್ತರವಿದ್ದನು ಮುಖವು ತೇಜಸ್ವಿಯಾದದ್ದು ಮುಖದಮೇಲೆ ಅಹಂಕಾರದ ಛಾಯೆಯು ಸ್ಪಷ್ಟವಾಗಿ ಕಂಡುಬರುತ್ತಿತ್ತು ಆತನ ನಯನಗಳಿಂದ ಚಂಚಲಸ್ವಭಾವದವನೆಂದು ತೋರುತ್ತಿತ್ತು ಜಲೆಯುಳ್ಳ ಉಡುಪನ್ನು ಹಾಕಿಕೊಂಡಿದ್ದುದರಿಂದ ಆತನು ರಾಜವಂಶದವನೆಂದು ತೋರುತ್ತಿತ್ತು ಆತನನ್ನು ನೋಡಿದಕೂಡಲೇ ತಪಸ್ವಿನಿಯು ಮುಖವನ್ನು ಬೇರಕಡಿಗೆ ತಿರುಗಿಸಿದಳು ಈ ತಪಸ್ವಿನಿಯು ಯಾರೆಂಬದನ್ನು ಹೇಳಬೇಕಾಗಿಲ್ಲ ಮಧ್ಯರಾತ್ರಿಯಲ್ಲಿ ಶಹಾಬಾದದ ಹಿಂದಿನಮಗ್ಗಲಗ ಯಮುನಾನದಿಯ ದಂಡೆಯಮೇಲೆ ಪರಮಹಂಸನ ಚರಣದಮೇಲೆ ಮೂರ್ಛೆ ಹೋದ ತಪಸ್ವಿನಿಯೇ ಇವಳು ಈ ಗುಡಿಸಲಲ್ಲಿ ಪರಮಹಂಸನ ಆಶ್ರಮವಿತ್ತು ಪರಮಹಂಸನೂ ಆತ್ಮವಧೆಗೆ ತತ್ಪರಳಾದ ಆ ತರುಣಿಯೂ ಈಗ ಅಲ್ಲಿ ಕಾಣಿಸುತ್ತಿದ್ದಿಲ್ಲ ತಪಸ್ವಿನಿಯೊಬ್ಬಳೇ ಅಲ್ಲಿ ಕುಳಿತಿದ್ದಳು ಆ ಸ್ವಾರನು ಕುದುರೆಯನ್ನು ನಿಲ್ಲಿಸಿ "ತಪಸ್ವಿನಿ, ಒಂದು ಮೃಗವು ಇತ್ತಕಡೆಯಿಂದ ಓಡಿಹೋದದ್ದನ್ನುನೋಡಿದೆಯಾ ?" ಎಂದು ಕೇಳಿದನು ತಪಸ್ವಿನಿಯು ಏನೂ ಉತ್ತರವನ್ನು ಕೊಡಲಿಲ್ಲ ಆತನ ಮುಖದ ಕಡೆಗೆ ನೋಡಲೂಇಲ್ಲ ಆತನು ಸ್ವಲ್ಪ ಸಿಟ್ಟಿಗಬಂದು "ನಾನು ಹೇಳುವದು ಕೇಳಬರುವದಿಲ್ಲವೇ ? ತಪಸ್ವಿನಿ, ನನ್ನ ಎದುರಿಗಿದ್ದ ಮುಖವನ್ನು ತಿರುಗಿಸಿ ನನಗ ಅಪಮಾನಮಾಡುವಿಯಾ ? ನನ್ನಕಡೆಗ ನೋಡಿ ನನ್ನ ಪ್ರಶ್ನೆಗೆ ಉತ್ತರವನ್ನು ಕೊಡು" ಎಂದನು

ತಪಸ್ವಿನಿಯು ಮುಖವನ್ನು ತಿರುಗಿಸದೆ "ಯಾತಕ್ಕೋಸುಗ ?" ಎಂದಳು ಸ್ವಾರನು "ನಾನುಯಾರೆಂಬುವದು ಒಂದುವೇಳೆ ಗೊತ್ತಿಲ್ಲದಿದ್ದರೆ" ತಪಸ್ವಿನಿಯು "ಇಲ್ಲ ! ನಿನ್ನನ್ನು ಚೆನ್ನಾಗಿಯೇ ಗುರ್ತಿಸಿದೆನು ನೀನು ಯವನನ ದಾಸನು, ದುರಾತ್ಮನಾದ ಔರಂಗಜೇಬನ ಒಬ್ಬ ಗುಲಾಮನು" ಎಂದು ಧಿಕ್ಕಾರದ ಶಬ್ದಗಳನ್ನುನುಡಿದಳು — ಅದಕ್ಕೆ, ಆ ಸ್ವಾರನು ಒಳ್ಳೇ ಸಿಟ್ಟಿನಿಂದ "ಏನೇ ? ಸರ್ವಸಾಧಾರಣ

ಳಾದ ತಪಸ್ವಿನಿಯು ಸೂರ್ಯವಂಶಕುಲತಿಲಕನಾದ ಅಂಬರಾಧಿಪತಿ ಜಯಸಿಂಹನನ್ನು ಇಂಥ ಕಠೋರಮಾತುಗಳಿಂದ ತಿರಸ್ಕರಿಸುವೆಯಾ ” ಎಂದು ಗರ್ಜಿಸಿದನು. ತಪಸ್ವಿನಿಯು “ ಯಾಕೆ ತಿರಸ್ಕರಿಸಬಾರದು? ಸೂರ್ಯವಂಶಕುಲಾಂಗಾರಾ! ನೀನು ಅಂಬರಾಧಿಪತಿಯೇ? ಪಾಪಿಯಾದ ಔರಂಗಜೇಬನ ಜೋಡು ಎತ್ತುವ ಗುಲಾಮನು ಎಂದಾದರೂ ಅಂಬರದ ರಾಜಾಧಿರಾಜನಾಗಬಲ್ಲನೇ ? ” ಎಂದಳು.

ಈಗಮಾತ್ರ ಜಯಸಿಂಹನ ಸಿಟ್ಟು ಹಿಡಿಯಲಾರದಾಯಿತು. ಆತನು ಒಳ್ಳೆ ಆವೇಶದಿಂದ “ ಏನೇ, ನೀನೊಬ್ಬ ತಿರಿದುಣ್ಣುವ ಭಿಕ್ಷುಕಿ, ಆರ್ಯಕುಲಶಿರೋಮಣಿಯಾದ ಜಯಸಿಂಹನನ್ನೂ ಪರಮಪೂಜ್ಯನಾದ ಶಹನಶಹಾ ಔರಂಗಜೇಬನನ್ನೂ ಅಪಮಾನಪಡಿಸುವಷ್ಟು ಸೊಕ್ಕೆ? ನಾಲಿಗೆಯನ್ನು ಬಿಗಿಹಿಡಿ, ಇಲ್ಲದಿದ್ದರೆ ತುಂಡು ತುಂಡಾಗಿ ಕತ್ತರಿಸುವೆನು.”

ಕೂಡಲೆ ತಪಸ್ವಿನಿಯು ಸಿಟ್ಟಿನಿಂದ “ ಎಲೋ! ಆರ್ಯ ಕುಲಕಲಂಕಾ, ದುರಾತ್ಮ! ಯವನನಾದ ಔರಂಗಜೇಬನು ಯಾರಿಗೆ ಬಾದಶಹನು? ಆ ನರಾಧಮನು ನಮ್ಮ ಬಾದಶಹನಲ್ಲ ” ಎಂದು ಹೇಳಿದಳು.

ಅದಕ್ಕೆ ಜಯಸಿಂಹನು ಹಲ್ಲು ಕಡಿಯುತ್ತ “ ಸಕಲ ಭರತಖಂಡದ ಬಾದಶಹನನ್ನು ಕುರಿತು ಈ ತರಹದ ರಾಜದ್ರೋಹದ ಮಾತುಗಳನ್ನು ಆಡುವಷ್ಟು ಎದೆಯೆ? ಏನು ಮಾಡಲಿ, ನೀನು ತಪಸ್ವಿನಿಯಾದ ಹೆಂಗಸು; ಇಲ್ಲದಿದ್ದರೆ ನಿನ್ನ ಸೊಕ್ಕಿನ ಪರಿಣಾಮವನ್ನು ಈ ಕತ್ತಿಯಿಂದ ಈಗಲೇ ತೋರಿಸುತ್ತಿದ್ದೆನು ” ಹೀಗೆ ಹೇಳುತ್ತ ರತ್ನಖಚಿತವಾದ ಕತ್ತಿಯನ್ನು ಬಂಗಾರದ ಒರೆಯಿಂದ ಹೊರಗೆಳೆದನು. ಇದನ್ನು ಕಂಡು ತಪಸ್ವಿನಿಯು ಲೇಶಮಾತ್ರವೂ ಹೆದರದೆ ತಿರಸ್ಕಾರದ ಮಂದಹಾಸದಿಂದ “ ಸಾಕು, ಸಾಕು, ನೀನು ನಿನ್ನ ಕತ್ತಿಯನ್ನು ಹೊರಗೆಳೆದು ನಿನ್ನ ವೀರತ್ವವನ್ನು ಪ್ರಕಾಶಪಡಿಸಿದ್ದರಿಂದಲೇ ನಿನ್ನಲ್ಲಿ ಕ್ಷಾತ್ರತೇಜವು ಎಷ್ಟಿರುವದೆಂದು ಗೊತ್ತಾಯಿತು. ಹಂಥಾ ಆ ಕತ್ತಿಗೂ ನಾಚಿಕೆಯನ್ನುಂಟುಮಾಡುವಿ. ನನ್ನಂಥ ತಪಸ್ವಿ

ನಿಯ ಮೇಲೆ ಕತ್ತಿಯನ್ನು ಎತ್ತಲಿಕ್ಕೆ ಸ್ವಲ್ಪಾದರೂ ನಿನಗೆ ನಾಚಿಕೆ ಬರಲಿಲ್ಲವೇ? ಹಿಂದೂ ಕುಲಕಲಂಕಾ! ನೀನು ನಿನ್ನ ಆರ್ಯಧರ್ಮಕ್ಕೆ ನೀರು ಬಿಟ್ಟು ಬಿಟ್ಟೆಯಾ? ತಪಸ್ವಿನಿಯನ್ನು ಕೊಲ್ಲಲಿಕ್ಕೆ ಸಿದ್ಧನಾದ ನಿನಗೆ ತಿಲ ಮಾತ್ರವಾದರೂ ಈಶ್ವರನ ಭೀತಿಯುಂಟಾಗಲಿಲ್ಲವ ? ನೀಚಾ ದೂರ ಹೋಗು, ಪಾಪಿಷ್ಠಾ ನನ್ನೆದುರಿಗೆನಿಲ್ಲಬೇಡ ''

ಈ ಪ್ರಕಾರ ಮಾತಾಡುತ್ತ ತಟ್ಟನ ಎದ್ದು ಕುಟೀರದ ಒಳಗೆ ಹೋದಳು ಇದನ್ನು ಕಂಡು ಜಯಸಿಂಹನಿಗೆ ಬಹಳ ಆಶ್ಚರ್ಯವೆನಿಸಿತು ಅವನು ವಿಚಾರದಲ್ಲಿ ಮುಳುಗಿ ಹೋದನು ಈಗ ಆತನ ಸಿಟ್ಟು ಸ್ವಲ್ಪ ಶಾಂತವಾಗಿ ತನ್ನ ವರ್ತನದ ವಿಷಯಕ್ಕೆ ತಿರಸ್ಕಾರವನಿಸಿತು ಅವನು ತನ್ನಷ್ಟಕ್ಕೆ ತಾನೆ ಧಿಕ್ಕರಿಸಿಕೊಂಡು "ಆಹಾ, ಈಕ ಆಡಿದ ಮಾತು ಸರಿಯಾದದ್ದು ನನ್ನ ಜನ್ಮಕ್ಕೆ ಧಿಕ್ಕಾರವಿರಲಿ, ಒಬ್ಬ ತಪಸ್ವಿನಿಯಷ್ಟು ಸ್ವತಂತ್ರತೆಯನ್ನು ಅನುಭವಿಸುವದು ನನ್ನ ದೈವದಲ್ಲಿಲ್ಲವೇ? ನನ್ನಂಥ ಅಭಾಗ್ಯರು ಜಗತ್ತಿನಲ್ಲಿ ಮತ್ತಿನ್ನಾರು? ತಪಸ್ವಿನೀದೇವಿ, ನೀವು ಯೋಗ್ಯ ಮಾತಾಡಿದಿರಿ ನಾನು ನಿಜವಾಗಿಯೆ ಸೂರ್ಯಕುಲಾಂಗಾರನಾದ ಆರ್ಯಕಂಟಕನು ಮಾಹಾದೇವಿ,ನೀನೆ ಧನ್ಯಳು! ಈ ಮಧಾಂಧನ ದೃಷ್ಟಿಯು ನಿಮ್ಮ ಅಂಜನದಿಂದ ದಿವ್ಯವಾಯಿತು ಶುದ್ಧವಾದ ಸೂರ್ಯವಂಶದಲ್ಲ ಹುಟ್ಟಿ, ಸ್ವತಂತ್ರತೆಗೆ ತಿಲಾಂಜಲಿಯನ್ನು ಕೊಟ್ಟು ಯುವನನದಾಸ್ಯವನ್ನು ಸ್ವೀಕರಿಸಿದ್ದು ಎಂಥ ನಾಚಿಗೇಡಿ ಕಲಸವು? ನಾನೆಂಥ ಮೂರ್ಖನು? ನನಗೆ ಧಿಃಕಾರವಿರಲಿ ಒಬ್ಬ ತಪಸ್ವಿನಿಯಹತ್ಯಕ್ಕೆ, ಸ್ತ್ರೀಹತ್ಯಕ್ಕೆ ಉದ್ಯುಕ್ತನಾದ ಮೂರ್ಖನಿಗೆ ಏನೆನ್ನಬೇಕು? ಆ ತಪಸ್ವಿನಿಯ ಕಾಲಿಗೆರಗಿ ಆಕೆಯ ಕ್ಷಮೆಯನ್ನು ಬೇಡುವದೇ ನನಗೆ ತಕ್ಕ ಪ್ರಾಯಶ್ಚಿತ್ತವು ನನ್ನಂಥ ಹತಭಾಗ್ಯನ ಮುಖವನ್ನು ನೋಡಲಾರದೆಯೇ ಆ ಮಾಹಾತ್ಮಳು ಒಳಗೆ ಹೋದಳು ''

ಹೀಗೆ ಜಯಸಿಂಹನು ತನ್ನ ಮನಸಿನಲ್ಲಿ ನಿಶ್ಚಯಿಸಿ, ಕುದುರೆಯಿಂದಿಳಿದು ಗುಡಿಸಲದ ಬಾಗಿಲ ಹತ್ತರ ಒಂದು ಬಾಗಿಲನ್ನು ಮೆಲ್ಲ ಮೆಲ್ಲನೆ ತಬ್ಬುತ್ತ ದೀನವಾಣಿಯಿಂದ "ತಾಯಿ, ಕ್ಷಮಿಸು, ಬಾಗಿಲವನ್ನು ತೆರೆದು

ಒಮ್ಮೆ ಈ ಪಾಪಿಗೆ ದರ್ಶನವನ್ನು ಕೊಡು'' ಎಂದು ಬಹಳ ಹೊತ್ತಿನ ವರೆಗೆ ಬಾಗಿಲವನ್ನು ಹೊಡೆಯುತ್ತಾ ನಿಂತುಕೊಂಡನು. ಆದರೆ ಒಳಗಿನಿಂದ ಉತ್ತರವೇ ದೊರೆಯಲಿಲ್ಲ. ಆಮೇಲೆ ಬಾಗಿಲ ಸಂದಿಯೊಳಗಿನಿಂದ ನೋಡಿದನು. ಒಳಗೆ ಯಾರೂ ಕಾಣಿಸಲಿಲ್ಲ. ಅದರಿಂದ ಅವನಿಗೆ ಅತ್ಯಂತ ಆಶ್ಚರ್ಯವೆನಿಸಿತು. ಆತನು ವಿಚಾರದಲ್ಲಿ ಮುಳುಗಿದನು. ತಪಸ್ವಿನೀ ದೇವಿಯು ಅದೃಶ್ಯಳಾಗಿರಬಹುದೇ? ಗುಡಿಸಲಲ್ಲಂತೂ ಯಾರೂ ಇಲ್ಲ. ನನಗೆ ಸ್ವಪ್ನವು ಬೇರೆ ಬಿದ್ದಿರಲಿಕ್ಕಿಲ್ಲವಲ್ಲಾ? ಛೀ! ಛೀ! ಇದು ಸ್ವಪ್ನವು ಹ್ಯಾಗೆ? ಇದೇ ಈಗ ತಪಸ್ವಿನೀ ದೇವಿಯು ನನ್ನೊಡನೆ ಮಾತಾಡುತ್ತಿದ್ದಳು'' ಎಂದು ಜಯಸಿಂಹನು ಬಾಗಿಲವನ್ನು ಶಕ್ತಿಯಿಂದ ಗುದ್ದಿದನು. ಬಾಗಿಲವು ತೆರೆಯಿತು. ಒಳಗೆ ಹೋಗಿ ಅತ್ತಿತ್ತ ನೋಡ ಹತ್ತಿದನು. ಯಾರೂ ಇದ್ದಿಲ್ಲ.

ಗುಡಿಸಲಿನಲ್ಲಿ ಒಂದು ಮಗ್ಗಲಿಗೆ ಅಗ್ನಿಕುಂಡವಿತ್ತು. ಅದೇ ಒಣ ಕಟ್ಟಿಗೆಗಳನ್ನು ಹಾಕಿದಂತೆ ಕಾಣಿಸುತ್ತಿತ್ತು. ಅದರ ಹತ್ತರ ಒಂದು ಕಮಂಡಲೂ, ಒಂದು ರುದ್ರಾಕ್ಷ ಮಾಲೆಯೂ ಇದ್ದವು. ಅತ್ತಿತ್ತ ಬಾಡಿದ ಹೂಗಳು ಬಿದ್ದಿದ್ದವು. ಆದರೆ ತಪಸ್ವಿನಿಯು ಮಾತ್ರ ಅಲ್ಲಿ ಇದ್ದಿಲ್ಲ. ಈಗ ಜಯಸಿಂಹನು ಚಕಿತನಾದನು. ವಿಚಾರ ತರಂಗದಲ್ಲಿ ತೇಲಾಡ ಹತ್ತಿದನು. ''ನನಗೆ ಉಪದೇಶಾಮೃತವನ್ನು ನೀಡುವದಕ್ಕೋಸುಗ ಸಾಕ್ಷಾತ್ ವನದೇವತೆಯೇ ಬಂದಿರ ಬಹುದಲ್ಲವೆ?'' ಎಂದು ವಿಚಾರ ಮಾಡುತ್ತ ಗುಡಿಸಲಿನ ಹೊರಗೆ ಬಂದನು. ಆಕಾಶದ ಮಧ್ಯಭಾಗದಲ್ಲಿರುವ ಸೂರ್ಯನ ಕಡೆಗೆ ಆತನ ಲಕ್ಷವು ಹೋಯಿತು. ಆರು ತಾಸು ಮೀರಿ ಹೋಗಿತ್ತು. ಸೂರ್ಯನು ನೆತ್ತಿಯ ಮೇಲಿಂದ ಕೆಳಗಿಳಿಯುತ್ತಿದ್ದನು. ''ಸೂರ್ಯನು ನನ್ನ ಮೇಲೆ ನಿಜವಾಗಿಯೇ ಸಿಟ್ಟಾಗಿರುವನೋ ಏನೋ ಎಂಬಂತೆ ಬಿಸಿಲು ಇನ್ನೂ ಹೆಚ್ಚುವಂತಿದೆ. ಈ ವೃಕ್ಷಗಳು ಪಲ್ಲವ ರೂಪವಾದ ತಮ್ಮ ಕೈಗಳಿಂದ ಇಲ್ಲಿ ನಿಲ್ಲಬೇಡ, ದೂರ ನಡೆ ಎಂದು ನನಗೆ ಹೇಳುವಂತಿವೆ.'' ಎಂದು ಉದ್ಗಾರಗಳನ್ನು ತೆಗೆಯುತ್ತ ತನ್ನ ಕುದು

ರೆಯ ಹತ್ತಿರ ಬಂದನು ಇನ್ನೂ ವರೆಗೆ ಆತನ ಚಿತ್ತದಲ್ಲಿ ತಪಸ್ವಿನಿಯ ರೂಪವು ಕಂಡು ಬರುತ್ತಿತ್ತು. ಆಕ ಯಾರೆಂಬದನ್ನು ತಿಳಿದುಕೊಳ್ಳುವ ಉತ್ಕಂಠಯು ಆತನಲ್ಲಿ ಅತಿಶಯವಾಯಿತು.

"ಬಸುದು!" ಎಂಬ ಧ್ವನಿಯು ಪುನಃ ಕೇಳಬಂತು. ಈಗ ಸ್ವಲ್ಪ ಗುರ್ತುಹತ್ತಿತು, ಅವಳೇ ಇರಬಹುದಲ್ಲ ದಿದ್ದರೆ ಗುರ್ತಿಸಿ ಈರೀತಿ ನನ್ನನ್ನು ತಿರಸ್ಕರಿಸಿ ಹೋಗುತ್ತಿದ್ದಳೇ ? ಇವಳನ್ನು ಸಿಕ್ಷಯವಾಗಿ ಗೂತ್ತು ಹಚ್ಚಬೇಕು" ಹೀಗೆ ಜಯಸಿಂಹನು ಎಚಾರ ಮಾಡುವಷ್ಟರಲ್ಲಿ ದೂರ ದಲ್ಲ ಕುದುರೆಯ ಕೊಳಗುಗಳ ಸಪ್ಪಳವು ಕೇಳಬರಹತ್ತಿತು, ಅತ್ತಕಡೆಗೆ ನೋಡಿದನು ನಾಲ್ವರು ಸವಾರರು ತಮ್ಮ ಕುದುರೆಗಳನ್ನು ಓಡಿಸುತ್ತ ಇತ್ತ ಕಡಗ ಒರುವಂತೆ ಕಂಡು ಬಂತು ಸ್ವಲ್ಪ ಹೊತ್ತಿನಲ್ಲಿ ಅವರು ಅಲ್ಲಿಗ ಬಂದರು ಗುಡಿಸಲಿನ ಬಾಗಿಲಿನಲ್ಲಿ ನಿಂತ ಜಯಸಿಂಹನನ್ನು ನೋಡಿ ಆಶ್ಚರ್ಯಚಕಿತರಾಗಿ ತಮ್ಮ ತಮ್ಮೊಳಗೆ ಮಾತಾಡ ಹತ್ತಿದರು "ಜಯಸಿಂಹಮಹಾರಾಜರು ಇಲ್ಲಿಗ ಹ್ಯಾಗ ಬಂದರು?" ಎಂದು ಕುದುರೆ ಯಿಂದಿಳಿದು ಜಯಸಿಂಹನಿಗ ನಮಸ್ಕರಿಸಿ ನಿಂತುಕೊಂಡರು ಅವರನ್ನು ಕಂಡು ಜಯಸಿಂಹನು "ನಮ್ಮ ಸೇವಕರನ್ನು ನೀವು ನೋಡಿದಿರಾ?"

ನಾಲ್ಕೂ ಜನರು ಕೈಜೋಡಿಸಿ "ಸ್ವಾಮಿಾ, ಇಲ್ಲ" ಎಂದು ಒಮ್ಮೆಲೆ ಉತ್ತರವನ್ನು ಕೊಟ್ಟರು.

"ಹಾಗಾದರೆ ನೀವು ಎಲ್ಲಿಗೆ ಹೋಗುವಿರಿ?"

"ಸ್ವಾಮಿಾ ಎಲ್ಲಿಯೂ, ಇಲ್ಲ. ತಾವಿಲ್ಲಿ ನಿಂತದ್ದು ನೋಡಿ ಯಾರು ಇರುವರೋ ನೋಡಬೇಕೆಂದು ಬರುವಷ್ಟರಲ್ಲಿ ತಾವು ದೃಷ್ಟಿಗೆ ಬಿದ್ದರಿ' ಎಂದು ಅವರೊಳಗಿವನೊಬ್ಬನು ಹೇಳಿದನು

"ಜಹಪನಾ ತಮ್ಮ ಕೆಲಸವೇನಾದರೂ ಇದ್ದರೆ ಈ ದಾಸನಿಗೆ ಆಜ್ಞಾಪಿಸಬೇಕೆಂದು" ಬೇರೊಬ್ಬನು ಕೇಳಿದನು.

ಜಯಸಿಂಹನು ಸ್ವಲ್ಪ ಹೊತ್ತು ವಿಚಾರಿಸಿ "ಹೀಗೆ ಮಾಡಿರಿ, ನಿಮ್ಮೊಳಗಿನವರಿಬ್ಬರು ಈಗುಡಿಸಲಿನಬಾಗಿಲಿನಲ್ಲಿ ಪಹರೆಯನ್ನು ಮಾಡುತ್ತ

ಕುಳಿತು ಕೊಳ್ಳಿರಿ ಒಳಗಿನಿಂದ ಯಾರಾದರೂ ಹೊರಬಿದ್ದ ಕೂಡಲೆ ಅವರನ್ನು ಕೈದು ಮಾಡಿ ನನ್ನ ಕಡೆಗೆ ತೆಗೆದುಕೊಂಡು ಬನ್ನಿರಿ ಪಟ್ಟಣಕ್ಕೆ ಹೋಗಿ ನಿಮ್ಮ ಸಹಾಯಕ್ಕಾಗಿ ಬೇರೆಯುವರನ್ನು ಕಳಿಸುತ್ತೇನೆ ರಮಜಾನ, ಹಾಗೂ ಸಮಶೇರ, ನೀವಿಬ್ಬರೂ ಇಲ್ಲಿ ಪಹರೆಗೆ ನಿಲ್ಲಿರಿ. ಲಕ್ಷ್ಯವಿಡಿರಿ. ಎಚ್ಚರದಿಂದ ನಿಲ್ಲಿರಿ '' ಎಂದು ಆಜ್ಞಾಪಿಸಿ, ಕುದುರೆಯ ಮೇಲೆ ಕುಳಿತು, ಉಳಿದಿಬ್ಬರು ಸ್ವಾರರೊಡನೆ ದಿಲ್ಲಿಗೆ ಹೊರಟು ಹೋದನು

ಜಯಸಿಂಹನು ಸ್ವಲ್ಪ ದೂರ ಹೋದ ಮೇಲೆ ರಮಜಾನನು ಸಮಶೇರನನ್ನು ಕುರಿತು—" ನಮ್ಮ ಪೂರ್ವದ ಪಾಪ, ಈ ಪಿಶಾಚಿಯ ಕೈಯ್ಯಲ್ಲಿ ಸಿಕ್ಕುಬಿದ್ದೆವು. ಇಲ್ಲದೆ ಹೋದರೆ ಇಷ್ಟು ಹೊತ್ತಿಗೆ ಮನೆಗೆ ಹೋಗಿ ಆರಾಮ ಉಂಡು ಮಲಗುತ್ತಿದ್ದೆವು.'' ಎಂದನು

ಆಮೇಲೆ ಸುಶೇರನು, ಗೆಳೆಯಾ, ನನಗಂತೂ ಅತಿಶಯ ಹಸಿವೆಯೂ ಗಿದೆ ಈ ಗುಡಿಸಲಿನಲ್ಲಿ ತಿನ್ನುವ ಪದಾರ್ಥವೇನಾದರೂ ಅದೆಯೋ ಹ್ಯಾಗೆ ನೋಡು ? '' ಎಂದನು. ರಮಜಾನನು ಒಳಗೆ ಹೊಕ್ಕು ಹೊರಗೆ ಬಂದು ಸಮಶೇರನನ್ನು ಕುರಿತು, ಒಳಗೆ ಯಾರೂ ಇಲ್ಲ, ನಾವು ಪಹರೆಯನ್ನು ಯಾಕೆ ಮಾಡಬೇಕು? ಎಂದನು ಅದಕ್ಕೆ ಸಮಶೇರನು ಏನಂದಿ? ಒಳಗೆ ಯಾರೂ ಇಲ್ಲವೇ ? ನೋಡೋಣನಡೆ ? ಎಂದು ಇಬ್ಬರೂ ಒಳಗೆ ಹೋದರು ರಮಜಾನನು ಏನೋ ಹೇಳುವವನಿದ್ದನು ಸಮಶೇರನು ಅವನನ್ನು ನಿಲ್ಲಿಸಿದನು. ಇಬ್ಬರೂ ಅಗ್ನಿ ಕುಂಡದ ಕಡೆಗೆ ನೋಡಹತ್ತಿದರು ಸಮಶೇರನು ರಮಜಾನನ್ನು ನೋಡ ಹತ್ತಿದನು. ರಮಜಾನನು ಬೆರಳು ಹಿಡಿದು ಸುಮ್ಮನಿರಲಿಕ್ಕೆ ಸನ್ನೆ ಮಾಡಿದನು.

ಅಗ್ನಿಕುಂಡದ ಕೆಳಭಾಗದಲ್ಲಿ ಸುಸ್ವರವಾದ ಗಾಯನದಧ್ವನಿಯು ಕೇಳಬರಹತ್ತಿತು ಅಗ್ನಿಕುಂಡದ ಕೆಳಭಾಗದಲ್ಲಿ ಗಾಯನವೆ ? ಇದೊಳ್ಳೆ ಆಶ್ಚರ್ಯವಾದದ್ದು ಅವರಿಬ್ಬರೂ ಗಾಬರಿಯಾದರು. ಮೊದಲು ಅವರಿಬ್ಬರ ಮನಸ್ಸಿನಲ್ಲಿಯೂ ಪಿಶಾಚಿಯ ಸಂಬಂಧದ ವಿಚಾರಗಳು ಬರಹತ್ತಿದವು ಆದರೆ ಅವರಿಬ್ಬರೂ ಧೈರ್ಯವಂತರಿದ್ದದರಿಂದ ನಿಶ್ಚಯ ಮಾಡಿಕೊಳ್ಳುವದ

ಕ್ಕಾಗಿ ಅಗ್ನಿಕುಂಡದ ಹತ್ತಿರ ಹೋಗಿ ಅದರ ಸುತ್ತಲಿನ ಭೂಮಿಯನ್ನು ಪರೀಕ್ಷಿಸಹತ್ತಿದರು ರಮಜಾನನು ಈಶಾನ್ಯದ ಕಡೆಗಿರುವ ಒಂದು ಚೌರಸಾಕೃತಿಯ ಕಲ್ಲಿನ ಮೇಲೆ ಒಳಿತಾಗಿ ಗುದ್ದಿದನು ಕೂಡಲೆ ಅಗ್ನಿಕುಂಡದ ನಾಲ್ಕೂ ಮಗ್ಗಲಿಗ ಒಂದೊಂದು ಮೊಳದಷ್ಟು ಭೂಮಿಯು ಏನೂಸಪ್ಪಳವಾಗದೆ ೧೪—೧೫ ಮೊಳದಷ್ಟು ಕೆಳಗಿಳಿಯಿತು. ಅದರೊಡನೆ, ರಮಜಾನ ಸಮೀರರು ಕೆಳಗ ಬದ್ದರು.

---

## ಒಂಭತ್ತನೆಯ ಪ್ರಕರಣ.

---

### ಆರ್ಯ ಬಾಲಿಕೆಯು ಮೇಲಿನ ಅತ್ಯಾಚಾರ.

ಪ್ರಾತಃಕಾಲದ ಸಮಯ, ಸೂರ್ಯನು ಇನ್ನೂ ಉದಯನಾಗಿರಲಿಲ್ಲ, ಅರುಣ ಕಿರಣಗಳು ಮಾತ್ರ ವಿಸ್ತಾರವಾದ ಆಕಾಶದಲ್ಲೆಲ್ಲ ಹಬ್ಬಿಕೊಂಡಿವ ಸೂರ್ಯಾಗಮನದ ಮಾರ್ಗ ಪ್ರತೀಕ್ಷಯನ್ನು ಮಾಡುತ್ತ ಪಕ್ಷಿಗಣವು ಗೂಡುಗಳಲ್ಲಿಯೇ ಸ್ವಸ್ಥವಿರುತ್ತದ ಮನುಷ್ಯರು ನಿದ್ರೆಯಿಂದೆದ್ದು ಈಶ್ವರ ಸ್ಮರಣೆಯಲ್ಲಿ ನಿರತರಾಗಿರುವರು ಈ ಕಾಲದಲ್ಲಿ ದಿಲ್ಲೀಶಹರವು ಎಲ್ಲ ಕಡೆಯಲ್ಲಿಯೂ ಶೂನ್ಯವಾಗಿ ಕಂಡು ಒರುತ್ತದೆ. ಮಾರ್ಗದಲ್ಲಿ ಮನುಷ್ಯರ ಸಂಚಾರವೇನೂ ಇದ್ದಿಲ್ಲ ಮನೆ ಬಾಗಿಲುಗಳೆಲ್ಲ ಇನ್ನೂ ಮುಚ್ಚಿದ್ದವು. ಇಂಥಾದ್ದರಲ್ಲಿ ಒಬ್ಬ ಹಿಂದೂ ಬಾಲಿಕೆಯು ಕೈಯಲ್ಲಿ ಪೂಜಾಸಾಹಿತ್ಯಗಳನ್ನು ತೆಗದುಕೊಂಡು ತ್ವರೆಯಿಂದ ಉತ್ತರ ದಿಕ್ಕಿನ ಕಡಗೆ ಹೊರಟಳು ಒಂದು ಹಾಳು ದೇವಾಲಯದ ಸಮೀಪಕ್ಕೆ ಒಂದಕೂಡಲ ನಿಂತು ಬಿಟ್ಟಳು. ಈ ದೇವಾಲಯದ ಈಗಿರುವ ಹಾಳು ಸ್ಥಿತಿಯನ್ನು ನೋಡಿದರೆ ಪೂರ್ವಕಾಲದಲ್ಲಿ ಇದೊಂದು ದೊಡ್ಡ ದೇವಸ್ಥಾನವಿದ್ದರಬಹುದೆಂದು ಸಹಜ ತರ್ಕವಾಗುವಂತಿತ್ತು. ಕೆಲವಡೆಯಲ್ಲಿ ಮೇಲ್ಭಾಗವು ಬಿದ್ದು ಹೋಗಿತ್ತು. ಅಲ್ಲಲ್ಲಿಗೆ

ಕಲ್ಲು ಮಣ್ಣು ರಾಶಿಯಾಗಿ ಬಿದ್ದಿತ್ತು ಮೇಲಿನ ಶಿಖರವು ಛಿನ್ನವಿಚ್ಛಿನ್ನವಾಗಿತ್ತು ಆದರೆ ಬಿಳೇ ಕಲ್ಲಿನ ನಾಲ್ಕು ಕಂಬಗಳ ನಡುವೆ ದೊಡ್ಡದೊಂದು ಘಂಟೆಯು ಇನ್ನೂ ತೂಗಾಡುತ್ತಿತ್ತು ದೇವಾಲಯದ ಎದುರಿನಲ್ಲಿ ಉಪವನವು, ಉಪವನವು ದೇವಾಲಯದಷ್ಟು ಜೀರ್ಣಾವಸ್ಥೆಯನ್ನು ಹೊಂದಿರಲಿಲ್ಲ ಇದು ಈಶ್ವರನ ದೇವಾಲಯವು ಜಾಡಶಹನ ಸೇನಾಪತಿಯಾದ ರಾಜಾ ಜಯಸಿಂಹನು ಈ ದೇವಾಲಯಕ್ಕೆ ಪೂಜೆಗೋಸ್ಕರ ಒರುತ್ತಿದ್ದನು ಅಂತೆ ಮೊಗಲರು ಇದನ್ನು ಇನ್ನೂ ನಾಶಮಾಡಿದ್ದಿಲ್ಲ

ಪೂಜಾ ಸಾಹಿತ್ಯಗಳನ್ನು ತೆಗೆದುಗೊಂಡು ಒಂದ ಬಾಲಿಕೆಯು ಮೊದಲು ದೇವಾಲಯದಲ್ಲಿಯಾಗಲಿ ಬೇರೆ ಮಗ್ಗುಲಲ್ಲಿಯಾಗಲಿ ಯಾರಾದರೂ ಇರುವರೋ ಹ್ಯಾಗೆ ? ಎಂಬದನ್ನು ಪರೀಕ್ಷಿಸಿ ನೋಡಿದಳು ಯಾರೂ ಇಲ್ಲೆಂದು ಗೊತ್ತಾದ ಮೇಲೆ ಒಳಗ ಹೋಗಿ ಭಕ್ತಿಪೂರ್ವಕವಾಗಿ ಈಶ್ವರನ ಪೂಜಯನ್ನು ಮಾಡಹತ್ತಿದಳು ಸಂಸಾರ ಅರ್ಧತಾಸಿನವರೆಗ ಪೂಜಯಾದ ಮೇಲೆ ಏಕಾಂತ ಸ್ಥಳವನ್ನು ಕಂಡು ತನ್ನ ಸುಸ್ವರವಾದ ಸುಕೋಮಲ ಕಂಠದಿಂದ ಭಕ್ತಿಪೂರಿತವಾದ ಈಶಸ್ತವನದ ಪದವನ್ನು ಹೇಳಹತ್ತಿದಳು ಅಹಾ! ಆಕಯ ಕಂಠ ಮಾಧುರ್ಯವನ್ನು ಎಷ್ಟೆಂದು ವರ್ಣಿಸುವದು ? ಪುರಾಣಗಳಲ್ಲಿ ಯಕ್ಷ, ಗಂಧರ್ವ, ಕಿನ್ನರ ಮೊದಲಾದವರ ಗಾಯನ ಪಟುತ್ವದ ವರ್ಣನಯಲ್ಲವು ಅತಿಶಯೋಕ್ತಿಯಾಗಿರಬಹುದು. ಈ ಬಾಲಿಕೆಯ ಕಂಠದಂತೆಯೇ ರೂಪವಾದರೂ ಅಪೂರ್ವ ಮನೋಹರವಾಗಿತ್ತು

ಮೊದಲ ನಿರ್ಜನವಾದ ವನ ಆದರೊಳಗ ಏಕಾಂತ ದೇವಾಲಯದ ಗರ್ಭಗಾರ, ಇವೆಲ್ಲವನ್ನೂ ತುಂಬಿ ಪ್ರವಾಹ ರೂಪದಿಂದ ಹರಿಯುವ ಗಾಯನದ ಸುಸ್ವರದ ಆಲಾಪ, ಆ ಮೇಲೆ ಕೇಳುವುದೇನು ? ಆ ಗಾಯನದ ನಾದದಿಂದ ಪಕ್ಷಿಗಳು ತಮ್ಮ ಕಿಲಬಿಲವನ್ನೂ ಬಿಟ್ಟು ಮೌನವಾಗಿದ್ದವು. ಇಷ್ಟರಲ್ಲಿ ಹೊರಗೆ ಒಂದು ಚಮತ್ಕಾರವಾಯಿತು

ದೂರದಲ್ಲಿ ಒಂದು ಪುರುಷಾಕೃತಿಯು ಕಂಡುಬಂತು ಮೂವತ್ತು ವರುಷದ ಒಬ್ಬ ಮುಸಲ್ಮಾನನು ಮದಿರಾಪಾನದಿಂದ ಮತ್ತನಾಗಿ ಬಾಯಿಂದ ಮನಸ್ಸಿಗ ಒಂದದ್ದನ್ನೆಲ್ಲ—ಗಾಯನವಾಗಿ ಹೇಳಿಕೊಳ್ಳುತ್ತ ನಡುನಡುವೆ ಶರೀರವನ್ನು ಸಾವರಿಸಿಕೊಳ್ಳುತ್ತ ಇತ್ತ ಬರುತ್ತಿದ್ದನು. ಅವನ ವಿದ್ರೂಪವಾದ ಲಕ್ಷಣದಿಂದ ಅವನು ದುಷ್ಟಸ್ವಭಾವದವ ನೆಂದು ನಿಶ್ಚಯವಾಗುತ್ತಿತ್ತು ತನ್ನ ಆನಂದದಲ್ಲಿಯೆ ನಿರತನಾಗಿ ಬರು ವಷ್ಟರಲ್ಲಿ ಗುಡಿಯೊಳಗಿಂದ ಬರುವ ಸ್ವರವನ್ನು ಕೇಳಿ ತಟಸ್ಥನಾಗಿ ನಿಂತು ಕೊಂಡನು ಗಾಯನ ಮಾಡುವವರು ಯಾರೆಂಬದನ್ನು ನೋಡುವ ಇಚ್ಛೆಯು ಅವನಿಗೆ ಸಹಜವಾಗಿ ಉತ್ಪನ್ನವಾಯಿತು ದೇವಾಲಯದ ಬಾಗಿಲಿಗೆ ಬಂದು ಒಳಗ ತಲೆಹಾಕಿ ನೋಡಹತ್ತಿದನು ಬಾಲಕೆಯು ಬನ್ನು ಮಗ್ಗಲಿಗೆ ಇದ್ದದರಿಂದ ಅವಳ ಸ್ವರೂಪವು ಅವನಿಗೆ ಕಾಣಲಿಲ್ಲ. ಇಷ್ಟರಲ್ಲಿ ಗಾಯನವು ಮುಗಿಯಿತು ಕುಮಾರಿಯು ಪೂಜಾಸಾಹಿತ್ಯ ಗಳನ್ನು ತಂದ ತಾಟನ್ನು ತೆಗೆದುಕೊಂಡು ಮನೆಗೆ ಹೋಗುವದರ ಸಲು ವಾಗಿ ಹೊರ ಹೊರಟಳು. ಆ ಯುವತಿಯನ್ನು ನೋಡಿದ ಕೂಡಲೆ ಈ ಕಳ್ಳನಿಗ ಕಾಮ ವಿಕಾರವಾಯಿತು ಈ ರೂಪರಾಶಿಯನ್ನು ನೋಡಿದ ಕೂಡಲೆ ಅವನ ಬುದ್ಧಿಯು ಮಸಣಿಸಿ ಹೋಯಿತು ಆಕೆಯು ಕಣ್ಣು ತಪ್ಪಿಸಿ ದೇವಾಲಯದ ಮಗ್ಗುಲಲ್ಲಿ ದಟ್ಟವಾದ ಗಿಡಗಳ ಗುಂಪಿ ನಲ್ಲ ಅಡಗಿನಿಂತು ಆಕೆಯ ಮಾರ್ಗವನ್ನು ಪ್ರತೀಕ್ಷಿಸ ಹತ್ತಿದನು ಯುವ ತಿಯು ಈಶ್ವರನನ್ನು ಭಕ್ತಿಪೂರ್ವಕವಾಗಿ ನಮಸ್ಕರಿಸಿ ಮನೆಯಮಾರ್ಗ ವನ್ನು ಹಿಡಿದಳು ಗಿಡಗಳ ಎಲೆಗಳು ಅಲ್ಲಾಡಿದುವು ಯಾವದಾ ದರೂ ಪಶುವು ಬಂದಿದೆಯೇನೊ ಎಂದು ನೋಡಹತ್ತಿದಳು. ಅಷ್ಟರಲ್ಲಿ ಆ ಮುಸಲ್ಮಾನನು ದೆವ್ವಿನಂತೆ ಬಂದು ಎದುರಿಗೆ ನಿಂತುಬಿಟ್ಟನು. ಕಾಲನಂಥ ಮುಸಲ್ಮಾನನ್ನು ನೋಡಿದಕೂಡಲೆ ಆಯುವತಿಯು ತೀರ ಹೆದರಿದಳು. ಅಂಜಿಕೆಯಿಂದ ನಡುಗು ಹುಟ್ಟಿತು ಈಯಮನ ಕೈಯೊಳ ಗಿಂದ ತಪ್ಪಿಸಿಕೊಳ್ಳುವದಕ್ಕೋಸ್ಕರ ಪುನಃ ದೇವಾಲಯದಲ್ಲಿ ಪ್ರವೇಶಿಸ

ಬೇಕೆಂದು ಹಿಂದಕ್ಕೆ ಸರಿಯ ಹತ್ತಿದಳು. ಕೂಡಲೆ ಯವನನು ಅವಳನು ಅಡ್ಡಗಟ್ಟಿ "ಬಲು ಎಚ್ಚರಿಕೆ, ಇಲ್ಲಿಂದ ಒಂದು ಹೆಜ್ಜೆಯನ್ನು ಹಿಂದಕ್ಕಿಡಬೇಡ, ನೀನು ಸ್ವಲ್ಪವೂ ಹೆದರಕೂಡದು ಸುಂದರಿ, ನಿನ್ನ ಸುಸ್ವರ ಗಾಯನ ದಿಂದಲೂ, ಈ ನಿನ್ನ ಅಲೌಕಿಕ ಸೌಂದರ್ಯದಿಂದಲೂ ಈ ದಾಸನು ನಿನ್ನಲ್ಲಿ ಅನುರಾಗ ಉಳ್ಳವನಾಗಿದ್ದಾನೆ. ನೀನು ಒಂದುವೇಳೆ ಅನ್ಯಜಾತಿ ಯುವಳಾದಾಗ್ಯೂ ನಿನ್ನೊಡನೆ ಲಗ್ನಮಾಡಿಕೊಳ್ಳಲಿಕ್ಕೆ ಹಿಂಜರಿಯುವ ದಿಲ್ಲ ನಿನ್ನಂಥ ಸುಂದರಿಯ ಸ್ವಾದವನ್ನು ನನ್ನಂಥ ಶ್ರೇಷ್ಠನೆ ತೆಗೆದು ಕೊಳ್ಳತಕ್ಕದ್ದು."

ಆ ಬಾಲೆಯು ಒಂದು ಹೆಜ್ಜೆ ಸಹ ಹಿಂದಕ್ಕೆ ಸರಿಯಲಿಲ್ಲ ಅವಳ ಮುಖದಮೇಲಿನ ಕಾಂತಿಯು ಇಲ್ಲದಂತಾಯಿತು ಮೋರೆಯು ಬಳ್ಳಗ ಬಾಡಿತು ಬರಬರುತ್ತ ಆರಕ್ತವರ್ಣವಾಯಿತು ಕ್ರೋಧವು ಅವಳ ಮೈ ಯನ್ನು ಸಂಪೂರ್ಣವಾಗಿ ಆವರಿಸಿಕೊಂಡಿತು ಯೋಗ್ಯಕಾಲದಲ್ಲಿ ಆರ್ಯ ಸ್ತ್ರೀಯರ ಮೈಯಲ್ಲಿ ತಮ್ಮ ಪಾತಿವ್ರತ್ಯದ ರಕ್ಷಣೆಗೋಸ್ಕರ ಯಾವ ಆವ ರ್ಣನೀಯ ಶಕ್ತಿಯುಂಟಾಗುತ್ತದೆಯೊ ಆದು ಅವಳ ಮೈಯ್ಯಲ್ಲಿ ತೋರ ಹತ್ತಿತು. ಅಷ್ಟರಲ್ಲಿ ಆ ರಾಕ್ಷಸನು ಅವಳ ಹತ್ತರ ಬಂದು ನಗುನಗುತ್ತ "ಪ್ರಿಯೆ! ನೀನು ಸುಮ್ಮನಿರುವದರಿಂದ ನನ್ನ ಹೇಳಿಕೆಗೆ ಒಪ್ಪಿದಂತಾಯಿ ತಲ್ಲವೇ?" ಎಂದು ಅವಳ ಕೈ ಹಿಡಿದನು ಒಬ್ಬ ಯವನನು ತನ್ನ ಅಂಗ ಸ್ಪರ್ಶವನ್ನು ಮಾಡುತ್ತಾನೆಂದು ತಿಳಿದ ಕೂಡಲೆ ಅವಳ ಸಿಟ್ಟು ಆನಿವಾರ ವಾಯಿತು. ತನ್ನಿಂದಾದಷ್ಟು ಶಕ್ತಿಯಿಂದ ಅವನಿಗೆ ಒಂದು ಒದೆಯನ್ನು ಕೊಟ್ಟಳು.

ಮುಸಲ್ಮಾನನು ಮೂರು ನಾಲ್ಕು ದಿಂಡುರುಳಿಕೆಯನ್ನು ಉರುಳಿ ದನು ಆಮೇಲೆ ಒಳ್ಳೇ ಸಂತಾಪದಿಂದೆದ್ದು ಬಂದು—"ಒಬ್ಬ ಕಾಫ ರನ ಮಗಳಿಂದ ಈ ತರಹದ ಅಪಮಾನವೆ! ಅದನ್ನು ಈ ಹುಸೇನಖಾನನು ಸುಮ್ಮನೆ ಸಹಿಸಬೇಕೆ ? ಆಗಲಿ, ಈಗ ನೀನು ನನ್ನ ಕೈಯೊಳಗಿಂದ ಪಾ ರಾಗಿ ಹೋಗು ನೋಡುತ್ತೇನೆ. ನಿನ್ನನು ಯಾರು ಬಿಡಿಸಲಿಕ್ಕೆ ಬರು

ತ್ತಾರೊ ನೋಡುತ್ತೇನೆ ” ಎಂದು ಪುನಃ ಅವಳನ್ನು ಹಿಡಿಯುವದಕ್ಕೆ ಹತ್ತರ ಬರಹತ್ತಿದನು. ಇಷ್ಟರಲ್ಲಿ “ ದುಷ್ಟಾ! ಚಾಂಡಾಲಾ! ದೂರ ನಿಲ್ಲು !! ಒಂದುವೇಳೆ ಮತ್ತೊಮ್ಮೆ ಸ್ಪರ್ಶಮಾಡಿದರೆ ನಿನ್ನಗತಿಯು ನೆಟ್ಟಗಾಗಲಿಕ್ಕಿಲ್ಲ ಈಶ್ವರನು ಈ ಪಾಪದ ಫಲವನ್ನು ಬೇಗನೆ ಕೊಡುವನು

“ ಒಳ್ಳೇದು ನೆಟ್ಟಗಾಯಿತು. ಈಶ್ವರನು ಶಿಕ್ಷೆಮಾಡುವಾಗ ಮಾಡಲಿ ಸದ್ಯಕ್ಕೆ ಈಗ ಈ ನನ್ನ ಶಿಕ್ಷೆಯನ್ನು ಗ್ರಹಿಸು ” ಎಂದು ಅವಳನ್ನು ತಕ್ಕೆಹಾಯ್ದು ಎತ್ತಿಕೊಂಡು ನಡೆದನು. ಈಗ ಮಾತ್ರ ಆ ಸುಂದರಿಯು ಹೆದರಿದಳು ಅವಳು ತನ್ನಿಂದಾದಷ್ಟು ಒದ್ದಾಡಿ ತಿವಿದಾಡಿ ಬಿಡಿಸಿ ಕೊಳ್ಳಲಿಕ್ಕೆ ಪ್ರಯತ್ನ ಮಾಡಿದಳು ಮತ್ತು “ ಯಾರಾದರೂ ಈ ದುಷ್ಟನ ಕೈಯಿಂದ ಬಿಡಿಸಿರಿ ” ಎಂದು ಘಟ್ಟಿಯಾಗಿ ಒದರಾಡಹತ್ತಿದಳು. ಇಷ್ಟರಲ್ಲಿ ಎದುರಿಗೆ ಒಬ್ಬನ ಹಿಂದೊಬ್ಬನಂತೆ ಇಬ್ಬರು ಮನುಷ್ಯರು ಓಡುತ್ತ ಬಂದರು. ಸಮೀಪಕ್ಕೆ ಬಂದಕೂಡಲೆ ಅವರೊಳಗಿನವನೊಬ್ಬನು—

“ ಎಲೆ, ನೀಚಾ ! ಶಿಖಾನಷ್ಟಾ! ಈ ಸ್ತ್ರೀಯನ್ನು ಯಾರ ಅಪ್ಪಣೆಯಿಂದ ತೆಗೆದೊಯ್ಯುವಿ? ಇಂದಿಗೆ ನಿನ್ನ ನೂರುವರ್ಷಗಳು ತುಂಬಿದವೆಂದು ತಿಳಿ ಒಂದು ಹೆಜ್ಜೆಯನ್ನು ಮುಂದಕ್ಕಿಟ್ಟುನೋಡು ! ಆಕೆಯನ್ನು ಬಿಡು.”

ಹುಸೇನಖಾನನು ಅವಳನ್ನು ಕೆಳಗಿಳಿಸಿ ಸಿಟ್ಟಿನಿಂದ “ ನೀನಾವ ಕಾಫರನೊ ನನ್ನನ್ನು ಕೇಳುವವನು ? ನೀನು ನಿನ್ನಮಾರ್ಗದಿಂದ ನೆಟ್ಟಗೆ ಹೋಗು, ಇಲ್ಲಿ ನಿನ್ನ ಕೆಲಸವೇನು ? ಅಡ್ಡಗಟ್ಟುವುದೇಕೆ? ನಾನು ನನ್ನ ಹೆಂಡತಿಯನ್ನು ನನ್ನ ಮನೆಗೆ ತೆಗೆದುಕೊಂಡು ಹೋಗಬಾರದೆ ? ”

“ ದುಷ್ಟಾ! ಇವಳು ನಿನ್ನಹೆಂಡತಿಯೆ ? ಎಲೋ ನಿಮ್ಮ ಧರ್ಮದ ಅಂತ್ಯಕಾಲವು ಸಮೀಪಿಸಿದೆ. ಪಾಖಂಡ ! ನಿಮ್ಮ ಕ್ರೂರಕೃತ್ಯಗಳಿಂದ ಭೂಮಿಯು ಕಂಪಿಸಹತ್ತಿದೆ. ಗೋಬ್ರಾಹ್ಮಣಪಾತಕದಿಂದ ನಿಮ್ಮ ಪಾಪದ

ಷಟ್ಟಿಯನ್ನು ತುಂಬ ಕೊಳ್ಳುವಿರಿ. ಬಡಜನರಿಗೆ ತಮ್ಮ ಅನ್ನವನ್ನು ಊಟಮಾಡಗೊಡದೆ ಪರಸ್ತ್ರೀಯರನ್ನೂ ಕನ್ನೆಯರನ್ನೂ ಬಲಾತ್ಕಾರ ದಿಂದ ಒಯ್ಯಲಿಕ್ಕೆ ಯತ್ನಿಸುವಿರಿ ಸ್ಮರಣದಲ್ಲಿಡಿರಿ ಈಶ್ವರನು ದೂರ ಇಲ್ಲ ನಾನು ನಿನಗೆ ಸಾಮೋಪಚಾರದಿಂದ ಹೇಳುವೆನು ಅವಳನ್ನು ಬಿಡು ಕೇಳದಿದ್ದರೆ ಆದರ ಪರಿಣಾಮವು ನೆಟ್ಟಗಾಗಲಿಕ್ಕಿಲ್ಲ ''

" ಎಲೆ ಹೋಗು, ನಿಮ್ಮಂಥ ಮರ್ಕಟಗಳ ಮಾತಿಗೆ ಹೆದರು ವವನು ನಾನಲ್ಲ, ಶಕ್ತಿಯಿದ್ದರೆ ಮುಂದಕ್ಕೆ ಬಾ, ಇಬ್ಬರಿಗೂ ಒಂದು ಕೈಯ್ಯಾಗಲಿ '' ಎಂದು ಆ ಮನುಷ್ಯನಿಗೆ ಒಂದು ಏಟು ಹೊಡೆದನು ಪೆಟ್ಟು ಬಿದ್ದ ಕೂಡಲೆ ಆತನ ಸಿಟ್ಟು ಮಿತಿಇಲ್ಲದಾಯಿತು. ಕೂಡಲೆ ನಡುವಿ ನಲ್ಲಿರುವ ಕಠಾರಿಯನ್ನು ಹಿರಿದು ಆ ಪಾಪಿಷ್ಟನ ಎದೆಯಲ್ಲಿ ಪಾರಾಗು ವಂತೆ ನೆಟ್ಟನು ಎದೆಯೊಳಗಿಂದ ರಕ್ತವು ಸುರಿಯಹತ್ತಿತು. ಹಾಗೇ ಮೂರ್ಛೆಬಂದು ಭೂಮಿಯಲ್ಲಿ ಬಿದ್ದುಬಿಟ್ಟನು ಬೀಳುವಕಾಲಕ್ಕೆ ಸಹಾ ಯಕ್ಕೋಸುಗ ಘಟ್ಟಿಯಾಗಿ ಕೂಗುಹಾಕಿದನು "ದೊಹಾಯಿ, ಬಾದ ಶಹ ಸಲಾಮತಹೆ, ದೊಹಾಯಿ, ದೊಹಾಯಿ, ಹ್ಯಾಕಾಫ ..''

ಹುಸೇನಖಾನನ ಈ ಧ್ವನಿಯನ್ನು ಕೇಳಿದ ಕೂಡಲೆ ಈವರೆಗೆ ನಿರ್ಮಾನುಷವಾದ ಬೀದಿಯು ಮುಸಲ್ಮಾನರಿಂದಲೂ ಮೊಗಲರಿಂದಲೂ ತುಂಬಿಹೋಯಿತು. ಪ್ರತಿಯೊಬ್ಬನು ಕೈಯಲ್ಲಿ ಕತ್ತಿ ಕಠಾರಿ ಕೋಲು ಮೊದಲಾದ ಕೈಗೆಸಿಕ್ಕ ಆಯುಧಗಳನ್ನು ತಕ್ಕೊಂಡು ಬಂದರು. ಹುಸೇ ನಖಾನನ ರಕ್ತಸ್ರಾವವನ್ನೂ ಆ ನಿರಾಶ್ರಿತ ತರುಣಿಯ ಸಂರಕ್ಷಣೆಗೋ ಸುಗ ಬಂದವರಿಬ್ಬರನ್ನೂ ನೋಡಿದರು. ಅವರಿಬ್ಬರ ಕೈಯಲ್ಲಿ ಒರೆಗಳೆದ ಕತ್ತಿಗಳಿದ್ದುದರಿಂದ ಅವರ ಮೈಮೇಲೆ ಹೋಗಲಿಕ್ಕೆ ಯಾರಿಗೂ ಧೈರ್ಯ ವಾಗಲೊಲ್ಲದು ದೂರನಿಂತು ಬಯ್ಯುವುದಕ್ಕೆ ಆರಂಭಿಸಿದರು ಮುಸ ಲ್ಮಾನರ ಸಂಖ್ಯೆಯು ಬೆಳೆಯುತ್ತ ನಡೆಯಿತು. ಆದರಿಂದ ಆ ತರುಣಿಯ ಸಂರಕ್ಷಣೆಯನ್ನು ಹ್ಯಾಗೆ ಮಾಡಬೇಕೆಂಬ ಘನವಾದ ಚಿಂತೆಯು ಅವ ರಲ್ಲಿ ಮನೆಮಾಡಿಕೊಂಡಿತು. ಆದರೆ ಆಕ್ಷಣದಲ್ಲಿಯೇ ಅವರಿಗೊಂದು

ಯುಕ್ತಿಯು ದೊರೆಯಿತು ಆಸ್ಥಳದಿಂದ ಸ್ವಲ್ಪ ಅಂತರದಮೇಲೆ ದೊಡ್ಡದೊಂದು ಆಲದಮರವಿತ್ತು. ಅಲ್ಲಿಯವರೆಗೆ ಅವರಿಬ್ಬರು ತಮ್ಮ ಕತ್ತಿಯನ್ನು ತಿರುವುತ್ತ ಹೋದರು. ಮೊಗಲರು “ಯಾರೊ? ಯಾರೊ?” ಎಂದು ಒದರಾಡುತ್ತ ಅವರ ಹಿಂದಿಂದೆ ಬಂದರು. ಅವರಿಬ್ಬರು ಈಶ್ವರನನ್ನು ಸ್ಮರಿಸುತ್ತ ಅವರ ಕತ್ತಿಯ ಹೊಡತವನ್ನು ತಪ್ಪಿಸುತ್ತ ಅಲ್ಲಿಗೆ ಬಂದರು. ಈಗ ಮಾತ್ರ ಹೊಡೆದಾಟವು ಬಲವತ್ತರವಾಯಿತು. ಎಷ್ಟೋಜನರಿಗೆ ಗಾಯಗಳಾದವು ಒಂದೇ ಸವನೆ ರಕ್ತವು ಪ್ರವಾಹಗೊಂಡಿತು ಅಂಧದರಲ್ಲಿ ಇಷ್ಟುಜನ ಮುಸಲ್ಮಾನರೊಡನೆ ಅವರಿಬ್ಬರೇ ಕೇವಲ ತನ್ನ ಸಂರಕ್ಷಣೆಯ ದೆಶೆಯಿಂದ ಹೊಡೆದಾಡುವುದನ್ನು ನೋಡಿ ಏನಾದರೂ ಹೆಚ್ಚುಕಡಿಮೆಯಾದರೆ ಎಲ್ಲಿ ದೋಷವು ತನ್ನ ಪಾಲಿಗೆ ಬರುವದೆಂದು ಆ ಯುವತಿಯು ಕ್ಷಣಮಾತ್ರ ಹೆದರಿದಳು ಆದರೆ ಆ ಹೆದರಿಕೆಯು ಸ್ವಲ್ಪ ಹೊತ್ತಿನಲ್ಲಿಯೇ ಅಡಗಿಹೋಯಿತು ಅವರ ಶೌರ್ಯವನ್ನು ನೋಡಿ ಬಹಳ ಆನಂದವೆನಿಸಿತು ಅವರೊಳಗೂ ಹುಸೇನಖಾನನ ಎದೆಯಲ್ಲಿ ಕಠಾರಿಯನ್ನು ತಿವಿದ ವೀರನ ಪ್ರತಾಪವನ್ನು ಕಂಡು ಆಶ್ಚರ್ಯಚಕಿತಳಾದಳು. “ಈಶ್ವರಾ! ಈ ನನ್ನ ರಕ್ಷಣಕರ್ತನನ್ನು ಸುರಕ್ಷಿತವಾಗಿರಿಸು” ಎಂದು ಮನಸ್ಸಿನಲ್ಲಿ ಸಹಸ್ರಾವರ್ತಿ ಜಗದೀಶ್ವರನನ್ನು ಪ್ರಾರ್ಥಿಸಿದಳು. ಇಷ್ಟರಲ್ಲಿ “ಪಕಡೊ, ಪಕಡೊ” ಎಂದು ಒದರುತ್ತ ಹಿಂದಿನಿಂದ ಶಿಪಾಯಿಗಳದೊಂದು ಸಮುದಾಯವು ಬಂತು. ಆಮೇಲೆ ಕಂಡಕಂಡದಾರಿಯಿಂದ ಎಲ್ಲರೂ ಓಡಿಹೋದರು. ಅದೇ ಸಂಧಿಯಲ್ಲಿ ಆ ತರುಣಿಯು ತನ್ನ ಸಂರಕ್ಷಕರನ್ನು ದೇವಾಲಯದೊಳಗಿನದೊಂದು ಗುಪ್ತಭಾಗಕ್ಕೆ ಬೇಗನೆ ಕರೆದೊಯ್ದಳು ಅಲ್ಲಿ ವಿಶ್ರಾಂತಿಗೋಸ್ಕರ ಸ್ವಲ್ಪ ಹೊತ್ತು ಕೂತುಕೊಳ್ಳಿರೆಂದು ಅವರನ್ನು ಬೇಡಿಕೊಂಡಳು

ಇತ್ತ ಶಿಪಾಯಿಗಳು ಮರಣಾವಸ್ಥೆಯಲ್ಲಿರುವ ಹುಸೇನಖಾನನಿಗೆ ಪಟ್ಟಿ ಮೊದಲಾದುವುಗಳನ್ನು ಕಟ್ಟಿದರು. ಎಲ್ಲ ಕಡೆಯಲ್ಲಿಯೂ ಹುಡುಕಿ ನೋಡಿದರು. ಆದರೆ ಯಾರೂ ಕೈಗೆ ಶಿಗಲಿಲ್ಲ. ಕಡೆಗೆ ಹುಸೇನನನ್ನು ಹಕೀಮನ ಕಡೆಗೆ ಕಳಿಸಿದರು.

ಶಿಪಾಯಿಗಳು ಅಲ್ಲಿಂದ ಹೋದಕೂಡಲೆ ಆ ತರುಣಿಯು ತನ್ನ ರಕ್ಷಕರನ್ನು ಸಂಗಡ ಕರೆದುಕೊಂಡು ಅರಣ್ಯದ ಮಾರ್ಗವನ್ನು ಹಿಡಿದಳು ಸ್ವಲ್ಪಹೊತ್ತಿನಲ್ಲಿ ಪರ್ಣಕುಟೀರಕ್ಕೆ ಬಂದಳು. ಪರ್ಣಕುಟೀರದ ಬಾಗಿಲನ್ನು ತೆರೆದು ಮೂವರೂ ಒಳಗೆ ಹೊಕ್ಕರು

## ಹತ್ತನೆಯ ಪ್ರಕರಣ

### ಪರ್ಣಕುಟೀರದ ರಹಸ್ಯ.

ರಮಜಾನ ಹಾಗೂ ಸಮಶೇರರು ಅಗ್ನಿಕುಂಡದ ಕೆಳಗೆ ೧೪,೧೫ ಮೊಳ ತಗ್ಗಿನಲ್ಲಿ ಬಿದ್ದಕೂಡಲೆ ಇಬ್ಬರೂ ಗಾಬರಿಯಾಗಿ ಘಟ್ಟಿಸಿ ಒದರಾಡಹತ್ತಿದರು ಅವರು ಬಿದ್ದ ಸ್ಥಳದಲ್ಲಿ ಇಬ್ಬರು ಶಿಪಾಯರು ಪಹರೆಯನ್ನು ಮಾಡುತ್ತಿದ್ದರು ಕೂಡಲೆ ಪಹರೆಯವರಿಬ್ಬರೂ ಒಂದು ಪ್ರತಿಯೊಬ್ಬನ ಎದೆಯಮೇಲೆ ಕುಳಿತು ಸಿಟ್ಟಿನಿಂದ "ಸುಮ್ಮನಿರು, ಬಾಯಿಂದ ಹೊರಗೆ ಒಂದು ಶಬ್ದವನ್ನು ಉಚ್ಚರಿಸಕೂಡದು" ಎಂದರು ಆ ಪಹರೆಯವರ ಉಡಿಗೆಯು ಕಪ್ಪಾದದ್ದು. ಮುಖಕ್ಕೂ ಕಪ್ಪಾದ ಆಚ್ಛಾದನೆ. ಶಕ್ತಿಯಲ್ಲಿ ಮಿಗಿಲಾದವರು ಯಮನ ದೂತನಂತಿರುವ ಈ ಆಕೃತಿಯನ್ನು ಕಂಡು ಸಮಶೇರನು ಬಗಿಯಾಗಿ ಕಣ್ಣುಮುಚ್ಚಿದನು ಶ್ವಾಶೋಚ್ಛ್ವಾಸವನ್ನು ನಿಲ್ಲಿಸಿ ಮೂರ್ಛೆಹೋದವನಂತೆ ನಟಿಸಿದನು. ರಮಜಾನನಿಗೂ ಈ ಭಯಂಕರ ಪ್ರಸಂಗದಲ್ಲಿ ಸುಮ್ಮನೆ ಬಿದ್ದುಬಿಡಬೇಕೆಂಬ ಬಯಕೆಯಾಯಿತು. ಸಂಗೀತದ ಸ್ಪಷ್ಟಧ್ವನಿಯು ಕೇಳಬರುತ್ತಿತ್ತು ರಮಜಾನನು ಲಕ್ಷ್ಯಕೊಟ್ಟು ಕೇಳಹತ್ತಿದನು ಆತನು ಕೇಳಿದುದೇನು ?

ವೀರಕ್ಷತ್ರಿಯರೆ । ಸಾರಿರಿ ಬೇಗನೆ ।
ಭಾರತಧರ್ಮವ ; ಪಾರುಗೊಳಿಸುವಾ ॥ಪ॥
ದಿಲ್ಲೀಪತಿಯಿಂ । ತಲ್ಲಣಗೊಂಡಿಹ ।
ಬಲ್ಲಿದರೆಲ್ಲರು ಸಲ್ಲಿಸಿ ದೇಹವ ॥೧॥

ಆರ್ಯರ ಧರ್ಮಕೆ । ಭಾರ್ಯರ ತ್ಯಜಿಸಿರಿ ।
ಶೌರ್ಯದಿ ಸನ್ನಹ । ಕಾರ್ಯದೊಳ್ ಗೆಲ್ಲಿರಿ ॥೨॥
ಹರ ಹರ ರವದಿಂ । ಚರ ಚರ ರಿಪುಗಳ ।
ತರಿತರಿದೊಟ್ಟುತ । ಮೆರೆಯಿರಿ ಲೋಕದಿ ॥೩॥

ಈ ಗಾಯನದ ಕಡೆಯ ಚರಣವನ್ನು ಕೇಳಿದ ಕೂಡಲೆ ರಮಜಾನನು ಎಚ್ಚರತಪ್ಪಿದನು.

ಪಹರೆಯುವರಲ್ಲಿ ಒಬ್ಬನು ಮತ್ತೊಬ್ಬನನ್ನು ಕುರಿತು—"ಭೀಮ, ಇನ್ನು ಮೇಲೆ ಹೊತ್ತುಮಾಡಿ ಪ್ರಯೋಜನವಿಲ್ಲ ಇವರನ್ನು ದರಬಾರಕ್ಕೆ ಕಳಿಸಿ ಬಿಡೋಣ" ಎಂದನು ಎರಡನೆಯುವನು ಶಿಳ್ಳುಹಾಕಿದನು ಅದನ್ನು ಕೇಳಿದ ಕೂಡಲೆ ಬೇರೆ ಇಬ್ಬರು ಅಂಥ ಕಪ್ಪನ್ನ ಆವರಣ ಉಳ್ಳವರೆ ಬಂದುನಿಂತರು ಅವರಿಬ್ಬರಿಗೆ ಇವರು ಏನೊ ಸನ್ನೆಯಿಂದ ಹೇಳಿದರು ಆಮೇಲೆ ಅವರಿಬ್ಬರು ರಮಜಾನ ಸಮಶೇರರನ್ನು ತಮ್ಮವಶಕ್ಕೆ ತೆಗೆದು ಕೊಂಡರು ಅದರೊಳಗಿನವನೊಬ್ಬನು ರಮಜಾನನಿಗೆ "ನಿಮ್ಮ ಜೀವವನ್ನು ಉಳಿಸಿಕೊಳ್ಳುವ ಮನಸ್ಸಿದ್ದರೆ ಸುಮ್ಮನೆ ನಮ್ಮೊಡನೆ ನಡೆಯಿರಿ" ಎಂದನು

ಅದನ್ನು ಕೇಳಿ ರಮಜಾನನೂ ಸಮಶೇರನೂ ಸುಮ್ಮನೆ ಅವರು ತೆಗೆದುಕೊಂಡು ಒಯ್ದುತ್ತ ಹೋದರು. ಅಲ್ಲಿಂದ ಸ್ವಲ್ಪ ಅಂತರದ ಮೇಲೊಂದು ಬಾಗಿಲವಿತ್ತು ಅದನ್ನು ತೆರೆದು ರಮಜಾನ ಸಮಶೇರರನ್ನು ಕರಕೊಂಡು ಒಳಗೆ ಹೋದರು ಅವರ ಹಿಂದಿನಿಂದ ಕೂಡಲೆ ಬಾಗಿಲವು ಮುಚ್ಚಿ ಹೋಯಿತು

ಅವರು ಹೋದ ಸ್ವಲ್ಪಹೊತ್ತಿನಮೇಲೆ ಭೀಮನು ಶಿವುನನ್ನು ಕುರಿತು—"ನೀನು ಅಗ್ನಿಕುಂಡದಲ್ಲಿ ಕಟ್ಟಿಗೆಯನ್ನು ಹಾಕುವದಕ್ಕೆ ಹೋದಾಗ್ಗೆ ಗುಪ್ತದ್ವಾರವನ್ನು ತೆಗೆದು ಬಂದಿದ್ದಿಯಾ?"

ಶಿವು—"ನನ್ನಿಂದ ತಪ್ಪಾದದ್ದು ಸತ್ಯ; ಬಾಗಿಲವನ್ನು ಮುಚ್ಚಲಿಕ್ಕೆ ಮರೆತೆನು."

ಭೀಮ—“ ಈತಪ್ಪಿಗೆ ಯಾವ ಶಿಕ್ಷೆಯನ್ನು ಅನುಭೋಗಿಸಬೇಕೆಂಬದು ಗೊತ್ತಿದಿಯೆ? ” ಎಂದು ಸ್ವಲ್ಪ ಗದ್ದರಿಸಿ ಕೇಳಿದನು.

ಶಿವು—“ ಗೊತ್ತಿದ; ತಪ್ಪಾಯಿತು. ಆದಕ್ಕೆ ಮಾಡುವದೇನು? ಉಪಾಯವಿಲ್ಲ ದೈವದಲ್ಲಿದ್ದದ್ದಾಗುವದು ”

ಭೀಮ—“ ಎಲೆ, ನಿನಗೋಸಗ ನಾನೂ ಶಿಕ್ಷೆಯನ್ನು ಅನುಭವಿಸಬೇಕಾಗುವದು. ಅದಕ್ಕಾಗಿ ಏನಾದರೊಂದು ಹಂಚಿಕೆಯನ್ನು ತೆಗೆಯಬೇಕು.” ಎಂದು ಸ್ವಲ್ಪ ಗಂಭೀರಮುದ್ರೆಯಿಂದ ಹೇಳಿದನು.

ಶಿವು—“ ಎರಡನೆಯ ಉಪಾಯವೇನು? ಒರೇ ನಮ್ಮ ಹೊಸ ರಾಣಿಯವರ ದಯವು, ಇಲ್ಲದಿದ್ದರೆ ಬೇರೆಯಾವದೂ ಇಲ್ಲ. ”

ಭೀಮ—“ ಚನ್ನಾಗಿ ಜ್ಞಾಪಿಸಿದೆ ಈನವ್ಮ ಹೊಸ ರಾಣಿಯವರು ಯಾರೆಂಬದು ನಿನಗೆ ಗೊತ್ತದೆಯೊ ?

ಶಿವು—“ ನನಗೆ ಯಾವದೂ ಗೊತ್ತಿಲ್ಲ ಅವರಿಲ್ಲಿಗೆ ಬರುವ ಪೂರ್ವದಲ್ಲಿ ನಾನು ಮೊದಲೆಂದೂ ನೋಡಿದ್ದಿಲ್ಲ ಆದರೆ ಆ ಮಹಸೀಯಳು ಸಾಧಾರಣ ಕುಲೋತ್ಪನ್ನಳಲ್ಲ ಆಕೆಯ ಮುಖದಮೇಲೆ ಉಚ್ಚಕುಲದ ತೇಜವು ಕಾಣುತ್ತದೆ ಆ ದೇವಿಯನ್ನು ನೋಡಿದರೆ ನನ್ನಹೃದಯವು ವಿಲಕ್ಷಣ ಭಕ್ತಿಯಿಂದ ತುಂಬಿ ಹೋಗುತ್ತದೆ. ”

ಭೀಮ—“ ರಾಣಿಯವರ ಮನಸ್ಸು, ನಮ್ಮ ಮಾತೃಭೂಮಿಗೆ—ಯವನರಿಂದ ಪೀಡೆಯಾಗುತ್ತದೆಂದೂ ಆರ್ಯರ ಧರ್ಮಭ್ರಷ್ಟವಾಗಿ ಹಿಂದೂಧರ್ಮವು ನಾಮಶೇಷವಾಗುವ ಹೊತ್ತು ಬಂದಿದೆಯೆಂದೂ ಯಾವಾಗಲೂ ಚಿಂತೆಯಿಂದ ಉದಾಸೀನವಾಗಿರುತ್ತದೆ. ಯವನರ ಹಾವಳಿಯನ್ನು ಅವರಿಂದ ಸಹಿಸಲಕ್ಕಾಗುವದಿಲ್ಲ. ಇದರ ಹೊರ್ತು ಬೇರೆ ಕಾರಣವಿದ್ದಂತೆ ತೋರುವುದಿಲ್ಲ. ನಮ್ಮ ಹೊಸ ರಾಣಿಯವರ ಇಚ್ಛೆಯು ಫಲದ್ರೂಪವಾಗುವದಕ್ಕೆ ನಮಗೆ ನಮ್ಮಪ್ರಾಣವನ್ನೆಕೊಡುವ ಹೊತ್ತು ಬಂದರೂ ಅಡ್ಡಿಯಿಲ್ಲ. ನಾವು ಸಿದ್ಧರಿರಬೇಕು. ”

ಶಿವು—“ ಇದರೊಳಗೆ ಸಂಶಯವೇನು? ಆದರೆ” ಇಷ್ಟು ಮಾತಾಡಿ ಸುಮ್ಮನಾದನು. ಆತನ ಲಕ್ಷ್ಯವು ಭೀಮನ ಮುಖದಕಡೆಗೆ ಹೋಯಿತು. ಆವೇಳೆಯಲ್ಲಿ ಭೀಮನ ಕಣ್ಣುಗಳು ವೀರಶ್ರೀಯಿಂದ ಆರಕ್ತವಾಗಿದ್ದವು. ಬಾಹುಗಳು ಸ್ಫುರಿಸುತ್ತಿದ್ದವು ಇದನ್ನು ನೋಡಿ ಶೀವುನು ಸುಮ್ಮನಾಗಿದ್ದನು ಆತನು ಸುಮ್ಮನಾದದ್ದು ಕಂಡು ಭೀಮ್ಯ ನು—“ ಆದರೆ ಎಂದು ಸುಮ್ಮನೆ ನಿಂತಿರುವಿಯೇಕೆ? ಹುಟ್ಟಿದವರಿಗೆ ಮರಣವು ಒಂದು ದಿವಸ ಇದ್ದೇಇದೆ. ಹಿಂದೂಧರ್ಮವನ್ನು ಮೊಗಲರ ಕೈಯಿಂದ ರಕ್ಷಿಸುವದಕ್ಕಾಗಿಯೂ ಪರಮಪ್ರತಾಪರಾದ ರಾಣಿಯವರ ಬಯಕೆಯನ್ನು ಪೂರ್ಣ ಮಾಡುವದಕ್ಕಾಗಿಯೂ ಮೊಗಲರೊಡನೆ ಯುದ್ಧಮಾಡುವ ಪ್ರಸಂಗವು ಒದಗಿದರೆ ಅದಕ್ಕಿಂತಲೂ ಹೆಚ್ಚಿನ ಹರ್ಷಾ ತಿರೇಕವು ಬೇರೆಯಾವದು ? ಈ ಸಮಯದಲ್ಲಿ ಯಾರು ಹಿಂಜರಿಯು ವರೋ ಅವರೇ ಹೇಡಿಗಳು, ಮೂರ್ಖರು. ”

ಶಿವು—“ ನಿನ್ನಂಥ ಧರ್ಮಭಕ್ತರು ದೊರೆಯುವದು ದುರ್ಲಭ. ಈಶ್ವರನು ನಿನ್ನನ್ನು ದೀರ್ಘಾಯುವನ್ನಾಗಿ ಮಾಡಲಿ ಆದರೆ ನಾಳೆ ನಮ್ಮ ರಾಣಿಯವರೂ ಅವರಿಗೆ ನೆರವಾಗಲೊಪ್ಪಿದ ವೀರರೂ ಕೂಡಿ ಕಡೆಯ ಪ್ರತಿಜ್ಞೆಯನ್ನು ಮಾಡುವರಲ್ಲವೆ? ”

ಭೀಮ—“ ಹೌದು, ನಾನೂ ಹಾಗೆ ಕೇಳಿರುವೆನು ಆದರೆ ನಾವು ನಮ್ಮ ಹೊತ್ತು ಬರುವವರೆಗೂ ಆ ಮಹೋತ್ಸವವನ್ನು ಕಾಣುವ ದಿಲ್ಲ. ಬಾಗಿಲನ್ನು ಸರಿಯಾಗಿ ಮುಚ್ಚು ಪೂಜ್ಯರಾದ ಗುರುವರ್ಯ ಪರಮಹಂಸರು ವೀರರಸ ಸಂಯುಕ್ತವಾದ ಪದ್ಯವನ್ನು ನಾಳೆಗೋಸುಗ ಸಂಗೀತದಧಾಟಿಗೆ ಹಚ್ಚುತ್ತಿರುವರು. ಅಲ್ಲಿಗೆ ಹೋಗಿ ಅದನ್ನು ಕೇಳೋಣ ನಡೆ. ”

# ಹನ್ನೊಂದನೆಯ ಪ್ರಕರಣ.

## ಧರ್ಮೋದ್ಧಾರರಾದ ವೀರರ ಗುಪ್ತಸಂಘ.

ಬಾಗಿಲದ ಒಳಭಾಗವು ದೀಪಪ್ರಕಾಶದಿಂದ ಹೊಳೆಯುತ್ತಿತ್ತು. ಮಧ್ಯಭಾಗದಲ್ಲಿ ದೊಡ್ಡದೊಂದು ಸಿಂಹಾಸನ. ಸಿಂಹಾಸನದ ಮಗ್ಗಲಿಗೊಂದು ತೆರವಾದ ಆಸನವು ಎದುರಿಗೊಂದು ಸಂಗಮರವರಿಯ ಆಸನದ ಮೇಲೆ ಯೋಗಿಮಹಾರಾಜನು ಕುಳಿತಿದ್ದನು. ಅದರ ಕೆಳಗೆ ನಾಲ್ಕು ಮಗ್ಗಲು ಏಳೆಂಟು ನೂರುಜನರು ಆವರಣದಿಂದ ಮುಖವನ್ನು ಆಚ್ಛಾದಿಸಿಕೊಂಡು ವೀರಾಸನದಿಂದ ಕುಳಿತಿದ್ದರು. ಆದಿವಾಣಖಾನೆಯು ಇನ್ನೂ ಏಳೆಂಟುನೂರು ಜನರನ್ನು ಹಿಡಿಯುವಷ್ಟು ದೊಡ್ಡದಿತ್ತು.

ಇಂಥ ಭವ್ಯವಾದ ದಿವಾಣಖಾನೆಯಲ್ಲಿ ಕುಳಿತವರೆಲ್ಲರೂ ರಾಣಿಯ ಆಗಮನವನ್ನು ನಿರೀಕ್ಷಿಸುತ್ತಿದ್ದರು ಒಬ್ಬನು ಮತ್ತೊಬ್ಬನನ್ನು ಕುರಿತು— « ವೀರಸಿಂಹ, ನನ್ನ ಆಯುಷ್ಯದೊಳಗಿನ ಚಮತ್ಕಾರದ ಪ್ರಸಂಗದ ನೆನಪಾದಕೂಡಲೆ ನನ್ನ ಮನೋಸ್ಥಿತಿಯು ವಿಲಕ್ಷಣವಾಗುತ್ತದೆ. ತಾವು ಚಂಚಲೆಗೆ ಸಹಾಯಕರಾಗಿ ಕಕ್ಕನಕಾರಾಗೃಹದಿಂದ ನನ್ನನ್ನು ಬಿಡಿಸಿದ್ದು ನನ್ನಂಥ ಪಾಮರನಮೇಲೆ ಅಗಣಿತ ಉಪಕಾರವಾಯಿತು. ಅದರ ಪ್ರತ್ಯುಪಕಾರವು ಯಾವಾಗ್ಗೆ ತೀರುವದೋ ಹೇಳಲಿಕ್ಕಾಗದು. ಪಹರೆಯವರಿಗೆ ಅನೇಕ ಸುಳ್ಳುಹೇಳಿ ನನ್ನನ್ನು ಬಿಡಿಸಿದಿರಿ ಆದರೆ ಮುಂದೆ ನಾನಿಲ್ಲದಂತಾದಮೇಲೆ ಆಪಹರೆಯವರು ಕಕ್ಕನ ಕೋಪಕ್ಕೆ ಗುರಿಯಾಗಬೇಕಾಗುವದು. ಅದು ನೆನಪಾದ ಕೂಡಲೆ ನನಗೆ ವಿಷಾದವೆನಿಸುತ್ತದೆ ಚಂಚಲೆಯು ಅವರ ಸಂರಕ್ಷಣೆಯನ್ನು ಮಾಡುವದಕ್ಕೆ ಒಪ್ಪಿದರೂ, ನನ್ನ ಮನಸ್ಸು ಸಂಶಯಗೊಳ್ಳುತ್ತದೆ ಶಿವ ಶಿವ, ಕಕ್ಕನ ದುರ್ವಾಸನೆಯಾದರು ಎಷ್ಟು? ರಾಜ್ಯದ ಸಂರಕ್ಷಣೆಯನ್ನು ಮಾಡುವಂಥ ಉಚಿತಮ ಕಾರ್ಯವನ್ನು ಬಿಟ್ಟು ತನ್ನ ವಿಷಯಸುಖಕ್ಕೆ ವ್ಯತ್ಯಯಬ

ಬಾರದೆಂದು ಸ್ವಧರ್ಮಾಭಿಮಾನವನ್ನು ಬಿಟ್ಟು ಯವನನಿಗೆ ಮಗಳನ್ನು ಕೊಡುವದಕ್ಕೆ ಉದ್ಯುಕ್ತನಾದನು. ಇದು ಎಂಥ ನೀಚತನವು? ''

ವೀರಸಿಂಹ—'' ಕುಮಾರ ಪ್ರತಾಪಸಿಂಹ, ಹೀಗೆ ಕೋಪಗೊಳ್ಳಬೇಡ '' ವಿನಾಶಕಾಲೇವಿಪರೀತಬುದ್ಧಿಃ '' ಮನುಷ್ಯನ ಸರ್ವಸ್ವವೂ ನಾಶವಾಗುವ ಹೊತ್ತುಬಂದರೆ ಹೀಗೆ ವಿಪರೀತಬುದ್ಧಿಯು ಹುಟ್ಟುತ್ತದೆ. ತಾವು ತಮ್ಮ ಕಕ್ಕಂದಿರ ಕ್ರೋಧಕ್ಕೆ ಗುರಿಯಾದಿರಿ ಅವರು ದಿಲೇರಖಾನನಿಗೆ ಹೆದರಿ ತಮ್ಮನ್ನು ವಿನಾಕಾರಣ ಕಾರಾಗೃಹಕ್ಕೆ ಕಳಿಸಿದರೆಂದು ನಾನು ಹಿಂದ ಕಾರ್ಯಪರತ್ವದಿಂದ ರೂಪನಗರಕ್ಕೆ ಹೋದಾಗ್ಗೆ ಕೇಳಿದನು, ಆಗಲೆ ನನ್ನ ತಲೆಯು ತಿರುಗಹೋಯಿತು. ಇಂಥ ಸಂಗತಿಗಳಲ್ಲಿ ನಿಜವಾದ ಕ್ಷತ್ರಿಯರಿಗೆ ಕೋಪಬರುವದು ಸ್ವಾಭಾವಿಕವಾದದ್ದು. ನಾನು ತಮ್ಮನ್ನು ಬಿಡುಗಡೆ ಮಾಡಬೇಕೆಂದು ಯತ್ನಿಸುತ್ತಿನ್ದೆನು. ಅಷ್ಟರಲ್ಲಿ ಚಂಚಲಕುಮಾರಿಯು ತನ್ನ ಸಖಿಯಸೆರವನ್ನು ಪಡೆದು ತಮ್ಮನ್ನು ಬಿಡಿಸುವುದಕ್ಕೆ ಹವಣಿಸುವಳೆಂದು ಕೇಳಿ ಅವರಿಗೆ ಹೋಗಿ ಕೂಡಿದೆನು. ಆಮೇಲೆ ಆ ಇಬ್ಬರೂ ಪಹರೆಯವರನ್ನು ವಶಪಡಿಸಿಕೊಂಡು ತಮ್ಮನ್ನು ಬಿಡಿಸಿದೆವು. ಇದೆಲ್ಲವು ಈಶ್ವರೇಚ್ಛೆಯಿಂದ ಆಯಿತು. ಏನೂ ಸಂಶಯವಿಲ್ಲ ನಾನು ನಿಮಗೆ ಏನೂ ಸಹಾಯಮಾಡಿಲ್ಲ. ತಮ್ಮಂಥ ವೀರಪುರುಷರ ಸಹಾಯದಿಂದ ಪರಧರ್ಮದ್ವೇಷಿಗಳಾದ ಯವನರಿಂದ ನಮ್ಮ ಸ್ವತಂತ್ರತೆಯನ್ನು ದೊರಕಿಸಬೇಕೆಂದು ಈ ಉದ್ಯೋಗವನ್ನು ಮಾಡಿದೆನು.

ಪ್ರತಾಪ—'' ವೀರಸಿಂಹ, ನೀನು ವೀರಪುರುಷರಿಗೆ ಸರಿಯಾಗಿ ಮಾತಾಡಿದಿ ಅದಿರಲಿ, ರಾಣಿಯವರು ಈವರೆಗೂ ಬರಲಿಲ್ಲವೇಕೆ ?

ವೀರಸಿಂಹ.—'' ಪ್ರತಾಪಸಿಂಹ, ಒಳ್ಳೇ ನೆನಪು ಮಾಡಿದಿ. ನಾನು ನಿನಗೆ ಇದನ್ನೇ ಹೇಳತಕ್ಕವನಿದ್ದೆನು. ಈ ರಾಣಿಯವರು ಯಾರು ? ಎಲ್ಲಿಯವರು? ಇವರ ಸಂಬಂಧದಿಂದ ನಿನಗೇನಾದರೂ ಗೊತ್ತುಅದೆಯೊ?''

ಪ್ರತಾಪ:— '' ವೀರಸಿಂಹ, ಈ ಸಂಬಂಧದಿಂದ ನಿನಗೆಷ್ಟು ಗೊತ್ತದೆಯೊ ಅಷ್ಟೇ ನನಗೂ ಗೊತ್ತದೆ. ನಾವು ಈ ಹೊತ್ತು ಸಂಕಟ

ದಿಂದ ಬಿಡಿಸಿದ ತರುಣಿಯು ಈ ಹೊತ್ತಿನ ವೀರಸಭೆಗೆ ನಮಗೂ ಬ
ಲಿಕ್ಕೆ ಹೇಳಿದ್ದಳು ನಾವೂ ಬಂದಿರುತ್ತೇವೆ ಇನ್ನು ಮೇಲೆ ಮುಂ
ಏನಾಗುವದೊ ನೋಡತಕ್ಕದ್ದು. ''

ವೀರಸಿಂಹ·—" ಈ ಹೊತ್ತಿನ ಸಮೂಹವನ್ನು ಕಂಡು ನನ
ಬಹಳ ಆನಂದವಾಗಿರುತ್ತದೆ ಧರ್ಮಸೇವೆಗೋಸ್ಕರ ಇಷ್ಟು ವೀರರು ಇ
ಕೂಡಿರುವದು ಆರ್ಯಧರ್ಮದ ಭಾಗ್ಯೋದಯವು. ಈಶ್ವರನು ಇದನ
ಕೈಗೂಡಿಸಲಿ. ಈ ವೀರರು ಲೋಕದ ಧರ್ಮವನ್ನೂ ಅಬಲೆಯರನ
ಯವನರಿಂದ ರಕ್ಷಿಸಲಿ. ''

ಪ್ರತಾಪಸಿಂಹ;—" ಈ ಪ್ರಯತ್ನವನ್ನು ಕಂಡು ನನಗೆ ಬಹ
ಆನಂದವಾಗಿರುತ್ತದೆ. ಇದರೊಳಗಿನವನೊಬ್ಬ ವೀರನು ಇದರ ಪ್ರಯ
ತ್ನವನ್ನೂ ಫಲವನ್ನೂ ಹೇಳಿರುವನು. ಅದನ್ನು ಕೇಳಿ ನನಗೆ ಬಹ
ಉತ್ಸಾಹತೆ ಉಂಟಾಯಿತು. ಈ ಸಂಘಕ್ಕೆ ಕೂಡಿದ್ದರಿಂದ ಕಕ್ಕನ ಜುಲ
ಮೆಯ ಕೃತ್ಯಕ್ಕೆ ಮಣ್ಣುಹಾಕುವದಕ್ಕೆ ನನಗೆ ಬಹು ಸುಲಭವಾಗ
ವದು. ಅತ್ತ ಮಹಾರಾಣಾ ರಾಜಸಿಂಹನು ಚಂಚಲೆಯನ್ನು ಬಿಡಿಸು
ದಕ್ಕೆ ಯತ್ನಮಾಡುತ್ತಿರುವನು. ಆತನಿಗೆ ಸಹಾಯಮಾಡುವದೊಂದ
ಸುಲಭವಾದ ಮಾರ್ಗವು ದೊರೆದಂತಾಯಿತು ಅದು ನೋಡು; ರಾ
ಯವರು ಬಂದರು. ''

ರಾಣಿಯವರು ಮುಖದಮೇಲೆ ಆವರಣವನ್ನುಹಾಕಿಕೊಂಡಿದ್ದರ
ಆದರೂ ಇತರ ಕೆಲವು ಅವಯವಗಳಿಂದ ಆ ತರುಣಿಯು ಸುಸ್ವರೂಪಿ
ಯೆಂದು ತರ್ಕಿಸಬಹುದಾಗಿತ್ತು. ಅವಳೊಡನೆ ಕೈಯಲ್ಲಿ ವೀಣೆಯನ
ಹಿಡಿದಿರುವ ತಪಸ್ವಿನಿಯೊಬ್ಬಳು ಬಂದಳು. ರಾಣಿಯವರು ತಮ್ಮ ಆ
ನದಮೇಲೆ ಕುಳಿತಬಳಿಕ ತಪಸ್ವಿನಿಯು ಸಿಂಹಾಸನದ ಮಗ್ಗಲಿಗಿರುವ ತ
ವಾದ ಆಸನದಮೇಲೆ ಕುಳಿತಳು. ಎಲ್ಲ ವೀರರ ದೃಷ್ಟಿಯು ರಾಣಿಯ
ವರ ಕಡೆಗೆ ಇತ್ತು. ಇಷ್ಟರಲ್ಲಿ ತಪಸ್ವಿನಿಯು ವೀಣೆಯನ್ನು ನುಡಿಸಲ
ರಂಭಿಸಿದಳು. ಹಾಗೂ ಹಿಂದಿನ ಪ್ರಕರಣದಲ್ಲಿ ಹೇಳಿದ ಪದ್ಯವನ

ಹೇಳತೊಡಗಿದಳು ತಪಸ್ವಿನಿಯು ಸ್ವಲ್ಪ ವಯಸ್ಸು ಹೋದವಳು; ಆದಾಗ್ಯೂ ಅವಳಕಂಠದಲ್ಲಿ ಮಾಧುರ್ಯವೂ ಅಧಿಕಾರಯುಕ್ತವಾದ ವಾಣಿಯೂ ಇದ್ದವು ಯಾವತ್ತು ಸಭಿಕರು ತಟಸ್ಥರಾಗಿ ಅದನ್ನು ಕೇಳಹತ್ತಿದರು. ಪ್ರತಿಯೊಬ್ಬನ ಮೈಮೇಲೆ ರೋಮಾಂಚಗಳೆದ್ದವು. ವೀರರು ತಮ್ಮ ಕತ್ತಿಗಳಿಗೆ ಕೈಹಾಕಿದರು. ಎಲ್ಲಾ ಕಡೆಯಲ್ಲಿಯೂ ವೀರಶ್ರೀಯು ತುಂಬಿ ತುಳುಕಹತ್ತಿತು ಗಾಯನವು ಮುಗಿದಮೇಲೆ ಪರಮಹಂಸನು ಎದ್ದುನಿಂತು ರಾಣಿಯವರ ಕಡೆಗೆ ತಿರುಗಿ–"ಮಗಳೆ, ಯಾವ ವ್ರತವನ್ನು ಪರಿಗ್ರಹಿಸುವದಕ್ಕಾಗಿ ಈ ವ್ಯೂಹವು ರಚಿಸಿರುತ್ತದೊ ಅದು ಸುಲಭವಾಗಿ ಕೊನೆಗಾಣುವದಕ್ಕೆ ನಾವು ದೃಢವಾಗಿ ಪ್ರಯತ್ನಮಾಡುವದು ಅವಶ್ಯವದೆ. ಇದೋ ನೋಡು, (ಆ ದಿವಾಣಖಾನೆಯಲ್ಲಿರುವ ಯಾವತ್ತು ವೀರರನ್ನು ತೋರಿಸಿ) ಈ ವೀರರಂಥ ಒಂದು ಲಕ್ಷ ವೀರರು ಕೇವಲ ನಿನ್ನ ಆಜ್ಞೆಯಾದಕೂಡಲೆ ತಮ್ಮ ಕತ್ತಿಗಳನ್ನು ಹಿರಿದು ಶತ್ರುಗಳನ್ನು ಸಂಹರಿಸಲಿಕ್ಕೆ ಸಿದ್ಧರಿರುವರು. ಆಮೇಲೆ ಅಂಜಿಕೆಯಾಕೆ ? ಧರ್ಮದ ಕಡೆಗೆ ಜಯವಿರುವುದು ಸನಾತನಧರ್ಮದವರು ನೀತಿಯಿಂದ ನಡೆದರೆ ದೇವರು ಅವರಿಗೆ ನಿಶ್ಚಯವಾಗಿ ಜಯಕೊಡುವನು. "

ಇದನ್ನು ಕೇಳಿ ರಾಣಿಯು " ಪಿತಾಜಿ, ಧರ್ಮಸೇವೆ, ಅಬಲಾರಕ್ಷಣ ಇವುಗಳ ಬಗ್ಗೆ ಅಂಗೀಕರಿಸಿದ ಕಾರ್ಯಗಳಲ್ಲಿ ಪ್ರಸಂಗ ಒದಗಿದರೆ ಪ್ರಾಣಹೋಗುವವರೆಗೂ ಹಿಂದೆ ಮುಂದೆ ನೋಡಬಾರದೆಂಬುದು ನಮ್ಮ ಕ್ಷತ್ರಿಯರ ಕರ್ತವ್ಯವು. ದೇಶದಲ್ಲಿ ತೋರುವ ಜುಲುಮೆ, ಧರ್ಮದ ನಾಶ, ಪತಿವ್ರತೆಯರ ಮೇಲಿನ ಅತ್ಯಾಚಾರ ಇತ್ಯಾದಿ ಕ್ರೂರಕೃತ್ಯಗಳನ್ನು ಕಂಡು ಯಾವಾತನ ಮನಸ್ಸು ಸಂತಾಪದಿಂದ ಪ್ರಜ್ವಲಿಸುವದಿಲ್ಲವೊ ಆತನು ಕ್ಷತ್ರಿಯನೇನು ? ವ್ರತವನ್ನು ಕೈಕೊಂಡಮೇಲೆ ಅದು ಕೊನೆಗಾಣುವವರೆಗೂ ಹೊಡೆದಾಡುವದು ಪ್ರತಿಯೊಬ್ಬನ ಕರ್ತವ್ಯವು. ನನ್ನ ಪ್ರಿಯ ಬಂಧುಗಳೆ ! ಈ ನನ್ನ ಮಾತಿಗೆ ನಿಮ್ಮೆಲ್ಲರ ಒಪ್ಪಿಗೆಯುಂಟೇ ? "

" ರಾಣಿಯವರೆ ! ನಾವೆಲ್ಲರೂ ಸಿದ್ಧರಿದ್ದೇವೆ ತಾವು ಹೇಳು ಪವಿತ್ರಕಾರ್ಯದಲ್ಲಿ ಪ್ರಾಣವನ್ನು ಕೊಡಲಿಕ್ಕೆ ತತ್ಪರರಿದ್ದೇವೆ " ಎಂದ ಯಾವತ್ತು ವೀರರು ಒಳ್ಳೇ ಆವೇಶದಿಂದ ಹೇಳಿದರು.

ರಾಣಿ —" ವೀರರೆ, ನೀವೇ ಶ್ರೇಷ್ಠರು ಹೀಗೆ ದೃಢಮನಸ್ಕ ಳ್ಳವರಾಗಿರಿ ಈಶ್ವರನು ನಮ್ಮ ಬಯಕೆಯನ್ನು ಪೂರ್ಣಮಾಡುವನು. ಆ ಬಳಿಕ ಪರಮಹಂಸನು ತನ್ನ ಆಸನದಿಂದೆದ್ದು ಸಿಂಹಾಸನದ ಸಮೀಪಕ ಹೋದನು ಅಲ್ಲಿ ವೀರಾಸನದಿಂದ ಕುಳಿತ ರಾಣಿಯವರ ಕೈಯನ ತನ್ನ ಕೈಯಲ್ಲಿ ತಕ್ಕೊಂಡು , ಕುಳಿತಂಥ ಯಾವತ್ತು ಸೈನಿಕರ ಕಡೆ ನೋಡಿ ಮಾತಾಡಲಾರಂಭಿಸಿದನು " ವೀರಬಾಂಧವರೆ, ಈಶ್ವರ ಕೃಪೆಯಿಂದ ನಮಗೆ ಈ ರಾಣಿಯವರು ದೊರೆತಿರುವರು ಅವ ಶೌರ್ಯ, ಧೈರ್ಯಗಳು ಅವರ್ಣನೀಯವಾದವುಗಳುಂಟು ಅವರಿ ಯಾವ ಮೋಹವೂ ಇಲ್ಲ. ಯವನರ ಸೊಕ್ಕನ್ನು ಮುರಿಯಲಿಕ್ಕೆ ತಮ ಯಾವತ್ತು ಸುಖಕ್ಕೆ ತಿಲಾಂಜಲಿಯನ್ನು ಕೊಟ್ಟಿರುತ್ತಾರೆ ಮೊಗಲ ಬಲಾತ್ಕಾರವನ್ನು ಕಂಡು ಅವರಿಗೆ ಅಪಾರವಾದ ಸಿಟ್ಟುಬಂದಿರುತ್ತ ಅವರಿಗೆ ಸುಖಕರವಾದ ವಿಷಯೋಪಭೋಗದ ಸ್ವಪ್ನವೂ ಬೀಳುವಂತಿಲ್ಲ ಯಾವಾಗಲೂ ಮೊಗಲರ ಬಲಾತ್ಕಾರವೇ ಅವರ ಹೃದಯವನ್ನು ಕ ಯುತ್ತಿರುತ್ತದೆ. ಈ ಹೊತ್ತು ಸ್ವತಃ ಅವರ ಮೇಲೆಯೆ ಅಂಥ ಪ್ರಸ ಗವು ಬಂದಿತ್ತು ಆದರೆ ಆದರೊಳಗಿಂದ (ವೀರಸಿಂಹ, ಪ್ರತಾಪಸಿಂಹ ಕಡೆಗೆ ಬೊಟ್ಟುಮಾಡಿ) ಈ ಎದುರಿಗೆ ಕುಳಿತ ವೀರರು ತಮ್ಮ ಶೌಯ ದಿಂದ ಅವರನ್ನು ಬಿಡಿಸಿರುವರು. ರಾಣಿಯವರು ಸ್ತ್ರೀಯರಾದರ ತಾವು ಕೈಕೊಂಡಕೆಲಸವನ್ನು ಕೊನೆಗಾಣಿಸುವದರಲ್ಲಿ ಹಗಲು ರಾತ್ರಿಯ ಚಿಂತಿಸುತ್ತಿರುವರು. ಅಬಲೆಯು ಭೀರುವೆಂದು ಹೇಳುತ್ತಾರೆ. ಆದ ಇವರ ಧೈರ್ಯವನ್ನು ಕಂಡು ಪುರುಷರು ತಲೆಬೊಗ್ಗಿಸುವಂತಿರುವದು ನನ್ನ ಪ್ರಿಯ ಬಾಂಧವರೆ ! ನಾನು ನಿಮ್ಮಲ್ಲಿರತಕ್ಕ ಗುರುವು ; ನನ್ನನ್ನು ನೀವು ಪೂಜ್ಯನೆಂದೆಣಿಸುವಿರಿ. ಆದರೆ ನಾನು ಈ ಭರತ ಭೂಮಿಯ

ಅಭೀಷ್ಟಪ್ರಿಯರಾದ ಮಹಾರಾಣಿಯವರ ಆಜ್ಞೆಯನ್ನು ಮನ್ನಿಸುವದರಲ್ಲಿ ತತ್ಪರನಿರುತ್ತೇನೆ. ಮತ್ತೂ ನಿಮ್ಮಲ್ಲಿ ಯಾರೂ ಇವರ ವಿರುದ್ಧಹೋಗ ಲಿಕ್ಕಿಲ್ಲೆಂದು ನಾನು ತಿಳಿಯುತ್ತೇನೆ '' ಪರಮಹಂಸನ ಈ ಮಾತು ಮುಗಿಯುವದರೊಳಗಾಗಿ ಆವರಣದಿಂದ ಆಚ್ಛಾದಿತ ವೀರರು " ಯಾರೂ ವಿರುದ್ಧ ಹೋಗುವದಿಲ್ಲ '' ವೆಂದು ಒಟ್ಟಾಗಿ ಹೇಳಿದರು. ಇದನ್ನು ಕೇಳಿ ಪರಮಹಂಸನು ಪುನಃ ಉತ್ಸಾಹಪೂರ್ವಕವಾಗಿ " ವೀರರೆ, ತಮ್ಮೆಲ್ಲರ ಏಕಮತವನ್ನು ಕೇಳಿ ಅತ್ಯಾನಂದವಾಯಿತು ಕೃಪಾಪೂ ರ್ಣಳಾದ ತಾಯಿಯ ಕಟಾಕ್ಷದಿಂದ ನಮ್ಮ ಅಭಿಲಾಷೆಯು ಅವಶ್ಯವಾಗಿ ಪೂರ್ಣವಾಗುವದೆಂದು ನನಗೆ ನಂಬುಗೆಯಿದೆ ಮತ್ತು ಆರ್ಯರ ವಿಜಯ ಪತಾಕೆಯು ಪುನಃ ಭಾರತಭೂಮಿಯಲ್ಲಿ ಮೆರೆಯಬಹುದು. ನಿಮ್ಮಂಥ ವೀರರ ಸಹಾಯದಿಂದ ನಮ್ಮ ಮಾತೃಭೂಮಿಯು ದುರಾತ್ಮರೂ ದುರಾ ಚಾರಿಗಳೂ ದುಷ್ಟರೂ ಆದ ಮೊಗಲರ ಕೈಯೊಳಗಿಂದ ತೀವ್ರವೇ ಮುಕ್ತ ತೆಯನ್ನು ಹೊಂದುವದೆಂಬದು ನನಗೆ ನಿಶ್ಚಯವೆನಿಸುತ್ತದೆ. '' ಕೂಡಲೆ ಯಾವತ್ತು ವೀರರು " ಗುರುಗಳೇ, ಈಶ್ವರನು ಆರ್ಯ ಧರ್ಮದ್ವೇಷಿಗ ಳಾದ ಯವನರ ಕೈಯೊಳಗಿಂದ ತೀವ್ರವೇ ಈ ನಮ್ಮ ಮಾತೃಭೂಮಿ ಯನ್ನು ಬಿಡುಗಡೆ ಮಾಡಿಸುವನು. '' ಎಂದು ಒಳ್ಳೇ ಆವೇಶದಿಂದ ಹೇಳಿ ದರು.

ಅನಂತರ ಪರಮಹಂಸನು ರಾಣಿಯವರ ಕಡೆಗೆ ತಿರುಗಿ " ಮಹಾ ರಾಣಿಯವರೆ, ತಮ್ಮ ಅಪ್ಪಣೆಯೇನಿರುವದೆಂಬುದನ್ನು ಹೇಳಿದರೆ ನಾವೆ ಲ್ಲರು ನೆರವೇರಿಸಲಿಕ್ಕೆ ತತ್ಪರರಿರುತ್ತೇವೆ '' ಎಂದನು.

ರಾಣಿ:—" ಪಿತಾಜಿ, ಈಗ ಎರಡನೆಯ ಯಾವ ಕೆಲಸವೂ ಇಲ್ಲ. ಆದರೆ ವ್ರತವನ್ನು ಪಾಲಿಸಲಿಕ್ಕೆ ಪ್ರತಿಯೊಬ್ಬರೂ ಪ್ರತಿಜ್ಞೆಯನ್ನು ಮಾಡಬೇಕು.'' ಕೂಡಲೆ ಪರಮಹಂಸನು, ನಾಲ್ಕು ಜನ ಆವರಣದವರಿಗೆ ಸನ್ನೆಯನ್ನು ಮಾಡಿದನು. ಆಮೇಲೆ ಅವರು ಸ್ವಲ್ಪ ಹೊತ್ತಿನಲ್ಲಿ ಎರಡು ದೊಡ್ಡ ದೊಡ್ಡ ಪೆಟ್ಟಿಗೆಗಳನ್ನು ತಂದು ಇಟ್ಟರು. ಅವುಗಳನ್ನು

ಸಿಂಹಾಸನದ ಹತ್ತರ ಇಟ್ಟಮೇಲೆ ಅವುಗಳ ಬಾಯಿ ತೆರೆದು ಯಾವತ್ತು ವೀರರ ಕಡೆಗೆ ತಿರುಗಿ—“ ಧರ್ಮೋದ್ಧಾರದ ಪವಿತ್ರಕಾರ್ಯವನ್ನು ಮಾಡುವದಕ್ಕೆ ನಡಕಟ್ಟುವ ಪೂರ್ವದಲ್ಲಿ ಮಹಾರಾಣಿಯವರ ಅಪ್ಪಣೆ ಯಂತೆ ನೀವೆಲ್ಲರು ಪ್ರತಿಜ್ಞೆ ಮಾಡಲಿಕ್ಕೆ ಸಿದ್ಧರಿರುವಿರೋ ? ”

“ ನಾವೆಲ್ಲರೂ ಸಿದ್ಧರಿದ್ದೇವೆ ಬೇಕಾದ ಪ್ರತಿಜ್ಞೆಯನ್ನು ಮಾಡಲಿಕ್ಕೆ ಹೇಳಿರಿ ” ಈ ತರದ ಧೀರೋದಾತ್ತವಾದ ಗಂಭೀರಧ್ವನಿಯು ದಿವಾಣ ಖಾನೆಯಲ್ಲೆಲ್ಲ ತುಂಬಿ ಹೋಯಿತು

“ ಹಾಗಾದರೆ ಕೇಳಿರಿ—ಈ ಹೊತ್ತು ಇಲ್ಲಿಯ ಕಾರ್ಯಸಾಧನ ಕ್ಕೋಸುಗ ಆರ್ಯಧರ್ಮದ ವಿಜಯಕ್ಕೋಸುಗ, ಆರ್ಯಧರ್ಮದ ದ್ವೇಷಿಗಳಾದ ಮೊಗಲರ ನಾಶಕ್ಕಾಗಿ ಎಂದೂ ಹಿಂಜರಿಯುದಿಲ್ಲವೆಂದು ನಾನು ಪ್ರತಿಜ್ಞೆ ಮಾಡುತ್ತೇನೆ ನನ್ನಂತ ನೀವೂ ಪ್ರತಿಜ್ಞಾ ಬದ್ಧರಾ ಗಿರಿ.” ಎಂದು ಹೇಳಿದ ಮೇಲೆ ಎಲ್ಲರೂ ಆ ಪೆಟ್ಟಿಗೆಯಲ್ಲಿದ್ದ ಶವದ ಮೇಲೆ ಕೈಇಟ್ಟು ಪ್ರತಿಜ್ಞೆಯನ್ನು ಮಾಡಿದರು. ಪ್ರತಿಜ್ಞೆ ಮಾಡಿದ ಮೇಲೆ ರಾಣಿಯು ಆವರಣವನ್ನು ತೆಗೆದಳು. ಸಂಗಡಲೇ ಯಾವತ್ತು ವೀರರು ತಮ್ಮ ಮುಖಗಳ ಮೇಲಿನ ಆವರಣವನ್ನು ತೆಗೆದುಹಾಕಿದರು.

ಆವರಣವನ್ನು ತೆಗೆದೊಡನೆಯೆ ತರುಣಿಯ ಆವರ್ಣನೀಯವಾದ ಸುಂದರ ಮುಖವು ಎಲ್ಲರಿಗೂ ತೋರಹತ್ತಿತು ಆಕೆಯ ಅಪೂರ್ವ ಸೌಂದರ್ಯವನ್ನು ನೋಡಿ ಎಲ್ಲರೂ ಬೆರಗಾದರು. ವೀರಸಿಂಹ, ಪ್ರತಾಪಸಿಂಹರಿಗಂತೂ ಪರಮಾನಂದವಾಯಿತು. ಇಂಥ ಅಲೌಕಿಕ ರಮಣೀ ರತ್ನವು ತಮ್ಮಿಂದ ರಕ್ಷಿತವಾಯಿತೆಂದು ಅವರು ಅಭಿಮಾನವನ್ನು ತಾಳಿದರು. ವಾಚಕರಿಗೆ ಈ ಕರುಣಿಯು ಯಾರೆಂಬದನ್ನು ಹೇಳಲವಶ್ಯಕತೆ ಇಲ್ಲ ಯಮುನಾನದಿಯಲ್ಲಿ ಹಾರಿಕೊಂಡು ಪ್ರಾಣವನ್ನು ಕಳಕೊಳ್ಳಲಪೇಕ್ಷಿಸಿದ ತರುಣಿಯೆ ಇವಳು. ಹುಸೇನಖಾನನ ತಾಮಸಕ್ಕೆ ಬಲಿಯಾಗಿ ವೀರಪ್ರತಾಪದಿಂದ ರಕ್ಷಿಸಲ್ಪಟ್ಟ ಮನೋಹರಿಯೆ ಈ ರಾಣಿಯು.

ರಾಣಿಯು ತನ್ನ ಆವರಣವನ್ನು ತೆಗೆದಮೇಲೆ ಪರಮಹಂಸನು— "ವೀರಬಾಂಧವರೆ, ನೀವೆಲ್ಲರೂ ನಿಮ ರಾಣಿಯವರನ್ನು ನೋಡಿದಿರಿ ನಿಮ್ಮಲ್ಲಿ ಕೆಲವರು ಆಶ್ಚರ್ಯಯುಕ್ತರಾಗಿರುತ್ತಾರೆ. ಈಶ್ವರ ಪ್ರಸಾದ ಎದ್ದರೆ ಯಾವ ಮಾತೂ ಅರಿದಾದದ್ದೆಂದು ತಿಳಿಯಬಾರದು. ಬಾಂಧವರೆ, ನೀವೆಲ್ಲರೂ ನಮ್ಮ ಆರ್ಯಧರ್ಮೋನ್ನತಿಗಾಗಿ ಕಾದಿರಿ ಇದೇ ನನ್ನ ಆಗ್ರಹದ ಹೇಳಿಕೆಯು" ಇಷ್ಟರಲ್ಲಿ ಭೀಮನು ಪರಹಂಸರೆದುರಿಗೆ ಬಂದು ನಮಸ್ಕರಿಸಿ—"ಗುರುಗಳೆ ಗುಪ್ತದ್ವಾರದ ಹತ್ತರ ನಿನ್ನೆ ರಾತ್ರಿ ಇಬ್ಬರು ಮುಸಲ್ಮಾನರನ್ನು ಹಿಡಿದು ಕಾಲದೇವಿಯ ಎದುರಿಗಿನ ಕಾರಾಗ್ರಹದಲ್ಲಿ ಇಟ್ಟಿರುತ್ತೇವೆ" ಎಂದು ಹೇಳಿದನು.

"ಗುಪ್ತದ್ವಾರದ ಹತ್ತರ ಮುಸಲ್ಮಾನರೆ? ಅವರು ಅಲ್ಲಿಗೆ ಹೇಗೆ ಬಂದರು." ಎಂದು ಆಶ್ಚರ್ಯಚಕಿತನಾಗಿ ಕೇಳಿದನು. ಅವರು ಯಾರು ಇರುವರೊ ನಾನು ಅಗತ್ಯ ನೋಡಬೇಕೆಂದು ಪರಮಹಂಸನು ಭೀಮನ ಕೂಡ ಹೋದನು ಪರಮಹಂಸನು ಹೋದ ಮೇಲೆ ಮಹಾರಾಣಿಯು ಎದ್ದು—"ವೀರರೆ, ನಾವು ನಮ್ಮ ದೇಶವನ್ನು ಮೊಗಲರ ಜುಲುಮೆಯಿಂದ ಬಿಡಿಸಿಕೊಳ್ಳುವದಕ್ಕೆ ಪ್ರತಿಜ್ಞೆ ಮಾಡಿರುತ್ತೇವೆ ನಮ್ಮ ಸಾಮರ್ಥ್ಯವನ್ನು ತೋರಿಸುವ ಹೊತ್ತು ಸಮೀಪಿಸಿರುವದು. ಮೊಗಲರ ರಾಜತೃಷ್ಣೆಯು ಬಯಂಕರವಾಗಿ ಬೆಳದಿರುತ್ತದೆ ಜಿಝಿಯಾ ಮೊದಲಾದ ಕರಗಳನ್ನು ನ್ಯಾಯಿಯಾದ ಅಕಬರನು ತೆಗೆದು ಹಾಕಿದ್ದನು. ಈ ಔರಂಗಜೇಬನು ಪುನಃ ಮೊದಲಿನಂತೆ ಅವುಗಳನ್ನು ಆರಂಭಿದ್ದಾನೆ. ಅದಾದರೂ ಬರೇ ಹಿಂದೂಜನರಮೇಲಷ್ಟೆ ಇರುವರು. ಇಂಥ ಜುಲುಮಿಗೆ ಜನರು ಯಾಕೆ ಬೇಸರಗೊಳ್ಳಬಾರದು.? ದೇವಾಲಯಗಳ ನಾಶವಂತೂ ಭಯಂಕರವಾಗಿ ನಡೆದಿರುತ್ತದೆ ದೇವಾಲಯಗಳನ್ನು ಕೆಡವಿ ಅಲ್ಲಿ ಮಸೀದಿಯನ್ನು ಕಟ್ಟುವದು ಹೆಜ್ಜೆಜ್ಜೆಗೂ ಕಂಡುಬರುತ್ತಿರುವದು. ಪತಿವ್ರತೆಯರಿಗೂ ಅಬಲೆಯರಿಗೂ ಎಷ್ಟು ಕಷ್ಟಗೊಡುತ್ತಾರೆಂಬುದನ್ನು ಹೊಸದಾಗಿ ಹೇಳಬೇಕಾದದ್ದಿಲ್ಲ. ನನ್ನಮೇಲೆಯೇ ಈಹೊತ್ತು ಅಂಥ

ಪ್ರಸಂಗವು ಒದಗಿರಲು ವೀರಪ್ರತಾಪರಾಯನೂ ಅವನ ಸ್ನೇಹಿತನೂ ನನ್ನನ್ನು ಬಿಡಿಸಿದರು. ಈಸ್ಥಿತಿಯನ್ನು ನೋಡಿ ನಾವು ಸುಮ್ಮನೆ ಕೂಡಬೇಕೆ? ಎಂದೂ ಆಗದು. ಮೊಗಲರ ಈ ಬಾಲಾತ್ಕಾರದಿಂದ ಬಿಡಿಸಿಕೊಳ್ಳಲಿಕ್ಕೆ ನಾವು ಹೊಡೆದಾಡುವದು ನ್ಯಾಯವಾದದ್ದು. ಸತ್ಯಗಿಂದ ನಡೆದರೆ ಈಶ್ವರನು ನಮಗೆ ನಿಶ್ಚಯವಾಗಿ ಫಲಕೊಡುವನು.'' ಈಶಬ್ದವನ್ನು ಉಚ್ಚರಿಸುವಷ್ಟರಲ್ಲಿ ಆದಿವಾಣಖಾನೆಯು ''ಹರಹರ ಮಹಾದೇವ'' ಎಂಬ ವೀರಶ್ರೀಗೆ ಪ್ರೋತ್ಸಾಹನಕೊಡುವ ಧ್ವನಿಯಿಂದ ತುಂಬಿತು.

## ಹನ್ನೆರಡನೆಯ ಪ್ರಕರಣ

### ಮಧ್ಯದಲ್ಲಿ ಏನಾಯಿತು ?

ರೂಪನಗರದಿಂದ ಉದೇಪುರಕ್ಕೆ ಹೋಗುವ ಮಾರ್ಗವು, ಅತಿಶಯ ತ್ರಾಸದಾಯಕವಾದದ್ದು. ಹೊಸಮನುಷ್ಯರಂತೂ ಅಲ್ಲಿ ಹೋಗುವಾಗ ವಿಶೇಷ ಕಷ್ಟಗಳಿಗೆ ಗುರಿಯಾಗುವರು. ಸರಳಮಾರ್ಗವು ಗೊತ್ತಾಗದೆ ಪರ್ವತದ ಮೇಲಿನ ಸಣ್ಣ ಕಾಲುದಾರಿಗಳಿಂದ ಅರವಲಿ ಪರ್ವತದ ಸಾಲುಗಳಲ್ಲಿ ಎಷ್ಟೋದಿವಸ ನಡೆಯ ಬೇಕಾಗುವದು. ಪರ್ವತದ ಮೇಲ ಹತ್ತುವಕಾಲಕ್ಕೆ ಅಲ್ಲಲ್ಲಿಗೆ ನಾಲ್ಕು ಮಾರ್ಗಗಳೊಡೆದದ್ದು ಕಂಡು ಒರುತ್ತದೆ ಅದರೊಳಗೆ ಯಾವ ದಾರಿಯಿಂದ ಹೋಗಬೇಕೆಂಬದು ಹೊಸಬರಿಗೆ ಗೊತ್ತಾಗುವಂತಿಲ್ಲ. ವಿಶೇಷವಾಗಿ ಸ್ವಲ್ಪ ಜನರಿಗೆ ಈ ಪರ್ವತದ ಮೇಲಿಂದ ಹಾಯ್ದು ಹೋಗುವದಕ್ಕೆ ಎಂದೂ ಧೈರ್ಯವಾಗುವಂತಿಲ್ಲ. ವಿಸ್ತಾರವಾದ ಅರಣ್ಯ ಮನುಷ್ಯರ ವಸತಿಯೆ ಇಲ್ಲ. ಹಿಂಸ್ರಪಶುಗಳು ಬಹಳ ಅಲ್ಲಲ್ಲಿಗೆ ಕಳ್ಳರ ಅಂಜಿಕೆ. ಈ ಸಂಕಟಗಳು ಎಲ್ಲರ ಅನುಭವಕ್ಕೂ ಬರುತ್ತವೆ.

ಮುಂಜಾನೆ ಹತ್ತು ಘಂಟೆಯಕಾಲ, ಈ ಪರ್ವತದೊಳಗಿಂದ ಉದೇಪುರದ ಮಾಗವಾಗಿ ಐದುಜನ ಪ್ರಾವಾಸಿಕರು ಹೋಗುತ್ತಿದ್ದರು.

ಅವರು ತಮ್ಮತಮ್ಮಷ್ಟಕ್ಕೆ ಯಾವದೊ ಒಂದು ವಿಷಯದಮೇಲೆ ಮಾತಾಡು ತ್ತಿದ್ದರು. ಪರ್ವತದಮೇಲೆ ಹತ್ತುವುದು ಎಷ್ಟು ಕಠಿಣವೊ, ಅದಕ್ಕಿಂತಲೂ ಕೆಲವು ಸ್ಥಳಗಳಲ್ಲಿ ಇಳಿಯುವುದು ಹೆಚ್ಚು ಕಠಿಣವಾಗಿತ್ತು. ಇಂಥ ಇಕ್ಕಟ್ಟಿನ ಸ್ಥಳವನ್ನು ದಾಟಿ ಎರಡನೇದೊಂದು ಶಿಖರದ ಬಳಿಯಲ್ಲಿರುವ ಸಪಾಟವಾದ ಪ್ರದೇಶದಲ್ಲಿ ಅವರು ನಡೆದಿದ್ದರು. ಎರಡೂಮಗ್ಗುಲಿಗೆ ಎರಡು ಎತ್ತರವಾದ ಪರ್ವತಶ್ರೇಣಿಗಳು, ಆರೇಳುತಾಸುಹೊತ್ತೇರಿದರೂ ಆ ಪರ್ವತದ ಮೇಲಿನ ಗಿಡಗಳ ನೆರಳಿನಿಂದ ಸುತ್ತಲೂ ತಂಪಿರುತ್ತಿತ್ತು. ಆ ಎರಡೂ ಪರ್ವತಗಳ ಮಧ್ಯದಲ್ಲಿ ಒಂದು ಸಣ್ಣ ನದಿಯು, ಗಿಡಗಳ ಗುಂಪಿನೊಳಗಿಂದ ಜುಳುಜುಳು ಹರಿಯುತ್ತಿತ್ತು. ಅಲ್ಲಿನಿಂತು ನೋಡುವ. ವನಿಗೆ ಪರ್ವತದ ಮೇಲೆ ನಿಂತ ಮನುಷ್ಯರಷ್ಟೇ ಕಾಣಿಸುತ್ತಿದ್ದರು. ಇಂಥ ಸ್ಥಳದಲ್ಲಿ ನಾಲ್ಕುಜನ ರಜಪೂತರು ಒಬ್ಬ ವೃದ್ಧಬ್ರಾಹ್ಮಣನು ಹೀಗೆ ಐದುಜನರು ಹೋಗುತ್ತಿದ್ದರು ಅವರೊಳಗಿನವನೊಬ್ಬ ರಜಪೂ ತನು ಬ್ರಾಹ್ಮಣನನ್ನು ಕುರಿತು—

"ಅನಂತಮಿಶ್ರಮಹಾರಾಜ, ಇನ್ನು ಉದೇಪುರವು ತೀರಸಮೀ ಪವದೆ. ಆದರೆ ಈ ವರೆಗೆ ಇಷ್ಟು ನಿರ್ಮಾನುಷವಾದ ಸ್ಥಳಗಳನ್ನು ದಾಟಿ ಬಂದರೂ ಭಯವಿರಲಿಲ್ಲ. ಏನಿರುವುದು ಇನ್ನುಮೇಲೆ, ಕಳ್ಳರು ಇದೇ ಸ್ಥಳದಲ್ಲಿ ಎಷ್ಟೋ ಜನರನ್ನು ಮಣ್ಣುಪಾಲು ಮಾಡಿರುತ್ತಾರೆ."

"ನಿಜವೆ? ನಾವೇನೂ ಹೆದರುವ ಕಾರಣವಿಲ್ಲ. ನೀವು ನಾ ಲ್ವರು ಇರುವಿರಿ. ನಮ್ಮಹತ್ತಗ ಕದಿಯುವಂಥ ಪದಾರ್ಥವೂ ಇಲ್ಲ, ಅಂಜುವದೇಕೆ?"

"ಅವೇನೂ ಇಲ್ಲ. ಸುಮ್ಮನೆ ಕೇಳಿದೆ. ನೀವು ವೃದ್ಧರು. ಒಂದು ವೇಳೆ ಅಂಥ ಪ್ರಸಂಗಬಂದರೆ ಸುಮ್ಮನೆ ಕಳಕೊಳ್ಳಬೇಕಾದೀತು. ಅವರು ನಮಗೆ ಶಿಗಲಿಕ್ಕಿಲ್ಲ. ಕಳ್ಳರಸಂಖ್ಯ ಹೆಚ್ಚಿದ್ದಾಗ ಓಡುವ ಹೊತ್ತು ಬಂದರೆ ಅದು ನಿಮ್ಮಿಂದ ಆಗುವುದೆ? ಮೊದಲೆ ಹೇಳುತ್ತೇನೆ. ಏನಾದರೂ ಇದ್ದರೆ ನನ್ನಲ್ಲಿ ಕೊಡಿರಿ. ಅಂದರೆ ನಮ್ಮಸಹವಾಸದಿಂದ ನಿಮಗೆ ಉಪ

ಯೋಗವಾಗುವುದು ನಮಗಾದರೂ ಬ್ರಾಹ್ಮಣರಜೀವ ಉಳಿಸಿದ ಪುಣ್ಯ ಬರುವುದು ''

ಇದನ್ನು ಕೇಳಿ ಅನಂತಮಿಶ್ರನ ಮನಸ್ಸು ಸಂಶಯಗೊಂಡಿತು. ತನ್ನಲ್ಲಿರುವ ಮೊಹರು, ರತ್ನದಹಾರ ಮೊದಲಾದದ್ದನ್ನು ಅವರ ಕೈಯ್ಯಲ್ಲಿ ಕೊಡಬೇಕೆಂದೆಣಿಸಿದನು ಆದರೆ ಪ್ರವಾಸದ ಗುರ್ತು ಇವರೇ ಕಳ್ಳರಿರ ಬಾರದೇಕೆ? ಈ ವಿಚಾರವು ಅವನ ಮನಸ್ಸಿನಲ್ಲಿ ಬಂದೊಡನೆಯೆ ಅವನ ಮುಖಲಕ್ಷಣವು ಬದಲಾಯಿತು ಮಿಶ್ರದೇವನ ಈ ಸ್ಥಿತಿಯನ್ನು ಕಂಡು ಇವನಲ್ಲಿ ಏನಾದರೂ ಇರಬಹುದೆಂದು ಆ ರಜಪೂತರು ನಿಶ್ಚಯಿಸಿದರು. ಕೂಡಲೆ ಒಬ್ಬನು ಅನಂತಮಿಶ್ರನ ಹಿಂದೆ ಹೋಗಿ ಆತನನ್ನು ನಲಕ್ಕೆ ಕೆಡವಿ ಎದೆಯಮೇಲೆ ಕುಳಿತನು. ಮಿಶ್ರದೇವನು ಅವನಿಂದ ಬಿಡಿಸಿಕೊಳ್ಳುವು ದಕ್ಕೆ ತನ್ನಿಂದಾದಷ್ಟು ಪ್ರಯತ್ನಮಾಡಿದರೂ ಅವನ ಶಕ್ತಿಯು ಕಳ್ಳನ ಮೇಲೆ ನಡೆಯಲಿಲ್ಲ. ಕಳ್ಳನು ಕುತ್ತಿಗೆಯನ್ನು ಅವುಕಿ ಹಿಡಿದುಕೊಂ ಡನು. ಬೇರೊಬ್ಬನು ಅನಂತಮಿಶ್ರನ ಬೊಕ್ಕಣದಲ್ಲಿ ಕೈಹಾಕಿ ವಿಕ್ರಮ ಸಿಂಹನು ರಾಜಸಿಂಹನಿಗೆ ಕೊಟ್ಟ ಪತ್ರ, ಚಂಚಲಕುಮಾರಿಯ ಪತ್ರ ಮುತ್ತಿನಹಾರ, ಐದು ಮೊಹರು ಇಷ್ಟನ್ನು ತಕ್ಕೊಂಡು ತನ್ನ ಸ್ನೇಹಿತರ ಕಡೆಗೆ ತಿರುಗಿ, " ನಡೆಯಿರಿ, ಆಗಬೇಕಾದ ಕೆಲಸವಾಯಿತು. ಇವನಲ್ಲಿ ಏನೂ ಉಳಿಯಲಿಲ್ಲ. ಆದರೆ ಇವನನ್ನು ಹಾಗೇ ಬಿಡದೆ ಒಂದು ಗಿಡದ ಬೊಡ್ಡಿಗೆ ಕಟ್ಟಿಹಾಕಿ ಹೋಗುವುದು ಯೋಗ್ಯವಾದದ್ದು'' ಮಿಶ್ರದೇವ ನನ್ನು ಕಟ್ಟಿಆಯಿತು. ಎರಡೂ ಪರ್ವತಗಳ ನಡುವಿನ ಬಿಂಡಿಯ ಮಾರ್ಗ ದಿಂದ ಕಳ್ಳರು ಹೋದರು. ಪರ್ವತದ ಶಿಖರದಮೇಲಿರುವ ಒಬ್ಬ ಕುದು ರೆಯ ಸವಾರನು ಇದೆಲ್ಲವನ್ನು ನೋಡುತ್ತಿದ್ದನು. ನೋಡುತ್ತಿದ್ದಹಾಗೆ ತನ್ನ ಕುದುರೆಯನ್ನು ಆದಷ್ಟು ವೇಗದಿಂದ ಒಡಿಸಿಕೊಂಡು ಬಂದನು.

ಇತ್ತ ಆ ಕಳ್ಳರು ಸ್ವಲ್ಪ ದೂರಹೋದಮೇಲೆ, ದಟ್ಟವಾದ ಗಿಡ ಗಳ ಗುಂಪನ್ನು ಹೊಕ್ಕರು. ಅಲ್ಲಿಗೆ ಹೋದೊಡನೆಯೆ ಮೊದಲೊಬ್ಬನು ಹುಕ್ಕಾವನ್ನು ಸಿದ್ಧಗೊಳಿಸಿದನು. ಬೇರೊಬ್ಬನು ಅಡಿಗೆ ಮಾಡಲಾರಂಭಿಸಿ

ದನು ಮೂರನೆಯವನು ಕಳವಿನ ಒಡವೆಗಳನ್ನು ಪರೀಕ್ಷಿಸಹತ್ತಿದನು. ಆಮೇಲೆ ನಾಲ್ವರು ಒಂದೇ ಸ್ಥಳದಲ್ಲಿ ಒಟ್ಟಾದರು. ಐದು ಮೊಹರುಗಳಲ್ಲಿ ಮೊದಲು ತಲೆಗೆ ಒಂದೊಂದರಂತೆ ತೆಗೆದುಕೊಂಡರು. ಆಮೇಲೆ ಉಳಿದದ್ದೊಂದನ್ನು ನಾಲ್ಕು ತುಂಡುಮಾಡಿ ತಕ್ಕೊಂಡರು. ಹಾರವನ್ನು ಹರಿಯುವದು ಪಾಪದ ಕರ್ಮವೆಂದೂ ಮುತ್ತುಗಳೊಂದೊಂದನ್ನು ಅಗಲಿಸ ಕೂಡದೆಂದೂ ಒಟ್ಟಾಗಿ ಮಾರುವಂತೆ ನಿಶ್ಚಯಿಸಿ ಅದನ್ನು ಜಯಸಿಂಹನ ಕಡೆಗೆ ಇಟ್ಟು ಬಿಟ್ಟರು ಎರಡು ಪತ್ರಗಳು ಉಳಿದಿದ್ದವು. ಅವುಗಳ ವ್ಯವಸ್ಥೆಯನ್ನು ಯಾವರೀತಿಯಿಂದ ಮಾಡಬೇಕೆಂಬ ಚಿಂತೆಯು ಬಲವತ್ತರವಾಯಿತು "ಜಯಸಿಂಹ, ಈ ಪತ್ರವನ್ನು ಸುಟ್ಟುಹಾಕಿಬಿಡು," ಎಂದು ತಲೆನಾಯಿಕನು ಹೇಳಿದನು ಜಯಸಿಂಹನು ಯಾರ ಹೆಸರಿನ ಕಾಗದಗಳೆಂದು ನೋಡಹತ್ತಿದನು. ಅವರಲ್ಲಿ ಅವನೊಬ್ಬನೆ ಪಂಡಿತನು. ಎರಡೂ ಕಾಗದಗಳನ್ನು ಒಂದಾವರ್ತಿ ಓದಿ ಮುಗಿಸಿದನು. ಅತಿಶಯ ಆನಂದವೆನಿಸಿತು ಸುಡುವದಕ್ಕಿಂತ ಇವುಗಳಿಂದ ವಿಶೇಷ ಲಾಭ ಮಾಡಿಕೊಳ್ಳಬಹುದೆಂದನು

ಲಾಭವೆಂಬ ಶಬ್ದವು ಕಿವಿಗೆ ಬಿದ್ದೊಡನೆಯೆ ಪತ್ರಾಭಿಪ್ರಾಯವನ್ನು ತಿಳಿಯುವ ಉತ್ಸಹವು ಎಲ್ಲರಿಗೂ ಹೆಚ್ಚಾಯಿತು. ಕೇಳುವ ಲವಲವಿಕೆಯು ಹೆಚ್ಚಾಗಿ ಎಲ್ಲರೂ ಆತನ ಸುತ್ತುಮುತ್ತು ನೆರೆದರು ಜಯಸಿಂಹನು ಚಂಚಲ ಕುಮಾರಿಯ ಎಲ್ಲ ಸಂಗತಿಯನ್ನು ತಿಳಿಸಿದನು. ಈ ಪತ್ರವನ್ನು ಒಯ್ದು ರಾಣಾನಿಗೆ ಕೊಟ್ಟು ಬಹುಮಾನವನ್ನು ಪಡೆಯಬಹುದೆಂದನು ಅವರ ಮುಖ್ಯಸ್ತನು ಅದನ್ನು ಕೇಳಿ—"ಛಿ, ಮೂರ್ಖಾ ಅದನ್ನು ರಾಣಾನಿಗೆ ಕೊಡುವದರಿಂದ ಪ್ರಯೋಜನವಿಲ್ಲ. ವಿಚಾರಿಸಿ ನೋಡು ನಮ್ಮಕಳವು ಗೊತ್ತಾದರೆ ನಾವೆಲ್ಲರು ಹಾಳಾಗುವೆವು. ಆದ್ದರಿಂದ ಈ ಸಂಗತಿಯನ್ನು ರಾಣಾನಿಗೆ ಹೇಳುವದಕ್ಕಿಂತ ಬಾದಶಹನಿಗೆ ಹೇಳಿದರೆ ಚನ್ನಾಗಿ ಪರಾಮರಿಕೆಯಾಗಬಹುದು, ಇಂಥ ಸಂಗತಿಗಳನ್ನು ಹೇಳಿ ಎಷ್ಟೋ ಜನರು ಬಾದಶಹನಿಂದ ಬಹುಮಾನ ಹೊಂದಿದ್ದಾರೆ. ಮತ್ತು—"

ಮುಂದಿನ ವಾಕ್ಯವು ಪೂರ್ಣವಾಗುವದರೊಳಗಾಗಿ ಆತನ ತಲೆಯು ಕುತ್ತಿಗೆಯಿಂದ ಕಳಚಿ ಕೆಳಗೆಬಿತ್ತು

## ೧೩ನೆಯ ಪ್ರಕರಣ

### ಜಯಸಿಂಹ

ಕಳ್ಳರ ಹಂಚಿಕೆಯನ್ನು ಕಂಡು ಕುದುರೆಯ ಸವಾರನು ಪರ್ವತದ ಶಿಖರದ ಮೇಲೆಯೆ ಸ್ವಲ್ಪ ಹೊತ್ತು ನಿಂತು ಅವರು ಎಲ್ಲಿಗೆ ಹೋಗುತ್ತಾರೆಂಬದನ್ನು ನೋಡಿದನು ಆಮೇಲೆ ಕುದುರೆಯಿಂದಿಳಿದು ಮೆಲ್ಲಮೆಲ್ಲನೆ ಅದರ ಬೆನ್ನ ಮೇಲೆ ಕೈಯಿಂದ ಚಪ್ಪರಿಸುತ್ತ—"ವಿಜಯ, ಇಲ್ಲಿಯೆ ನಿಂತಿರು. ಅತ್ತಿತ್ತ ಹೋಗಬೇಡ. ಈಗ ಬರುತ್ತೇನೆ." ಆತನ ಅಪ್ಪಣೆಯ ಪ್ರಕಾರ ಕುದುರೆಯು ಸ್ತಬ್ಧವಾಗಿ ನಿಂತುಬಿಟ್ಟಿತು. ತನ್ನ ಒಡೆಯನ ಕಡೆಗೆ ಮುಖವನ್ನು ತಿರುಗಿಸಿ ಆತನಿಗೆ ಅನುಮತಿಯನ್ನು ಕೊಟ್ಟಿತು. ಅಲ್ಲಿಂದ ಸವಾರನು ಮಿಶ್ರದೇವನ ಕಟ್ಟು ಬಿಚ್ಚಿದನು. ಬಿಚ್ಚುತ್ತ ಆದದ್ದನ್ನು ಸ್ವಲ್ಪದರಲ್ಲಿಯೆ ಹೇಳೆಂದು ಕೇಳಿದನು ಅದಕ್ಕೆ ಮಿಶ್ರದೇವನು —

"ನನ್ನ ಒಡವೆಗಳನ್ನು ಅಪಹರಿಸಿಕೊಂಡು ಈಗ ಓಡಿಹೋದ ನಾಲ್ಕು ಜನರೊಡನೆ ಉದೇಪುರಕ್ಕೆ ಹೋಗುತ್ತಿದ್ದೆನು. ಅವರ ಗುರ್ತು ನನಗೆ ಇದ್ದಿಲ್ಲ ದಾರಿಯಲ್ಲಿಯೆ ನನಗೆ ಗೆಳೆಯರಾದರು ತಾವು ರಜಪೂತರೆಂದು ಹೇಳಿದರು ರಜಪೂತರು ವಿಶ್ವಾಸಘಾತಕರಲ್ಲೆಂದು ಅವರನ್ನು ಒಡಗೂಡಿದೆನು ಇಲ್ಲಿಯವರೆಗೆ ಬಂದಕೂಡಲೆ ನನ್ನನ್ನು ಹಿಡಿದು ಇದ್ದದ್ದನ್ನೆಲ್ಲ ತೆಗೆದುಕೊಂಡು ಓಡಿಹೋದರು"

"ಒಂದು ಮುತ್ತಿನಹಾರ, ಐದುಮೊಹರು, ಎರಡು ಪತ್ರಗಳು"

"ಒಳ್ಳೇದು, ನೀವು ಇಲ್ಲಿಯೆ ನಿಲ್ಲಿರಿ, ಅವರು ಹೋದದ್ದನ್ನು ನಾನು ನೋಡಿದೆನು ನಾನು ಈಗ ಬರುತ್ತೇನೆ ಮರಳಿ ಬರುವ ವರೆಗೆ ಎಲ್ಲಿಗೂ ಹೋಗಬೇಡಿರಿ."

"ಆದರೆ ನೀವು ಒಬ್ಬರು, ಅವರು ನಾಲ್ಕುಜನರು"

"ಸ್ವಾಮಿ, ನಾನು ರಜಪೂತನು. ಯಾರೆಂಬದು ನಿಮಗೆ ತಿಳಿದೀತು" ಆ ಸವಾರನು ಪ್ರತಾಪಶಾಲಿಯಾದ ಯೋದ್ಧನಂತಿದ್ದನು ಆತನ ನಡುವಿನಲ್ಲಿದ್ದ ಕತ್ತಿ ಪಿಸ್ತೂಲು, ಕೈಯ್ಯಲ್ಲಿ ಮೊನೆಯಾದ ಭಾಲೆ ಇವುಗಳನ್ನು ನೋಡಿ ಅನಂತ ಮಿಶ್ರನು ಸ್ತಬ್ಧನಾದನು

ಸವಾರನು ಕಳ್ಳರು ಹೋದ ಮಾರ್ಗದಿಂದ ಹೊರಟು ಹೋದನು. ಗಿಡಗಳ ಗುಂಪಿನಲ್ಲಿ ದಾರಿ ಗೊತ್ತಾಗಲಿಲ್ಲ. ಪುನಃ ಶಿಖರದ ಮೇಲೇರಿದನು. ಕಳ್ಳರು ಅಡ್ಡಡ್ಡಾಗಿ ಹೋಗುವದು ಕಂಡುಬಂತು ಅವರು ಎಲ್ಲಿಯ ವರೆಗೆ ಹೋಗುತ್ತಾರೊ ನೋಡಬೇಕೆಂದು ಅಲ್ಲಿ ನಿಂತನು. ಕಡೆಗೆ ಒಂದು ಕಂಟಿಯ ಬಳಿಗೆ ಅವರು ಕುಳಿತಂತೆ ಕಂಡಿತು. ಅದನ್ನು ಗುರ್ತಿಟ್ಟುಕೊಂಡು ಮೆಲ್ಲಮೆಲ್ಲನೆ ಅಲ್ಲಿಗೆ ಬಂದನು. ಆ ಪೊದೆಯ ಸಮೀಪಕ್ಕೆ ಬಂದಕೂಡಲೆ ಅವರು ಮಾತಾಡುವಂತೆ ಕೇಳಿಸಿತು

ಈವರೆಗೆ ಬಂದಮೇಲೆ ಅವರು ನಾಲ್ವರು, ನಾನು ಒಬ್ಬನೆಂಬ ವಿಚಾರವು ಅವನಿಗೆ ಉಂಟಾಯಿತು. ಎಂಥ ಪ್ರಸಂಗವು ಬರುವದೋ? ಒಳಗೆ ಹೋಗುವದು ಸಂಕಟದ ಕೆಲಸ. ಈ ರೀತಿ ಸ್ವಲ್ಪ ಹೊತ್ತು ಚಿಂತಿಸಿ ಕಡೆಗೆ "ರಜಪೂತನಿಗೆ ಸಾವಿನಭಯವೆ? ಮರಣದ ಅಂಜಿಕೆಯಿಂದ ರಜಪೂತನು ಕೈಕೊಂಡ ಕೆಲಸವನ್ನು ಕೊನೆಗಾಣಿಸದಿರುವದೆ?" ಎಂದಂದುಕೊಂಡು ಮೆಲ್ಲಮೆಲ್ಲನೆ ಆ ಕಂಟಿಯ ಬಾಗಿಲಿಗೆ ಬಂದನು. ಒಂದುವೇಳೆ ಅವರು ಕಳ್ಳರಲ್ಲದಿದ್ದರೆ ಅನ್ಯಾಯವಾಗುವದೆಂದು ಮೊದಲು ಕಿವಿಕೊಟ್ಟು ಅವರ ಮಾತು ಕೇಳಹತ್ತಿದನು. ಕಳವಿನ ಒಡವೆಗಳ ಪಾಲು ನಡೆದಿತ್ತು. ಅವರೇ ಕಳ್ಳರೆಂದು ನಿಶ್ಚಯವಾಯಿತು. ತಟ್ಟನೆ ಪೊದೆಯನ್ನು

ಹೊದಲು ಸಪ್ಪಳವಾಗದಂತೆ ಕೈಯೊಳಗಿನ ಭಾಲೆಯನ್ನು ಕಂಟಿಯಲ್ಲಿ ಶಿಕ್ಕಿಸಿದನು. ಒರೆಯೊಳಗಿನ ಕತ್ತಿ ಹಿರಿದು ಬಲಗೈಯಲ್ಲಿ ಹಿಡಿದನು. ಪಿಸ್ತೂಲವನ್ನು ಎಡಗೈಯ್ಯಲ್ಲಿಟ್ಟುಕೊಂಡನು.

ಒಳಗಿನ ಕಳ್ಳರು ಚಂಚಲಕುಮಾರಿಯು ಪತ್ರದಿಂದ ಹಣ ದೊರಕಿಸುವ ವಿಚಾರದಲ್ಲಿದ್ದರು ಅವರ ಬೆನ್ನು ಬಾಗಿಲದ ಕಡೆಗೆ ಇದ್ದದರಿಂದ ಸವಾರನ ಆಗಮನವು ಅವರಿಗೆ ತಿಳಿಯಲಿಲ್ಲ ಅವರ ಮುಖ್ಯಸ್ಥನೆ ಮುಂದುಗಡೆಯಲ್ಲಿದ್ದನು ರಜಪೂತವೀರನು ತನ್ನ ಕತ್ತಿಯಿಂದ ಒಂದೇ ಹೊಡತಕ್ಕೆ ಆತನ ರುಂಡವನ್ನು ಕತ್ತರಿಸಿದನು ಸಂಗಡಲೆ ಆತನ ಸಮೀಪದಲ್ಲಿದ್ದವನನ್ನು ಮತ್ತೊಂದು ಹೊಡೆತದಿಂದ ಮೂರ್ಛೆಗೊಳಿಸಿದನು ಇನ್ನೂ ಇಬ್ಬರು ಉಳಿದರು ಅವರೊಳಗಿನವನೊಬ್ಬನು ಪೊದೆಯ ಒಳಮಗ್ಗಲಿಗಿದ್ದನು. ಆತನು ದೊಡ್ಡದೊಂದು ಕಲ್ಲನ್ನೆತ್ತಿಕೊಂಡು, ರಜಪೂತವೀರನಮೇಲೆ ಒಗೆಯುವವನಿದ್ದನು ಅಷ್ಟರಲ್ಲಿ ಪಿಸ್ತೂಲಿನ ಗುಂಡು ಆತನ ಎದೆಯಲ್ಲಿ ಸೇರಿತು. ಉಳಿದವನೊಬ್ಬನು ಬಾಗಿಲದಿಂದ ಹೊರಗೆ ಓಡುವವನಿದ್ದನು ರಜಪೂತವೀರನು ಅವನನ್ನು ಹಿಡಿಯುವದಕ್ಕಾಗಿ ಹಿಂದಿಂದೆ ಹೋದನು ಜಯಸಿಂಹನು ಓಡುವಾಗ ಪೊದೆಯಲ್ಲಿ ಸಿಕ್ಕಿಸಿಟ್ಟ ಭಾಲೆಯು ಧಕ್ಕೆತಗಲಿ ಕೆಳಗೆ ಬಿತ್ತು ಸಂಗಡಲೆ ಅವನು ಅದನ್ನೆತ್ತಿಕೊಂಡು ಎದುರಾಗಿ ನಿಂತನು ಜಯಸಿಂಹನಿಗೆ ರಜಪೂತವೀರನ ಗುರ್ತು ಹತ್ತಿತು ಆಮೇಲೆ ಆತನು "ಸ್ವಾಮಿ, ತಾವು ಯಾರೆಂಬದು ಗೊತ್ತಾಯಿತು ಸ್ವಲ್ಪ ಶಾಂತರಾಗಿರಿ, ಇಲ್ಲದಿದ್ದರೆ ಇದೆ ಭಾಲೆಯಿಂದ ನಿಮ್ಮನ್ನು .... ''ಇಷ್ಟಕ್ಕೆ ರಜಪೂತವೀರನು ನಕ್ಕು "ನೀನು ಭಾಲೆಯನ್ನು ಎಸೆಯುವಿ ಆದರೆ ನಾನು ಬಲಗೈಯಲ್ಲಿ ಹಿಡಿಯುವ ಭಾಲೆಯನ್ನು ಎಡಗೈಯಿಂದ ಹಿಡಿಯಬೇಕಾಗುವದು'' ಎಂದು ಹೇಳುತ್ತ ತನ್ನ ಎಡಗೈಯ್ಯಲ್ಲಿದ್ದ ತೆರವಾದ ಪಿಸ್ತೂಲಿನಿಂದ ಆತನ ಕೈಗೆ ಹೊಡೆದನು ಭಾಲೆಯು ಕೆಳಗೆ ಬಿತ್ತು, ರಜಪೂತವೀರನು ಅದನ್ನು ಒಗ್ಗಿ ಎತ್ತಿಕೊಂಡನು ಆದರಿಂದಲೆ ಜಯಸಿಂಹನನ್ನು ಹೊಡೆಯುವದಕ್ಕೆ ಮುಂದುವರಿದನು

ಇನ್ನುಮೇಲೆ ತಾನು ನಿಶ್ಚಯವಾಗಿ ಸಾಯುತ್ತೇನೆಂದು ಜಯಸಿಂಹನು —"ಮಹಾರಾಜಾಧಿರಾಜರೆ ನನಗೆ ಜೀವದಾನ ಕೊಡಿರಿ. ಶರಣು ಬಂದಿದ್ದೇನೆ-" ರಜಪೂತವೀರನು ಎತ್ತಿದ ಭಾಲೆಯನ್ನು ಕೆಳಗಿಟ್ಟು "ಮರಣಕ್ಕೆ ಹೆದರುವದೇಕೆ?" ಎಂದು ಕೇಳಿದನು

ಜಯಸಿಂಹನು- "ಮಹಾರಾಜ, ನಿಮಗೆ ಹೇಳುವದೇನು? ಇನ್ನೂ ನಾನು ಚಿಕ್ಕವನು ಜಗತ್ತಿನಲ್ಲಿ ಕೀರ್ತಿಯನ್ನು ದೊರಕಿಸಿ ಸಾಯಬೇಕೆಂದಿರುವೆನು ಕಳ್ಳರ ಗೆಳೆತನದಿಂದ ಕಳ್ಳನಾಗಿರುತ್ತೇನೆ ಅಲ್ಲದೆ ನಾನು ರಜಪೂತ ಕುಲೋತ್ಪನ್ನನು ದುರ್ಜನ ಸಹವಾಸದಿಂದ ಸಜ್ಜನರೂ ಕೆಟ್ಟು ಹೋಗುವದಕ್ಕೆ ನಾನೇ ಸಾಕ್ಷಿಯು. ಸ್ವಾಮಿಾ ಈ ನೀಚಕೆಲಸಕ್ಕೆ ನನ್ನ ಸ್ವಂತ ಬುದ್ಧಿಯಿಂದ ಉದ್ಯುಕ್ತನಾದವನಲ್ಲ, ಜನರ ಜುಲುಮೆಯಿಂದ ಈ ಉದ್ಯೋಗವನ್ನು ಕೈಕೊಳ್ಳ ಬೇಕಾಯಿತು ಈ ಹೊತ್ತಿನಿಂದ, ಈ ಕ್ಷಣದಿಂದ, ಇನ್ನುಮೇಲೆ ಮುಂದೆ ಎಂದೂ ಕಳವು ಮಾಡುವದಿಲ್ಲೆಂದು ತಮ್ಮ ಪಾದಸಾಕ್ಷಿಯಾಗಿ ಹೇಳುತ್ತೇನೆ. ಈ ಶರೀರದಲ್ಲಿ ಪ್ರಾಣವಿರುವವರೆಗೂ ತಮ್ಮ ದಾಸ್ಯವನ್ನು ಸ್ವೀಕರಿಸುವೆನು. ತಾವೀಗ ಕೊಡುವ ಪ್ರಾಣದಾನದ ಪ್ರತೀಕಾರವನ್ನು ಒಂದಿಲ್ಲೊಂದು ದಿವಸ ತೀರಿಸುವೆನು."

"ನನ್ನನ್ನು ಗುರ್ತಿಸುವಿಯಾ?"

"ಮಹಾರಾಣಾ ರಾಜಸಿಂಹನನ್ನು ಯಾರು ಗುರ್ತಿಸಲಿಕ್ಕಿಲ್ಲ?"

ರಾಜಸಿಂಹ—"ಹೋಗು ನಿನಗೆ ಜೀವದಾನ ಕೊಟ್ಟಿರುತ್ತೇನೆ. ಆದರೆ ಬ್ರಾಹ್ಮಣನನ್ನು ಕಷ್ಟಪಡಿಸಿದ್ದಕ್ಕೆ ಏನಾದರೂ ಅವಶ್ಯ ಶಿಕ್ಷೆಯಾಗಬೇಕು ನಿನ್ನನ್ನು ಶಿಕ್ಷಿಸದೆ ಹೋದರ ನಾನು ನನ್ನ ರಾಜಧರ್ಮಕ್ಕೆ ತಪ್ಪಿದಂತಾಗುವದು—" ಜಯಸಿಂಹ— "ಮಹಾರಾಜಾಧಿರಾಜಾ, ಈ ಪಾಪಕರ್ಮದಲ್ಲಿ ನಾನು ಈಗೀಗ ಪ್ರವೇಶಿಸಿರುತ್ತೇನೆ ಆದ್ದರಿಂದ ನನಗೆ ಬಹಳ ಸ್ವಲ್ಪ ಶಿಕ್ಷೆಯಾಗಬೇಕು ಅದೇಕೆ? ತಮ್ಮಸಮಕ್ಷವಾಗಿ ನಾನು ಶಿಕ್ಷೆಯನ್ನು ಅನುಭೋಗಿಸುವೆನು—" ಎಂದು ತನ್ನ ಟೊಂಕ

ದೊಳಗಿನ ಸಂಣ ಕಠಾರಿಯನ್ನು ತಗೆದು ಎಡಗೈತರ್ಜನೀ ಬೆರಳನ್ನು ಹುಡುಗರು ಲೆಕ್ಕಣಿಕೆಯನ್ನು ಕೊಯ್ದಂತೆ ಕೊಯ್ಯ ತೊಡಗಿದನು ಎಲಬು ತುಂಡಾಗಲಿಲ್ಲ. ಮಾಂಸವು ಕೊಯ್ದೊಗಿತ್ತು. ಆಮೇಲೆ ಜಯಸಿಂಹನು ಬೆರಳನ್ನು ನೆಲದ ಮೇಲಿಟ್ಟು ಅದರ ಮೇಲೆ ಕಠಾರಿಯನ್ನು ಇಟ್ಟು ಹಲ್ಲಿನಿಂದ ಘಟ್ಟಿಯಾಗಿ ಹಿಡಿದನು ಬಲಗೈಯ್ಯಿಂದ ಒಂದು ಕಲ್ಲನ್ನು ತಕ್ಕೊಂಡು ಕಠಾರಿಯ ಮೇಲೆ ಶಕ್ತಿಯಿಂದ ಜಜ್ಜಿದನು. ಬೆರಳು ತುಂಡಾಯಿತು, ಆಮೇಲೆ ಜಯಸಿಂಹನು, ಸ್ವಾಮಿ ಈ ಅತ್ಯಲ್ಪ ಶಿಕ್ಷೆಯಿಂದ ಸಮಾಧಾನಗೊಳ್ಳಿರಿ— '' ಎಂದನು

ಈ ಎಲ್ಲ ಸ್ಥಿತಿಯನ್ನು ನೋಡಿ ರಾಜಸಿಂಹನು ಚಕಿತನಾದನು. ಬೆರಳನ್ನು ಕತ್ತರಿಸುವಾಗಲೂ ಕತ್ತರಿಸಿದ ಮೇಲೆಯೂ ಜಯಸಿಂಹನ ಮುಖದ ಮೇಲೆ ಸ್ವಲ್ಪವೂ ದುಃಖದ ಕಳೆಯು ಕಂಡುಬರಲಿಲ್ಲ

"ಸಾಕು, ಇಷ್ಟುಶಿಕ್ಷೆಸಾಕು. ನಿನ್ನ ಹೆಸರೇನು? ''

"ಸ್ವಾಮಿಾ ಈ ಅಧಮಾಧಮನಿಗೆ ಜಯಸಿಂಹನೆನ್ನುವರು. ನಾನು ರಜಪೂತ ಕುಲಕಲಂಕಿಯು ''

"ಜಯಸಿಂಹ, ಈ ಹೊತ್ತಿನಿಂದ ನಿನ್ನನ್ನು ನೌಕರಿಗೆ ಇಟ್ಟುಕೊಂಡಿರುತ್ತೇನೆ, ಕುದುರೆ ಸವಾರರ ಮೇಲೆ ನೇಮಿಸಿರುತ್ತೇನೆ, ನನ್ನೊಡನೆ ನಡೆ. '

ಇದನ್ನು ಕೇಳಿದೊಡನೆ ಜಯಸಿಂಹನು ಮಹಾರಾಣಾನ ಪಾದಧೂಳಿಯನ್ನು ತೆಗೆದು ತಲೆಗೆ ಹಚ್ಚಿಕೊಂಡನು. ರಾಣಾನಿಗೆ ಅಲ್ಲಿ ನಿಲ್ಲಲಿಕ್ಕೆ ಹೇಳಿ, ತಾನು ಹೊದರಿನಲ್ಲಿ ಹೊಕ್ಕು, ಬ್ರಾಹ್ಮಣನಲ್ಲಿ ಅಪಹರಿಸಿದ ಮುತ್ತಿನಹಾರ, ಮೊಹರು, ಎರಡು ಪತ್ರ ಇವೆಲ್ಲವನ್ನು ತಂದು ರಾಜಸಿಂಹನ ಎದುರಿಗೆ ಇಟ್ಟು— "ಸ್ವಾಮಿ, ಬ್ರಾಹ್ಮಣನಿಂದ ಕದ್ದ ಒಡವೆಗಳನ್ನು ತಮ್ಮ ಪಾದದಲ್ಲಿರಿಸಿದ್ದೇನೆ. ಸೇವಕನು ಈ ಪತ್ರಗಳನ್ನು ಓದಿರುತ್ತಾನೆ. ಮಹಾರಾಜರು ಅದಕ್ಕೆ ಕ್ಷಮಿಸಬೇಕು. ''

ರಾಣಾನು ಆ ಪತ್ರಗಳನ್ನು ಕೈಯ್ಯಲ್ಲಿ ತಕ್ಕೊಂಡನು ಪತ್ರಗಳ ಮೇಲೆ ತನ್ನ ಹೆಸರು ಬರೆದಿತ್ತು ಅವುಗಳನ್ನು ಅಲ್ಲಿಯು ಓದದೆ-" ಈಗ ಈ ಪತ್ರಗಳನ್ನು ಓದಲಿಕ್ಕೆ ವೇಳೆಯಿಲ್ಲ ನಿನಗೆ ದಾರಿ ಗೊತ್ತಿರಬೇಕು. ಮೊದಲು ದಾರಿಗೆ ನಡೆ " ಎಂದನು

ಜಯಸಿಂಹನು ದಾರಿಯನ್ನು ತೋರಿಸುತ್ತ ಮುಂದಾದನು. ಜಯಸಿಂಹನು ತನ್ನ ಬೆರಳಿನ ಕಡೆಗೆ ಒಮ್ಮೆಯೂ ನೋಡಲೊಲ್ಲನು. ಅದರ ಬಗ್ಗೆ ವೇದನೆಯನ್ನೂ ತೋರಿಸಲೊಲ್ಲನು ಒಂದೇ ಸವನೆ ನಡೆದಿರುತ್ತಾನೆ ಇದನ್ನು ಕಂಡು ರಾಣಾನಿಗೆ ಒಂದುಪ್ರಕಾರದ ಆನಂದವುಂಟಾಯಿತು.

ಸ್ವಲ್ಪ ಹೊತ್ತಿನಮೇಲೆ ಅವರು ಆಪರ್ವತದಲ್ಲಿ ಒಂದು ರಮಣೀಯವಾದ ಸ್ಥಳಕ್ಕೆ ಮುಟ್ಟಿದರು. ಅಲ್ಲಿ ಒಂದು ಕಲ್ಲಿನಮೇಲೆ ಕುಳಿತು ರಾಣಾನು ಪತ್ರವನ್ನು ಓದಹತ್ತಿದನು

## ೧೪ ನೆಯ ಪ್ರಕರಣ

### ಪತ್ರವಾಚನ

ಮೊದಲು ವಿಕ್ರಮಸಿಂಹನ ಪತ್ರವು ಕೈಯಲ್ಲಿ ಬಂತು ಅದನ್ನು ಓದಿ ಹರಿದು ಚಲ್ಲಿದನು. ಬ್ರಾಹ್ಮಣನಿಗ ಏನಾದರೂ ಒಹುಮಾನವನ್ನು ಕೊಟ್ಟರೆ ತೀರಿತೆಂದೆಂದುಕೊಂಡನು ಆಮೇಲೆ ಚಂಚಲಕುಮಾರಿಯ ಪತ್ರವನ್ನು ಓದಲಾರಂಭಿಸಿದನು.

"ಮಹಾರಾಜರೇ, ತಾವು ರಜಪೂತ ಕುಲದೀಪಕರು ; ಹಿಂದೂಗಳಿಗೆ ಶಿರೋಭೂಷಣರು. ನಾನು ತಮಗ ಗುರ್ತಿಲ್ಲದ ಅಜ್ಞಳಾದ ಅಬಲೆಯು. ನಾನು ನಿಶ್ಚಯವಾದ ಸಂಕಟದಲ್ಲಿ ಬೀಳದಿದ್ದರೆ ಈ ಪತ್ರವನ್ನು

ಬರೆಯುತ್ತಿದ್ದಿಲ್ಲ ಅಪಾರಸಂಕಟಸಾಗರದಲ್ಲಿ ಮುಳುಗಿರುತ್ತೇನಾದ್ದರಿಂದ ಇದನ್ನು ಬರೆದಿರುತ್ತೇನೆ. ಅದಕ್ಕಾಗಿ ಕ್ಷಮೆ ಇರಲಿ

ಈ ಪತ್ರವನ್ನು ತೆಗೆದುಕೊಂಡು ಒಂದವರು ನಮ್ಮ ಕುಲಗುರುಗಳು ಅವರಿಂದ ತಮಗೆ ನನ್ನ ಕುಲದ ಸಂಪೂರ್ಣ ಮಾಹಿತಿಯಾಗುವದು. ಕೌಮಾರ್ಯಾವಸ್ಥೆಯಲ್ಲಿ ನಾನು ತಮಗೆ ಈ ಪತ್ರವನ್ನು ಬರೆದು ನನ್ನ ಕುಲಶೀಲದ ಮರ್ಯಾದೆಯನ್ನು ಉಲ್ಲಂಘಿಸುತ್ತೇನೆ ನನ್ನ ಸದ್ಯದಸ್ಥಿತಿಯ ಕಡೆಗೆ ಲಕ್ಷ್ಯಕೊಟ್ಟರೆ ಹೀಗ ಮಾಡಿದ ಹೊರ್ತು ಉಪಾಯವಿಲ್ಲೆಂಬದು ಗೊತ್ತಾಗುವದು. ಅದಕ್ಕಂತೆ, ಈ ಪತ್ರವನ್ನು ಬರೆಯುವಷ್ಟು ಸಹಾಸಮಾಡಿರುತ್ತೇನೆ

ರಾಜಾಧಿರಾಜರೇ, ತಾವು ರಜಪೂತ ಕುಲತಿಲಕರು ಆದ್ದರಿಂದಲೇ ತಮಗೆ ವಿಜ್ಞಾಪಿಸುತ್ತೇನೆ ದುಷ್ಟನೂ ಪಾಪಿಯೂ ಆದ ಔರಂಗಜೇಬನು ನನ್ನನ್ನು ಲಗ್ನವಾಗಬೇಕೆಂದು ನಿಶ್ಚಯಿಸಿರುವನು ನನ್ನನ್ನು ದಿಲ್ಲಿಗೆ ಒಯ್ಯುವದಕ್ಕೆ ಆತನ ಸೇನೆಯು ಬಂದಿರುವದು ನಾನು ಕ್ಷತ್ರಿಯ ಅಬಲೆ ಸೋಳಂಖೀವಂಶದ ಕುಮಾರಿಯು. ರಾಜಹಂಸಿಯು ಎಂದಾದರೂ ಬಕಪಕ್ಷಿಯ ಸಹಚಾರಣಿಯಾಗಲೊಪ್ಪೀತೇ ?

ನಾನು ಆ ತುರುಕನನ್ನು ಲಗ್ನಮಾಡಿಕೊಳ್ಳುವದನ್ನು ತಾವು ನೋಡಬೇಕೆ? ಆ ದುರಾತ್ಮನಾದ ಯವನನ ದಾಸಿಯಾಗುವದಕ್ಕಿಂತ ಮರಣವು ಒಳ್ಳೇದಲ್ಲವೆ? ನಾನು ಅದನ್ನೇ ನಿಶ್ಚಯಿಸಿರುವನು

ಭಟ್ಟಂಗಿಗಳ ಬಾಯಿಂದ ತಮ್ಮ ಕುಲದೊಳಗಿನ ವೀರಪುರುಷರ ಪರಾಕ್ರಮವನ್ನು ಕೇಳಿರುವೆನು ತಮ್ಮ ಕೀರ್ತಿಯಾದರೂ ದಿಗಂತರದವರೆಗೆ ಹಬ್ಬಿರುವದು.

ನನ್ನ ತಂದೆಯು ಬಗ್ಗೆ ಮಾತಾಡುವಂತಿಲ್ಲ ರಜಪೂತ ಬಾಲಕಿಯನ್ನು ಸಂರಕ್ಷಣೆ ಮಾಡಲಿಕ್ಕೆ ತಾವು ಒಬ್ಬರೆ ನರಪುಂಗವರು ಉಳಿದ ಎಲ್ಲ ರಜಪೂತರು ಮೊಗಲರ ದಾಸಾನುದಾಸರಾಗಿರುವರು ಅವರೆಲ್ಲರು ಬಾದಶಹನ ದರ್ಪಕ್ಕ ನಡುಗುತ್ತಿರುವರು ರಜಪೂತ ಬಾಲಿಕೆಯ

ಅಭಿಮಾನಕ್ಕಾಗಿ ಔರಂಗಜೇಬನೊಡನೆ ಕಾದುವದಕ್ಕೆ ಬೇರೆ ಸಮರ್ಥರು ಯಾರು? ನಾನು ನಿಮ್ಮನ್ನು ಮೊರೆ ಹೊಕ್ಕಿರುತ್ತೇನೆ ನನ್ನನ್ನು ರಕ್ಷಿಸುವದಿಲ್ಲವೆ?

ಮಹಾರಾಜರೇ, ಮಹಾರಾಣಾ ಪ್ರತಾಪಸಿಂಹನು ಅಕಬರನನ್ನು ಗಾದಿಯ ಮೇಲಿಂದ ಉರುಳಾಡಿಸಿದನು, ರಜಪೂತಸ್ಥಾನದಲ್ಲಿ ಅಕಬರ ಬಾದಶಹನನ್ನು ಕಾಲಿಕ್ಕಗೊಡಲಿಲ್ಲ, ತಾವು ಅದೇ ಸಿಂಹಾಸನದ ಮೇಲೆ ವಿರಾಜಮಾನರಾಗಿರುವಿರಿ ಆ ವೀರಶ್ರೇಷ್ಠರಾದ ಸಂಗ್ರಾಮ ಹಾಗೂ ಪ್ರತಾಪರ ವಂಶದವರು. ಅವರಗಿಂತಲೂ ತಮ್ಮ ಬಲವು ಕಡಿಮೆಯಾದದ್ದಲ್ಲ ತಮ್ಮ ಎದುರಿಗೆ ಆ ತುರುಕನು ಯಾವ ಗಿಡದ ಸೊಪ್ಪು ?

ತಮ್ಮ ಸರ್ವಸ್ವವೆಲ್ಲವು ನಾಶವಾದರೂ ಶರಣಾಗತರನ್ನು ರಕ್ಷಿಸುವದು ರಾಜಧರ್ಮವಲ್ಲವೇನು? ಪ್ರಾಣವನ್ನು ಕಳೆದಾದರು ಸ್ವಜಾತೀಯ ಸ್ತ್ರೀಯನ್ನು ರಕ್ಷಿಸುವವರು ರಜಪೂತರಲ್ಲದೆ ಬೇರೆ ಯಾರು?

ಮತ್ತೊಂದು ಮಾತು ನಾನು ತಿಳಿಸುವದುಳಿದದೆ ಆದರೆ ಅದನ್ನು ಬರೆಯುವದಕ್ಕೆ ನಾಚಿಕೆ ಬರುತ್ತದೆ ಬರೆಯದಹೊರ್ತು ತಿಳಿಸಲಿಕ್ಕಾಗುವಂತಿಲ್ಲ ಈ ಮೊಗಲರ ಕೈಯೊಳಗಿಂದ ನನ್ನನ್ನು ಬಿಡಿಸದ ರಜಪೂತವೀರನನ್ನು ವಿಧಿಪೂರ್ವಕ ಲಗ್ನವಾಗಿ ಆತನ ಧರ್ಮಪತ್ನಿಯಾಗಲು ನಿಶ್ಚಯಿಸಿದ್ದೇನೆ ವೀರಶ್ರೇಷ್ಠರೇ, ಯುದ್ಧಮಾಡಿ ಸ್ತ್ರೀಯರನ್ನು ದೊರಕಿಸುವದು ಕ್ಷತ್ರಿಯರಧರ್ಮವು ಭೀಷ್ಮಾಚಾರ್ಯರು ತಮ್ಮ ವೀರಪ್ರತಾಪದಿಂದ ಕಾಶಿಯಲ್ಲಿ ಕೂಡಿದ ಅನೇಕ ಅರಸುಮಕ್ಕಳುಗಳೆದುರಿಗೆ ರಾಜಕನ್ನೆಯನ್ನ ಸೆಗೆದುಕೊಂಡು ಬಂದರು ರುಕ್ಮಿಣಿಯ ಚರಿತ್ರೆಯು ತಮಗೆ ಗೊತ್ತಿದೆ ಈ ಸಂಕಟದೊಳಗಿಂದ ಪಾರುಮಾಡುವ ನರಪುಂಗವರು ತಾವು ಒಬ್ಬರೆ ಎಂದು ತಮ್ಮನ್ನು ಮನಸಿನಿಂದ ಈಗಲೆ ವರಿಸಿರುತ್ತೇನೆ. ಅದಕ್ಕೋಸ್ಕರ ಉಪಾಧ್ಯಾಯನೊಡನೆ ಒಂದು ಮುತ್ತಿನ ಹಾರವನ್ನು ಕಳಿಸಿರುತ್ತೇನೆ. ಅದನ್ನು ಸ್ವೀಕರಿಸಬೇಕು ರಾಜಧರ್ಮವನ್ನು ಪಾಲಿಸುವದು ತಮ್ಮ ಧರ್ಮವು. ಒಂದುವೇಳೆ ದಿಲ್ಲಿಗೆಹೋಗುವದಾದರೆ, ಮಾರ್ಗದಲ್ಲಿ ವಿಷ ತೆಗೆದುಕೊಂಡು ಸಾಯುತ್ತೇನೆ.''

ಪತ್ರವನ್ನು ಓದಿದ ಬಳಿಕ ಸ್ವಲ್ಪಹೊತ್ತು ವಿಚಾರದಲ್ಲಿ ಮಗ್ನನಾದನು ಆಮೇಲೆ ಜಯಸಿಂಹನ ಕಡೆಗೆ ತಿರುಗಿದನು ಈ ಪತ್ರವನ್ನು ತಂದ ಉಪಾಧ್ಯಾಯನು ಎಲ್ಲಿರುವನು ನೋಡು ಜಯಸಿಂಹನು ಬಹಳ ಹೊತ್ತಿನವರೆಗೆ ಹುಡುಕಿದನು ಆದರೆ ಉಪಾಧ್ಯಾಯನು ಸಿಗಲಿಲ್ಲ ರಾಣಾನ ವಿಜಯನೆಂಬ ಕುದುರೆಯು ಮಾತ್ರ ಅಲ್ಲಿಯೆ ನಿಂತಿತ್ತು ಉಪಾಧ್ಯಾಯನ ಶೋಧವಾಗಲಿಲ್ಲಾದ್ದರಿಂದ ರಾಣಾನು ವಿಜಯನ ಹತ್ತರ ಬಂದನು. ಇಷ್ಟರಲ್ಲಿ ಅವನ ಸೇವಕರೆಲ್ಲ ಅಲ್ಲಿಗೆ ಬಂದರು

ರಾಜಸಿಂಹನು ಕಳ್ಳರ ಬೆನ್ನುಹತ್ತಿದ ಕೂಡಲೆ ಇವನೂ ಅವರೊಳಗಿನವನೊಬ್ಬನೆಂದು ಮಿತ್ರದೇವನು ಒಂದು ಗುಹೆಯಲ್ಲಿ ಅಡಗಿನಿಂತಿದ್ದನು

ರಾಣಾನ ರಕ್ತಮಯವಾದ ವಸ್ತ್ರಗಳನ್ನು ನೋಡಿ ಏನೋ ಒಂದು ಮಹತ್ಕಾರ್ಯವಾಗಿರಬಹುದೆಂದು ಸೈನಿಕರೆಲ್ಲರು ತಿಳಿದರು ಯಾರಿಗೂ ಕೇಳುವ ಧೈರ್ಯವಾಗಲಿಲ್ಲ ರಾಣಾನು ಕುದುರೆಯಮೇಲೆ ಹತ್ತಿ ಸೈನಿಕರೊಳಗಿನ ತನ್ನ ಪ್ರಧಾನ, ಸೇನಾಪತಿ, ಸರದಾರನನ್ನು ಒತ್ತಟ್ಟಿಗೆ ಕರೆದು ಅವರೊಡನೆ ಏನೇನೋ ಏಕಾಂತಮಾತಾಡಿದನು ಆಮೇಲೆ ಎಲ್ಲರನ್ನು ಒಂದುಸ್ಥಳದಲ್ಲಿ ಕೂಡಿಸಿ ಹೇಳಿದನು

" ಗೆಳೆಯರೆ, ಹೊತ್ತು ಬಹಳಾಯಿತು ನೀವೆಲ್ಲರು ಹಸಿದಿರುವಿರಿ. ಆದರೆ ಈಹೊತ್ತು ಮನೆಗೆಹೋಗಿ ಊಟಮಾಡುವದು ನಮ್ಮ ದೈವದಲ್ಲಿಲ್ಲ. ನಾವು ಈಹೊತ್ತು ಈ ಪರ್ವತದ ಹಿಂಭಾಗಕ್ಕೆ ಹೋಗಬೇಕಾಗಿದೆ ನಾನೊಂದು ಸಣ್ಣ ಯುದ್ಧೋದ್ಯೋಗವನ್ನು ಕೈಕೊಂಡಿರುತ್ತೇನೆ ಯುದ್ಧಮಾಡಬೇಕೆಂಬ ಬಯಕೆಯುಳ್ಳವೀರರು ನನ್ನೊಡನೆ ಬರಬೇಕು. ಉಳಿದವರು ಉದೇಪುರಕ್ಕೆ ತೆರಳಬೇಕು "

ಈ ಪ್ರಕಾರ ಮಾತಾಡಿ ರಾಣಾನು ಪರ್ವತವನ್ನು ಏರಲಿಕ್ಕೆ ಹತ್ತಿದನು ಆದರೊಡನೆ " ಜಯಮಹಾರಾಣಾಜೀಕಿ ಜಯ " " ಜಯ ಏಕಲಿಂಗಕಿಜಯ" ಎಂದು ಜಯಘೋಷಮಾಡುತ್ತ ನೂರುಜನ ಸವಾರರೆಲ್ಲರು ರಾಣಾನ ಬೆನ್ನುಹತ್ತಿದರು ಪರ್ವತದ ಶಿಖರದ ಮೇಲೆ ಹೋದ

ಕೂಡಲೆ " ಹರಹರಮಹಾದೇವ " ಈ ವಿರೋತ್ಸಾದಕ ಗರ್ಜನೆಯಿಂದ ಪರಸ್ಪರ ಪ್ರೋತ್ಸಾಹನಕೊಡುತ್ತ ಅವರೆಲ್ಲರು ರೂಪನಗರದ ಮಾರ್ಗದ ಕಡೆಗೆ ತಮ್ಮ ಕುದುರೆಗಳನ್ನು ನಡೆಸಿದರು.

# ಹದಿನೈದನೆಯ ಪ್ರಕರಣ.

## ನಿಜಭೃತ್ಯ

ರಾಣಾರಾಜಸಿಂಹನು ಆವೇಶದಿಂದ ಹೊರಟುಹೋದನು. ಜಯಸಿಂಹನ ಸ್ಮರಣೆಯು ಆತನಿಗೆ ಉಳಿಯಲಿಲ್ಲ. ಜಯಸಿಂಹನು ವಿಚಾರದಲ್ಲಿ ಬಿದ್ದನು ರಾಣಾನಸಂಗಡ ಹೋಗುವುದಕ್ಕೆ ಕುದುರೆ ಇದ್ದಿಲ್ಲ. ಈಹೊತ್ತಿನವರೆಗೆ ತನ್ನ ಕಾಲವನ್ನು ಕಳ್ಳತನದಲ್ಲಿ ಕಳೆದಿದ್ದನು ಅದೇ ಕಾಲವನ್ನು ಒಂದು ರಾಜಸಭೆಯಲ್ಲಿ ಕಳೆದಿದ್ದರೆ ಒಬ್ಬ ದೊಡ್ಡ ಮುತ್ಸದ್ದಿಯಾಗುತ್ತಿದ್ದನು

ಆತನು ರಾಣಾನ ಹಿಂದೆ ಕಾಲುನಡಗೆಯಿಂದ ಹೋಗುವದನ್ನು ಗೊತ್ತುಮಾಡಿದನು. ಗೊತ್ತುಮಾಡಿದಂತೆ ಹೊರಟನು ನಡುವೆ ಎಲ್ಲಿಯೂ ವಿಶ್ರಾಂತಿಯನ್ನು ತಕ್ಕೊಳ್ಳಲಿಲ್ಲ. ರಾಣಾನ ಹಾಗೂ ಅವನ ಸೇವಕರ ಹೊರ್ತು ಬೇರೆಯಾವ ವಿಚಾರವೂ ಆತನಿಗೆ ಉಂಟಾಗಲೊಲ್ಲದು. ಸ್ವಾಮಿಕಾರ್ಯವನ್ನು ಉತ್ತಮರೀತಿಯಿಂದ ಮಾಡಿತೀರಿಸಬೇಕೆಂದು ಅವನು ನಿಶ್ಚಯಿಸಿದನು. ಹಸಿವೆ ನೀರಡಿಕೆಗಳ ಪರವೆಯಿಲ್ಲದೆ ರೂಪನಗರದ ಕಡೆಗಿರುವ ಪರ್ವತದ ಮಗ್ಗಲಿಗೆ ಹೋದನು. ಮೊದಲು ರೂಪನಗರಕ್ಕೆ ಹೋಗಿ ಅಲ್ಲಿಯಸ್ಥಿತಿಯನ್ನು ತಿಳಿದು ರಾಣಾನನ್ನು ಕಾಣುವ ಯೋಚನೆ ಮಾಡಿದನು. " ರಾಣಾನು ರೂಪನಗರದ ಕಡೆಗೆ ಬಂದಿರಬೇಕು. ಇದರೊಳಗೆ ಸಂದೇಹವಿಲ್ಲ. ಯಾಕಂದರೆ ಆತನು ರಾಜಕನ್ನೆಯ ಪತ್ರವನ್ನು

ಓದಿ ಸುಮ್ಮನೆ ಕೂಡುವ ವೀರನಲ್ಲ. '' ಹೀಗೆ ಮನಸ್ಸಿನಲ್ಲಿ ನಿಶ್ಚಯಿ
ಜಯಸಿಂಹನು ರೂಪನಗರಕ್ಕೆ ಬಂದನು ಅಲ್ಲಿ ಮೊಗಲರಸೈನ್ಯವು ಎರಡ
ಸಾವಿರವಿತ್ತು. ರಜಪೂತರ ಸೇನೆಯು ತೀರ ಸ್ವಲ್ಪವಿತ್ತು ನಾಳೆಬೆಳಿಗ್ಗೆ
ಮೊಗಲರು ಕನ್ನೆಯನ್ನು ತೆಗೆದುಕೊಂಡು ಹೋಗುವರೆಂಬ ಸುದ್ದಿಯು
ಆತನಿಗೆ ಹತ್ತಿತು.

ಆಮೇಲೆ ಅವನು ದಿಲ್ಲಿಗೆ ಹೋಗುವ ಮಾರ್ಗದಿಂದ ಹೊರಟನು
ಮಾರ್ಗದಲ್ಲಿ ಲಕ್ಷ್ಯಪೂರ್ವಕವಾಗಿ ನಿರೀಕ್ಷಣಮಾಡುತ್ತ ಹೋದನು. ರಜ
ಪೂತ ಸವಾರರು ದಿಲ್ಲಿಯ ಮಾರ್ಗದಮೇಲೆ ಯೋಗ್ಯಸ್ಥಳದಲ್ಲಿ ಹೊಂಚು
ಹಾಕಿಕೊಂಡು ಕುಳಿತಿರಬಹುದೆಂದು ಆತನು ಗೊತ್ತುಮಾಡಿದನು ಮೊದ
ಮೊದಲು ಆತನಿಗೆ ನಿರಾಶೆಯಾಯಿತು ಮುಂದೆ ಹೋದಂತೆ ಮಾರ್ಗದಲ್ಲಿ
ಒಂದು ಇಕ್ಕಟ್ಟಾದ ಪ್ರದೇಶವನ್ನು ಕಂಡನು ಅಲ್ಲಿಮಾರ್ಗವು ತೀರ
ಕಿರಿದಾಗಿತ್ತು. ಎರಡೂ ಬದಿಗೆ ಎತ್ತರವಾದ ಪರ್ವತಗಳು , ಮಧ್ಯದಲ್ಲಿ
ಇಕ್ಕಟ್ಟಾದದಾರಿ; ಬಲಗಡೆಯ ಪರ್ವತವು ಬಹಳಎತ್ತರ, ಅದರಮೇಲೆ
ಹತ್ತುವದು ಯಾರಿಗೂ ಅಸಾಧ್ಯ ಎರಡನೆಯ ಪರ್ವತವು ಅಷ್ಟು ಎತ್ತರ
ವಾಗಿರಲಿಲ್ಲ. ಮತ್ತು ಪಾವಟಿಗೆಗಳ ಹಾಗೆ ಇತ್ತು ಆದರಮೇಲೆ ಏರು
ವದು ಅಷ್ಟುಕಷ್ಟವಲ್ಲ, ಈ ಎಡಗಡೆಯ ಮಗ್ಗಲ ಪರ್ವತದಲ್ಲಿ ಒಂದು
ಸಣ್ಣಖಿಂಡಿ. ಆಖಿಂಡಿಯಿಂದ ಒಂದು ಕಾಲುದಾರಿಯು ಆಚೆಗೆ ಹೋಗು
ವಂತಿತ್ತು. ಆಎರಡು ಪರ್ವತಗಳ ನಡುವಿನ ಇಕ್ಕಟ್ಟಾದ ಮಾರ್ಗವನ್ನು
ನೋಡಿ ರಾಣಾನು ಇರುವದಾದರೆ ಇಲ್ಲಿಯೆ ಇರಬೇಕೆಂದು ನಿಶ್ಚಯಿ
ಸಿದನು.

ಮೊಗಲರ ಸೈನ್ಯವು ಈ ಇಕ್ಕಟ್ಟಿನ ಸ್ಥಳಕ್ಕೆ ಒಂದಕೂಡಲೆ ಪರ್ವ
ತದ ಮೇಲ್ಭಾಗದಿಂದ ರಜಪೂತಸವಾರರು ಅವರ ಮೈಮೇಲೆ ಹರಿದು
ಹೋಗಿ, ಅವರನ್ನು ತುಂಡರಿಸಬಹುದಾಗಿತ್ತು. ಬಲಗಡೆಯ ಮಗ್ಗಲು
ಪರ್ವತದಮೇಲೆ ಹತ್ತುವಂತಿದ್ದಿಲ್ಲ. ಆದರಮೇಲೆ ಕುದುರೆಗಳು ಏರಿ

ಲಿಕ್ಕಿಲ್ಲ ಮತ್ತು ಎಡಗಡೆಯ ಮಗ್ಗಲು ಪರ್ವತದಮೇಲೆ ತಿರುಗಿ ಹೋಗಲಿಕ್ಕೆ ಬರುವಂತಿತ್ತು ರಾಣಾನು ಇಲ್ಲಿ ಇರಬೇಕೆಂದು ತರ್ಕಿಸಿ ಪರ್ವತವನ್ನು ಏರಿದನು ಹೊತ್ತು ಮುಳುಗಲಿಕ್ಕೆ ಬಾದಿತ್ತು.

ಪರ್ವತದಮೇಲೆ ಏರಿದನು. ಯಾರೂ ಎಲ್ಲಿಯೂ ಕಾಣಿಸಲಿಲ್ಲ. ರಾಣಾನನ್ನು ಗೊತ್ತುಹಚ್ಚದೆ ಬಿಡಬಾರದೆಂದು ಮನಸ್ಸಿನಲ್ಲಿ ದೃಢಸಂಕಲ್ಪವನ್ನು ಮಾಡಿದನು ಆದರೆ ರಾಣಾನ ಹೊರ್ತು ಬೇರೆಯವರ ಗುರ್ತು ಇದ್ದಿಲ್ಲ ಯಾವನಾದರೊಬ್ಬ ಸೈನಿಕನು ಮೊಗಲರ ಕಡೆಯವನೆಂದು ನನ್ನನ್ನು ಕೊಲ್ಲಬಾರದೆಂಬ ಸಂಶಯವು ಅವನಿಗೆ ಬಂತು. ಅಲ್ಲಿಯೇ ನಿಂತು "ಮಹಾರಾಣಾಜಿಕಿ-ಜಯ" ಎಂದು ಘಟ್ಟಿಯಾಗಿ ಕೂಗಿದನು

ಜಯಸಿಂಹನ ಬಾಯಿಂದ ಈ ಶಬ್ದವು ಹೊರಹೊರಡುವದರೊಳಗಾಗಿ ಆಯುಧಪಾಣಿಗಳಾದ ನಾಲ್ಕೈದು ರಜಪೂತರು ಗುಪ್ತಸ್ಥಳದಿಂದ ಹೊರಗೆ ಬಂದರು ಕೈಯೊಳಗಿನ ಕತ್ತಿಯಿಂದ ಜಯಸಿಂಹನನ್ನು ಕೊಲ್ಲುವದಕ್ಕೆ ಉದ್ಯುಕ್ತರಾದರು.

ಇಷ್ಟರಲ್ಲಿ ಅವರೊಳಗಿನವನೊಬ್ಬನು—"ಜೋಕೆ, ಅವನನ್ನು ಹೊಡೆಯಬೇಡಿರಿ" ಎಂದು ಹೇಳಿದನು ಜಯಸಿಂಹನು ನೋಡಿದನು. ಅವನು ರಾಣಾರಾಜಸಿಂಹನಾಗಿದ್ದನು. ರಾಣನು ತನ್ನ ಸೈನಿಕರಿಗೆ "ಇವನು ನಮ್ಮೊಳಗಿನವನು, ಇವನನ್ನು ಹೊಡೆಯಬೇಡಿರಿ." ಎಂದು ಹೇಳಿದ ಮೇಲೆ ಎಲ್ಲರಜಪೂತರು ಪುನಃ ತಮ್ಮ ತಮ್ಮ ಸ್ಥಳಗಳಲ್ಲಿ ಗುಪ್ತರಾದರು

ರಾಣಾನು ಜಯಸಿಂಹನನ್ನು ಒಂದು ಗುಪ್ತಸ್ಥಳಕ್ಕೆ ಕರದೊಯ್ದನು. ಅಲ್ಲಿ ತಾನು ಕುಳಿತು ಜಯಸಿಂಹನಿಗೂ ಕೂಡ್ರ ಹೇಳಿದನು. ಆಮೇಲೆ "ನೀನು ಇಲ್ಲಿಗೆ ಹ್ಯಾಗೆ ಬಂದಿ?" ಎಂದು ಕೇಳಿದನು. ಅದಕ್ಕೆ ಜಯಸಿಂಹನು—"ಮಹಾರಾಜ, ಎಲ್ಲ ಸ್ವಾಮಿಯೋ ಅಲ್ಲಿ ಸೇವಕನು.

[illegible]

ರುವಿರಿ. ಇಂಥ ಕಾಲದಲ್ಲಿ ಕೃತಜ್ಞನಾದ ಸೇವಕನು ಸುಮ್ಮನೆ ಕೂಡ್ರು ವದು ನೆಟ್ಟಗಲ್ಲ. ಸ್ವಲ್ಪಾದರೂ ಉಪಯೋಗಕ್ಕೆ ನಾನೂ ಬೀಳಬಹು ದೆಂದು ಇಲ್ಲಿಗೆ ಬಂದಿರುತ್ತೇನೆ, ಮೊಗಲರ ಸೇನೆಯು ಎರಡು ಸಾವಿರ ಉಂಟು. ತಮ್ಮಲ್ಲಿ ಒಂದುನೂರ ಜನರು ಮಾತ್ರ ಇರುವರು ಇದನ್ನು ನೋಡಿ ನಾನು ಸುಮ್ಮನೆ ಹ್ಯಾಗೆ ಕೂಡ್ರಲಿ? ತಾವು ಜೀವದಾನ ಕೊಟ್ಟ ದ್ದನ್ನು ಹ್ಯಾಗೆ ಮರೆಯಲಿ? '' ಎಂದನು.

ಅದಕ್ಕೆ ರಾಣಾನು—'' ನಾವಿಲ್ಲಿ ಮರೆಯಾಗಿರುತ್ತೇವೆಂದು ನಿನಗೆ ಯಾರು ಹೇಳಿದರು? ''

ಜಯಸಿಂಹನು ತನ್ನ ಮನಸ್ಸಿನಲ್ಲಿ ಬಂದ ತರ್ಕಗಳನ್ನು ರಾಣಾನಿಗೆ ಹೇಳಿದನು. ಅದನ್ನು ಕೇಳಿ ರಾಣಾನಿಗೆ ಬಹಳ ಆನಂದವಾಯಿತು. '' ಶಾಬಾಸ್, ನಿನ್ನಂಥ ಜಾಣರ ಅವಶ್ಯಕತೆಯು ನನಗೆ ವಿಶೇಷವಾಗಿತ್ತು. ನಾನು ಹೇಳಿದಂತೆ ಮಾಡುವಿಯಾ? ''

ಜಯಸಿಂಹ—'' ಅಪ್ಪಣೆಯಾಗುವದೇ ತಡ ಕೆಲಸಕ್ಕೆ ಹತ್ತಲು ಸಿದ್ಧನಿರುವೆನು. '' ರಾಜಸಿಂಹ—'' ನಮ್ಮಲ್ಲಿ ನೂರುಜನ ಸವಾರರು ಮಾತ್ರ ಇರುವರು. ಮೊಗಲರ ಸೇನೆಯು ೨೦ ಸಾವಿರವಿದೆ. ರಣರಂ ಗದಲ್ಲಿ ಪ್ರಾಣ ಹೋಗುವವರೆಗೂ ಯುದ್ಧಮಾಡುವದು ನಮ್ಮ ಕರ್ತ ವ್ಯವು. ಯಶಸ್ಸು ದೊರಿದೀತೆಂಬ ಆಶೆಯಿಲ್ಲ ಆದ್ದರಿಂದ ಮೊದಲು ರಾಜಕನ್ನಿಕೆಯನ್ನು ಬಿಡಿಸಿಕೊಂಡು ಆಮೇಲೆ ಯುದ್ಧಮಾಡುವದು ಯೋಗ್ಯವಾದದ್ದು. ನಾವು ಯುದ್ಧ ಮಾಡುವ ಪ್ರದೇಶದಲ್ಲಿಯೆ ಒಂದು ವೇಳೆ ರಾಜಕನ್ಯೆ ಯಿದ್ದರೆ ಆಕೆಗೆ ಹಾನಿಯಾಗುವ ಸಂಭವವು ಹೆಚ್ಚು. ಮೊದಲು ಆಕೆಯ ಸಂರಕ್ಷಣೆ ಮಾಡಬೇಕು. ಈ ಕೆಲಸವು ನೀಗು ವದೇ?

ಜಯಸಿಂಹ—'' ಮಹಾರಾಜ, ನಾನು ಅಲ್ಪಬುದ್ಧಿಯ ಪಾಮ ರನು. ಅದಕ್ಕಾಗಿ ಮಾಡುವದನ್ನೆಲ್ಲ ತಾವು ಆಜ್ಞಾಪಿಸಿದರೆ ಅದರಂತೆ ಪ್ರಾಣದ ಆಶೆ ತೊರೆದಾದರೂ ಮಾಡುತ್ತೇನೆ. ''

ರಾಜಸಿಂಹ—" ನೀನು ಮೊಗಲ ಸೇನಯಲ್ಲಿ ಕುದುರೆ ಸವಾರರ ವೇಷಧರಿಸಿಕೊಂಡು, ನಾಳೆ ಅವರೊಡನೆ ಬರಬೇಕು ಮತ್ತು ರಾಜಕುಮಾರಿಯ ಪಲ್ಲಕ್ಕಿಯ ಸಮೀಪದಲ್ಲಿಯೇ ಇರಬೇಕು ಆಮೇಲೆ ಮಾಡಬಹುದಾದದ್ದನ್ನೆಲ್ಲ ನಿನಗೆ ಹೇಳುವೆನು." ಮುಂದಿನ ರಚನಯನ್ನೆಲ್ಲ ಹೇಳಿ ತೀರಿದ ಮೇಲ, ಜಯಸಿಂಹನು—ಮಹಾರಾಜರೇ, ತಮ್ಮ ಅಪ್ಪಣೆಯ ಪ್ರಕಾರ ಯಾವತ್ತು ಕೆಲಸವನ್ನು ಯೋಗ್ಯರೀತಿಯಿಂದ ಮಾಡುತ್ತೇನೆ ಇದರೊಳಗೆ ಸಂಶಯವಿಲ್ಲ ಆದರೆ ದಯಮಾಡಿ ನನಗೊಂದು ಕುದುರೆಯನ್ನು ಮಾತ್ರ ಕೊಡಿರಿ "

" ನಾವೆಲ್ಲರು ಕೂಡಿ ನೂರು ಜನರು ಇರುವೆವು ನಮ್ಮಲ್ಲಿ ಹಚ್ಚಿನ ಕುದುರೆ ಇಲ್ಲ ನೀನು ನನ್ನ ಕುದುರೆಯನ್ನೇ ತಕ್ಕೊಂಡು ಹೋಗು."

ಜಯಸಿಂಹ—ಸ್ವಾಮಿ, ಈ ದೇಹದಲ್ಲಿ ಜೀವವಿರುವ ವರೆಗೂ ತಮ್ಮ ಕುದುರೆಯನ್ನು ಹತ್ತಲಾರೆನು. ಕುದುರೆಇಲ್ಲದಿದ್ದರೆ ಇಲ್ಲ ಯಾವದರೊದುಂ ಆಯುಧ ಅಥವಾ ಅರಿವೆಗಳು ಇದ್ದರೆ.......ಎಂದು ಮೆಲ್ಲಗೆ ಹೇಳಿದನು.

ರಾಜಸಿಂಹನು—" ಅವೂ ದೊರೆಯುವಂತಿಲ್ಲ ನಮ್ಮ ಮೇಲಿನ ಅರಿವೆ ಅಂಚಡಿ ಮತ್ತು ಆಯುಧಗಳ ಹೊರ್ತು ಬೇರೆ ನಮಲ್ಲೇನೂ ಇಲ್ಲ. ಅದು ನಿನಗೆ ಗೊತ್ತದೆ.

ಜಯಸಿಂಹ—" ಕ್ಷಮಿಸಿರಿ ಹ್ಯಾಗಾದರೂ ದೊರಕಿಸುವೆನು" ಇನ್ನು ಕಳವು ಮಾಡುವದಲ್ಲವೆಂದು ಪ್ರತಿಜ್ಞೆ ಮಾಡಿರುತ್ತೇನೆ. ಯಾರನ್ನಾದರೂ ವಂಚಿಸಿ ದೊರಕಿಸುವದೇ ನಿಜವು."

ರಾಜಸಿಂಹ—" ಯುದ್ಧದಲ್ಲಿ ಕಳ್ಳತನವೂ, ವಂಚನೆಯೂ ದೋಷವಲ್ಲ. ನಾನೂ ಕೂಡಾ ಅವರಂಗಜೇಬನ ಬೇಗಮ್ಮಳಾಗಿ ಮಾಹಲಿಚ್ಚಿಸುವ ರಜಪೂತ ಅಬಲೆಯನ್ನು ಅಪಹರಿಸುವದಕ್ಕೆ ಕಳ್ಳನಂತೆ ಅಡಗಿ

ಕುಳಿತಿರುತ್ತೇನೆ ಹೋಗು, ನಿನಗೆ ಸರಿ ಕಂಡ ಮಾರ್ಗವನ್ನು ಅನುಸರಿಸು'' ಎಂದು ಮುಗುಳು ನಗ ನಕ್ಕು ಹೇಳಿದನು

ಜಯಸಿಂಹನು ರಾಣಾಸಿಗೆ ನಮಸ್ಕರಿಸಿ ರೂಪನಗರದ ಕಡೆಗೆ ಹೋದನು

## ಹದಿನಾರನೆಯ ಪ್ರಕರಣ

### ಜಯಸಿಂಹನ ಕೌಶಲ್ಯ

ಜಯಸಿಂಹನು ನಟ್ಟಗೆ ರೂಪನಗರಕ್ಕೆ ಬಂದನು ಸೂರ್ಯನು ಅಸ್ತವಾಗಿದ್ದನು ಕತ್ತಲೆಯು ಸ್ವಲ್ಪಸ್ವಲ್ಪವಾಗಿ ಮುಸುಕುತ್ತಿತ್ತು ಮನೆಗಳಲ್ಲಿ ದೀಪಗೆಗಳನ್ನು ಹಚ್ಚುತ್ತಿದ್ದರು ಜಯಸಿಂಹನು ಅಂಗಡಿ ಬೀದಿಗ ಬಂದನು ದೀಪಗಬೆಳಕಿನಲ್ಲಿ ಅಂಗಡಿಗಳು ಸುಶೋಭಿತವಾಗಿದ್ದುವು ಜಯಸಿಂಹನಿಗೆ ಬಹಳ ಹಸಿವೆಯಾಗಿತ್ತು. ಅಂಗಡಿಗಳ ಶೋಭೆಯನ್ನು ನೋಡುತ್ತ ನಿಲ್ಲುವಂತಿದ್ದಿಲ್ಲ ಫಲಹಾರದ ಅಂಗಡಿಗೆ ಹೋಗಿ ಕೆಲವು ಜಿನಸುಗಳನ್ನು ಕೊಂಡನು ಅದನ್ನು ತಿಂದು ಒರತು ಬೊಗಸೆ ನೀರುಕುಡಿದು ಮುಂದಿನಕೆಲಸಕ್ಕಾಗಿ ಹೊರಟನು

ತನ್ನ ಕೆಲಸಕ್ಕೆ ಯೋಗ್ಯಸ್ಥಳವನ್ನು ಹುಡುಕುತ್ತ ಒಬ್ಬ ಎಲೆಮಾರುವವಳ ಅಂಗಡಿಗೆ ಹೋದನು ಅದು ಸಾಲುಸಾಲಾದ ದೀಪಗಳಿಂದ ಮನೋಹರವಾಗಿತ್ತು ಅಲ್ಲಿ ಒಂದುಮಗ್ಗಲಿಗ ರತ್ನಗಂಬಳಿ ಹಾಸಿತ್ತು ಹಾಸಿಗೆಯಮೇಲೆ ಲೋಡಿಗೆ ಆತಿಟ್ಟುಕೊಂಡು ಕುಳಿತಿದ್ದಳು ಶರೀರದ ಕಾಂತಿಯು ಗೌರವರ್ಣ ಸುಮಾರು ೩೦-೩೫ ವರ್ಷದವಳು ವಿನೋದದ ಮಾತುಕಥೆಗಳಲ್ಲಿ ಬಲು ಕುಶಲಳು ಮೊಗಲಸೇನೆಯು ನಾಳೆಬೆಳಿಗ್ಗೆ ರೂಪನಗರದಿಂದ ಹೊರಡುವದಿತ್ತು ಶಿಪಾಯಿಗಳೆಲ್ಲ ಸುಖೋಪಭೊಗಕ್ಕಾಗಿ ನಗರದಲ್ಲಿ ಅತ್ತಿತ್ತ ಅಲೆಯುತ್ತಿದ್ದರು ಈ ಅಂಗಡಿಗೆ ಬಹಳ

ಜನರು ಬಂದುಬಂದು ಹೋಗುತ್ತಿದ್ದರು ಜಯಸಿಂಹನು ದೂರದಿಂದ ಇದೆಲ್ಲವನ್ನು ನೋಡಿ ಸ್ವಲ್ಪ ವಿಚಾರಮಾಡಿ ಅಲ್ಲಿಗೆ ಬಂದನು ಅಂಗಡಿಯಲ್ಲಿ ಎಲೆ ಅಡಿಕೆಗಳನ್ನು ತಕ್ಕೊಂಡು ಅದಕ್ಕೆ ತೋರುವ ಬೆಲೆಗೆ ಇಮ್ಮಡಿಯಾಗಿ ಕೊಟ್ಟನು ಎಲೆಯನ್ನು ತಿನ್ನುತ್ತ ತಿನ್ನುತ್ತ ಅವಳ ಉಡಿಗೆ ತೊಡಿಗೆಗಳನ್ನೂ ಅವಳ ಸೌಂದರ್ಯವನ್ನೂ ವರ್ಣಿಸಲಾರಂಭಿಸಿದನು ಮಾತಾಡುತ್ತ ಮಾತಾಡುತ್ತ "ನಿಮಗೊಂದು ವಿಶೇಷ ಸಂಗತಿಯನ್ನು ಹೇಳುವದಿದೆ" ಎಂದು ಅವಳ ಸಮೀಪಕ್ಕೆ ಹೋಗಿ ಕುಳಿತನು. ಆಮೇಲೆ "ಬಾಯಿಸಾಹೇಬರೆ, ತಮ್ಮ ಚಾತುರ್ಯವು ಅವರ್ಣನೀಯವಾದದ್ದು ನಾನು ನಿಮ್ಮಂಥ ಒಬ್ಬ ಜಾಣಳನ್ನು ಶೋಧಮಾಡುತ್ತಿದ್ದೆನು ನನಗೊಬ್ಬ ವೈರಿಯಿರುವನು, ಅತನನ್ನು ಫಜೀತಿಮಾಡಬೇಕೆಂಬ ಅಪೇಕ್ಷೆಯಿದ ತಮ್ಮ ಸಹಾಯವು ಬೇಕಾಗಿದ ಏನುಮಾಡಬೇಕೆಂಬುದನ್ನು ತಮಗ ಹೇಳುತ್ತೇನೆ ನನ್ನ ಕೆಲಸವಾದನಂತರ ನಿಮಗೊಂದು ಮೊಹರು ಕೊಡುತ್ತೇನೆ"

"ನಾನು ಮಾಡುವುದನ್ನು ಮೊದಲು ತಿಳಿಸು"

ಈ ಪ್ರಶ್ನೆಗೆ ಜಯಸಿಂಹನು ಸರಿಯಾಗಿ ತಿಳಿಸಿಕೊಟ್ಟನು ಎಲೆ ಮಾರುವವಳಿಗೆ ಆನಂದವೆನಿಸಿತು ಒಪ್ಪಿಗೆಯನ್ನು ಕೊಟ್ಟಳು "ನಿನ್ನ ಮೊಹರು ಬೇಡ. ಈ ಯುಕ್ತಿಯಿಂದ ನನಗೂ ಕ್ಷಣಹೊತ್ತು ವಿನೋದವೆನಿಸುವುದು"

ಎಲೆಗಾರ್ತಿಯ ಅನುಮತಿ ದೊರೆದಮೇಲೆ ಜಯಸಿಂಹನು ಮಹಮ್ಮದಖಾನನ ಹೆಸರಿನಿಂದ ಒಂದು ಪತ್ರವನ್ನು ಬರೆದನು ಅದರಲ್ಲಿ "ನಾನು ನಿಮ್ಮ ಮುಖವನ್ನು ಕಂಡು ಮೋಹಗೊಂಡಿರುತ್ತೇನೆ. ಬೆಳಿಗ್ಗೆ ತಾವು ಹೋಗುವವರು. ಈಹೊತ್ತುರಾತ್ರಿ ೯ ಘಂಟೆಗೆ ನಮ್ಮ ಮನೆಯವರೆಗೆ ಬಂದು ತಮ್ಮ ದರ್ಶನಾಮೃತದಿಂದ ಈ ದಾಸಿಯನ್ನು ತಣಿಸಬೇಕು ನೀವು ಬಂದರೆ ನನಗೆ ಸ್ವಲ್ಪ ಸಮಾಧಾನವೆನಿಸುವುದು."

ಈ ಪತ್ರವನ್ನು ಬರೆದು ಮುಂದೆ ಮಾಡುವ ಯುಕ್ತಿಯನ್ನೆಲ್ಲ ಅವಳಿಗೆ ತಿಳಿಸಿ ಮುಸಲ್ಮಾನರ ಛಾವಣಿಗೆ ಹೊರಟುಹೋದನು. ಛಾವಣಿಯಲ್ಲಿ ಮಹಮ್ಮದಖಾನನ ಹೆಸರಿನವನನ್ನು ಶೋಧ ಮಾಡಹತ್ತಿದನು ಮುಸಲ್ಮಾನರಲ್ಲಿ ಬಹಳಜನ ಖಾನರು, ಯಾವನಾದರೊಬ್ಬ ಮಹಮ್ಮದ ಖಾನನು ದೊರೆಯಬಹುದೆಂದು ಜಯಸಿಂಹನು ಆ ಪತ್ರವನ್ನು ಬರೆದಿದ್ದನು ಅದರ ಪರಿಣಾಮವೂ ನೆಟ್ಟಗಾಯಿತು ಛಾವಣಿಯಲ್ಲಿ ಹುಡುಕುವುದರಲ್ಲಿ ಒಬ್ಬ ಮಹಮ್ಮದ ಖಾನನು ದೊರೆತನು. ಆತನು ಚೀಟಿಯನ್ನು ಓದಿ ನೋಡಿದನು ಓದಿದಮೇಲೆ ಆತನ ಮುಖವು ಆನಂದದ ಕಳೆಯಿಂದ ತುಂಬಹೋಯಿತು "ನೀನು ಇಲ್ಲಿಯೇ ಸ್ವಲ್ಪ ನಿಲ್ಲು, ನಾನು ಈಗ ಬರುತ್ತೇನೆ" ಎಂದು ಜಯಸಿಂಹನಿಗೆ ಹೇಳಿ ಡೇರೆಯೊಳಗೆ ಹೊಕ್ಕು ಉತ್ತಮ ಪೋಷಾಕು ಹಾಕಿಕೊಂಡು ಹೊರಗೆಬಂದನು ಹೊರಗೆಬಂದು "ಎಷ್ಟು ದೂರ ಹೋಗುವುದು?" ಎಂದು ಕೇಳಿದನು. ಅದಕ್ಕೆ ಜಯಸಿಂಹನು ಕೈಮುಗಿದು "ಹುಜೂರ, ಸಮೀಪದಲ್ಲಿದ ಆದರೆ ಕುದುರೆಯಮೇಲೆ ಕುಳಿತು ಆಯುಧಸಹಿತವಾಗಿ ಹೋಗುವುದು ಯೋಗ್ಯವಾದದ್ದೆಂದು ತೋರುವುದು, ತಾವು ದೊಡ್ಡ ಸ್ಥಳಕ್ಕೆ ಹೋಗಬೇಕಾಗಿದೆ" ಎಂದನು. ಶಿಪಾಯಿಯು ವಿಚಾರಿಸಿ "ಸರಿಯೆ, ನಾನು ಶಿಪಾಯಿಯು, ಆಯುಧವಿಲ್ಲದೆ ಹೋಗುವದು ಲಾಂಛನಾಸ್ಪದವು" ಎಂದು ಆಯುಧಸಹಿತವಾಗಿ ಕುದುರೆಯನ್ನು ಹತ್ತಿದನು ಜಯಸಿಂಹನು ಮುಂದಾದನು.

ಇತ್ತ ಜಯಸಿಂಹನು ಹೊರಟುಹೋದಮೇಲೆ ಎಲೆಗಾರ್ತಿಯು ಒಂದು ಏಕಾಂತವಾದ ಮನೆಯನ್ನು ಬಾಡಿಗೆಗೆ ಹಿಡಿದಳು. ಅದನ್ನು ಶ್ರಿಂಗರಿಸಿ ಜಯಸಿಂಹನ ಮಾರ್ಗ ನಿರೀಕ್ಷಿಸುತ್ತ ಅಲ್ಲೆ ಕುಳಿತುಬಿಟ್ಟಳು. ಇಷ್ಟರಲ್ಲಿ ಜಯಸಿಂಹನೊಡನೆ ಖಾನಸಾಹೇಬರು ಬಂದರು. ಸಂಕೇತಸ್ಥಳದಲ್ಲಿ ಎಲೆಗಾರ್ತಿಯು ನಿಂತಿರುವುದನ್ನು ತೋರಿಸಿ, ಕೈಕೊಟ್ಟು ಆತನನ್ನು ಕುದುರೆಯಿಂದಿಳಿಸಿದನು ಅನಂತರ "ಸ್ವಾಮೀ,

ನಾನು ತಮ್ಮ ಕುದುರೆಯನ್ನು ಹಿಡಿದಿರುತ್ತೇನೆ ತಾವು ಒಳಗೆ ಹೋಗ ಬಹುದು ''

ಖಾನಸಾಹೇಬರು ಸೋಪಾನಗಳನ್ನೇರಿದರು ಆಗ್ಗೆ ಜಯಸಿಂಹನು ''ಖಾನಸಾಹೇಬರೆ, ಸ್ತ್ರೀಸಮಾಗಮಕ್ಕೆ ಹೋಗುವ ಸಮಯದಲ್ಲಿ ಆಯುಧಗಳು ಶೋಭಾವಹವಲ್ಲ, ಅವುಗಳನ್ನು ಇಲ್ಲಿ ಕೊಡಿರಿ ' ಖಾನಸಾಹೇಬರು ಬೇರೆ ಮಾತಿಲ್ಲದೆ ಯಾವತ್ತು ಆಯುಧಗಳನ್ನು ತೆಗೆದು ಜಯಸಿಂಹನಿಗೆ ಕೊಟ್ಟರು

ಖಾನಸಾಹೇಬರು ಉಪ್ಪರಿಗೆಯಮೇಲೆ ಹೋದಕೂಡಲೆ ಪಲಂಗದಮೇಲೆ ರೂಪಸಂಪನ್ನೆಯಾದೊಬ್ಬ ಯುವತಿಯು ಕಂಡುಬಂದಳು ಖಾನನು ಬಾಗಿಲ ಹೊರಗೆ ಜೋಡು ಮೊದಲಾದವುಗಳನ್ನು ತೆಗೆದು ಒಳಗೆ ತಿವಾಸಿಯಮೇಲೆ ಕುಳಿತುಕೊಂಡನು. ತರುಣಿಯು ಪಲಂಗದ ಮೇಲಿಂದಿಳಿದುಬಂದು ಯೋಗಕ್ಷೇಮವನ್ನು ವಿಚಾರಿಸತೊಡಗಿದಳು. ಆ ಮಾತು ಈ ಮಾತು ಹೇಳಿ ಸ್ವಲ್ಪಹೊತ್ತಿನಲ್ಲಿ ಖಾನಸಾಹೇಬರನ್ನ ಮೋಹಗೊಳಿಸಿ ಮರುಳುಮಾಡಿದಳು ಮಿಯಾ ಸಾಹೇಬರು ಶೆಕೆಯಾಗುವುದೆಂದು ಅರಿವೆಗಳನ್ನು ತೆಗೆದಿಟ್ಟರು ಇಷ್ಟರಲ್ಲಿ ಯಾರೊ ಬಾಗಿಲ ಮೇಲೆ ಬಡಿದ ಸಪ್ಪಳವು ಕೇಳಬಂತು ಕೂಡಲೆ ಎಲೆಗಾರ್ತಿಯು ''ಯಾರವರು'' ಎಂದಳು. ಅದಕ್ಕೆ ''ನಾನು ಬಾಗಿಲತೆಗೆ,'' ಎಂದುತ್ತರ. ಬಂತು. ಅದನ್ನು ಕೇಳಿ ಎಲೆಗಾರ್ತಿಯು ಗಾಬರಿಯಾದಳು ''ಆ ಮುದಿಗೂಬೆ ಬಂತು. ಏನುಮಾಡಬೇಕು ? ಖಾನಸಾಹೇಬರೇ, ನನ್ನ ಪರಿಣಾಮವು ನೆಟ್ಟಗಾಗುವಂತಿಲ್ಲ. ಅದು ಹಾಳಾಗಿ ಹೋಗುವವರೆಗೆ ತಾವು ದಯಮಾಡಿ ಈ ಪಲಂಗದಕೆಳಗ ಸ್ವಲ್ಪ ಕೂತುಕೊಳ್ಳಿರಿ. ಈಗ ಮತ್ತೆ ಆವನನ್ನು ಹೊರಕ್ಕೆ ತಳ್ಳುವೆನು ಆಮೇಲೆ ನಾವು ಸುಖವಾಗಿ......'' ಈ ಮಾತು ಮುಗಿಯುವುದರೊಳಗಾಗಿ ಸಾಹೇಬರು ಮೆಲ್ಲನೆ ಪಲಂಗದ ಬುಡದಲ್ಲಿ ಓತುಕೊಂಡರು ಎಲೆಗಾರ್ತಿಯು ಸ್ಮಿತಹಾಸ್ಯದಿಂದ ಬಾಗಿಲವನ್ನು ತೆರೆದಳು. ಹೊರಗೆ ತನ್ನ ಗಂಡನ ಹೆಸರಿನಿಂದ ನಿಂತಿದ್ದ ಜಯಸಿಂ

"ತಾವು ಹೋಗಿ, ಇನ್ನೂ ಒಂದುಗಳಿಗೆ ಸಹ ಆಗಿಲ್ಲ ಇಷ್ಟರಲ್ಲಿಯೆ ಮರಳಿ ಒರುವಂಥ ಕಾರಣವೇನಿತ್ತು ?" ಎಂದಳು ಜಯಸಿಂಹನು ಧ್ವನಿಯನ್ನು ಬದಲಿಸಿ—"ಅರ್ಧದಾರಿಗೆ ಹೋದಮೇಲೆ ಬೀಗದಕೈಯ್ಯ ಸ್ಮರಣೆಯಾಯಿತು ಇಲ್ಲದಿದ್ದರೆ ಅಂಗಡಿಯವರೆಗೆ ಹೋಗಿ ತಿರುಗಬೇಕಾಗುತ್ತಿತ್ತು ಆ ಗೂಡಿನಲ್ಲಿ ಇಟ್ಟಿರುವೆನೇನು ನೋಡು" ಎಂದು ಬೀಗದಕೈಯನ್ನು ಹುಡುಕುವವನಂತೆ ಸಾಹೇಬರ ಪೋಷಾಕುಗಳನ್ನು ತಕ್ಕೊಂಡು, ತನ್ನ ಮನೋಭೀಷ್ಟವು ನೆರವೇರಿತೆಂದು "ಇಲ್ಲ ಅದೆ, ದೊರೆಯಿತು ನಾನು ಹೋಗುತ್ತೇನೆ, ಬಾಗಿಲನ್ನು ಘಟ್ಟಿಯಾಗಿ ಮುಚ್ಚಿಕೊಂಡು ಮಲಗು ಊರೊಳಗೆ ಅತ್ತಿತ್ತ ಮುಸಲ್ಮಾನರು ಒಹಳ ತಿರುಗಾಡುತ್ತಾರೆ ಯಾರಾದರೂ ಒಂದಾರು, ಜಾಗ್ರತೆಯಾಗಿ ಎ, ಎಂದು ಹೇಳುತ್ತ ಹೊರಗೆ ಹೋದನು ಬಾಗಿಲ ಕೊಂಡಿಯನ್ನು ಹಾಕುವ ನಿಮಿತ್ತದಿಂದ ಎಲಗಾರ್ತಿಯು ಆತನ ಹಿಂದೆಹಿಂದ ಹೋದಳು ಬಾಗಿಲ ಮುಚ್ಚಿಕೊಂಡು ಹೊರಗಿನ ಕೊಂಡಿಯನ್ನು ಹಾಕಿ ಒಂದು ಕೀಲಿಯನ್ನ ಸಿಕ್ಕಿಸಿದರು ಆಮೇಲ ಇಬ್ಬರೂ ಹೊರಗೆ ಹೊರಟುಹೋದರು ಹೋಗುವಾಗ್ಗ ಜಯಸಿಂಹನು ಅವಳ ಕೈಯಲ್ಲಿ ಏನೋ ಕೊಡಹೋದನು ಆವಳು ತಗೆದುಕೊಳ್ಳಲಿಲ್ಲ ಆಕಗ ಒಳ್ಳೇ ನಗು ಒಂದಿತ್ತು ಸಾಹೇಬರನ್ನು ಹಿಡಿದಿಟ್ಟ ಮನೆಯು ಒಂದು ಸಂದಿನಲ್ಲಿತ್ತು ಸಾಂಪ್ರತದ ಮನೆಗಳಂತೆ ಕಿಟಕಿ ಮೊದಲಾದವುಗಳೇನೂ ಇರಲಿಲ್ಲ ಗಾಳಿಯಾಡುವುದಕ್ಕೆ ಸಣ್ಣಸಣ್ಣ ಒಂದೆರಡು ಕಿಂಡಿಗಳಿದ್ದವು ಜಯಸಿಂಹನು ಖಾನಸಾಹೇಬರ ಪೋಷಾಕು ಹಾಕಿಕೊಂಡು ತಾನೊಬ್ಬ ಪ್ರತಿಖಾನನಾದನು ಹಾಗೆಯೆ ಕುದುರೆಯಮೇಲೆ ಕುಳಿತು ಮುಸಲ್ಮಾನರ ಛಾವಣಿಗೆ ಹೋದನು. ಹೋಗಿ ಖಾನಸಾಹೇಬರ ಡೇರೆಯಲ್ಲಿ ಸ್ವಸ್ಥವಾಗಿ ಮಲಗಿಕೊಂಡನು.

# ಹದಿನೇಳನೆಯ ಪ್ರಕರಣ.

## ಮಾರ್ಗದೊಳಗಿನ ಯುದ್ಧ

ಪ್ರಾತಃಕಾಲದಲ್ಲಿ ಮೊಗಲಸೇನೆಯವರು ಹೊರಡುವ ಸಿದ್ಧತೆಯನ್ನು ಮಾಡಹತ್ತಿದರು ಉತ್ತಮವಾದ ಗಡ್ಡ ಮೀಶೆಗಳುಳ್ಳವರು, ಹಾಗೂ ಒರೆಗಳದ ಆಯುಧಗಳುಳ್ಳ ಕುದುರೆ ಸವಾರರು ಸಾಲುಸಾಲಾಗಿ ಹೊರಬೀಳಹತ್ತಿದರು ಒಂದೊಂದು ಸಾಲಿನಲ್ಲಿ ಐದೈದು ಸವಾರರು ಆ ಸವಾರರ ಕುದುರೆಗಳು ಬಲೆ ಬಾಳುವಂಥವು ಸವಾರರು ಲಗಾಮು ಬಿಗಿಹಿಡಿದು ಅವುಗಳ ಗತಿಯನ್ನು ತಡೆಯುತ್ತಿದ್ದರು. ಆದರಿಂದ ಇಡೀ ಸಾಲು ಮುಲ್ಲುಮುಲ್ಲಗ ಸರಿಯುತ್ತ ಹೋಗುವಂತ ಕಾಣಿಸುತ್ತಿತ್ತು.

ಚಂಚಲಕುಮಾರಿಯು ಬೆಳಿಗ್ಗೆ ಬೇಗನೆ ಎದ್ದು ನಿತ್ಯನೈಮಿತ್ತಿಕ ಕೆಲಸಗಳನ್ನು ತೀರಿಸಿಕೊಂಡು ಶೃಂಗರಿಸಿಕೊಳ್ಳಹತ್ತಿದಳು ನಿರ್ಮಲ ಕುಮಾರಿಯು ಆಭರಣಗಳನ್ನಿಡಿಸಹತ್ತಿದಳು ಆಭರಣಗಳನ್ನಿಟ್ಟುಕೊಳ್ಳುತ್ತ ಚಂಚಲಕುಮಾರಿಯು " ಸಖಿ, ನನ್ನ ಕೊರಳೊಳಗೆ ಹೂಮಾಲೆಯನ್ನು ಹಾಕುವದು, ಮರೆಯಬೇಡ! ಸತಿ ಹೋಗುವ ಸ್ತ್ರೀಯಳ ಕೊರಳಲ್ಲಿ ಅವಶ್ಯವಾಗಿ ಮಾಲೆಯು ಬೇಕಾಗುವದು "

ಇದನ್ನು ಕೇಳಿ ನಿರ್ಮಲಕುಮಾರಿಯು ಕಣ್ಣೊಳಗೆ ನೀರುತುಂಬಿದವಳು "ಸಖಿ, ಹೀಗೇಕೆ ಅಭದ್ರಮಾತಾಡುವಿ ? ನಿನಗೆ ರತ್ನಮಾಲೆಗಳನ್ನು ತೊಡಿಸುತ್ತೇನೆ ಗೆಳತೀ, ನೀನು ಉದಯಪುರದ ರಾಣಿಯಾಗುವುದಕ್ಕೆ ಹೋಗುವೆಯಲ್ಲವೆ ?

" ಸಖಿ, ನಿನಗೆ ತಿಳದದ್ದು ಹಾಕು, ಇನ್ನುಮೇಲೆ ನಾವಿಬ್ಬರೂ ಕೂಡಿರುವಂತಿಲ್ಲ ಉದೇಪುರದಿಂದ ಸುದ್ದಿಯೇ ಇಲ್ಲ. ಕಡೆಗೆ ಮೊದಲು ನಿಶ್ಚಯಿಸಿದಂತೆಯೆ ಆಗುವದು ದಿಲ್ಲಿಯ ಮಾರ್ಗದಲ್ಲಿ ಪ್ರಾಣತ್ಯಾಗ ಮಾಡುವೆನು. ಆ ಯವನನ ದಾಸಿಯಾಗಲಾರೆನು."

"ಚಂಚಲ, ಹೀಗೆ ಅಧೀರಳಾಗಬೇಡ ಯಾವದೊಂದು ಕೆಲಸವನ್ನು ಪೂರ್ಣವಿಚಾರಿಸಿ ಮಾಡುವುದು ಸರಿಯಾದದ್ದು ಮಾರ್ಗದಲ್ಲಿಯೆ ನಿನ್ನನ್ನು ಬಿಡಿಸುವ ಯೋಜನೆಯನ್ನು ಯಾಕೆ ಮಾಡಿರಬಾರದು? ಧೈರ್ಯವನ್ನು ಬಿಡಬೇಡ ನಾನು ನಿನ್ನ ಹಿಂದಿನಿಂದ ಬರುವೆನು" ಎಂದು ಗೆಳತಿಯರಿಬ್ಬರು ಪರಸ್ಪರವಾಗಿ ಆಲಿಂಗಿಸಿದರು

ಚಂಚಲಕುಮಾರಿಯು ಶೃಂಗರಿಸಿಕೊಳ್ಳುವುದಾದಮೇಲೆ ಈಶ್ವರ ದರ್ಶನಕ್ಕೆ ದೇವಾಲಯವನ್ನು ಹೊಕ್ಕಳು. ಆಕೆ ದಿನಾಲು ಶಂಕರನನ್ನು ಪೂಜಿಸುತ್ತಿದ್ದಳು. ದಿನದಂತೆ ದರ್ಶನಕ್ಕೆ ಹೋದಳು ಏಕಾಗ್ರಚಿತ್ತದಿಂದ ಶಂಕರನನ್ನು ಸ್ತುತಿಸಿದಳು ಈ ಸಂಕಟವನ್ನು ದೂರೀಕರಿಸೆಂದು ಮನೋಭಾವದಿಂದ ಪ್ರಾರ್ಥಿಸಿದಳು. ಪೂಜೆಯಾದಮೇಲೆ ತಾಯಿತಂದೆಗಳ ಒಳಿಗೆ ಬಂದು ಅವರ ಚರಣಗಳಿಗೆರಗಿ ಅವರ ಅಪ್ಪಣೆಯನ್ನು ತಕ್ಕೊಂಡಳು ಆಕೆಯ ಕಣ್ಣಿಂದ ಅಶ್ರುಗಳು ಸುರಿಯುತ್ತಿದ್ದವು

ವಿಕ್ರಮಸಿಂಹನು—"ಮಗಳೆ ನಿನಗ ಯಾವಮಾರ್ಗವನ್ನು ಸ್ವೀಕರಿಸೆಂದು ಹೇಳುತ್ತೇನೆಯೊ ಅದರಿಂದ ನನಗೆ ಲಜ್ಜೆಯೆನಿಸುತ್ತದೆ ಆದರೆ ಮಾಡುವದೇನು ? ನಮ್ಮ ಶಕ್ತಿಯನ್ನು ನೋಡಿಕೊಂಡು ನಡೆಯಬೇಕಾಗುವುದು. ಮೊಗಲರೊಡನೆ ಕಾದುವಷ್ಟು ಶಕ್ತಿಯು ನಮ್ಮಲ್ಲಿಲ್ಲ ಎಲ್ಲವೂ ಪ್ರತಿಕೂಲವಾಗಿರುವುದು, ಈಹೊತ್ತಿನಲ್ಲಿ ಪ್ರತಾಪನಿದ್ದರೆ ಒಂದುವೇಳೆ ಎಷ್ಟೋ ಅನುಕೂಲವಾಗುವಂತಿತ್ತು ಆದರೆ ಆತನು ಎಲ್ಲಿಯೂ ಇಲ್ಲದಂತಾಗಿರುವನು. ಮುಪ್ಪಿನವನಾದ ನಾನೊಬ್ಬನೇನು ಮಾಡುವುದು ? ಹೋಗು ಹೆದರಬೇಡ, ಈಶ್ವರನು ನಿನ್ನ ಸಂಕಟವನ್ನು ದೂರಮಾಡುವನು." ಈರೀತಿ ಚಂಚಲಕುಮಾರಿಯು ಎಲ್ಲರ ಅಪ್ಪಣೆಯನ್ನು ಹೊಂದಿ ಮೇಣೆಯಲ್ಲಿ ಕುಳಿತಳು. ಒಂದುಸಾವಿರ ಸವಾರರಿಗೆ ಮೇಣೆಯ ಮುಂದೆ ನಡೆಯುವ ಅಪ್ಪಣೆಯಾಯಿತು. ಉಳಿದ ಒಂದುಸಾವಿರ ಜನರು ಹಿಂದೆ ಬರುತ್ತಿದ್ದರು. ಅಪ್ಪಣೆಯಾದ ಕೂಡಲೆ ಎಲ್ಲ ಸೇನೆಯು ನಡೆಯಹತ್ತಿತು. ಪ್ರಾತಃಕಾಲದ ಶೀತಲವಾದ ವಾಯು

ವಿನಲ್ಲಿ ಆನಂದದಿಂದ ಕೆಲಕೆಲವು ಸವಾರರು ಹಾಡತೊಡಗಿದರು. ಸೇನೆಯ ಹಿಂದಿರುವ ಸವಾರರಲ್ಲಿ ಎಲ್ಲಕ್ಕೂ ಮುಂದಿನವನು, ಕೆಳಗಿನ ಪದವನ್ನು ಉಚ್ಚಸ್ವರದಿಂದ ಹಾಡುತ್ತಿದ್ದನು.

ಪದ || ಶರವು ಭರವುಸೆ ಪಿಯಾರಿ | ಸೋಂವುರತ ಬಸೀ ಧಾರಿ ||
ಝುರತ ತೋಚನಸೆ ಚಾರಿ | ನ ಸಮುಝು ಗೋಪಕುಮಾರಿ |
ಜಿ ಓನ ಬೈರಕ ಮುರಾರಿ | ಬಿಹಾರತ ರಾಹತ ಮಾರಿ |

ರಾಜಕನ್ನೆಯು ಗಾಯನವನ್ನು ಕೇಳಿದಳು ಅದರ ಅರ್ಥವನ್ನು ತಿಳಿದು ಮನಸ್ಸಿನಲ್ಲಿ "ಪ್ರಭೊ, ಈ ಮುಂಚಾವಿನ ಗಾಯನವು ನಿಜವಾದರೆ, ನನ್ನ ಆನಂದಕ್ಕೆ ಮರ್ಯಾದೆ ಇಲ್ಲ" ರಾಜಕನ್ನೆಯ ಮನಸ್ಸಿನಲ್ಲಿ ರಾಜಸಿಂಹನ ವಿಚಾರವು ಬಂದಿತ್ತು. ಜಯಸಿಂಹನು ಈ ಪದವನ್ನು ಹೇಳುತ್ತ ಸೇನೆಯ ಹಿಂದಿಂದೆ ನಡೆದಿದ್ದನು. ಆವನು ಒಳ್ಳೇ ಪ್ರಯಾಸದಿಂದ ಈ ಸ್ಥಳವನ್ನು ದೊರಕಿಸಿದ್ದನು ಇದೆಲ್ಲ ಆ ಸರಳಮನಸಿನ ಬಾಲಿಕೆಗೆ ಹ್ಯಾಗೆ ಗೊತ್ತಾಗಬೇಕು ?

ದೊಡ್ಡ ಅಜಗರಹಾವಿನ ಶರೀರದಂತೆ ಮೊಗಲಸೇನೆಯು ಮೆಲ್ಲಮೆಲ್ಲನೆ ನಡೆದಿತ್ತು ಸೇನೆಯು ಪರ್ವತದ ಮಾರ್ಗದಿಂದ ರಾಜಸಿಂಹನು ಹೊತುಗೊಂಡಿದ್ದ ಸ್ಥಳದ ಸಮೀಪಕ್ಕೆ ಬಂತು. ಅರ್ಧಸೇನೆಯು ಆ ಮಾರ್ಗದಿಂದ ಮುಂದೆ ಹೋಗಿತ್ತು ಇಷ್ಟರಲ್ಲಿ "ಧಮ್, ಧಮ್" ಎಂಬ ಬಲವಾದ ಸಪ್ಪಳವಾಗತೊಡಗಿತು. ಮುಂದಿನ ಸಿಪಾಯಿಗಳು ಬೆದರಿ ನಿಂತುಬಿಟ್ಟರು. ಪರ್ವತಶಿಖರದಿಂದ ಗುಡ್ಡದ ಒಂದುಭಾಗವು ಕಡಿದು ಕೆಳಗೆಬಿದ್ದಂತೆ ಕಂಡಿತು. ಒಬ್ಬ ಸವಾರನು ಸತ್ತನು. ಮತ್ತೊಬ್ಬನು ವಿಶೇಷ ಪೆಟ್ಟುತಿಂದನು.

ಎಲ್ಲರು ಆಶ್ಚರ್ಯಚಕಿತರಾಗಿ ನೋಡಹತ್ತಿದರು. ಎತ್ತನೋಡಿದತ್ತ ಕಲ್ಲಿನ ಮಳೆ ಸುರಿಯಹತ್ತಿತು. ಅದರಿಂದ ಎಷ್ಟೋ ಜನರಿಗೆ ಗಾಯಗಳಾದವು. ಎಷ್ಟೋಜನರು ಸತ್ತುಹೋದರು. ದಾರಿಯು ಒಂದಾಗುವಂತೆ ಕಂಡುಬಂತು ಕುದುರೆಗಳು ಬೆನ್ನಮೇಲಿನ ಸವಾರ

ರನ್ನು ಒಕ್ಕೊಟ್ಟು ಓಡಹತ್ತಿದವು. ಹಿಂದೆಮುಂದ ಎರಡೂಕಡೆಯು ಮಾರ್ಗವು ಕಲ್ಲುಗಳಿಂದ ತುಂಬಿದ್ದರಿಂದ ಕುದುರೆಗಳಿಗೆ ಓಡಲಿಕ್ಕಾಗ ಲೊಲ್ಲದು. ಈ ಗೊಂದಲದಲ್ಲಿ ಕುದುರೆಯಮೇಲೆ ಕುದುರೆಗಳು, ಸವಾ ರರಮೇಲೆ ಸವಾರರು ಸವಾರಿ ಮಾಡುವಂತ ಕಂಡುಬಂತು. ಸವಾರರು ಮಾರ್ಗಮಾಡಿಕೊಳ್ಳುವುದಕ್ಕೆ ತಮ್ಮತಮ್ಮೊಳಗೆ ಬಡಿದಾಡತೊಡಗಿದರು. ಅಮಲದಾರರ ಹುಕುಮು ನಿಷ್ಫಲವಾಯಿತು. ಸೇನೆಯಲ್ಲ ಗೊಂದಲ ಕ್ಕಿಟ್ಟಿತು.

ರಾಜಕನ್ಯೆಯ ಮೇಣೆಯು ಎರಡುಮಗ್ಗಲೂ ಕಲ್ಲಿನ ವೃಷ್ಟಿಯಾ ಗುತ್ತಿತ್ತು. ಮುಂದಿನ ಸವಾರರು ಹಿಂದಕ್ಕೆ ಹೋಗುವದಕ್ಕೂ ಯತ್ನಿಸ ತೊಡಗಿದರು. ಮೇಣೆಯನ್ನು ಹೊತ್ತ ಭೋಯಿಗಳು ಪ್ರಾಣವುಳಿಸಿ ಕೊಳ್ಳುವ ಮಾರ್ಗನೋಡಹತ್ತಿದರು. ಆಚೀಕಡಗ ಹೋಗುವುದಕ್ಕೆ ಅಲ್ಲಿಯೆ ಬೇರೊಂದು ಕಾಲುದಾರಿಯಿತ್ತೆಂದು ವಾಚಕರಿಗ ಗೊತ್ತಿರಬ ಹುದು. ಒಬ್ಬೊಬ್ಬ ಸವಾರನಂತ ಆ ದಾರಿಯಿಂದ ಹೋಗಬಹುದಾ ಗಿತ್ತು. ಈ ಸ್ಥಳಕ್ಕೆ ಬಂದಕೂಡಲೆ ಜಯಸಿಂಹನು ಭೋಯಿಗಳಿಗೆ "ಲೋಕಕ್ಕೈಕೆ ಹುಸಿಯಾದಪ್ಪ, ಹ್ವಾಂ, ರಸ್ತಾತ್ಯ ವ್ಹಾಬಿನಿಬತೆನಹಿ" ಎಂದು ಆ ಮಾರ್ಗವನ್ನು ಭೋಯಿಗಳಿಗೆ ತೋರಿಸಿದನು. ಆಮೇಲೆ ಭೋಯಿಗಳು ತಮ್ಮಹಾಗೂ ರಾಜಕನ್ಯೆಯ ಜೀವ ಉಳಿಸಿಕೊಳ್ಳುವು ದಕ್ಕಾಗಿ ಆ ಮಾರ್ಗದಿಂದ ನಡದರು. ಅವರಸಂಗಡ ಜಯಸಿಂಹನೂ ಹೋದನು. ಮೇಣೆಯು ಅತ್ತ ನಡೆದದ್ದನ್ನು ಕಂಡು ಬೇರೊಬ್ಬ ಸವಾ ರನು ಜಯಸಿಂಹನ ಹಿಂದಿನಿಂದ ಬಂದನು. ಇಷ್ಟರಲ್ಲಿ ಪರ್ವತದ ಮೇ ಲಿಂದ ದೊಡ್ಡದೊಂದು ಬಂಡೆಗಲ್ಲು ಸರಿಯುತ್ತ ಬಂದು ಆ ಸವಾರನ ಮೇಲೆ ಬಿತ್ತು. ಅದರಿಂದ ದಾರಿಯು ಕಟ್ಟಾಗಿಹೋಯಿತು. ಸವಾರನೂ ಆತನ ಕುದುರೆಯೂ ಬಂಡೆಗಲ್ಲಿನ ಬುಡದಲ್ಲಿ ಪ್ರಾಣತೊರೆಯಬೇಕಾ ಯಿತು. ಆಮೇಲೆ ಅಲ್ಲಿಗೆ ಬೇರೆ ಸವಾರರು ಹೋಗಲಿಲ್ಲ. ಜಯಸಿಂಹನು ಮೇಣೆಯೊಡಗೊಂಡು ನಡೆದನು.

ಈ ಕಾಲಕ್ಕೆ ದಿಲೇರಖಾನನು ಎಲ್ಲಕ್ಕೂ ಹಿಂದಿದ್ದನು. ಅವನು ಈ ಅಂಕುಚಿತ ಮಾರ್ಗದ ಮಗ್ಗುಲಿಗೆ ನಿಂತು ಯಾವತ್ತು ಸೇನೆಯನ್ನು ವ್ಯವಸ್ಥಿತರೀತಿಯಿಂದ ಒಳಗೆ ಹೋಗಬೇಕೆಂಬ ವ್ಯವಸ್ಥೆಯನ್ನು ಮಾಡುತ್ತಿದ್ದನು. ಎಲ್ಲ ಸೇನೆಯೂ ಒಳಗೆ ಬಂದಮೇಲೆ ತಾನು ಮೆಲ್ಲಮೆಲ್ಲನೆ ಹಿಂದಿಂದೆ ಬರುತ್ತಿದ್ದನು. ಇಷ್ಟರಲ್ಲಿ ಗೊಂದಲವೆದ್ದು ಸೇನೆಯು ಹಿಂದಕ್ಕೆ ಸರಿಯಹತ್ತಿತು. ಸೇನೆಯೆಲ್ಲ ತನ್ನ ಕಡೆಗೆ ಬರುವಂತೆ ಕಂಡಬಂತು. ಕಾರಣವನ್ನು ಕೇಳಿದರೆ ಯಾರೂ ಸರಿಯಾದ ಉತ್ತರವನ್ನು ಕೊಡಲೊ ಲ್ಲರು. ಶಿಪಾಯಿಗಳಿಗೆ ಮುಂದಕ್ಕೆ ನಡೆಯುವಂತೆ ಬಲಾತ್ಕಾರದ ಅಪ್ಪಣೆ ಯನ್ನಿತ್ತನು. ಇದರ ನಿಜಸ್ಥಿತಿಯನ್ನು ತಿಳಿಯುವದಕ್ಕೆ ತಾನೂ ಮುಂ ದಕ್ಕೆ ಬಂದನು. ಆದರೆ ಸೇನೆಯು ಇಷ್ಟು ಹೊತ್ತಾದರೂ ಒಂದೇಸ್ಥಳದಲ್ಲಿ ಸ್ಥಿರಗೊಳ್ಳಲೊಲ್ಲದು. ಹಿಂದೊಂದಾವರ್ತಿ ಹೇಳಿದಂತೆ ಮಾರ್ಗದ ಬಲ ಭಾಗವು ಬಹಳ ಎತ್ತರವಾಗಿತ್ತು. ಅದರಮೇಲ ಹತ್ತುವಂತಿದ್ದಿಲ್ಲ. ಪರ್ವತದ ಶಿಖರವು ಮಾರ್ಗಕ್ಕೆ ತಾಟುಮಾಡಿದಂತೆ ಜೋಲಿಜೋಲಿ ಯಾಗಿ ಕಾಣಿಸುತ್ತಿತ್ತು. ಅದರಿಂದ ಮಾರ್ಗದಲ್ಲಿ ಸುತ್ತಲೂ ಅಂಧಕಾ ರವು ಹಬ್ಬಿಗೊಂಡಿತ್ತು, ಆದರೆ ಶಿಖರದ ಆಚೆಕಡೆಯ ಮಗ್ಗುಲಿನಿಂದ ಒಂದು ದಾರಿಯನ್ನು ಹುಡುಕಿ ತಗೆದು ಅಲ್ಲಿ ಐವತ್ತು ಸವಾರರು ಕೂಡು ವಂತೆ ಮಾಡಿಕೊಂಡಿದ್ದರು. ಅಲ್ಲಿ ಕೂತದ್ದು ಕೆಳಗಿಂದ ನೋಡುವವರಿಗೆ ಕಾಣುತ್ತಿದ್ದಿಲ್ಲ. ಅವರಿಗೆ ಮಾತ್ರ ಕೆಳಗಿನವರೆಲ್ಲರೂ ಕಾಣಿಸುತ್ತಿದ್ದರು. ಪ್ರತಿಯೊಬ್ಬರು ಐವತ್ತು ಮೊಳ ಅಂತರದಮೇಲ ನಿಂತುಕೊಂಡಿದ್ದರು. ಇಡೀ ಬೆಳತನಕ ಜಾಗರಣೆಮಾಡಿ ದೊಡ್ಡದೊಡ್ಡ ಕಲ್ಲುಗಳನ್ನು ಒಟ್ಟು ಗೂಡಿಸಿ ತಲೆಗೊಂದು ರಾಶಿಯನ್ನು ಗುಂಪಿಕ್ಕಿಕೊಂಡಿದ್ದರು • ಮುಸಲ್ಮಾ ನರ ಸೇನೆಯು ಒಂದಕೂಡಲೆ ಒಂದೊಂದು ಮಿನೀಟಿನ ಅವಕಾಶದಮೇಲೆ ಆ ಐವತ್ತುಜನರೂ ಕೆಳಗಿನವರಮೇಲ ಕಲ್ಲಿನ ಮಳೆಗರೆಯುತ್ತಿದ್ದರು. ಅದರಿಂದ ಪ್ರತಿಸಾರೆ ಸವಾರರಾಗಲಿ ಕುದುರೆಗಳಾಗಲಿ ಪೆಟ್ಟುತಿಂದು ಸಾಯುತ್ತಿದ್ದವು. ಈ ಕಲ್ಲುಗಳು ಎಲ್ಲಿಂದ ಬೀಳುತ್ತಿರುವವೆಂಬುದು

ಇಬ್ಬರಿಗೂ ಗೊತ್ತಾಗಲೊಲ್ಲದು ಬದುಕುವುದಕ್ಕೆ ಪಲಾಯನವೇ ಉತ್ತಮ ಉಪಾಯವೆಂದರು ಎಲ್ಲರೂ ಅದನ್ನೇ ಅವಲಂಬಿಸಿರು ಮೋಣೆಯ ಮುಂದಿನವರಲ್ಲಿ ಸತ್ತುಳಿದವರು ತಮಗೆ ಸರಿಕಂಡಮಾರ್ಗಗ ಳಿಂದ ಓಡಿಹೋದರು

ಬಲಗಡೆಯ ಮಗ್ಗಲಿನ ಪರ್ವತಶಿಖರದ ಮೇಲಿಂದ ಐವತ್ತುಜನ ರಜಪೂತರು ಕಲ್ಲಿನ ಮಳೆಗರೆಯುತ್ತಿರುವ ಕಾಲಕ್ಕೆ ರಾಜಸಿಂಹನು ಎಡ ಗಡೆ ಸಣ್ಣ ಕಣಿವೆದಾರಿಯಲ್ಲಿ ಅಡಗಿ ಕುಳಿತಿದ್ದನು ಈವರೆಗೆ ಅವ ನಾಗಲಿ ಅವನಕಡೆಯ ರಜಪೂತರಾಗಲಿ ಶ್ರಮಮಾಡಿದ್ದಿಲ ಈಗ ಅವರು ಶ್ರಮಪಡುವಪ್ರಸಂಗ ಒಂತು ಎಲ್ಲಿ ಕಲ್ಲಿನಭಯಂಕರ ವೃಷ್ಟಿಯಿಂದ ಜನರು ಕಲ್ಲೋಲವಾಗುತ್ತಿದ್ದರೋ ಅಲ್ಲಿ ದಿಲೇರಖಾನನು ಬಂದು ನಿಂತಿ ದ್ದನು ಆ ಭಯಂಕರಸ್ಥಳಕ್ಕೆ ಒಂದಕೂಡಲೆ ಸೇನೆಯನ್ನು ವ್ಯವಸ್ಥಿತ ರೀತಿಯಿಂದ ಹೊರಗೆ ಒಯ್ಯುವ ಪ್ರಯತ್ನವನ್ನು ಮಾಡಿದನು ಅದೆಲ್ಲ ವ್ಯರ್ಥವಾಯಿತು. ರಾಜಕನ್ನೆಯ ಮೇಣೆಯು ಒಂದು ಖಿಂಡಿಯಮಾರ್ಗ ದಿಂದ ಒಬ್ಬ ಸವಾರನೊಡನೆ ಹೋದಕೂಡಲೆ ದೊಡ್ಡದೊಂದು ಬಂಡೆ ಗಲ್ಲುಬಿದ್ದು ಮಾರ್ಗವು ಕಟ್ಟಾದದ್ದನ್ನು ದಿಲೇರಖಾನನು ನೋಡಿದನು ಇದೆಲ್ಲ ರಾಜಕನ್ನೆಯ ಹರಣದ ಕಾರಸ್ಥಾನವೆಂದು ನಿಶ್ಚಯಿಸಿದನು ಆಮೇಲೆ ತನ್ನ ಸಮೀಪದಲ್ಲಿರುವ ಸಿಪಾಯಿಗಳ ಕಡೆಗೆ ತಿರುಗಿ ಆವೇಶ ದಿಂದ—“ಪ್ರಾಣಹೋದರೂ ಅಡ್ಡಿಯಿಲ್ಲ ನಿಮ್ಮೊಳಗಿನ ಒಂದುನೂರು ಜನರು ನನ್ನೊಡನೆ ಮೇಣೆಯ ಹಿಂದಿಂದೆ ಬರಬೇಕು. ಕುದುರೆಯ ಮೇಲಿಂದ ಇಳಿಯಿರಿ, ಕಾಲಿಂದ ನಡೆಯಿರಿ ಈ ಕಲ್ಲಿನರಾಶಿಯನ್ನು ದಾಟಿರಿ, ನಾನೂ ನಿಮ್ಮೊಡನೆ ಬರುತ್ತೇನೆ. ಎಂದು ದಿಲೇರಖಾನನು ಕುದುರೆಯಿಂದ ಹಾರಿದನು. ಖಿಂಡಿಯನ್ನು ಬಂದುಮಾಡಿದ ಕಲ್ಲಿನಮೇಲೆ ಹತ್ತಿದನು. ಅಲ್ಲಿಂದ ಕೆಳಗೆ ಒಳಗಿನಮಗ್ಗಲಿಗೆ ಜಿಗಿದನು. ಆ ನೂರು ಜನರೂ ಈತನ ಅನುಕರಣಮಾಡಿದರು. ರಾಜಸಿಂಹನು ಮೇಲೆನಿಂತು ಇದೆಲ್ಲವನ್ನೂ ನೋಡುತ್ತಿದ್ದನು. ಮೇಣೆಯೊಡನೆ ಒಬ್ಬ ಸವಾರನು

ಒಳಗೆಬರುವವರೆಗೆ ಅವನು ಅತ್ತಿತ್ತ ಸರಿದಾಡಲಿಲ್ಲ. ಇನ್ನು ಉಪೇಕ್ಷೆಯನ್ನು ಮಾಡುವುದು ಸರಿಯೆನಿಸಲಿಲ್ಲ. ದಿಲೇರಖಾನನನ್ನು ತಡೆಯುವದಕ್ಕೆ ಯತ್ನಿಸಿದನು. ಎತ್ತರವಾದ ಸ್ಥಳದಿಂದ ಕಲ್ಲಿನ ರಾಶಿಯು ಬಿದ್ದಂತೆ ಈ ಐವತ್ತುಜನರೂ ಅವರ ಮೈಮೇಲೆ ಬಿದ್ದು ತುಂಡರಿಸುವುದಕ್ಕೆ ಆರಂಭಿಸಿದರು. ಕನಸು ಮನಸುಗಳಲ್ಲಿಲ್ಲದ ಈ ಪರಿಣಾಮವನ್ನು ಕಂಡು ಮೊಗಲರು ಧೈರ್ಯಗುಂದಿದರು. ಎಷ್ಟೋಜನರು ಸತ್ತುಹೋದರು. ಕುದುರೆಯಿಂದಿಳಿದು ದಿಲೇರಖಾನನೊಡನೆ ಬಂದಿದ್ದವರು ರಜಪೂತರ ಕೈಯಿಂದ ಮರಣಹೊಂದಿದರು. ಕೆಳಗಿದ್ದವರು ಕಲ್ಲಿನ ಮಳೆಯಲ್ಲಿ ಸಿಕ್ಕಿ ಸತ್ತರು. ಕಡೆಗೆ ಆರೇಳು ಜನರು ಉಳಿದರು. ಅವರನ್ನು ಕರಕೊಂಡು ದಿಲೇರಖಾನನು ಹಿಂದಿರುಗಿದನು. ರಜಪೂತರು ಬೆನ್ನಟ್ಟಲಿಲ್ಲ. ಹೊರಗೆಹೋಗಲಿಕ್ಕೆ ಅಡ್ಡಿಯನ್ನೂ ಮಾಡಲಿಲ್ಲ. ದಿಲೇರಖಾನನು ಸಣ್ಣ ಕಣಿವೆಯರಾಶಿಯ ಖಿಂಡಿಯಿಂದ ಹೊರಗೆಬಂದನು. ಅಲ್ಲಿ ನಿಂತಿರುವ ಸೇನೆಯವರನ್ನು ಕುರಿತು—"ಈ ಎಡಗಡೆಯ ಪರ್ವತದ ಮೇಲೆ ಹತ್ತುವದು ಅಷ್ಟು ಬಿಗಿಯಾಗಿಲ್ಲ. ನಾವೆಲ್ಲರೂ ನಮ್ಮನಮ್ಮ ಕುದುರೆಗಳನ್ನೇರಿ ಈ ಪರ್ವತದಮೇಲೆ ಹತ್ತೋಣ. ದರೋಡೆಯವರ ಸಂಖ್ಯೆಯು ವಿಶೇಷವಿಲ್ಲ. ಆದರಿಂದ ಈ ಬಿಕ್ಕಟ್ಟಿನ ಪ್ರಸಂಗದಲ್ಲಿ ಸಹಜವಾಗಿ ಅವರನ್ನು ಸಮೂಲನಾಶಮಾಡುತ್ತೇವೆ." ಇದನ್ನು ಕೇಳಿ ಐನೂರು ಸವಾರರು 'ದೀನ್‌ದೀನ್' ಎಂದು ಧ್ವನಿಮಾಡುತ್ತ ಪರ್ವತವನ್ನು ಏರಹತ್ತಿದರು. ದಿಲೇರಖಾನನು ಎಲ್ಲರಿಗೂ ಮುಂದಾಗಿದ್ದನು. ಮೊಗಲರ ಹತ್ತರ ಎರಡು ತೋಫುಗಳಿದ್ದವು. ಒಂದನ್ನು ಎತ್ತಿ ಪರ್ವತದ ಮೇಲೆ ತರಲಾಜ್ಞಾಪಿಸಿದನು. ಪರ್ವತಖಿಂಡಿಯು ಬಂದಾದ ಬಂಡೆಗಲ್ಲಿನ ಮೇಲೆ ಅದನ್ನು ಎತ್ತಿಟ್ಟರು. ಆದರ ಬಾಯಿಯು ಒಳಮಗ್ಗಲಿಗಾಗಿತ್ತು.

# ಹದಿನೆಂಟನೆಯ ಪ್ರಕರಣ.

## ಜಯಾಪಜಯ.

ಕಾಲನದಳದಂತೆ ಆ ಐನೂರುಜನ ಸವಾರರು 'ಧಿನ್, ಧಿನ್' ಎಂದು ಭಯಂಕರಧ್ವನಿಮಾಡುತ್ತ ಪರ್ವತವನ್ನೇರಹತ್ತಿದರು. ಆ ಪರ್ವತವು ಅಷ್ಟು ಎತ್ತರವಾದದ್ದಲ್ಲವೆಂಬದು ವಾಚಕರಿಗೆ ಗೊತ್ತದೆ. ಅದನ್ನು ಏರಲಿಕ್ಕೆ ಬಹಳವೇಳೆ ಹತ್ತಲಿಲ್ಲ. ಎಲ್ಲರೂ ಪರ್ವತವನ್ನು ಏರಿದರು. ಆದರೆ ಯಾರೂ ಕಣ್ಣಿಗೆ ಕಾಣಿಸಲಿಲ್ಲ. ತಾವು ಪರಾಜಿತರಾಗಿ ಹಿಂದಿರುಗಿದ ಆಕುಂಚಿತ ಖಿಂಡಿಯ ಹತ್ತರ ದರೋಡೆಯವರ ಗುಂಪು ಕೂಡಿರುವುದೆಂದು ಖಾನನಿಗೆ ತಿಳಿಯಿತು. ಖಿಂಡಿಯ ಎರಡನೆ ಬಾಯಿಯನ್ನು ಬಂದುಮಾಡುವುದಕ್ಕೆ ತನ್ನ ಸೇನೆಯವರಿಗೆ ಆಪ್ಪಣೆಯನ್ನು ಕೊಟ್ಟನು. ಮೊದಲಿನಖಿಂಡಿಯ ಬಾಗಿಲವನ್ನು ಹಸನಅಲ್ಲಿ ಎಂಬ ಎರಡನೇ ಸೇನಾಪತಿಯು ತೋಫಿನಿಂದ ಬಂದುಮಾಡಿಕೊಂಡು ಕುಳಿತಿದ್ದನು. ಅದು ಖಾನನಿಗೆ ಗೊತ್ತಿತ್ತು. ದರೋಡೆಯವರನ್ನು ಹಣ್ಣಿಗೆ ತರಬೇಕಾದರೆ, ಖಿಂಡಿಯ ಎರಡನೆ ಬಾಯಿ ಬಂದುಮಾಡುವುದೆ ಸುಲಭಉಪಾಯವೆಂದರಿತುಕೊಂಡನು. ಅದರಿಂದ ಬೇಗನೆ ಮುಂದಕ್ಕೆ ಹೋಗಹತ್ತಿದನು. ಮುಂದಕ್ಕೆ ಹೋದಂತೆ ಖಿಂಡಿಯಮಾರ್ಗವು ಅಗಲವಿಲ್ಲೆಂದು ಕಂಡುಬಂತು. ಮಾರ್ಗವು ಪೂರ್ವಪರಿಚಯವುಳ್ಳದ್ದಲ್ಲ. ಆದ್ದರಿಂದ ರಜಪೂತರನ್ನು ಹಿಡಿಯುವದಕ್ಕೆ ಹೋಗಿ ತಾವೇ ಸಿಕ್ಕುಬೀಳುವ ಪ್ರಸಂಗಬಂದೀತೆಂದು ಖಾನನು ಅಂಜಿದನು. ಖಿಂಡಿಯ ಬಾಯಿಯು ಎಷ್ಟುದೂರವಿರುವುದೆಂದು ನೋಡುವುದಕ್ಕೆ ಪರ್ವತದ ಮಗ್ಗಲಿಗೆ ಹೋದನು. ರಕ್ತದಿಂದ ಮುಳುಗಿದ ನಾಲ್ವತ್ತು ರಜಪೂತರು ಮೇಣೆಯೊಡಗೊಂಡು ಹೋಗುತ್ತಿದ್ದರು. ಮಾರ್ಗವು ಸುಲಭವಾಗಿ ತನ್ನಿಂದತಾನೆ ತೊರೆದಂತಾಯಿತು. ಆ ರಜಪೂತರು ಖಿಂಡಿಯಿಂದ ಹೋಗಬೇಕೆಂದಿದ್ದರು. ಅದರೊಡನೆ ರಾಜ

ಕನ್ನೆಯ ಮೋಣೆ ಇತ್ತು. ಅವರ ಹಿಂದಿಂದೆ ಹೋದರೆ ತಮಗೆ ಬೇಗನೆ ಖಿಂಡಿಯ ಬಾಯಿಯು ದೊರೆಯುವದೆಂದು ದಿಲೇರಖಾನನು ಸಪ್ಪಳ ವಾಗದಂತೆ ಸೇನೆಯವರನ್ನು ನಡಿಸಿದನು ಸ್ವಲ್ಪಹೊತ್ತು ಹೋದನಂತರ ಗುಡ್ಡದ ಎತ್ತರದ ಸ್ಥಳವನ್ನು ದಾಟಿದಕೂಡಲೆ ಅವರ ಎದುರಿಗೆ ಹೊರಗೆ ಹೋಗುವ ಮಾರ್ಗವಿದೆ, ಎಂದು ತಿಳಿದುಕೊಂಡನು ಸೇನೆಯವರಿಗೆ ಕುದುರೆಗಳನ್ನು ದಾಟಿಸಲಿಕ್ಕೆ ಹೇಳಿದನು ಮೋಣೆಯನ್ನು ತೆಗೆದು ಕೊಂಡುಬರುವ ರಜಪೂತರು ಅಲ್ಲಿಗೆ ಬರುವುದರೊಳಗಾಗಿ ಖಿಂಡಿಯ ಬಾಯಿಗೆ ಒಂದುಮುಟ್ಟಿದನು ರಜಪೂತರು ಬರುವ ಮಾರ್ಗವು ಬಿಕ್ಕಟ್ಟಿನ ಪ್ರದೇಶವಾಗಿತ್ತು ಅದರಿಂದ ಅವರಿಗೆ ಮೊಗಲರಿಗಿಂತ ಬೇಗ ಅಲ್ಲಿಗ ಬರಲಿಕ್ಕಾಗಲಿಲ್ಲ ಖಿಂಡಿಯಬಾಯಿಗೆ ಮುಸಲ್ಮಾನರು ತೋಫು ತಂದಿಟ್ಟು ಸಂಜಕಗಾಗಿ ಒಂದು ತೋಫು ಹಾರಿಸಿದರು ಕೂಡಲೆ 'ಓನ್ ಧಿನ್'' ಎಂದು ಗರ್ಜಿಸಿದರು ತೋಫಿನ ಸಪ್ಪಳವನ್ನು ಕೇಳಿ ಖಿಂಡಿಯ ಎರಡನ ಬಾಯಿಗಿದ್ದ ಹಸನಅಲ್ಲಿಯು ತನ್ನ ತೋಫಿಗೆ ಒತ್ತಿಹಚ್ಚಿ ಪ್ರತ್ಯುತ್ತರವನ್ನು ಕೊಟ್ಟನು ತೋಫಿನ ಭಯಂಕರಘರ್ಜನೆ ಅದರಲ್ಲಿ 'ಧೀನ್ ಧೀನ್'' ಎಂಬ ಶಬ್ದಗಳ ಸಂಯೋಗವು ಪರ್ವತಶಿಖರದಲ್ಲೆಲ್ಲ ಪ್ರತಿಧ್ವನಿಗೊಂಡಿದ ಕೇಳಿ ರಜಪೂತರ ಎದೆಯೊಡೆಯಿತು ನ್ಯಾಗೆ ನಡುಗುಹುಟ್ಟಿತು ಅವರಲ್ಲಿ ತೋಫುಗಳಾಗಲಿ ತುಪಾಕಿಗಳಾಗಲಿ ಇರಲಿಲ್ಲ. ಕತ್ತಿಯ ಹೊರ್ತು ಬೇರೆ ಆಯುಧವಿದ್ದಿಲ್ಲ

ರಾಜಸಿಂಹನಿಗೆ ಒಳ್ಳೇ ಇಕ್ಕಟ್ಟಿಗಟಿತು ಸಂರಕ್ಷಣೆಯ ಮಾರ್ಗವು ದೊರೆಯಲೊಲ್ಲದು ಶತ್ರುಗಳ ಸೇನೆಯು ತಮ್ಮ ಇಪ್ಪತ್ತುಪಟ್ಟು ಎರಡೂ ಮಾರ್ಗಗಳು ಕಟ್ಟಾಗಿ ಹೊರಬೀಳುವ ಬಗೆ ಹೇಗೆ? ರಾಜಸಿಂಹನು ಇದಕ್ಕೆ ಹೆದರಲಿಲ್ಲ ಸಂಗ್ರಾಮದಲ್ಲಿ ಗೆಲ್ಲಲಿ ಸೋಲಲಿ ಶತ್ರುಗಳೊಡನೆ ಕಾದುವದೆ ನಿಶ್ಚಯಮಾಡಿ ತನ್ನ ಸೈನಿಕರನ್ನು ಕರೆದು—''ಮಿತ್ರರೆ ನಾನು ಈಹೊತ್ತು ನಿಮ್ಮಲ್ಲಿ ಅಂತಃಕರಣಪೂರ್ವಕ ಕ್ಷಮೆಬೇಡುತ್ತೇನೆ. ನನ್ನ ಆದೂರದರ್ಶನಕ್ಕಾಗಿ ನೀವು ಈ ಸಂಕಟಕ್ಕೆ

ಗುರಿಯಾದಿರಿ. ಪರ್ವತದಿಂದ ಇಳಿಯುವಾಗ್ಗೆ ನಾವು ತಪ್ಪುಮಾಡಿದೆವು. ಈಗ ಎರಡೂ ಮಾರ್ಗಗಳು ಒಂದಾದವು ತೋಫಿನ ಸಪ್ಪಳಗಳೂ ಕೇಳ ಬರುತ್ತವೆ. ನಿಮಗಿಂತ ಎಷ್ಟೋಪಟ್ಟು ಹೆಚ್ಚು ಜನರು ಜೀವದ ಹಂಗು ದೊರೆದು ನಮ್ಮೊಡನೆ ಕಾದುವದಕ್ಕೆ ನಿಂತಿರುವರು. ನಮಗಂತೂ ಪ್ರಾಣವುಳಿಸಿಕೊಳ್ಳುವ ಆಶೆಯೆ ಇಲ್ಲ ಆದರೇನು? ನಾವು ರಜಪೂತರು ಜೀವಕ್ಕೆ ಹೆದರುವದೇಕೆ? " "ಇಲ್ಲ ಇಲ್ಲ." "ಬಾಂಧವರೆ, ನಾವೆಲ್ಲರು ಪ್ರಸ್ತುತಪ್ರಸಂಗದಲ್ಲಿ ಧೈರ್ಯಗೊಳ್ಳಬೇಕು ಕಾಳಗದಲ್ಲಿ ಸೋತು ಕಪ್ಪಾದ ಮುಖವನ್ನು ಜನರೊಳಗೆ ತೋರಿಸಬೇಕೆಂಬ ಇಚ್ಛೆಯು ರಜಪೂತರಲ್ಲಿ ಎಂದೂ ಬರಬಾರದು. ಕಾದಿ ಸಾಯುವವರೇ ರಜಪೂತರು ಸಾಯುವ ಪೂರ್ವದಲ್ಲಿ ಕನಿಷ್ಟ ಇಬ್ಬರು ಮೊಗಲರನ್ನು ಕೊಲ್ಲದವನು ರಜಪೂತನಲ್ಲ. ಇಲ್ಲ ಕುದುರೆಗಳು ನಡೆಯುವದಿಲ್ಲ. ಆದ್ದರಿಂದ ಕುದುರೆಗಳನ್ನು ಬಿಟ್ಟು ಬಡಿರಿ. ಕೈಯಲ್ಲಿ ಕತ್ತಿಗಳನ್ನು ತಕ್ಕೊಳ್ಳಿರಿ ನಾವೆಲ್ಲರು ಬಾಣದಂತೆ ಹೋಗಿ ತೋಫಿನಮೇಲೆ ಬೀಳೋಣ. ಅದನ್ನು ಗೆದ್ದುಕೊಳ್ಳೋಣ ಆಮೇಲೆ ನಾವು ಎಷ್ಟುಜನ ಮೊಗಲರನ್ನು ಯಮ ನಗರಕ್ಕೆ ಕಳಿಸುತ್ತೇವೆಂಬದು ಅವರಿಗೇ ಗೊತ್ತಾಗುವದು.

ರಜಪೂತರೆಲ್ಲರು ಕುದುರೆಯಿಂದಿಳಿದರು. ಒರೆಗಳಿಂದ ಕತ್ತಿಗಳನ್ನು ಹೊರಗೆಳೆದರು. ಅವರ ದೃಢನಿಶ್ಚಯದ ಚಿನ್ಹದಿಂದ ರಾಣಾನಿಗೆ ಆನಂದವೆನಿಸಿತು. ಈ ಹೊತ್ತು ರಜಪೂತರು ಸಾಯುವವರೆಗೆ ಕಾದುವರಲ್ಲದೆ, ಮರಳುವದಿಲ್ಲೆಂದು ಗೊತ್ತಾಯಿತು. ಇವರ ಉತ್ಸಾಹವನ್ನು ಕಂಡು ರಾಣಾನು ಇಬ್ಬಿಬ್ಬರದೊಂದು ಸಾಲಾಗಲಿಕ್ಕೆ ಹೇಳಿದನು ಮೊದಲು ಕುದುರೆಗಳಿದ್ದದ್ದರಿಂದ ಒಂದೇ ಸಾಲಾಗಬೇಕಾಗಿತ್ತು, ದಾರಿಯು ಆಕುಂಚಿತವಾದದ್ದಾದರೂ ಇಬ್ಬಿಬ್ಬರು ಕಾಲಾಳುಗಳಿಗೆ ಅಡಚಣೆಯೆನಿಸಲಿಲ್ಲ. ಎಲ್ಲಕ್ಕೂ ಮುಂದೆ ರಾಣಾ ರಾಜಸಿಂಹನಿದ್ದನು.

ಅವನ ಪ್ರಫುಲ್ಲವಾದ ಮುಖವು ಈ ಹೊತ್ತು ಪರಾಕ್ರಮವನ್ನು ತೋರಿಸಿ ಸಾಯಬೇಕೆಂದು ಹೇಳುವಂತಿತ್ತು. ಬೇಗ ಬೇಗ ನಡೆದು ಸ್ವಲ್ಪ

ಹೊತ್ತಿನಲ್ಲಿ ಯುದ್ಧಕ್ಕೆ ಸಿದ್ಧರಾದರು. ಆಕಾಶದೊಳಗಿನ ಮೋಡಗಳಂತೆ ಎರಡೂ ಸೇನೆಗಳು ಅಚಲವೂ ಸ್ತಬ್ಧವೂ ಆಗಿದ್ದುವು. ಎರಡೂ ಕಡೆಯುವರು ಪರಸ್ಪರ ಅಪ್ಪಣೆಗಳನ್ನು ನಿರೀಕ್ಷಿಸುತ್ತಿದ್ದರು. ರಾಣಾನು ಮೊಗಲರಮೇಲೆ ಬೀಳಲಿಕ್ಕೆ ಹೇಳಿದನು. "ಹರಹರಮಹಾದೇವ" ಎಂಬ ವೀರಧ್ವನಿಯನ್ನು ಗರ್ಜಿಸಿ ಒರೇ ಆ ನೂರು ರಜಪೂತರು ಮೊಗಲರ ಮೇಲೆ ಬಿದ್ದರು. ಮೊಗಲರಿಗೆ ತೋಫುಹಚ್ಚುವಷ್ಟು ಅವಕಾಶಕೊಡಲಿಲ್ಲ. ಇತ್ತ ದಿಲೇರಖಾನನೂ ತನ್ನ ಸೇನೆಗೆ ಅಪ್ಪಣೆಯನ್ನು ಕೊಟ್ಟನು "ಅಲ್ಲಾಹು ಅಕಬರ" ಎಂಬ ಧ್ವನಿಯು ಪರ್ವತದಲ್ಲೆಲ್ಲ ಪ್ರತಿಧ್ವನಿಗೊಂಡಿತು. ಕೂಡಲೆ ಯುದ್ಧಕ್ಕೆ ಸುರುವಾಯಿತು. ರಜಪೂತರು ಜೀವದಾಶೆಯನ್ನು ಬಿಟ್ಟಿದ್ದರು. ಗೆಲ್ಲುವೆವು ಇಲ್ಲವೆ ಸಾಯುವೆವೆಂಬ ದೃಢಸಂಕಲ್ಪದಿಂದ ಕಾದುವರು; ಒಬ್ಬ ರಜಪೂತನು ಎರಡೆರಡು ಮೂರುಮೂರು ಮೊಗಲರನ್ನು ಕೀಳಲೊಲ್ಲನು. ಮೊಗಲರ ತಲೆಗಳು ಹಾರಹತ್ತಿದವು. ರಜಪೂತರ ಸಂಖ್ಯೆಯಾದರೋ ಕಡಿಮೆಯಾಗಹತ್ತಿತು. ಮೊಗಲರ ಹಾನಿಯು ಹೆಚ್ಚಾಯಿತು. ಪ್ರತಿಯೊಬ್ಬರಜಪೂತನು ಪ್ರಾಣಕ್ಕೆ ಹೆದರಲೊಲ್ಲನು; ಮೊಗಲರಿಗೆ ಯಮನಂತೆ ತೋರಹತ್ತಿದನು. ಮೊಗಲರು ಹೆದರಿದರು. ಆದರೇನು ? ಅವರು ಸಹಸ್ರಜನರು, ರಜಪೂತರು ಒಂದುನೂರು ಜನರು. ಬಲವಾದ ಮೊಗಲಸೇನೆಯ ಮುಂದೆ ಈ ಅತ್ಯಲ್ಪ ರಜಪೂತ ಸಂಖ್ಯೆಯು ಎಷ್ಟೊತ್ತಿನದು ? ಅವರ ಸಂಖ್ಯೆಯನ್ನು ನೋಡಿ ತಮಗೆ ಅಪಯಶವು ನಿಶ್ಚಯವಾಗಿ ಬರುವದೆಂದು ರಾಜಸಿಂಹನಿಗೆ ಮನವರಿಕೆಯಾಯಿತು. ರಜಪೂತರನ್ನು ಹುರಿದುಂಬಿಸುವುದಕ್ಕೆ ಮಾಡಿದ ಪ್ರಯತ್ನವೆಲ್ಲ ವ್ಯರ್ಥವಾಯಿತು. ತೀರ ಸ್ವಲ್ಪಜನರು ಆ ಬಲವಾದ ಸೇನೆಯನ್ನು ಹ್ಯಾಗೆ ನಾಶಮಾಡಬೇಕು ? ಇಷ್ಟರಲ್ಲಿ ಮೊಗಲರ ಹಿಂಭಾಗದಲ್ಲಿ ಸಹಸ್ರಸಹಸ್ರವಾಗಿ ತುಪಾಕಿಗಳು ಹಾರುವ ಸಪ್ಪಳವು ಕೇಳಿಬಂತು. ನೂರಾರು ಮೊಗಲರು ನೆಲಕ್ಕುರುಳಿದರು. ದಿಲೇರಖಾನನು ಚಕಿತನಾಗಿ ಮರಳಿ ನೋಡಹತ್ತಿದನು. ಆತನಿಗೆ ಕಾಣಿಸಿದುದೇನು ?

# ಹತ್ತೊಂಭತ್ತನೆಯ ಪ್ರಕರಣ.

## ವಿಜಯ

ದಿಲೇರಖಾನನು ಹಿಂದಿರುಗಿನೋಡಿದನು. ಕಪ್ಪನೆಯ ವಸ್ತ್ರದಿಂದ ಮುಖವನ್ನು ಆಚ್ಛಾದಿಸಿಕೊಂಡ ಸಾವಿರಾರು ಜನ ಕುದುರೆ ಸವಾರರು ತಮ್ಮ ಹಿಂದೆ ಬಂದು ಹಲ್ಲಾ ಮಾಡುತ್ತಾರೆ ಎರಡೂ ಮಗ್ಗಲಿಗೆ ಕಾದುವದು ಸುರುವಾಯಿತು, ಕನಸುಮನಸಿನಲ್ಲಿಲ್ಲದ ಈ ಅಕಲ್ಪಿತ ಸಹಾಯವನ್ನು ಕಂಡು ರಜಪೂತರಿಗೆ ಅತ್ಯಾನಂದವಾಯಿತು. ಉತ್ಸಾಹವು ದ್ವಿಗುಣಿತವಾಯಿತು. ಮೊಗಲರು ಧೈರ್ಯಗುಂದಿದರು. ಹೊಸಸವಾರರ ಶಕ್ತಿಗೆ ಎದುರುಕೊಟ್ಟು ನಿಲ್ಲುವುದಕ್ಕೆ ಆಗಲೊಲ್ಲದು. ದಾರಿ ದೊರೆದತ್ತ ಪಲಾಯನ ಹೇಳಿದರು. ದಿಲೇರಖಾನನಾದರೂ ಅವರನ್ನು ತಡೆಯಲೊಲ್ಲನು. ಇದನ್ನು ಕಂಡು ಆಚ್ಛಾದಿತಸವಾರರು “ ಜಯರಾಣಾಜೀಕಿ ಜಯ ” ಎಂದು ಜಯಘೋಷಮಾಡುತ್ತ ಬೆನ್ನಟ್ಟಿದರು.

ದಿಲೇರಖಾನನು ತನ್ನ ಛಿನ್ನವಿಛಿನ್ನವಾದ ಸೇನೆಯಲ್ಲಿ ಉತ್ಸಹಹುಟ್ಟಿಸಬೇಕೆಂದು ಅನೇಕ ಪ್ರಯತ್ನಗಳನ್ನು ಮಾಡಿದನು. ಆದರೆ ಅದೆಲ್ಲ ವ್ಯರ್ಥ. ಒಂದಾವರ್ತಿ ತಪ್ಪಿದ ಅಣಿಯು ಪುನಃ ಸರಿಯಾಗಲಿಲ್ಲ ಈವರೆಗೆ ರಾಜಸಿಂಹನು ಆಶ್ಚರ್ಯಮಗ್ನನಾಗಿ ತಟಸ್ಥನಾಗಿ ನಿಂತುಬಿಟ್ಟಿದ್ದನು. ಈ ಸಹಾಯವು ಯಾರಿಂದಾಯಿತು ? ಎಲ್ಲಿಂದ ಬಂತೆಂಬ ಅನುಮಾನ ಸಹ ಆಗಲೊಲ್ಲದು. ಇಷ್ಟರಲ್ಲಿ ಒಬ್ಬ ಆಚ್ಛಾದಿತರಾಹುತನು ರಾಣಾನ ಹತ್ತರ ಬಂದು “ಮಹಾರಾಣಾನಿಗೆ ವಿಜಯವಾಗಲಿ ” ಎಂದು ಹರಸಿ ನಿಂತುಕೊಂಡನು. ರಾಣಾನು ಸವಾರನಿಗೆ ಆತಂಕವೇನೂ ಇಲ್ಲದಿದ್ದರೆ ಮುಖದಮೇಲಿನ ಆವರಣವನ್ನು ತೆಗೆಯಲಿಕ್ಕೆ ಹೇಳಿದನು ಸವಾರನು ತನ್ನ ಆವರಣವನ್ನು ತೆಗೆದುಹಾಕಿದನು ಕೂಡಲೆ ರಾಣಾನು—“ಯಾರು ಪ್ರತಾಪಸಿಂಹ! ಸಂಕಟಸಮಯಕ್ಕೆ ಧಾವಿಸಿಬಂದು ಸಹಾಯಮಾಡುವ ವೀರಪ್ರತಾಪನೆ ? ”

" ಹೌದು, ಮಹಾರಾಜರೆ, ಸ್ವಾಭಿಮಾನಕ್ಕೋಸುಗಕಾದಿ ಮಹಾನುಭಾವರಾದ ತಾವು ಯಾವಾತನ ಕಕ್ಕನ ಹಗೆತನವನ್ನು ವಹಿಸಿರುವಿರೋ ಆತನೆ ನಾನು, "

ರಾಣಾ—" ಈಹೊತ್ತು ಒಳ್ಳೆ ಸಮಯಕ್ಕೆ ಬಂದು ಸಹಾಯ ಮಾಡಿ ನಮ್ಮ ಕೀರ್ತಿಯನ್ನು ಳಿಸಿದಿ. ಒಂದುವೇಳೆ ನೀನು ಬಾರದಿದ್ದರೆ ಇಷ್ಟೊತ್ತಿಗೆ ನಾವೆಲ್ಲರು ಯಮಪುರಿಯಲ್ಲಿದ್ದು ಬಹಳ ಹೊತ್ತಾಗುತ್ತಿತ್ತು. ಇಗೋ ಈ ವೀರರೆಲ್ಲ ನಿನ್ನಿಂದಲೇ ಉಳಿವಿರುವರು. ಈ ಉಪಕಾರವನ್ನು ನಾನು ತೀರಿಸುವ ಒಗೆ ಹ್ಯಾಗೆ ? "

ಪ್ರತಾಪ—ರಾಣಾಜಿ, ಇದರಲ್ಲಿ ನನ್ನಿಂದ ತಮಗೆ ಏನೂ ಉಪಕಾರವಾಗಿಲ್ಲ. ನನ್ನ ಪ್ರಿಯ ಭಗನಿಯನ್ನು ಬಿಡಿಸುವದಕ್ಕೆ ತಾವಿಷ್ಟು ಕಷ್ಟಪಟ್ಟಿರಿ. ಜೀವದ ಹಂಗು ತೊರೆದು ಒಬ್ಬ ರಜಪೂತ ಕನ್ನೆಯನ್ನು ದುಷ್ಟರ ಕೈಯಿಂದ ಬಿಡಿಸುವದಕ್ಕೆ ಯತ್ನಿಸಿ ನಿಮ್ಮ ಮನೋಧೈರ್ಯವನ್ನು ವ್ಯಕ್ತಪಡಿಸಿದಿರಿ ಈ ತರಹದ ಮನೋಧೈರ್ಯವನ್ನು ಈ ವರೆಗೆ ನಮ್ಮ ರಜಪೂತವಂಶಜರಲ್ಲಿ ತೋರಿಸಿದವರಾರು. ? ಆಹಹಾ ರಾಣಾಜಿ ತಮ್ಮ ಪ್ರತಾಪ ಸೂರ್ಯನೆದುರಿಗೆ ಮೋಗಲರು ಧೂಳಿಯ ಕಣಗಳು. ನಿಮ್ಮ ಕಲಿತನವು ಹೊಗಳಲಸಾಧ್ಯವು. ಒಂದೇನೂರು ಜನರೊಡನೆ ಎರಡು ಸಾವಿರ ಮೊಗಲರ ಕೂಡ ಕಾದುವದಕ್ಕೆ ಸ್ವಲ್ಪಸಹ ಹಿಂದು ಮುಂದು ನೋಡಲಿಲ್ಲ ಇಂಥ ಅಮಾನುಷ ಧೈರ್ಯವನ್ನು ನನ್ನಂಥ ಪಾಮರ ನಿನ್ನೇನು ವರ್ಣಿಸುವನು ? ಈ ರಾಜಸ್ಥಾನದ ವೀರಪ್ರಸೂ ಎಂಬ ಹೆಸರನ್ನು ಸಾರ್ಥಕ ಮಾಡಿದಿರಿ. ತಮ್ಮ ಧ್ವಜದ ನೆರಳಿನಲ್ಲಿ ಪ್ರಾಣವನ್ನು ಬಿಡಲಿಕ್ಕೆ ವಹಿಸಿದ ಐವತ್ತು ಸಾವಿರ ವೀರರು ಈಗಲ್ಲಿ ಸಿದ್ಧರಿರುವರು. ನಮ್ಮ ಗುರುವರ್ಯ ಪರಮಹಂಸವರ ಉತ್ಕಟೇಚ್ಛೆಯ ಮೇರೆಗೆ ಈಗ ಪ್ರತಿಯೊಬ್ಬ ರಜಪೂತನು ರಣದಲ್ಲಿ ಸಾಯುವದಕ್ಕೆ ಹಾತೊರಿಯುತ್ತಿರುವನು. ಅವರ ಉತ್ತೇಜಕವಾಣಿಯಿಂದ ನಮ್ಮ ಸ್ವಾಮಿನಿಯ ಆಜ್ಞೆಯು ಯಾವದೇ ಇರಲಿ; ಏನೇ ಇರಲಿ; ಅದನ್ನು ಸಿದ್ಧಿಗೆ ಒಯ್ಯುವದಕ್ಕೆ

ಐವತ್ತು ಸಾವಿರ ವೀರರು ತತ್ಪರರಿರುವರು ಅವರಲ್ಲಿ ಕೆಲವು ವೀರರು ಈ ಹೊತ್ತಿನ ಕಠಿಣ ಪ್ರಸಂಗದಲ್ಲಿ ನನ್ನ ತಂಗಿಯ ಅಭಿಮಾನವನ್ನು ಕಾಯುವದಕ್ಕಾಗಿಯೂ ನಮ್ಮ ಸೋಳಂಖೀ ವಂಶದ ಕುಮಾರಿಕೆಯ ಲಜ್ಜೆಯನ್ನು ರಕ್ಷಿಸುವದಕ್ಕಾಗಿಯೂ ನಮ್ಮ ಕುಲದ ನಿಷ್ಕಲಂಕತೆಯನ್ನು ಸ್ಥಿರಗೊಳಿಸುವದಕ್ಕಾಗಿಯೂ ಹವಣಿಸುವದರೊಳಗಾಗಿ, ರಾಣಾಜಿ, ತಾವು ಸ್ವತಃ ನಮ್ಮ ಮಾನವನ್ನುಳಿಸಿದಿರಿ. ಅದರ ಪ್ರಶಂಸೆಯನ್ನು ಎಷ್ಟು ಮಾಡಿದರೂ ತೀರದು

ರಾಜಸಿಂಹ—“ ಈ ಹೊತ್ತು ನನ್ನ ಮೇಲೆ ನಿಮ್ಮ ವೀರರ ಉಪಕಾರವು ಬಹಳವಾಯಿತು. ಕಠಿಣ ಪ್ರಸಂಗವು ಇನ್ನು ಮೇಲೆ ಅದೆ ಆದರೆ ನಿಮ್ಮಂಥ ವೀರರ ಸಹಾಯವು ದೊರೆಯುತ್ತಿರಲು, ನಾನು ಈ ಪಾಷಂಡರಾದ ಮೊಗಲರೊಡನೆ ಕಾದುವದಕ್ಕೆ ಸಿದ್ಧನಿರುತ್ತೇನೆ. ”

ಪ್ರತಾಪ—“ ಪರಮೇಶ್ವರನು ಮಹಾರಾಣಾನ ಬಯಕೆಯನ್ನು ಪೂರ್ಣಗೊಳಿಸಲಿ. ಮಹಾರಾಜರೇ ಈಗ ತಾವು ಚಂಚಲಕುಮಾರಿಯನ್ನು ಉದೇಪುರಕ್ಕೆ ಕರೆದೊಯ್ಯಬೇಕೆಂದು ಬೇಡಿಕೊಳ್ಳುತ್ತೇನೆ. ಎದುರಿನ ದಾರಿಯು ನಿರಾತಂಕವಾಗಿದೆ. ನಾವು ಉಳಿದ ಮೊಗಲರನ್ನು ಶಾಸನ ಮಾಡಿ ಹಿಂದಿನಿಂದ ಉದೇಪುರಕ್ಕೆ ಬರುತ್ತೇವೆ. ”

ರಾಣಾನಿಗೆ ಈ ವಿಚಾರವು ಯೋಗ್ಯಕಂಡಿತು. ತನ್ನ ಜನರನ್ನು ಒಟ್ಟುಗೂಡಿಸಿ ಚಂಚಲ ಕುಮಾರಿಯನ್ನು ತಕ್ಕೊಂಡು ಉದೇಪುರಕ್ಕೆ ಹೋದನು.

ಈವರೆಗೆ ಜಯಸಿಂಹನು ಏನು ಮಾಡುತ್ತಿರುವನು ? ನೋಡೋಣ. ರಾಣಾ ಮತ್ತು ಪ್ರತಾಪಸಿಂಹನು ಮಾತಾಡುವದರಲ್ಲಿ ಆಸಕ್ತರಾದದ್ದನ್ನು ನೋಡಿ ತಾನು ಒಬ್ಬನೆ ಖಿಂಡಿಯ ಹೊರಗೆ ಹೋದನು ಅಲ್ಲಿ ಸುತ್ತಲಿನ ಪ್ರದೇಶವನ್ನು ನಿರೀಕ್ಷಿಸ ಹತ್ತಿದನು. ಒಂದು ಗಿಡದ ಅಡಿಯಲ್ಲಿ ಒಬ್ಬ ಸ್ತ್ರೀಯು ಕುಳಿತಂತೆ ಕಂಡಬಂತು. ಅಸ್ಥಳಕ್ಕೆ ಹೋದನು. ಆಯುವತಿಯ ಸೌಂದರ್ಯವನ್ನು ಕಂಡು ಆತನಿಗೆ ಮೋಹವುಂಟಾಯಿತು. ರಣ

ಮಂಡಲದಲ್ಲಿ ತರುಣೀಮಣಿಯು ನಿರ್ಭಯವಾಗಿ ಬಂದದ್ದು ಆಶ್ಚರ್ಯ ವೆನಿಸಿತು ಆಕೆಯ ದುಃಖಿತವಾದ ಮುಖಮುದ್ರೆಯಿಂದ ಈತನ ಅಂತಃ ಕರಣದಲ್ಲಿ ಬೇರೆಬೇರೆ ವಿಕಾರಗಳುಂಟಾಗ ಹತ್ತಿದವು. ತೀರ ಅವಳ ಹತ್ತಿರ ಹೋದಮೇಲೆ — "ತಾಯಿ ಎಲ್ಲಿಗೆ ಹೋಗುವೆ?"

"ಮಾರ್ಗದೊರೆದಲ್ಲಿಗೆ"

"ಹಾಗಾದರೆ ನೀವು ಮನೆ ಬಿಡುವಮುಂದೆ ಇಂಥಲ್ಲಿಗೆ ಹೋಗ ಬೇಕೆಂದು ನಿಶ್ಚಯಿಸಿಲ್ಲವೆ?"

"ನಿಶ್ಚಯಿಸದೆ ಯಾರಾದರೂ ಮನೆಯಿಂದ ಹೊರಡುತ್ತಾರೆಯೆ?"

"ಹಾಗಾದರೆ ಹೇಳಿರಿ, ಆಸ್ಥಳಕ್ಕೆ ಮುಟ್ಟಿಸುತ್ತೇನೆ."

"ನನಗೆ ನಡೆಯುವಶಕ್ತಿಯಿಲ್ಲ. ನಿಮ್ಮೊಡನೆ ಬರುವದು ಹ್ಯಾಗೆ?"

"ಕುದುರೆಯಮೇಲೆ ಇಬ್ಬರೂ ಕುಳಿತು ಹೋಗೋಣ"

"ಆಮೇಲೆ ದಿಲ್ಲಿಗೆ ಮುಟ್ಟುವದು ಯಾವಾಗ?"

"ನೀನು ದಿಲ್ಲಿಗೆ ಹೋಗುವದೇಕೆ? ಅಲ್ಲಿ ನಿನ್ನ ಕೆಲಸವೇನು?"

"ನನ್ನ ಗೆಳತಿಯಾದ ಚಂಚಲ ಕುಮಾರಿಯು ಅಲ್ಲಿಗೆ ಹೋಗಿರು ವಳು ಆಕೆಯಲ್ಲಿಗೆ ಹೋಗಬೇಕೆಂದು ಹೊರಟಿರುತ್ತೇನೆ. ನಡುವೆ ಯು ದ್ಧನಡೆದದೆ. ಏನಿದು? ಈಸೇನೆಯಾರದು?"

ಜಯಸಿಂಹ—"ಈಸೇನೆಯು ರಾಣಾಜಯಸಿಂಹನ ಸಹಾಯಕ್ಕೆ ಬಂದಿದೆ. ಚಂಚಲ ಕುಮಾರಿಯ ಬಿಡುಗಡೆಯಾಯಿತು ಅವಳು ನಮ್ಮ ಮಹಾರಾಣಿಯಾಗುವಳು. ನಾನು ಅವರ ಒಬ್ಬ ಅಮಲದಾರನು. ನೀನು ಅಮಲದಾರಿಣಿಯಾಗುವ ಮನಸಿದ್ದರೆ ಈದಾಸನು ತನ್ನೊ ಡನೆ ಒಯ್ಯುವದಕ್ಕೆ ಸಿದ್ಧನಿರುತ್ತಾನೆ." ಜಯಸಿಂಹನ ಮುಖ ದಿಂದ ಚಂಚಲಕುಮಾರಿಯ ಬಿಡುಗಡೆಯನ್ನು ಕೇಳಿದಕೂಡಲೆ ನಿರ್ಮಲ ಕುಮಾರಿಗೆ ಅತ್ಯಂತ ಆನಂದವಾಯಿತು ಆಕೆಯ ಮನೋಭಾವವು ಏನೇ ಇರಲಿ; ಜಯಸಿಂಹನೊಡನೆ ಹೋಗುವುದಕ್ಕೆ ತತ್ಪರಳಾದಳು. ಆತನು

ಕೈಕೊಟ್ಟು ಕುದುರೆಯಮೇಲೆ ಹತ್ತಿಸಿಕೊಂಡನು ಕುದುರೆಯು ತಿರುಗಿತು ರಾಣಾನು ಹೊರಬೀಳುವಹೊತ್ತಿಗೆ ಇವರ ಕುದುರೆಯು ಅಲ್ಲಿಗೆ ಬಂತು ರಾಣಾನು ಜಯಸಿಂಹನ ಮುಖದಿಂದ ನಿರ್ಮಲಕುಮಾರಿಯ ಸಂಗತಿಯನ್ನು ಕೇಳಿದನು, ನಿರ್ಮಲೆಗೆ ಚಂಚಲಕುಮಾರಿಯ ಹತ್ತರ ಮೇಣೆಯಲ್ಲಿ ಸ್ಥಳಮಾಡಿ ಕೊಟ್ಟನು ಆದರಿಂದ ಜಯಸಿಂಹನಿಗೆ ಮಾತ್ರಸ್ವಲ್ಪ ವಿರಸವಾಯಿತು. ಪ್ರಸಂಗವನ್ನು ಕಂಡು ಸುಮ್ಮನಾದನು ಜಯಸಿಂಹನ ಕುದುರೆಯು ಮೇಣೆಯಹಿಂದಿಂದೆ ನಡೆದಿತ್ತು.

## ಇಪ್ಪತ್ತನೆಯ ಪ್ರಕರಣ.

### ತಂದೆಯ ಸಮ್ಮತಿಯು ಬೇಕೇಬೇಕು

ರಾಜಸಿಂಹನಿಗೆ ಪರಾಭವವಾಗುವ ಪ್ರಸಂಗದಲ್ಲಿ ಪ್ರತಾಪಸಿಂಹನು ಸಹಾಯಕ್ಕೆ ಬಂದಿದ್ದರಿಂದ ರಾಣಾನು ವಿಜಯಿಯಾದನು ಚಂಚಲಕುಮಾರಿಯ ಸರಳವಾದ ಪ್ರೇಮಕ್ಕೆ ಈಶ್ವರನು ಆಕೆಯ ಬಿಡುಗಡೆಮಾಡಿದನು. ಆಕೆಯ ಮನೋಇಚ್ಛೆಯಂತೆ ರಾಜಸಿಂಹನ ಸಮ್ಮೇಲನವೂ ದೊರೆಯಿತು ಚಂಚಲೆಗೆ ಬೇಕಾದದ್ದೇ ಇಷ್ಟು. ಇನ್ನುಮೇಲೆ ಅವಳ ಆನಂದಕ್ಕೆ ಮೇರೆಯಿಲ್ಲವಾಯಿತು ಇಂಥದರಲ್ಲಿ ನಿರ್ಮಲಕುಮಾರಿಯು ಮೇಣೆಯಲ್ಲಿ ಅವಳ ಮಗ್ಗಲಲ್ಲಿ ಬಂದು ಕುಳಿತೊಡನೆ ಚಂಚಲೆಯು ಹರ್ಷಪರವಶೆಯಾದಳು ನಿರ್ಮಲೆಯನ್ನು ಘಟ್ಟಿಯಾಗಿ ಆಲಿಂಗಿಸಿದಳು. ಎಲ್ಲರೂ ಉದೇಪುರಕ್ಕೆ ಬಂದಾಯಿತು. ರಾಜಸಿಂಹನು ಮೊದಲು ಅಲ್ಲಿಗೆ ಹೋದೊಡನೆಯೇ ಚಂಚಲಕುಮಾರಿಯನ್ನು ತನ್ನ ಪಟ್ಟಮಹಿಷಿಯೊಡನೆ ಇರಿಸಿದನು. ರಾಜಸಿಂಹನು ಚಂಚಲಕುಮಾರಿಯನ್ನು ಬಿಡಿಸಿ ಆಯಿತು. ಇನ್ನುಮೇಲೆ ಮುಂದೆ ಅವಳನ್ನು ಏನುಮಾಡಬೇಕು ? ಎಲ್ಲಿಗೆ ಕಳಿಸಬೇಕು? ಎಂಬ ವಿಚಾರವು ಆತನಿಗೆ ಹೆಚ್ಚಾಯಿತು. ಉದೇಪುರದಲ್ಲಿರಿಸಬೇಕೋ

ಅಥವಾ ಆಕೆಯ ತಂದೆಯಕಡೆಗೆ ರೂಪನಗರಕ್ಕೆ ಕಳಿಸಬೇಕೊ ಎಂಬ ದನ್ನು ನಿಶ್ಚಯಿಸುವುದು ಆತನಿಗೆ ಕಠಿಣವೆನಿಸಿತು ಹಾಗು ಮನೋನಿಶ್ಚ ಯವಾಗುವವರೆಗೆ ಚಂಚಲಕುಮಾರಿಗೆ ಆತನು ಭೇಟಿ ಸಹ ಆಗಲಿಲ್ಲ

ಇತ್ತ ಚಂಚಲಕುಮಾರಿಯ ಮನಸು ಎರಡುಕಡೆಗೆ ಹರಿಯು ತ್ತಿತ್ತು ರಾಣಾನ ಈ ವರ್ತನವು ಅವಳಿಗೆ ಆಶ್ಚರ್ಯವೆನಿಸಿತು. ಆತನ ಮನಸಿನಲ್ಲಿ ನನ್ನನ್ನು ಲಗ್ನವಾಗಬೇಕೆಂಬ ಒಯಕೆ ಇದ್ದರೆ ಹೀಗೆ ಮೌನ ವನ್ನು ಧರಿಸುತ್ತಿದ್ದಿಲ್ಲ ಹಾಗಿದ್ದರೆ ನಾನು ಈ ಅಂತಃಪುರದಲ್ಲಿರುವುದು ನಾಚಿಕೆಗೇಡಿತನವು ಇನ್ನುಮೇಲೆ ಇಲ್ಲಿ ಇರದೆ ಎಲ್ಲಿಹೋಗಲಿ ಎಂದು ಚಿಂತೆಯಲ್ಲಿ ಮುಳುಗಿದ್ದಳು

ರಾಣಾನಮನಸ್ಸಿನಲ್ಲಿ ಯಾವದೂ ನಿಶ್ಚಯವಾಗಲೊಲ್ಲದು. ಚಂ ಚಲಕುಮಾರಿಯ ಭಾವವನ್ನು ತಿಳಿಯುವುದಕ್ಕೆ ತಾನೆ ಅವಳಲ್ಲಿಗೆ ಹೋ ಗಬೇಕಾಯಿತು ಹೋಗುವಕಾಲಕ್ಕೆ ಅನಂತಮಿಶ್ರನು ತಂದಿದ್ದ ಚಂಚಲ ಕುಮಾರಿಯ ಸ್ವಹಸ್ತಲೇಖವನ್ನು ತೆಗೆದುಕೊಂಡನು.

ರಾಣಾನು ಒಂದು ಆಸನದಮೇಲೆ ಕುಳಿತನು. ಚಂಚಲಕುಮಾ ರಿಯು ಎದ್ದು ರಾಣಾನಿಗೆ ನಮಸ್ಕರಿಸಿದಳು ನಮಸ್ಕರಿಸಿ ಆತನ ಸಮೀ ಪದಲ್ಲಿ ತಲೆಬೊಗ್ಗಿಸಿಕೊಂಡು ನಿಂತಳು. ಚಂಚಲಕುಮಾರಿಯ ಸೌಂದರ್ಯ ವನ್ನು ಕಂಡೊಡನೆಯೆ ರಾಣಾನ ಮನಸ್ಸು ತೃಣಬಿಂದುವಿನಂತೆ ಚಂಚಲ ವಾಯಿತು. ಗಾಳಿಗೊಡ್ಡಿದ ದೀಪಿಗೆಯಂತೆ ಹೊಯ್ದಾಡತೊಡಗಿತು. ಕೆಲಹೊತ್ತಿನಮೇಲೆ ಚದರಿಹೋದ ಮನಸಸ್ನೆಲ್ಲ ಆತ್ಮಸಂಯಮನದಿಂದ ಆಕಲನಮಾಡಿಕೊಂಡನು. ತರುವಾಯ ಚಂಚಲಕುಮಾರಿಯನ್ನು ಕುರಿತು "ಇನ್ನುಮೇಲೆ ನಿಮ್ಮಮನಸ್ಸು ರೂಪನಗರಕ್ಕೆ ಹೋಗಬೇಕೆಂದಿರು ವುದೊ? ಇಲ್ಲಿಯೇ ಇರಬೇಕೆಂದಿರುವುರೊ ?" ಎಂದನು.

ಈ ಪ್ರಶ್ನೆಯನ್ನು ಕೇಳಿ ಚಂಚಲಕುಮಾರಿಯ ಅಂತಃಕರಣದಲ್ಲಿ ವೇದನೆಯುಂಟಾಯಿತು. ಆಕೆಯ ಬಾಯಿಂದ ಮಾತುಗಳು ಹೊರಡ ಲೊಲ್ಲವು ಸುಮ್ಮನೆ ನಿಂತುಬಿಟ್ಟಳು

ಇದನ್ನು ಕಂಡು ರಾಣಾನು ಪತ್ರವನ್ನು ತೆಗೆದು ಅವಳಿಗೆ ತೋರಿಸಿ—"ಇದನ್ನು ನೀವೆ ಕಳಿಸಿದ್ದಿರಲ್ಲವೆ?" ಎಂದನು. ಅದಕ್ಕೆ ಚಂಚಲಕುಮಾರಿಯು "ಹೌದು" ಎಂದು ಉತ್ತರಕೊಟ್ಟಳು ರಾಣಾ—"ಇದರೊಳಗಿನ ಎಲ್ಲ ಸಂಗತಿಯು ನಿಜವಿರುವದೆ?"

ಚಂಚಲೆ—"ಸುಳ್ಳಾಗಲಿಕ್ಕೆ ಏನಾಯಿತು? ಅದರಂತೆಯೇ ಕೃತಿಯಾದಮೇಲೆ ಅದರೊಳಗಿನ ವಿಷಯವು ಹ್ಯಾಗೆ ಸುಳ್ಳಾಗುವುದು? ಮಹಾರಾಜರೇ, ಕ್ಷತ್ರಿಯರಾಜರು ಕನ್ನೆಯನ್ನು ಅಪಹರಿಸುವುದು ಲಗ್ನಕ್ಕಾಗಿಯ ಅಲ್ಲವೇನು? ಬೇರ ಯಾವಕಾರಣದಿಂದಾದರೂ ಸ್ತ್ರೀಯನ್ನು ಅಪಹರಿಸುವುದು ಮಹಾಪಾತಕವು." ರಾಣಾ—"ನಾನು ನಿಮ್ಮನ್ನು ಹರಣಮಾಡಿಲ್ಲ ನಿಮ್ಮ ಕುಲದ ರಕ್ಷಣೆಗಾಗಿ ಮೊಗಲರ ಕೈಯಿಂದ ಬಿಡಿಸಿದೆನು ಇನ್ನುಮೇಲೆ ನಿಮ್ಮನ್ನು ನಿಮ್ಮ ತಂದೆಯ ಕಡೆಗೆ ಕಳಿಸುವುದು ಯೋಗ್ಯವಾದ ರಾಜಧರ್ಮವು."

ಈವರೆಗೆ ಚಂಚಲಕುಮಾರಿಯು ಸ್ತ್ರಿಯರ ಸ್ವಾಭಾವಿಕಲಜ್ಜೆಗನುಸರಿಸಿ ಮುಖವನ್ನು ತಗ್ಗಿಸಿಕೊಂಡು ಉತ್ತರವನ್ನು ಕೊಡುತ್ತಿದ್ದಳು. ಇನ್ನು ಅವಳಿಂದ ತಡೆಯಲಿಕ್ಕಾಗಲಿಲ್ಲ. ತನ್ನ ಮುಖವನ್ನು ಚಟ್ಟನೆ ಮೇಲಕ್ಕೆತ್ತಿ ರಾಣಾನಕಡೆಗೆ ನೋಡುತ್ತ—"ಮಹಾರಾಜರೇ ನಿಮ್ಮ ಧರ್ಮವನ್ನು ನೀವುಪಾಲಿಸಿರಿ ನನ್ನ ಧರ್ಮವು ನನಗೆಗೊತ್ತಿದೆ. ನಾನು ಯಾವದಿವಸ ತಮ್ಮ ಚರಣಕಮಲದಲ್ಲಿ ನನ್ನ ಆತ್ಮವನ್ನು ಸಮರ್ಪಿಸಿದೆನೊ ಅಂದನಿಂದಲೂ ನಾನು ತಮ್ಮವಳಾಗಿರುತ್ತೇನ. ಮನಸಿದ್ದರೆ ನನ್ನನ್ನು ಅಂಗೀಕರಿಸಿರಿ. ಇಲ್ಲದೆ ಹೋದರೆ ಬಿಟ್ಟುಬಿಡಿರಿ. ನಾನಾದರೂ ನನ್ನಧರ್ಮದಂತೆ ನಿಮ್ಮವಳಾಗಿರುತ್ತೇನೆ. ಇನ್ನುಮೇಲೆ ಬೇರೆಯವರನ್ನು ಆಶ್ರಯಿಸುವುದು ಎಂದೂ ಶಕ್ಯವಲ್ಲ. ನೀವು ನನ್ನಸ್ವಾಮಿ; ತಮ್ಮ ಅಪ್ಪಣೆಯಂತೆ ನಡೆಯುವುದು ನನ್ನ ಕರ್ತವ್ಯವು. ತಾವು ರೂಪನಗರಕ್ಕೆ ಕಳಿಸಿದರೂ ಹೋಗುತ್ತೇನೆ. ಆದರೆ ಅಲ್ಲಿಗೆ ಹೋದಮೇಲೆ ನನ್ನ ಸ್ಥಿತಿ ಏನಾದೀತೆಂಬದರ ಬಗ್ಗೆ ವಿಚಾರಿಸಿರುವಿರಾ?" ಎಂದಳು.

–" ಹಾಗಾದರೆ ಇಲ್ಲಿಯೆ ಇರು– "

–"ನಿಲ್ಲಬಹುದು, ಆದರೆ ನಿಮ್ಮ ಮನೆಯಲ್ಲಿ ಅತಿಥಿಯಂತೆ, ಇಲ್ಲವೆ ದಾಸಿಯಂತೆ, ಇರಲಿಕ್ಕೆ ನನ್ನ ಮನಸ್ಸು ಒಲ್ಲದು, ರೂಪನಗರದರಾಜ ಕನ್ನೆಯು ಇಲ್ಲ ರಾಣಿಯಂತೆಯೆ ಇರಬೇಕಾಗುವದು– "

–"ಇಂಥಸುಂದರಿಮಣಿಯನ್ನು ಹೊಂದಿದ ಭಾಗ್ಯವಂತನ ದೈವವು ಧನ್ಯವಾದದ್ದು ಆದರೆ ನನ್ನಮನಸ್ಸು ಈರತ್ನವನ್ನು ಧರಿಸಲಿಕ್ಕೆ ಹೆದರುತ್ತದೆ ಶಾಸ್ತ್ರದಲ್ಲಿ, ವೃದ್ಧಸ್ಯ ತರುಣೀ ವಿಷಂ, ಎಂದು ಹೇಳಿದೆ. "

–" ವೃದ್ಧರೆ ? "

–" ಅಲ್ಲದಿದ್ದರೆ ತರುಣನು ಬೇರೆ ಅಲ್ಲ. "

–" ಶಕ್ತಿಯುಳ್ಳಾತನು ರಜಪೂತ ಸ್ತ್ರೀಯಳಿಗೆ ತರುಣನುತರುಣನಿಗೆ ಶಕ್ತಿಯಿಲ್ಲದಿದ್ದರೆ ರಜಪೂತ ಸ್ತ್ರೀಯಳಿಗೆ ಆತನು ವೃದ್ಧ "

–" ಮೇಲಾಗಿ ನಾನು ಸುರೂಪಿಯಲ್ಲ. "

–" ಕೀರ್ತಿಯೆ ರಾಜನಿಗೆ ರೂಪ– "

–" ನನಗಿಂತ ಬೇಕಾದಷ್ಟು ತರುಣರು ರೂಪವಂತರು, ಬಲವಂತರು, ಈರಜಪೂತವಂಶದಲ್ಲಿಉಂಟು.– "

" ನಾನು ನನ್ನ ಆತ್ಮವನ್ನು ತಮ್ಮ ಚರಣದಲ್ಲಿ ಅರ್ಪಿಸಿರುತ್ತೇನೆ. ಇನ್ನುಮೇಲೆ ನಾನು ಬೇರೆಯವರ ಪತ್ನಿಯಾಗಲಾರೆನು. ತಾವು ಒಂದು ವೇಳೆ ತ್ಯಾಗಮಾಡಿದರೆ ರಾಜಸರೋವರದಲ್ಲಿ ಬಿದ್ದು ಇಹಜನ್ಮದಿಂದ ಮುಕ್ತಳಾಗುವೆನು.

–" ನೀನು ನನಗೆ ಯೋಗ್ಯಳಾದ ರಾಣಿ, ನೀನುಮೊದಲು ಸಂಕಟದಲ್ಲಿ ಬಿದ್ದದರಿಂದ ಆರೀತಿಪತ್ರತಳಿಸುವ ಸಾಹಸಮಾಡಿರಬಹುದೆಂದು ಈವರೆಗೆ ಬೇರೆರೀತಿಯಾಗಿ ವಿಚಾರಿಸಿದೆನು. ಆದರೆ ನಿನ್ನಪ್ರತಿಜ್ಞೆಯು ನಿಶ್ಚಯವಾಗಿರುವದು. ಇದರಿಂದ ನನಗೆ ಅತ್ಯಾನಂದವೆನಿಸುತ್ತದೆ. ನಿನ್ನನ್ನು ಲಗ್ನವಾಗುವ ಪೂರ್ವದಲ್ಲಿ ರಾಣಾವಿಕ್ರಮಸಿಂಹನ ಅನುಮತಿಯನ್ನು ತಕ್ಕೊಳ್ಳುವದು ಯೋಗ್ಯವಾದದ್ದು. ಆತನಸಮ್ಮತಿಯಿಲ್ಲದಿದ್ದರೆ ವಿಪರೀತವಾಗ

ಬಹುದು. ವಿಕ್ರಮಸಿಂಹನಲ್ಲಿ ಸೇನೆಯು ಕಡಿಮೆ ಇದ್ದರೂ ಆತನು ಸೋಳಂಖವಂಶದ ವೀರನಿರುತ್ತಾನೆ ಪ್ರಸಿದ್ಧನಾದ ಸೇನಾನಿಯು. ಆತನು ನಿಷ್ಕಾರಣವಾಗಿ ನನ್ನೊಡನೆ ವೈರದಿಂದ ಮೊಗಲರಿಗೆ ಸಹಾಯಮಾಡಬಹುದು. ಹಾಗಾದಪಕ್ಷಕ್ಕೆ ನಾಳೆ ಮೊಗಲರಕೂಡ ಯುದ್ಧಮಾಡುವಕಾಲಕ್ಕೆ ನನಗೆ ವಿಶೇಷಹಾನಿಯಾಗುವ ಸಂಭವ. ಆತನ ಸಮ್ಮತಿಯಿಲ್ಲದೆ ಲಗ್ನವಾದರೆ ನನ್ನ ಸಹಾಯಕ್ಕೆ ಆತನು ಎಂದೂ ಬರಲಿಕ್ಕಿಲ್ಲ. ಮೇಲಾಗಿ ಆತನು ನನ್ನ ಮಾವನಾಗುವವನು. ಆದ್ದರಿಂದ ಮೊದಲು ಆತನಿಗೆ ಪತ್ರಬರೆದು ಕೇಳಬೇಕೆಂದಿರುತ್ತೇನೆ. ಅದಕ್ಕೆ ನೀನು ಒಪ್ಪುವಿಯೇ ? ''

ಚಂಚಲೆ-" ತಮ್ಮ ಮಾತಿಗೆ ವಿರುದ್ಧವಾಗಿ ನಾನು ಎಂದೂ ಹೋಗಲಾರೆನು. ತಂದೆಯವರ ಆಶೀರ್ವಾದದಿಂದಲೆ ತಮ್ಮ ರಾಣಿಯಾಗುವುದಕ್ಕೆ ನಾನು ಇಚ್ಛಿಸುತ್ತೇನೆ.'' ಆಮೇಲೆ ಪತ್ರಬರೆದು ರಾಣಾರಾಜಸಿಂಹನ ಕಡೆಗೆ ಕಳಿಸಿದನು. ಅದರೊಡನೆ ಚಂಚಲಕುಮಾರಿಯು ತನ್ನ ತಾಯಿಗೆ ಒಂದು ಪತ್ರವನ್ನು ಬರೆದುಕೊಟ್ಟಳು. ಸ್ವಲ್ಪದಿವಸದಲ್ಲಿ ಅದರ ಉತ್ತರವು ಬಂತು. ವಿಕ್ರಮಸಿಂಹನು ತನ್ನ ಪತ್ರದಲ್ಲಿ ಬರೆದದ್ದೇನು ?

## ೨೧ನೆಯ ಪ್ರಕರಣ

### ರಾಜಸಿಂಹನ ಪತ್ರ

ರೂಪನಗರದಿಂದ ಉತ್ತರವು ಬಂತು. ಆದರೆ ಅದು ಬಹಳ ಭಯಂಕರವಾದದ್ದಿತ್ತು. ವಿಕ್ರಮಸಿಂಹನು ತನ್ನ ಪತ್ರದಲ್ಲಿ-''ನೀವು (ರಾಜಸಿಂಹ) ರಜಪೂತರಲ್ಲಿ ಎಲ್ಲಕಕ್ಕೂ ಉಚ್ಚಕುಲದವರು. ರಜಪೂತರಿಗೆ ಶಿರೋ

ಭೂಷಣರು. ಆದರೆ ಈಗ ಮಾತ್ರ ನೀವು ರಜಪೂತರ ಕುಲಕ್ಕೆ ಕಲಂಕವನ್ನು ಹಚ್ಚಬೇಕೆನ್ನುವಿರಿ. ನೀವು ನನ್ನ ಮಗಳನ್ನು ಅಪಹರಿಸಿದಿರಿ. ಆಕೆ ದಿಲ್ಲಿಗೆ ಹೋಗುವದನ್ನು ತಪ್ಪಿಸಿದಿರಿ. ಇದರಿಂದ ನಿಮ್ಮೊಡನೆ ವೈರವನ್ನು ಬೆಳೆಸುವದು ನನ್ನ ಧರ್ಮವು. ನೀವು ಆವಳೊಡನೆ ಲಗ್ನವಾಗುವದಂತೂ ಎಲ್ಲ ರೀತಿಯಿಂದ ನನ್ನ ಇಚ್ಛೆಗೆ ವಿರುದ್ಧವಾದದ್ದು.

" ಪೂರ್ವಕಾಲದಲ್ಲಿ ಕ್ಷತ್ರಿಯ ವೀರರು ಕನ್ನೆಯನ್ನು ಅಪಹರಿಸಿ ಲಗ್ನವಾಗುತ್ತಿದ್ದರೆಂದು ನೀವು ಹೇಳಬಹುದು. ಭೀಷ್ಮ ಅರ್ಜುನ ಕೃಷ್ಣ ಮೊದಲಾದವರು ಕನ್ನೆಯನ್ನು ಅಪಹರಿಸಿ ಲಗ್ನವಾಗಿರುವದೆಂಬದು ನಿಜವು ಆದರೆ ಅವರಂತೆ ನಮ್ಮಲ್ಲಿ ಶಕ್ತಿ ಇರುವದೆ? ನೀವು ಅಂಥಬಲಿಷ್ಟರಾಗಿದ್ದರೆ ಮೊಗಲರನ್ನು ಹಿಂದುಸ್ತಾನದಲ್ಲಿ ರಾಜ್ಯಭಾರ ಮಾಡಗೊಡುತ್ತಿದ್ದಿಲ್ಲ ನರಿಯು ಸಿಂಹನಂತೆ ವರ್ತಿಸುವದು ಮೂರ್ಖತನವು. ನಾನೂ ರಜಪೂತನು ಮುಸಲ್ಮಾನರಿಗೆ ಕನ್ನೆಯನ್ನು ಒಪ್ಪಿಸುವದು ಕುಲಕ್ಕೆ ಕಲಂಕ ತರುವ ಕೆಲಸವೆಂದು ನನಗೆ ತಿಳಿಯುತ್ತದೆ. ನಿಮ್ಮಲ್ಲಿ ಮೊಗಲರೊಡನೆ ಕಾದುವಷ್ಟು ಶಕ್ತಿಯದೆ ಎಂದು ನನಗೆ ಗೊತ್ತಿದ್ದರೆ ಮೊದಲು ಮೊಗಲರಿಗೆ ನನ್ನ ಕನ್ನೆಯನ್ನು ಕೊಡುತ್ತಿದ್ದಿಲ್ಲ. ಅವರ ಬೇಡಿಕೆಯನ್ನು ತುಚ್ಛಮಾಡಿ ನಿಮ್ಮಂಥ ವೀರರಿಗೆ ಕೊಡುತ್ತಿದ್ದೆನು. ಆದರೆ ! ತಾವೇ ನನ್ನ ಕನ್ನೆಗೆ ಯೋಗ್ಯವರರೆಂದು ನಾನು ನಿಶ್ಚಯಿಸುವವರೆಗೆ ನೀವು ಅವಳೊಡನೆ ಲಗ್ನಮಾಡಿಕೊಂಡರೆ ನಾನು ಶಾಪಕೊಡುತ್ತೇನೆ. " ಈ ತರಹದ ಅಭಿಪ್ರಾಯವಿತ್ತು. ಅದನ್ನು ಚಂಚಲಕುಮಾರಿಗೆ ಓದಿತೋರಿಸಿದನು. ಮತ್ತು ಅದರೊಳಗಿನ ಗರ್ಭಿತಾರ್ಥವನ್ನು ತಿಳಿದು " ಇನ್ನು ಮುಂದೆ ಮಾಡತಕ್ಕದ್ದೇನು ? " ಎಂದು ಕೇಳಿದನು.

ಚಂಚಲಕುಮಾರಿಯ ನೇತ್ರಗಳಿಂದ ಅಶ್ರುಸ್ರಾವವಾಗಹತ್ತಿತು. ಅವಳು ದುಃಖದಿಂದ ಬಿಗಿದಂಥ ಗದ್ಗತ ಕಂಠದಿಂದ—" ತನ್ನ ತಂದೆಯ ಆಪ್ಪಣೆಯನ್ನು ಮೀರಿ ಆತನಶಾಪಕ್ಕೆ ಗುರಿಯಾಗಿ ಲಗ್ನಮಾಡಿಕೊಳ್ಳುವದಕ್ಕೆ ಯಾವಕನ್ನೆಯು ಬಯಸುವಳು ? "

ರಾಣಾ—“ಹಾಗಾದರೆ ನಿನ್ನನ್ನು ಈಗ ರೂಪನಗರಕ್ಕೆ ಕಳಿಸಬೇಕೇನು ?”

ಚಂಚಲೆ—“ರೂಪನಗರಕ್ಕೆ ಹೋಗುವದಕ್ಕಿಂತ ವಿಷತಿಂದು ಸಾಯುವದು ಮೇಲಾದದ್ದು !”

ರಾಣಾ—“ನಿಮ್ಮ ತಂದೆಯ ಸಮ್ಮತಿಯಹೊರ್ತು ಲಗ್ನವಾಗುವಂತಿಲ್ಲ. ಆದರೆ ಆತನ ಅಪ್ಪಣೆಯನ್ನು ಪಡೆಯುವದರೊಳಗಾಗಿ ಮೊಗಲರೊಡನೆ ಕಾದಿ ಅವರನ್ನು ಸೋಲಿಸುವೆನು ಇಲ್ಲವೆ ರಣದಲ್ಲಿ ಬಿದ್ದು ಸಾಯುವೆನು. ಆದರಲ್ಲಿ ನಿಮ್ಮ ತಂದೆಗೆ ನಾನು ನರಿಯೊ, ಸಿಂಹವೊ ಎಂದು ವಿಚಾರಿಸಿ ನೋಡಲಿಕ್ಕಾಗುವದು ಇದಕ್ಕೆ ನಿನ್ನ ಅನುಮತಿಯುಂಟೆ ?”

ಚಂಚಲೆ—“ಮೊಗಲರ ಯುದ್ಧದಲ್ಲಿ ಈಶ್ವರನು ನಿಮಗೆ ಜಯವನ್ನು ಕೊಡುವನು”

ರಾಣಾ—“ನೋಡೋಣ; ಒಂದುವೇಳೆ ಈ ಯುದ್ಧದಲ್ಲಿ ಜಯವು ದೊರಕಿದರೆ ನಿನ್ನ ತಂದೆಯು ನನಗೆ ಆಶೀರ್ವಾದವನ್ನು ಕೊಟ್ಟೇ ಕೊಡುವನು.”

ಚಂಚಲೆ—“ಅವರೆಗೆ ನಾನು ಎಲ್ಲಿರಬೇಕು ?”

ರಾಣಾ—“ನನ್ನ ಅಂತಃಪುರದಲ್ಲಿ ಎರಡನೇ ರಾಣಿಯಂತೆ ನಿನಗೆ ಬೇರೆ ವ್ಯವಸ್ಥೆ ಮಾಡಿಸಿಕೊಡುವೆನು ದಾಸದಾಸಿಯರನ್ನು ನೇಮಿಸುವೆನು. ಮತ್ತು ಸ್ವಲ್ಪ ದಿವಸಗಳಲ್ಲಿ ನಿನ್ನನ್ನು ಲಗ್ನವಾಗುತ್ತೇನೆಂದು ವಾರ್ತೆಯನ್ನು ಹುಟ್ಟಿಸುವೆನು. ಆದರಿಂದ ನಿನಗೆ ಎಲ್ಲರೂ ಮಹಾರಾಣಿಯಂತೆ ಮಾನಮಾಡುವರು. ಆದರೆ ಯಾವವರೆಗೆ ಲಗ್ನವಾಗುವದಿಲ್ಲವೊ ಆವರೆಗೆ ಮಾತ್ರ ಭೆಟ್ಟಿಯಾಗುವದಿಲ್ಲ.” ಇಷ್ಟಾದಮೇಲೆ ರಾಣಾನು ಯಾವತ್ತು ವ್ಯವಸ್ಥೆಯನ್ನು ಮಾಡಿದನು ಮತ್ತು ತನ್ನ ಮುಂದಿನ ಸಿದ್ಧತೆಯನ್ನು ಮಾಡಿಕೊಳ್ಳಹತ್ತಿದನು.

ಇತ್ತ ರೂಪನಗರದ ರಾಜಕನ್ನೆಯನ್ನು ರಜಪೂತರು ಅಪಹರಿಸಿಕೊಂಡು ಹೋದರೆಂಬ ಸುದ್ದಿಯು ದಿಲ್ಲಿಗೆ ಒಂದು ಮುಟ್ಟಿತು. ಅದನ್ನು ಕೇಳಿ ಔರಂಗಜೇಬನ ಕೋಪಾಗ್ನಿಯು ಪ್ರಜ್ವಲಿಸಹತ್ತಿತು. ಈ ಶಿಟ್ಟಿನ ಭರದಲ್ಲಿ ದಂಡಿನ ಎಷ್ಟೋ ಅಮಲದಾರರನ್ನು ಕೆಲಸದಿಂದ ದೂರಮಾಡಿದನು. ಎಷ್ಟೋಜನರನ್ನು ಕೊಲ್ಲಿಸಿದನು. ನಿಜವಾದ ತಪ್ಪುಗಾರರನ್ನು ಶಿಕ್ಷಿಸುವ ಕೆಲಸವು ಸಣ್ಣಪುಟ್ಟವಾದದ್ದಲ್ಲ ರಾಜಸಿಂಹನ ರಾಜಧಾನಿಯಾದ ಉದೇಪುರದ ಸುತ್ತಲಿನ ಪ್ರದೇಶವು ಭಯಂಕರವಾದದ್ದಿತ್ತು ಇಕ್ಕಟ್ಟಾದ ಗುಡ್ಡಗಳಿಂದ ತುಂಬಿ ಹೋಗಿತ್ತು. ಆದ್ದರಿಂದ ಆತನೊಡನೆ ಕಾದುವದು ಸುಲಭವಾಗಿದ್ದಿಲ್ಲ ರಾಣಾಪ್ರತಾಪಸಿಂಹನೊಡನೆ ಕಾದುವಾಗ ಅಕಬರಬಾದಶಹನು ಭಯಭೀತನಾಗಿ ಎದೆಯೊಡಕೊಂಡದ್ದು ಇತಿಹಾಸಕಾರರಿಗೆ ಗೊತ್ತಿದ್ದ ಮಾತಾಗಿದೆ ಔರಂಗಜೇಬನು ಬಹಳ ಉತಾವಳಿಸ್ವಭಾವದವನು ಆತನಸಿಟ್ಟು ಎಂದೂ ಸಹನವಾಗುವಂಥದಲ್ಲ ನಾನು ಹಿಂದುಗಳ ನಾಶಕ್ಕಾಗಿಯೆ ಹುಟ್ಟಿರುವೆನೆಂದು ತಿಳಿದಿದ್ದನು. ರಾಜಸಿಂಹನ ತಪ್ಪಿಗೆ ಯಾವತ್ತು ಹಿಂದೂಜನರ ಕಡೆಯಿಂದ ಜಝಿಯಾ ತೆರಿಗೆಯನ್ನು ಸಕ್ತರೀತಿಯಿಂದ ತಕ್ಕೊಳ್ಳಲಿಕ್ಕೆ ಅಜ್ಞಾಪಿಸಿದನು ಈ ಕರವನ್ನು ವಸೂಲಮಾಡುವ ಕೆಲಸವು ಮೊದಲೆ ನಡೆದಿತ್ತು ಆದರೆ ಈಗ ಅದು ಬಹಳ ಭಯಂಕರಕ್ಕಿಟ್ಟಿತು. ಹಿಂದುಜನರು ಗಾಬರಿಗೊಂಡರು. ಮನಸಿನಲ್ಲಿ ಬಯ್ದು ಶಪಿಸ ತೊಡಗಿದರು ಕಡೆಗೆ ಬಾದಶಹನಲ್ಲಿ ಕ್ಷಮೆಯನ್ನು ಬೇಡಿಕೊಂಡರು. ಯಾವಾತನ ಅಂತಃಕರಣದಲ್ಲಿ ಕ್ಷಮೆಯ ಅಂಕುರವೆ ಉತ್ಪಾದಿಸದೊ ಅಂಥವನು ಜನರ ಮೊರೆಯನ್ನು ಹ್ಯಾಗೆ ಕೇಳುವದು ! ಬಾದಶಹನು ಪ್ರತಿಶುಕ್ರವಾರಕೊಮ್ಮೆ ಜುಮ್ಮಾಮಸೀದೆಯಲ್ಲಿ ನಮಾಜ ಮಾಡುತ್ತಿದ್ದನು. ಲಕ್ಷಾವಧಿ ಹಿಂದುಗಳು ಕೂಡಿ ಅಲ್ಲಿಗೆಹೋಗಿ ವಿನಂತಿಯನ್ನು ಮಾಡಿಕೊಳ್ಳಹತ್ತಿದ್ದರು. ಅವ್ವರೆಲ್ಲರನ್ನು ಆನೆಯಕಾಲಿನಿಂದ ತುಳಿಸಿ ಕೊಲ್ಲಿಸಿರೆಂದು ಹುಕುಮುದೊರೆಯಿತು. ಮೊದಲೆ ಬಾದಶಹನ ಅಪ್ಪಣೆ, ಅದರೊಳಗೂ ಔರಂಗಜೇಬನದು; ಅಂಥಮೇಲೆ ಕೇಳುವದೇನು!

ಪಾಪ, ಆ ಲಕ್ಷಾವಧಿಜನರು ಕ್ಷಣಮಾತ್ರದಲ್ಲಿ ನುಗ್ಗಿನುರಿಯಾದರು.

ಔರಂಗಜೇಬನ ಅಪ್ಪಣೆಯಂತೆ ಇಡೀ ಹಿಂದುಸ್ತಾನದಲ್ಲಿ ಜಝಿಯಾ ತೆರಿಗೆಯು ವಸೂಲಾಗ ಹತ್ತಿತು. ಬ್ರಹ್ಮಪುತ್ರೆಯಿಂದ ಸಿಂಧೂನದಿಯವರೆಗೆ ಯಾವತ್ತೂ ದೇವಾಲಯಗಳು ನಾಶವಾಗಹತ್ತಿದವು. ಸಾವಿರಾರು ವರುಷಗಳಿಂದ ನಡೆದುಬಂದ ಎತ್ತರವಾದ ಪರ್ವತ ಶಿಖರಗಳ ಮೇಲಿನ ದೇವಾಲಯಗಳು ಸಹ ಮಸೀದಿಗಳಾದವು. ಕಾಶಿಯೊಳಗಿನ ವಿಶ್ವೇಶ್ವರನ ದೇವಾಲಯವನ್ನು ಒಡೆದರು. ಮಥುರೆಯೊಳಗಿನ ಶ್ರೀಕೃಷ್ಣಕೇಶವನ ದೇವಾಲಯವನ್ನೂ ಒಡೆದರು ಬಂಗಾಲದಲ್ಲಿಯೂ ಇದೇ ಸ್ಥಿತಿಯಾಯಿತು.

ಅನಂತರ ಔರಂಗಜೇಬನು ರಾಜಸ್ತಾನದ ರಜಪೂತರ ಕಡೆಯಿಂದ ಜೆಝಿಯಾ ತೆರಿಗೆಯನ್ನೆತ್ತಲಿಕ್ಕೆ ಹುಕುಮು ಮಾಡಿದನು, ರಜಪೂತರು ಮೊದಲು ಕೊಡಲಿಕ್ಕೆ ಒಪ್ಪಲಿಲ್ಲ ರಾಜಸ್ತಾನದಲ್ಲಿ ಉದೇಪುರದ ಹೊರ್ತು ಉಳಿದ ಎಲ್ಲ ರಾಜ್ಯಗಳು ಸಮುದ್ರದಲ್ಲಿ ಚುಕ್ಕಾಣಿಯಿಲ್ಲದೆ ಬಿಟ್ಟ ಹಡಗಗಳಂತೆ ನಿರಾಧಾರಿಗಳಾಗಿದ್ದವು. ನಿಜವಾದ ಅನುಮತಿಯನ್ನು ಕೊಡುವ ರಜಪೂತರು ಮೊಗಲರ ದರಬಾರದಲ್ಲಿ ಯಾರೂ ಇರಲಿಲ್ಲ. ಜಯಪುರದ ಜಯಸಿಂಹನು ಈ ಕಾಲಕ್ಕೆ ಸ್ವರ್ಗಸ್ಥನಾಗಿದ್ದನು. ವಿಶ್ವಾಸಘಾತಕಿಯಾದ ಔರಂಗಜೇಬನು ಅನೇಕತರದ ಯುಕ್ತಿಗಳಿಂದ ಅವನನ್ನು ವಶಪಡಿಸಿಕೊಂಡಿದ್ದನು ಜಯಸಿಂಹನ ಹಿರೇಮಗನು ದಿಲ್ಲಿಯೊಳಗೆ ಸೆರೆಯಲ್ಲಿದ್ದನು. ಆದ್ದರಿಂದ ಜಯಪುರದಲ್ಲಿಯೂ ಜಝಿಯಾ ಕರವು ವಸೂಲಾಯಿತು ಉಳಿದ ಅರಸರೂ ಕೊಟ್ಟರು ಜೋಧಪುರದ ರಾಣಾನಗತಿಯಾದರೂ ಇದೇಪರಿಯಾಯಿತು. ಜೋಧಪುರದ ರಾಣಿಯು ಮೊದಮೊದಲು ಕರವಸೂಲಮಾಡುವವರನ್ನು ಓಡಿಸಿದಳು. ಆದರೆ ಪಾಪ ? ಆವಳು ಹೆಂಗಸು, ಮಾಡುತ್ತಾಳೇನು? ತೆರಿಗೆಯನ್ನು ಕೊಡಲಿಕ್ಕೆ ಒಪ್ಪದಿದ್ದರೂ ಅದಕ್ಕೆ ಬದಲಾಗಿ ಕೆಲವು ಪ್ರದೇಶವನ್ನು ಬಿಟ್ಟುಕೊಟ್ಟಳು.

ರಾಜಸಿಂಹನು ಇದಕ್ಕೆ ಒಪ್ಪಲಿಲ್ಲ ಮುಸಲ್ಮಾನರಿಗೆ ಒಂದು ಪೈ ಸಹ ಕೊಡಲಿಕ್ಕಿಲ್ಲೆಂದು ಪ್ರತಿಜ್ಞೆಮಾಡಿದನು. ಇಷ್ಟೇ ಅಲ್ಲ. ಇದರ ಸಂಬಂಧದಿಂದ ಔರಂಗಜೇಬನಿಗೊಂದು ಪತ್ರವನ್ನು ಬರೆದನು ರಾಜಸ್ಥಾನದ ಇತಿಹಾಸವನ್ನು ಬರೆದ ಕರ್ನಲ್ ಟಾಡ್ ಸಾಹೇಬರು ಆ ಪತ್ರದ ಸಂಬಂಧದಿಂದ ಹೀಗೆ ಹೇಳುತ್ತಾರೆ " ತನ್ನ ಜಾತಿಯ ವತಿಯಿಂದ ಪತ್ರ ಬರೆದು ಬಾದಶಹನಿಗೆ ಬಹಳ ರೀತಿಯಿಂದ ತಿಳಿಸಿ ಹೇಳಿದನು. ನಿಮ್ಮ ದೊಡ್ಡಿಸ್ತನಕ್ಕೆ ಧಕ್ಕೆ ಬರುತ್ತದೆಂದೂ ಬಾದಶಹತನಕ್ಕೆ ಕಡಿಮೇತನ ಬರುತ್ತದೆಂದೂ ನಿಶ್ಚಯದ ನೀತಿ ಪರಶಬ್ದಗಳಿಂದ ತಿಳಿಸಿದ್ದನು. ಅದರೊಳಗೆ ಬಾದಶಹನಿಗೆ ಕೊಟ್ಟ ದೋಷವು ಭಯಂಕರವಾದದ್ದಿತ್ತು. ಅದನ್ನು ಓದಿ ಅವನ ತಲೆ ತಿರುಗಿತು. ಯಾವತ್ತು ಪ್ರಜೆಗಳಿಗೆ ಹಿತಮಾಡುವವರು ಪ್ರತಿಯೊಬ್ಬರಿಗೆ ತಮ್ಮ ತಮ್ಮ ಧರ್ಮದಂತೆ ನಡೆಯಗೊಡುವರು." ಇವೇ ಮೊದಲಾದ ಎಷ್ಟೋ ಮಾರ್ಮಿಕ ಸಂಗತಿಗಳನ್ನು ಬರೆದಿದ್ದನು. ಈರೀತಿಯ ಮಾರ್ಮಿಕತನವುಳ್ಳಂಥ, ಚಾತುರ್ಯವನ್ನು ತೋರಿಸುವಂಥ, ಮತಸ್ವಾತಂತ್ರ್ಯವನ್ನು ಪ್ರಕಟಿಸತಕ್ಕಂಥ ಓದುವದಕ್ಕೆ ಪ್ರಿಯಕರವಾದಂಥ ಪತ್ರಗಳನ್ನು ಜಗತ್ತಿನಲ್ಲಿ ಅಪರೂಪವಾಗಿ ನೋಡಬಹುದು. " ನೀನು ಜಿಝಿಯಾಕರವನ್ನು ಕೊಡಲಿಕ್ಕೆ ಬೇಕು. ಇಷ್ಟೇ ಅಲ್ಲ. ನಮ್ಮ ರಾಜ್ಯದಲ್ಲಿ ಗೋಹತ್ಯ ಮಾಡುವದಕ್ಕೆ ಬಾಧೆಬರಲಾರದು. ಅದು ಮಾಡತಕ್ಕ ಕರ್ತವ್ಯವು. ಮತ್ತು ನಿಮ್ಮ ರಾಜ್ಯದೊಳಗಿನ ಯಾವತ್ತು ದೇವಾಲಯಗಳು ನಾಶವಾಗಬೇಕು." ಎಂದು ಅವನ ಪತ್ರಕ್ಕೆ ಉತ್ತರವು ದೊರಕಿತು. ಇದನ್ನು ಓದಿರಾಜಸಿಂಹನು ಯುದ್ಧದ ಸಿದ್ಧತೆಯನ್ನು ಮಾಡತೊಡಗಿದನು.

ಇತ್ತ ಔರಂಗಜೇಬನೂ ಅಪೂರ್ವವಾದ ಯುದ್ಧ ಸಿದ್ಧತೆಯನ್ನು ಮಾಡಹತ್ತಿದನು. ಚೀನದ ಶಹನಾಗಲಿ ಇರಾಣದ ಶಹನಾಗಲಿ ತನ್ನ ಮೇಲೆ ದಂಡೆತ್ತಿ ಬರುತ್ತಿದ್ದರೆ ಮಾಡುವಷ್ಟು ಸಿದ್ಧತಗೆ ಎಷ್ಟೋಪಟ್ಟು ಹೆಚ್ಚಾಗಿ ರಜಪೂತವೀರನಿಗೋಸ್ಕರ ತಯಾರಿ ಮಾಡಬೇಕಾಯಿತು.

# ೨೨ ನೆಯ ಪ್ರಕರಣ.

## ಮದನೋತ್ಸವಕ್ಕೆ ಬದಲು ರಣೋತ್ಸವ

ವಸಂತಋತುವಿನ ಕಡೆಯದಿವಸ. ಉದೇಪುರದಲ್ಲಿ ಮದನೋತ್ಸವವು ಒಳ್ಳೇ ಭರದಿಂದ ನಡೆದದೆ ಈ ಉತ್ಸವದಲ್ಲಿ ಆನಂದಭರಿತರಾದ ಸ್ತ್ರೀಪುರುಷರು ಬೀದಿಗಳಲ್ಲಿ, ಘಾಟಿನಲ್ಲಿ, ಉದ್ಯಾನದಲ್ಲಿ, ಒಟ್ಟುಗೂಡುತ್ತಿರುವರು. ರಜಪೂತಸ್ತ್ರೀಯರು ನಾನಾಲಂಕಾರಗಳಿಂದ ಭೂಷಿತರಾಗಿ ತಲೆಯಲ್ಲಿ ಹೂವುಗಳನ್ನು ಮುಡಿದುಕೊಂಡು ಉಲ್ಲಾಸದಿಂದ ಅತ್ತಿತ್ತ ಅಲೆಯುತ್ತಿರುವರು. ಇಂಥ ಸಮಯದಲ್ಲಿ ಒಂದು ಉದ್ಯಾನದಲ್ಲಿ ರಜಪೂತರು ಮೆಲ್ಲಮೆಲ್ಲನೆ ಕೂಡುತ್ತಿದ್ದರು ಸ್ವಲ್ಪ ಹೊತ್ತಿನಲ್ಲಿ ಉದ್ಯಾನವೆಲ್ಲವೂ ತುಂಬಿಹೋಯಿತು. ಜನರದಟ್ಟಣೆಯು ಬಲವಾಯಿತು ಅವರೆಲ್ಲರೂ ಸ್ತಬ್ಧರಾಗಿ ಯಾರದೋ ಮಾರ್ಗವನ್ನು ನಿರೀಕ್ಷಿಸುತ್ತಿದ್ದರು ಇಷ್ಟರಲ್ಲಿ ಮಹಾರಾಣಾ ರಾಜಸಿಂಹನೂ ಹಾಗೂವೀರಸಿಂಹನೂ ಅಲ್ಲಿಗೆ ಬಂದರು. ಅವರು ಬಂದೊಡನೆ ಎಲ್ಲರು ಚಕಿತರಾದರು. ಆಮೇಲೆ ಎಲ್ಲರೂ ಘಟ್ಟಿಯಾಗಿ— "ಮಹಾರಾಣಾಜಿಯವರೆ, ಭರತಖಂಡವನ್ನು ಯವನ ಬಾಧೆಯಿಂದ ಬಿಡಿಸುವವರೆಗೆ ನಾವು ಮದನೋತ್ಸವವನ್ನು ಮಾಡಲಿಕ್ಕಿಲ್ಲ. ನಮ್ಮ ಮೈಯ್ಯಲ್ಲಿ ಸಾಮರ್ಥ್ಯವಿಲ್ಲದಿದ್ದರೆ ಮಾತ್ರ ಜಝಿಯಾ ತೆರಿಗೆಯನ್ನು ಕೊಡುತ್ತೇವೆ. ನಮ್ಮ ಪರಮಪೂಜ್ಯರಾದ ಗೋಮಾತೆಯ ವಧೆಯನ್ನು ನಾವು ಬದುಕಿರುವಾಗ ಎಂದೂ ಮಾಡಗೊಡಲಿಕ್ಕಿಲ್ಲ ನಮ್ಮ ಯುದ್ಧದ ಸಿದ್ಧತೆಯನ್ನು ಮಾಡಿಕೊಳ್ಳೋಣ. ನಾವು ಗೆಲ್ಲಲಿ, ಸಾಯಲಿ, ಯವನರ ಶಾಸನಮಾಡಿದ ಹೊರ್ತು ಮದನೋತ್ಸವವನ್ನು ಮಾಡಲಿಕ್ಕಿಲ್ಲ. ಇದೇ ನಮ್ಮೆಲ್ಲರ ಪ್ರತಿಜ್ಞೆಯು." ಎಂದು ಹೇಳಿದರು.

ರಾಜಸಿಂಹನು ಅವರೆಲ್ಲರಿಗೆ ಶಾಂತರಾಗಲಿಕ್ಕೆ ಸನ್ನೆಯನ್ನು ಮಾಡಿದನು ಎಲ್ಲವು ಶಾಂತವಾದಮೇಲೆ—“ ನನ್ನ ಪ್ರಿಯಪ್ರಜೆಗಳೆ, ನಿಮ್ಮ ಬಯಕೆಯಂತೆ ಎಲ್ಲವೂ ಕೈಗೂಡಿರುವುದು ನೀವು ಸ್ವಲ್ಪವೂ ಚಿಂತೆಪಡಬೇಡಿರಿ. ಪರಮೇಶ್ವರನ ಕೃಪೆಯಿಂದ ಈ ವೀರಪ್ರತಾಪಸಿಂಹ ನಂಥ ಲಕ್ಷಾವಧಿಜನರ ಸಹಾಯವು ಬರತಕ್ಕದ್ದದೆ ಅದರ ಸಹಾಯದಿಂದ ಮೊಗಲರಿಗೆ ಚನ್ನಾಗಿ ಕೈತೋರಿಸೋಣ, ನಮ್ಮ ಪರಮಪೂಜ್ಯರಾದ ಪ್ರತಾಪಸಿಂಹನ ವರಕೃತಿಯನ್ನು ನನಗೆ ನೀವೆಲ್ಲರು ಜ್ಞಾಪಿಸಿಕೊಟ್ಟಿರಿ. ನಮ್ಮ ಮನೋಬಯುಕೆಯು ಸಾಧ್ಯವಾಗುವವರೆಗೆ ಸುಖೋಪಭೋಗವು ತುಚ್ಛವು ಈಹೊತ್ತು ಮದನೋತ್ಸವವನ್ನು ತ್ಯಾಗಮಾಡಿ ನನ್ನನ್ನು ಎಚ್ಚರಿಸಿದಿರಿ ಓರಂಗಜೇಬನ ಪಾರುಪತ್ಯ ಮಾಡಿದಹೊರ್ತು ನಾನು ನನ್ನ ಕತ್ತಿಯನ್ನು ಒರೆಗಾಣಿಸುವದಿಲ್ಲ. ನಿಮ್ಮೆಲ್ಲರ ಸಮಕ್ಷಮದಲ್ಲಿಯೆ ಪ್ರತಿಜ್ಞೆಯನ್ನು ಮಾಡುವೆನು ನಡೆಯಿರಿ, ನಿಮ್ಮನಿಮ್ಮ ಸಿದ್ಧತೆಯನ್ನು ಮಾಡಿಕೊಳ್ಳಿರಿ. ಅಷ್ಟರಲ್ಲ ಔರಂಗಜೇಬನ ಸೇನೆಯೂ ಬರುವದು. ನಡುವನ್ನು ಕಟ್ಟಿರಿ ಧರ್ಮದ ರಕ್ಷಣಾರ್ಥವಾಗಿ ಕಾದಿರಿ.

ಕೂಡಲೆ ಯಾವತ್ತು ಸೈನಿಕರು “ ಜಯ, ಹರಹರ, ಮಹಾದೇವ’ ಎಂಬ ಜಯಘೋಷವನ್ನು ಮಾಡುತ್ತ ತಮ್ಮತಮ್ಮ ಸ್ಥಳಗಳಿಗೆ ತೆರಳಿದರು ಮದನೋತ್ಸವಕ್ಕೆ ಬದಲು ರಣೋತ್ಸವವು ಆರಂಭವಾಯಿತು.

## ೨೩ನೆಯ ಪ್ರಕರಣ

### ಯುದ್ಧದ ಮೊದಲನೆಯ ಪ್ರಸಂಗ.

ರಾಣಾರಾಜಸಿಂಹನ ಪಾರುಪತ್ಯಕ್ಕೆ ಸೇನೆಯನ್ನು ಕೂಡಿಸುವದ ರಲ್ಲಿ ಔರಂಗಜೇಬನಿಗೆ ಇಷ್ಟು ವಿಲಂಬವಾಗಿತ್ತು. ಇಲ್ಲದಿದ್ದರೆ ಆಗಲ ಸಸ್ಯೆ

ಸ್ಯನಾಗಿ ಬಂದು ಬಿಡುತ್ತಿದ್ದನು. ಗೋವಳಕೊಂಡ, ವಿಜಾಪುರ ಮಹಾ ರಾಷ್ಟ್ರಗಳೊಡನೆ ದಕ್ಷಿಣದಲ್ಲಿ ಕಾದಿ, ಅನುಭವಪಡೆದ ಸೇನೆಯನ್ನು ತಕ್ಕೊಂಡು ಬಾದಶಹನ ಹಿರೇಮಗನಾದ ಶಹಾಅಲಮನು, ದಕ್ಷಿಣದಿಂದ ಉದೇಪುರದಕಡೆಗೆ ಬರುವದಕ್ಕೆ ಹೊರಟಿದ್ದನು. ಬಾದಶಹನ ಎರಡನೇ ಮಗನಾದ ಅಜಿಮಶಹನು ಬಂಗಾಲದ ಸುಭೆ ಹಾಗು ಪೂರ್ವ ಹಿಂದುಸ್ತಾನದೊಳಗಿನ ತನ್ನ ಸೇನೆಯನ್ನು ತಕ್ಕೊಂಡು ಮೇವಾಡದ ಪರ್ವತಾವಳಿಯ ಬಾಗಲಿಗೆ ಬಂದು ನಿಂತಿದ್ದನು ಮೂರನೇಮಗನಾದ ಅಕಬರಶಹನು ಪಶ್ಚಿಮದಲ್ಲಿ ಮುಲ್ತಾನದಿಂದ ಪಂಜಾಬ, ಕಾಶ್ಮೀರ, ಕಾಬೂಲಗಳೊಳಗಿನ ಸೇನೆಯನ್ನು ತಕ್ಕೊಂಡು ದಿಲ್ಲಿಗೆ ಬಂದು ಮುಟ್ಟಿದನು. ಸ್ವತಃ ಬಾದಶಹನು ದಿಲ್ಲಿಯಲ್ಲಿರುವ ಸೇನೆಯನ್ನು ತಕ್ಕೊಂಡು ಉದೇಪುರದ ಹೆಸರುಸಹ ಜಗತ್ತಿನಲ್ಲಿ ಇಲ್ಲೆನಿಸಿಬಿಡಬೇಕೆಂದು ಹೊರಟಿದ್ದನು. ಈ ಪ್ರಕಾರ ಉದೇಪುರವು ಬಾದಶಹನ ಸೇನೆಯಿಂದ ನಾಲ್ಕು ಮಗ್ಗಲು ಸುತ್ತಿಕೊಂಡಿತ್ತು. ಅಸಂಖ್ಯ ಸರ್ಪಸೇನೆಯಿಂದ ಗರುಡನಿಗೆ ಉಂಟಾಗುವಷ್ಟು ಭೀತಿಯು ರಾಜಸಿಂಹನಿಗೆ ಉಂಟಾಗಿತ್ತು. ಕೌರವ ಪಾಂಡವರ ಯುದ್ಧದನಂತರ ಭರತಭೂಮಿಯಲ್ಲಿ ಈ ವರೆಗೆ ಇಷ್ಟು ಸೇನೆಯು ಕಲೆತಿತ್ತೊ ಇಲ್ಲೊ ಎಂಬದರ ಸಂಶಯವದೆ. ಸೇನೆಯನ್ನು ಯುದ್ಧಕಾಲದಲ್ಲಿ ನಿಯಮಾನುಸಾರವಾಗಿ ಅಪ್ಪಣೆಯಮೇಲೆ ಅಪ್ಪಣೆಯನ್ನು ಕೊಟ್ಟು ನಡಿಸುವದಕ್ಕೆ ಇಂಗ್ಲಿಷದಲ್ಲಿ “ ಮಿಲಿಟ್ರಿಟಿಕ್ಟಿಕ್ಸ್ ” ಎಂದೆನ್ನುವರು. ನಮ್ಮ ಪುರಾಣಗಳಲ್ಲಿ ಅಥವಾ ಹಳೆಯ ಇತಿಹಾಸಗಳಲ್ಲಿ ಪ್ರಸಿದ್ಧವೀರರೆಂದು ಕೀರ್ತಿಯನ್ನು ಹೊಂದಿದವರು. ಬಾಣದಲ್ಲಿಯೂ ಕತ್ತಿಯಲ್ಲಿಯೂ ಪ್ರವೀಣತೆಯನ್ನು ಹೊಂದಿದ್ದರು. ಹಿಂದಿನಕಾಲದ ಇತಿಹಾಸ ಲೇಖಕರಿಗೆ ಯುದ್ಧ ವಿದ್ಯೆಯಾದ ಟಿಕ್ಟಿಕ್ಸವು ಗೊತ್ತಿದ್ದಿಲ್ಲ. ಅಥವಾ ಪೂರ್ವಕಾಲದಲ್ಲಿ ಈ ವಿದ್ಯೆಯು ಇದ್ದಿಲ್ಲವೆಂತಲೆ ಹೇಳುವರು. ರಾಮಚಂದ್ರ, ಅರ್ಜುನರಿಗೆ ಯುದ್ಧವಿದ್ಯೆಯು ಎಷ್ಟರಮಟ್ಟಿಗೆ ಬರುತ್ತಿತ್ತೆಂಬದು ನಮಗೆ ಸ್ವಲ್ಪವೂ ಗೊತ್ತಿಲ್ಲ. ಅಶೋಕ, ಚಂದ್ರಗುಪ್ತ,

ಶಿಲಾದಿತ್ಯ ಮೊದಲಾದವರ ಯಾವ ಸೇನಾಧಿಪತ್ಯವೂ ನಮಗೆ ಗೊತ್ತಿಲ್ಲ. ಅವರಂತ ಹಿಂದುಸ್ತಾನವನ್ನು ಗೆದ್ದ ಮಹಮ್ಮದಕಾಶೀಮ, ಗಝ್ನಿ ಮಹಮ್ಮದ, ಶಹಾಬುದ್ದೀನ, ಅಲ್ಲಾಉದ್ದೀನ, ಬಾಬರ, ತೈಮುರಲಿಂಗ, ನಾದಿರಶಹ ಇವರಿಗೂ ಈ ವಿದ್ಯೆಯು ಜ್ಞಾನವು ಇತ್ತೊ ಇಲ್ಲೊ ತಿಳಿಯುವದಿಲ್ಲ. ಈ ವಿದ್ಯೆಯು ಅಕಬರನಕಾಲದಿಂದ ಸುರುವಾಯಿತು. ಅಕಬರ, ಶಿವಾಜಿ, ಅಬ್ದಾಲಿಅಹಮ್ಮದ, ಹೈದರಅಲ್ಲಿ, ಹರಿಸಿಂಹ, ಮೊದಲಾದ ಸೇನಾಪತಿಗಳು ಯುದ್ಧಮಾಡಿದ ಕೌಶಲ್ಯವನ್ನು ನೋಡಿದರೆ ಸೇನಾಪತಿಗಳಲ್ಲಿರುವ ವಿದ್ಯಾಜ್ಞಾನವು ಅವರಿಗೆ ಇತ್ತೆಂದು ತೋರುತ್ತದೆ ರಣರಂಗದಲ್ಲಿ ಶಾಂತತನದಿಂದಿದ್ದು, ಯುಕ್ತಿಯಿಂದ ಕಾದುವ ಶಕ್ತಿಯು ಅವರಲ್ಲಿತ್ತು. ನಮ್ಮ ಇತಿಹಾಸದಲ್ಲಿ ಇಂಥ ರಣಧುರಂಧರರ ಹೆಸರುಗಳು ತೀರಸ್ವಲ್ಪಅವೆ. ಇವರಲ್ಲಿ ರಾಜಸಿಂಹನು ಯಾವದಕ್ಕೂ ಕಡಿಮೆಯೆನಿಸಿರಲಿಲ್ಲ. ಅವನಂಥ ರಣಧುರಂಧರರಾದ ಸೇನಾಪತಿಗಳು ಯುದ್ಧವಿದ್ಯೆಯ ಮೂಲಸ್ಥಾನವಾದ ಯುರೋಪಖಂಡದಲ್ಲಿ ತೀರಸ್ವಲ್ಪ ಜನರಾದರೆಂದು ಹೇಳಿದರೆ ಅತಿಶಯೋಕ್ತಿಯಾಗದು. ಅತ್ಯಲ್ಪ ಸೇನಾಸಹಾಯದಿಂದ ರಾಣಾರಾಜಸಿಂಹನಂಥ ಭಯಂಕರ ಸಾಹಸವನ್ನು ಹಾಲಂಡದ ವೀರಪುರುಷನಾದ ವಿಲಿಯಮ್‌ನ ಹೊರ್ತು ಪೃಥ್ವಿಯಲ್ಲಿ ಬೇರೆ ಯಾರೂ ಮಾಡಿದಂತೆ ತೋರುವದಿಲ್ಲ. ರಾಜಸಿಂಹನ ಯುದ್ಧದ ಕುಶಲತೆಯನ್ನು ವಿಸ್ತಾರ ಭಯದಿಂದ, ಸ್ವಲ್ಪದರಲ್ಲಿಯೆ ಹೇಳಿರುತ್ತೇವೆ.

ನಾಲ್ಕು ಕಡೆಯಿಂದ ಬರುವ ಔರಂಗಜೇಬನ ಸೇನೆಯು ಒಂದೇ ಸ್ಥಳದಲ್ಲಿ ಒಟ್ಟುಗೂಡುವಕಾಲಕ್ಕೆ ಯುದ್ಧವಿಶಾರದನಾದ ರಣಪಂಡಿತನು ಮಾಡಬಹುದಾದ ಕೆಲಸವನ್ನು ರಾಜಸಿಂಹನು ಮಾಡಿದನು. ಮೇವಾಡದ ಸುತ್ತು ಪರ್ವತಸಾಲುಗಳ ಆಚೆಮಗ್ಗುಲು ಉದೇಪುರದ ಅಂಕಿತದಲ್ಲಿರುವ ಪ್ರದೇಶವನ್ನು ಬಿಟ್ಟು ಪರ್ವತದ ಮೇಲೆ ಒಂದು ಛಾವಣಿಯನ್ನು ಹಾಕಿದನು. ಮತ್ತು ತನ್ನ ಸೇನೆಯನ್ನು ಮೂರುಪಾಲಾಗಿ ವಿಭಾಗಿಸಿದನು. ಹಿರಿಯಮಗನಾದ ಜಯಸಿಂಹನಿಗೆ ಸೇನೆಯ ಒಂದು ಭಾಗ

ವನ್ನು ತಕ್ಕೊಂಡು ಪರ್ವತದಮೇಲೆ ಇರಲಿಕ್ಕೆ ಹೇಳಿದನು ಎರಡನೇ ಮಗ ನಾದ ಭೀಮಸಿಂಹನಿಗೆ ಮತ್ತೊಂದು ಸೇನೆಯ ತುಂಡನ್ನು ಕೊಟ್ಟು ಪಶ್ಚಿಮದ ಕಡೆಗೆ ಕಳಿಸಿದನು. ಅತ್ತಕಡೆಯ ಮಾರ್ಗವು ತೆರವಾಗಿದ್ದು, ಸಹಾಯಕ್ಕೆ ಬರುವ ಉಳಿದ ರಜಪೂತರಿಗೆ ಅನೂಕೂಲವಾಗ ಬೇಕೆಂಬದೆ ಅವನ ಉದ್ದೇಶವು ಮೂರನೇಭಾಗವನ್ನು ತನ್ನ ಸ್ವಾಧೀನ ದಲ್ಲಿರಿಸಿಕೊಂಡನು ಮತ್ತು ಅದನ್ನು ತಕ್ಕೊಂಡು ಪೂರ್ವದ ಕಡೆಗಿರುವ ಆಕುಂಚಿತವಾದ ' ನಯುನ ' ವೆಂಬ ಖಿಂಡಿಯಲ್ಲಿ ತನ್ನ ಛಾವಣಿಯನ್ನು ಹಾಕಿದನು.

ಅಜಿಮಶಹನು ಬರುವದಿಕ್ಕಿನಲ್ಲಿ ಮೊದಲು ಆತನನ್ನು ಗುಡ್ಡದ ಓರೆಯಲ್ಲಿಯೆ ತಡೆದನು ಪರ್ವತವನ್ನು ಏರಿಬರುವದು ಕಠಿಣವಾಗಿತ್ತು ಮತ್ತು ಮೇಲಿಂದ ಕೆಳಗಿನವರಿಗೆ ಗುಂಡಿನಿಂದಾಗಲಿ, ಕಲ್ಲುಗಳಿಂದಾಗಲಿ ಎಸೆಯುವದು, ಸುಲಭವಾಗಿತ್ತು. ಅಜಿಮಶಹನಿಗೆ ಪರ್ವತವನ್ನು ದಾಟಿ ಬರುವದಾಗಲಿಲ್ಲ.

ಅಜಮಿರಾದ ಹತ್ತರ ಔರಂಗಜೇಬ, ಅಕಬರಶಹ, ಇವರ ಭೆಟ್ಟಿಯಾಯಿತು. ಮೊದಲು ಸೇನೆಯನ್ನು ಒಟ್ಟುಗೂಡಿಸಿ ಪರ್ವತದ ಮಗ್ಗಲಿಗೆ ಒಳಗೆಹೋಗುವದಕ್ಕೆ ಮೂರು ಮಾರ್ಗಗಳಾಗಿದ್ದಲ್ಲಿಗೆ ಬಂದು ಮುಟ್ಟಿದನು. ಈ ಮೂರು ಮಾರ್ಗಗಳು ಪರ್ವತದಲ್ಲಿ ಇಕ್ಕಟ್ಟಾದ ಖಿಂಡಿಗಳು. ಅದರಲ್ಲಿ ಮೊದಲನೆಯದರ ಹೆಸರು ' ದುಬಾರಿ ' ಎರಡನೆಯದರ ಹೆಸರು ' ದೇಲವಾಡಿ.' ಮೂರನೆಯದರ ಹೆಸರು ' ನಯುನಾ' ದುಬಾರಿ ಖಿಂಡಿಯ ಮಾರ್ಗಕ್ಕೆ ಸೇನೆಯುಒಂದ ಕೂಡಲೆ ಔರಂಗಜೇಬನು ಅಕಬರಶಹನ ಕೈಯ್ಯಲ್ಲಿ ಐವತ್ತು ಸಾವಿರ ಸೇನೆಯನ್ನು ಕೊಟ್ಟು ಆ ದಾರಿಯಿಂದ ಮುಂದೆ ಹೋಗುವದಕ್ಕೆ ಅಜ್ಞಾಪಿಸಿದನು ಉಳಿದ ಸೇನೆಯನ್ನು ತನ್ನ ಹತ್ತಿರ ಇಟ್ಟುಕೊಂಡು ಉದಯಸಾಗರವೆಂಬ ಸರೋವರದ ದಂಡೆಯ ಮೇಳೆ ವಿಶ್ರಾಂತಿಗೋಸ್ಕರ ನಿಂತುಬಿಟ್ಟನು.

ಆ ಇಕ್ಕಟ್ಟಾದ ಖಿಂಡಿಯ ಮಾರ್ಗದಿಂದ ಅಕಬರಶಹನು ಮುಂದಕ್ಕೆಹೋದನು. ಮಾರ್ಗದಲ್ಲಿ ತನ್ನ ಸೇನೆಯನ್ನು ತಡೆಯುವದಕ್ಕೆ ಒಬ್ಬ ಮನುಷ್ಯನೂ ಬರಲೊಲ್ಲನು. ಎರಡೂಮಗ್ಗಲು ಪರ್ವತದ ಎತ್ತರವಾದ ಸಾಲುಗಳು, ಅವುಗಳಮೇಲೆ ಹಚ್ಚಗಿನ ವೃಕ್ಷ ಸಮುದಾಯವು ನಡುವೆ ಸರೋವರ, ಸರೋವರದ ನಡುವೆ ಅಲ್ಲಲ್ಲಿಗೆ ಸಣ್ಣಸಣ್ಣ ದಿಬ್ಬಗಳು, ಈರೀತಿ ನಿರ್ಜನವಾದ ಸೃಷ್ಟಿಸೌಂದರ್ಯವು ಸೇನೆಯ ಜನರಿಗೆ ಕಾಣಿಸುತ್ತಿತ್ತಲ್ಲದೆ ಮನುಷ್ಯರು ಗುರ್ತು ಇಲ್ಲ. ಸುತ್ತಲು ಶಾಂತಸ್ಥಿತಿಯು ಕಂಡದ್ದರಿಂದ ಕಡೆಗೆ ಅಕಬರಶಹನು ಛಾವಣಿಯನ್ನು ಹಾಕಿದನು ಇಲ್ಲಿಯ ಜನರು ಅಂಜಿ ಓಡಿಹೋಗಿರಬಹುದೆಂದು ಆತನು ತಿಳಕೊಂಡನು ಛಾವಣಿಯನ್ನು ಹಾಕಿದೊಡನೆಯೆ ಮೊಗಲ ಸೇನೆಯು ಪೂರ್ವಕ್ರಮದಂತೆ ವಿನೋದವನ್ನೂ ಆರಂಭಿಸಿತು ಕೆಲವರು ಊಟದ ಸಿದ್ಧತೆಯಲ್ಲಿ, ಕೆಲವರು ಆಟನೋಟಗಳಲ್ಲಿ, ಕೆಲವರು ನಿಮಾಜಮಾಡುವದರಲ್ಲಿ ಮಗ್ನರಾಗಿ ಹೋಗಿದ್ದರು. ಹೊಂಚುಹಾಕಿಕೊಂಡು ಕುಳಿತಿರುವ ಹುಲಿಯು ಮಲಗಿದ ದಾರಿಕಾರರಮ್ಯೆಮೇಲೆ ಒಮ್ಮೇಲೆ ಹಾರಿಬೀಳುವಂತೆ ಕುಮಾರ ಜಯಸಿಂಹನು ಅಕಬರನ ಸೇನೆಯ ಮೇಲೆ ಬಿದ್ದುಬಿಟ್ಟನು. ಐವತ್ತುಸಾವಿರ ಮುಸಲ್ಮಾನರಲ್ಲಿ ತೀರಸ್ವಲ್ಪ ಜನರುಎಲ್ಲೆಲ್ಲಿಯೊ ಓಡಿ ಉಳಕೊಂಡರು. ಸ್ವತಃ ಅಕಬರಶಹನು ಗುಜರಾಥದ ಕಡೆಗೆ ಓಡಿಹೋದನು

ಶಹಾಅಲಮ (ಮಜುಮುಶಹ) ನು ದಕ್ಷಿಣದಿಂದ ದೊಡ್ಡ ಸೇನೆಯೊಡನೆ ಬಂದು ಅಹಮದಾಬಾದದ ದಾರಿಯ ಮೇಲೆ ಮೇವಾಡದ ಪರ್ವತಗಳ ಪಶ್ಚಿಮದ ಮಗ್ಗಲಿಗೆ ಬಂದಿದ್ದನು ಅಲ್ಲಿಂದ ಮುಂದೆ ದಾರಿಯು ಪರ್ವತದೊಳಗಿಂದ ಹಾಯ್ದು ಬರುತ್ತಿತ್ತು. ಆ ದಾರಿಯ ಹೆಸರು ಗಣರಾವ ಅದನ್ನು ದಾಟಿ ಶಹಾಅಲಮನು ಕಾಕರೋಳಿಯ ಹತ್ತರಿರುವ ಸರೋವರದಮೇಲೆ ಒಂದು ನಿಂತನು. ಅಲ್ಲಿಂದ ಮುಂದೆ ಹೋಗುವ ಮಾರ್ಗವು ಸ್ವಲ್ಪವೂ ಗೊತ್ತಾಗಲೊಲ್ಲದು. ದಾರಿಯನ್ನು ಸುಲಭ

ವಾಗಿ ಮಾಡಿಕೊಂಡು ಹೋಗುವದೂ, ದುಸ್ತರವಾಗಿತ್ತು ಯಾಕಂದರೆ ಹಾಗೆ ಮಾಡಬಹುದಾದಲ್ಲಿ, ರಜಪೂತರು ಹಿಂದಿನ ದಾರಿಯನ್ನು ಬಂದು ಮಾಡಿಬಿಟ್ಟರೆ ತಮಗೆ ಅನ್ನ ನೀರುಗಳನ್ನು ದೊರಕಿಸುವ ಉಪಾಯವಿಲ್ಲ ದಂತಾಗಿ ಸೇನೆಯು ಉಪವಾಸಬಿದ್ದು ಸಾಯಬೇಕಾಗುತ್ತಿತ್ತು ನಿಜ ವಾದ ಸೇನಾಪತಿಯು ಮೊದಲು ತನ್ನ ಸೇನೆಯ ಅನ್ನ ಸಾಮಗ್ರಿಯ ವ್ಯವಸ್ಥೆಯನ್ನು ನೋಡುತ್ತಿರುತ್ತಾನೆ. ಸೇನೆಯನ್ನು ಪ್ರಸಂಗಕ್ಕೆ ಒಟ್ಟು ಗೂಡಿಸುವದು ಉತ್ತಮ ಸೇನಾಪತಿತ್ವವು ರಾಜಸಿಂಹನು ತನ್ನ ಸೇನೆಯ ಯೋಜನೆಯನ್ನು ಬಹಳ ಚನ್ನಾಗಿ ಮಾಡಿದ್ದನು. ಆದರಿಂದ ಬಂಗಾಲ, ಹಾಗು ದಕ್ಷಿಣದಿಂದ ಒರುವ ಮುಸಲ್ಮಾನರ ಸೇನೆಯು ಉಲುಕಾಡದೆ ಸುಮ್ಮನೆ ನಿಂತು ಬಿಟ್ಟಿರುವಂತೆ ಮಾಡಿದ್ದನು ಆಗಲೇ ಮುಲ್ತಾನದ ಸೇನೆಯ ಧೂಳು ಹಾರಿ ಹೋಗಿತ್ತು ಈಗ ಒರೆ ಬಾದಶಹನೊಬ್ಬನು ಮಾತ್ರ ಉಳಿದನು.

## ೨೮ ನೆಯ ಪ್ರಕರಣ.

### ಪ್ರತಾಪರಾಯರೇ, ನಾನು ನಿಮ್ಮವಳು.

ದಿಲ್ಲೀಶ್ವರನನ್ನು ಇಲ್ಲಿಯೆ ಬಿಟ್ಟು ನಾವು ದಿಲ್ಲಿಗೆ ತೆರಳೋಣ, ನಮ್ಮ ಪೂರ್ವ ಪರಿಚಿತ ಪರ್ಣಕುಟಿಯಲ್ಲಿ ಪರಮಹಂಸ, ತಪಸ್ವಿನಿಯರ ಸ್ಥಿತಿಯು ಏನಾಗಿದೆ ನೋಡೋಣ.

ರಾತ್ರಿಯಕಾಲ, ಕಣ್ಣಲ್ಲಿ ಬೆರಳು ಚುಚ್ಚಿದರೆ ಕಾಣಿಸದಷ್ಟು ದಟ್ಟತ್ತಾದ ಕತ್ತಲೆ. ಪ್ರಕೃತಿಯೆಲ್ಲವೂ ಮಸಿಯಿಂದ ತೊಡೆದು ಕೊಂಡಂ ತಿದೆ. ಇಂಥ ಸಮಯದಲ್ಲಿ ಪರ್ಣಕುಟಿಯಲ್ಲಿ ಅಗ್ನಿ ಕುಂಡದ ಬಳಿಯಲ್ಲಿ ತಪಸ್ವಿನಿಯು ಜಪಮಾಡುತ್ತ ಕುಳಿತಿರುವಳು ಜಪಮಾಡುತ್ತ ಅಗ್ನಿಕುಂಡ ದಲ್ಲಿ ಎಡಗೈಯಿಂದ ಕಟ್ಟಿಗೆಗಳನ್ನು ಸರಿಸುತ್ತಿರುವಳು. ಒಂದು ಮಗ

ಲಿಗೆ ಸಣ್ಣವೊಂದು ದೀವಿಗೆಯು ಮಿಣಿಮಿಣಿಯಾಗಿ ಉರಿಯುತ್ತಿದೆ. ಈ ಹೊತ್ತು ತಪಸ್ವಿನಿಯ ಚಿತ್ತವು ಸ್ವಸ್ಥವಿದ್ದಂತೆ ಕಾಣಿಸುವದಿಲ್ಲ. ಕಾರಣವೇನಿರಬಹುದು ? ಕ್ಷಣಕ್ಕೊಮ್ಮೆ ಮಾರ್ಗದ ಕಡೆಗೆ ಲಕ್ಷಗೊಟ್ಟು ಯಾವನೋ ಬರುವದನ್ನು ನಿರೀಕ್ಷಿಸುತ್ತಿದ್ದಳು ಮಧ್ಯರಾತ್ರಿಯ ಸಮಯವಾಗುತ್ತಬಂತು ಅವಳ ವೃತ್ತಿಯು ಹೊಯ್ದಾಡಹತ್ತಿತು. ಹೊತ್ತು ಹೆಚ್ಚಾದಂತೆ ಚಿತ್ತವು ಹೆಚ್ಚು ಅಸ್ವಸ್ಥವಾಗ ತೊಡಗಿತು. ಈಸ್ಥಿತಿಯಲ್ಲಿ ಅವಳ ಬಾಯಿಂದ "ಜಯಮಾತೆ. ಎಲ್ಲ ಭರವಸೆಯೂ ನಿನ್ನ ಮೇಲುಂಟು. ನೀನೇ ಯಶಕೊಡುವವಳು ನಿನ್ನ ಮಕ್ಕಳ ಕಲ್ಯಾಣಕ್ಕೇ ನಮ್ಮ ಈ ಪ್ರಯತ್ನವು ನಮ್ಮ ಎಲ್ಲ ಆಶೆಯೂ ಈ ಪ್ರಥಮಪ್ರಯತ್ನವನ್ನು ಅವಲಂಬಿಸಿರುವದು. ಈ ಪ್ರಯತ್ನದಲ್ಲಿ ಯಶದೊರೆದರೆ ನಮ್ಮ ಸಾಹಾಯಕನಿಗೆ ಸ್ಫುರಣ ಬರುವದು ಆದರೆ ಈವರೆಗೆ ಯಾವುದೂ ಗೊತ್ತಾಗಲಿಲ್ಲ, ಈಹೊತ್ತಿಗೆ ಆರು ದಿವಸಗಳಾದವು ಪ್ರತಾಪನ ಆಗಮನವನ್ನು ಬಂದೇ ಸವನೆ ನೋಡುತ್ತಿರುವೆನು ಆತನೂ ಬರಲಿಲ್ಲವೇಕೆ? ಯಾರೋ ಬರುವಂತಿದೆ. ಕುದುರೆಯ ಗೊರಸಿನಧ್ವನಿಯು ಕೇಳಬರುವದು. ಅವರು ಯಾರಿರಬಹುದು? ಹೌದು, ಆತನು ನಮ್ಮ ಸವಾರನೆ ಇರಬಹುದು. ತಾಯಿ, ಭವಾನಿ ಈಗಾದರೂ ಶುಭ ಸಮಾಚಾರವನ್ನು ನುಡಿಸು ಅಶುಭ ಸಮಾಚಾರಗಳನ್ನು ಕೇಳಿಕೇಳಿ ಕಿವಿಗಳು ದಡಸಿಕ್ಕಿಹೋಗಿವೆ." ಅವಳು ಸ್ವಲ್ಪ ಹೊತ್ತು ಸ್ತಬ್ಧಳಾದಳು. ಇಷ್ಟರಲ್ಲಿ ಅಲ್ಲಿಗೆ ಇಬ್ಬರು ಸವಾರರುಬಂದರು. ಬಂದವರು ಕುದುರೆಯಿಂದಿಳಿದು ತಪಸ್ವಿನಿಗೆ ನಮಸ್ಕರಿಸಿದರು.

ವಿಜಯ ಮದದಿಂದ ಪ್ರಫುಲ್ಲಿತವಾದ ಅವರ ನೇತ್ರಮುಖಗಳನ್ನು ನೋಡಿದಳು. ಶುಭಸಮಾಚಾರವೆಂದು ತಪಸ್ವಿನಿಗೆ ಗೊತ್ತಾಯಿತು. ಕೂಡಲೆ ಅವಳು "ಬಾಳಾ, ಪ್ರತಾಪ, ಜಯವೊ ಅಪಜಯವೊ?" ಎಂದು ಕೇಳಿದಳು.

"ಮಾತಾಜಿ, ತಮ್ಮವೀರಪುತ್ರರು ಅಪಯಶದಿಂದ ಕಪ್ಪಾದ ಕಲಂಕಿತ ಮುಖವನ್ನು ತೋರಿಸುವುದಕ್ಕೆ ಪುನಃ ಇಲ್ಲಿಗೆ ಎಂದಾದರೂ ಬರುವದುಂಟೆ? " ಎಂದನು.

"ಮಕ್ಕಳೆ, ಇದನ್ನೇ ಕೇಳುವದಕ್ಕೆ ನನ್ನ ಕಿವಿಗಳು ಅಧೀರವಾಗಿದ್ದುವು ನಡೆಯಿರಿ, ಬೇಗನಡೆಯಿರಿ, ನೀವು ಬಹಳ ದಣಿದಂತಿದೆ ಸ್ವಲ್ಪವಿಶ್ರಮಿಸಿರಿ ಆಮೇಲೆ ಮಹಾರಾಣಿಯ ಭೆಟ್ಟಿಯನ್ನು ತಕ್ಕೊಳ್ಳಿರಿ. ಆಕೆಯೂ ನಿಮ್ಮ ಮಾರ್ಗಪ್ರತೀಕ್ಷೆಯನ್ನು ಮಾಡುತ್ತಿರುವಳು"

ಮಹಾರಾಣಿಯ ಹೆಸರನ್ನು ಕೇಳಿದೊಡನೆಯೆ ಪ್ರತಾಪನ ಮುಖವು ನಸುಗೆಂಪಿಡಿದಿತು. ತನ್ನ ಕುದುರೆಯ ವ್ಯವಸ್ಥೆಯನ್ನು ಮಾಡಿ ಸಂಗಡಿಗನೊಡನೆ ನಟ್ಟಗೆ ಗುಹೆಯ ಗುಪ್ತದ್ವಾರವನ್ನು ತೆಗದು ಒಳಹೊಕ್ಕನು. ಆ ಮೂವರೂ ಗುಪ್ತದ್ವಾರದಿಂದ ಒಳಹೊಕ್ಕಮೇಲೆ ಪೋ ಲು ದಿವಾಣಖಾನೆಯೊಳಗಿನ ಒಂದು ಸುಶೋಭಿತವಾದ ಮಂಟಪಕ್ಕೆ ಬಂದರು ಅಲ್ಲಿಗೆ ಬರುವ ಪೂರ್ವದಲ್ಲಿ ತಪಸ್ವಿನಿಯು ಪ್ರತಾಪನಿಗೆ ವಿಶ್ರಾಂತಿ ತಗೆದುಕೂಳ್ಳಲಿಕ್ಕೆ ಹೇಳಿದಳು. ಆದರೆ ಪ್ರತಾಪನಿಗೆ ಸಮಾಧಾನವೆಲ್ಲ! ಆತನು "ಮೊದಲು ಮಹಾರಾಣಿಗೆ ಈ ಆನಂದದ ಸುದ್ದಿಯನ್ನು ತಿಳಿಸು, ಆಮೇಲೆ ವಿಶ್ರಾಂತಿಯನ್ನು ತೆಗೆದು ಕೊಳ್ಳುವೆನು" ಎಂದನು. ಈತನ ಉತಾವಳಿ ಸ್ವಭಾವವು ತಪಸ್ವಿನಿಗೆ ಸರಿದೋರಲಿಲ್ಲ. ಈತನ ಬರುವಿಕೆಯನ್ನು ಮಹಾರಾಣಿಗೆ ತಿಳಿಸುವದಕ್ಕೆ ಒಳಗೆಹೋದಳು. ಪ್ರತಾಪನಿಗೆ ಬಹಳ ಹೊತ್ತು ಅಲ್ಲಿ ನಿಲ್ಲಲಿಕ್ಕೆ ಆಗಲೊಲ್ಲದು ಆತನಿಗೆ ಒಳಗೆ ಬರಬೇಕೆಂದು ಅಪ್ಪಣೆ ದೊರೆಯಿತು. ಪ್ರತಾಪನು ಒಳಗೆ ಹೋದ ಕೂಡಲೆ-" ನಮ್ಮ ಶ್ರೇಷ್ಠನರವೀರರು ಅಪಯಶದ ಸುದ್ದಿಯನ್ನು ತರುವವರಲ್ಲವೆಂದು ನನಗೆ ಪೂರ್ಣವಿಶ್ವಾಸವಿತ್ತು" ಎಂಬ ಶಬ್ದಗಳು ಮಂಜುಳ ಕಂಠದಿಂದ ಹೊರಬಿದ್ದವು. ಆದಕ್ಕೆ ಪ್ರತಾಪನು ಪ್ರತ್ಯುತ್ತರವಾಗಿ "ನಮ್ಮ ಮಹಾರಾಣಿಯವರ ಪುಣ್ಯದಫಲವು. ಯಶಾಪಯಶಗಳು ಪ್ರಾಕ್ತನವನ್ನು ಅವಲಂಬಿಸಿರುವವು." ಎಂದು ಹೇಳಿದನು.

"ನಿಮ್ಮಂಥವೀರರ ಸ್ನೇಹವಾಗುವದೇ ಪೂರ್ವಪುಣ್ಯವು ಯುದ್ಧದ ಯಾವತ್ತು ಸಂಗತಿಯನ್ನು ಹೇಳಿರಿ. ಇತ್ತಕುಳಿತುಕೊಳ್ಳಿರಿ."

ರಾಣೀಸಾಹೇಬರ ಎದುರಿಗೆ ವೀರಪ್ರತಾಪನು ಕುಳಿತುಕೊಂಡನು. ಆತನು ರೂಪನಗರದ ಕನ್ನೆಯನ್ನು ಬಿಡಿಸುವವರೆಗೆ ಆದ ಯುದ್ಧದ ಸಂಗತಿಯನ್ನು ಹೇಳಿದನು ಅನಂತರ ಆತನು " ನಾವು ಉದೇಪುರಕ್ಕೆ ಹೋದೆವು ಉದೇಪುರಕ್ಕೆ ಹೋದಮೇಲೆ ಔರಂಗಜೇಬನು ದೊಡ್ಡ ಸೇನೆಯೊಂದಿಗೆ ಅದನ್ನು ನಾಶಮಾಡುವದಕ್ಕೆ ಸ್ವತಃ ತಾನೇ ಬರುತ್ತಾನೆಂದು ತಿಳಿಯಬಂತು ಇದು ನಮ್ಮ ಚಂಚಲೆಯನ್ನು ಬಿಡಿಸಿದ್ದರ ಪರಿಣಾಮವು ರಾಣಾರಾಜಸಿಂಹನಾದರೂ ಅವನೊಡನೆ ಕಾದುವ ಸಿದ್ಧತೆಯನ್ನು ಮಾಡತೊಡಗಿರುವನು " ಎಂದು ಹೇಳಿದನು.

—" ನಿಮಗೆ ಹ್ಯಾಗೆ ತೋರುವದು ! ಇದರಲ್ಲಿ ಯಾರಿಗೆ ಜಯವಾದೀತು. ?

—" ರಾಣಿಯವರೇ, ಧರ್ಮವಿದ್ದ ಕಡೆಗೆ ಜಯವು. ಇದು ನಿಶ್ಚಯು."

—" ವಿಶೇಷವಾಗಿ ಪ್ರತಾಪನಂಥ ಶೂರರ ನೆರವಿರುವವರಿಗೆ ನಿಶ್ಚಯವಾಗಿ ಜಯದೊರೆಯುವದು. "

—" ರಾಣಿಯವರೇ, ಈ ನನ್ನ ಸ್ತುತಿಯು ವ್ಯರ್ಥವಾದದ್ದು. ಇದೆಲ್ಲ ತಮ್ಮ ಪ್ರತಾಪವೇಸರಿ

—" ಒಳ್ಳೇದು, ವೀರಮಣಿ, ರಾಜಸಿಂಹನು ನಿಮ್ಮ ಸಹಾಯವನ್ನು ಬಯಸಿದನೇ ?

—" ಹೌದು. ನಾನಾದರೂ ಅದೇ ಉದ್ದೇಶದಿಂದ ಇಷ್ಟು ಬೇಗ ಬಂದೆನು "

—" ಆಗಲಿ, ನಾನೂ ನಿಮ್ಮೊಡನೆ ಬರುವೆನು. "

—" ಯುದ್ಧದಲ್ಲಿಯೆ ! ಬೇಡ, ಅಷ್ಟು ಶ್ರಮಬೇಡ. "

—" ಯಾಕೆ? ನಾನು ಬರಬಾರದೇಕೆ ? ನೀವು ಕಾದುವದು ನೋಡಬೇಕೆಂಬ ಅಪೇಕ್ಷೆಯದೆ " ಎಂದು ಪ್ರತಾಪನ ಮುಖವನ್ನು ದಿಟ್ಟಿಸಿ ನೋಡಹತ್ತಿದಳು. ರಾಣಿಯ ಈ ಮಾತು ಕಿವಿಗೆ ಬಿದ್ದೊಡ

ನೆಯೆ ಪ್ರತಾಪನ ಮುಖವು ಪ್ರಫುಲ್ಲಿತವಾಯಿತು " ನೀವು ನನ್ನ ಯುದ್ಧ ಕೌಶಲ್ಯವನ್ನು ನೋಡುವ ಸುಯೋಗವು ಒದಗಿದರೆ ನಾನು ಧನ್ಯನು "

" ಆದರೆ ಏನು ? ಪ್ರತಾಪರಾಯರೇ ನಿಮ್ಮ ಸಂಗಡ ಬಂದು ಯುದ್ಧ ಮಾಡಬೇಕೆಂಬ ಉತ್ಸಾಹವು ನನಗೆ ಅತಿಶಯವಾಗಿರುವದು. "

—" ನನ್ನ ಮೇಲಿನ ಈ ಪ್ರೇಮವನ್ನು ಕಂಡು, ನಾನು ಧನ್ಯನಾದೆನು. "

—" ನನ್ನ ಪ್ರೇಮವು ನಿಮ್ಮ ಮೇಲಿರುವಂತೆ ನಿಮ್ಮ ಪ್ರೇಮವು ನನ್ನ ಮೇಲಿದೆಯೆ ? "

" ನನ್ನ ಪ್ರಾಣಕ್ಕಿಂತಲೂ ಅಧಿಕವಾಗಿ ಪ್ರೀತಿಸುತ್ತಿರುವೆನು. "

ಕ್ಷಣಹೊತ್ತು ಇಬ್ಬರೂ ಸ್ತಬ್ಧರಾದರು. ಆಕಾಲದ ಇಬ್ಬರ ಮುಖಮುದ್ರೆಯು ನೋಡುವಂತಿತ್ತು ಮಹಾರಾಣಿಯ ಮುಖದ ಮೇಲಿನ ಆ ರಕ್ತವರ್ಣವನ್ನೂ ಪ್ರತಾಪನ ಪ್ರಫುಲ್ಲಿತ ವದನವನ್ನು ನೋಡಿದರೆ, ಅವರಿಬ್ಬರ ಅಂತಃಕರಣದ ಸ್ಥಿತಿಯು ದೃಷ್ಟಿಗೋಚರವಾಗುತ್ತಿತ್ತು.

ಪ್ರತಾಪನು ಎದ್ದು ಮುಂದಕ್ಕೆ ಸರಿದುಬಂದು ರಾಣಿಯ ಕೈಯ್ಯನ್ನು ತನ್ನ ಕೈಯ್ಯಲ್ಲಿ ತಕ್ಕೊಂಡನು ಹಾಗು ಮೊಳಕಾಲು ನೆಲಕ್ಕೆ ಊರಿ ಗಂಭೀರಸ್ವರದಿಂದ " ಈ ದಾಸನ ಕೋರಿಕೆಯನ್ನು ಪೂರೈಸಿರಿ. ಕ್ಷಣಹೊತ್ತು ನನ್ನ ಕಡೆಗೆ ನೋಡಿ, ನಾನು ನಿನ್ನವಳಿರುತ್ತೇನೆಂದು ಹೇಳಿರಿ. "

ಮಹಾರಾಣಿಯು ಹಾಸ್ಯಯುಕ್ತಸ್ವರದಿಂದ—"ಪ್ರತಾಪರಾಯರೇ, ನಾನು ನಿಮ್ಮವಳು " ಕೂಡಲೆ ಪ್ರತಾಪನು ಎದ್ದನು. ಆ ಪ್ರಣಯಿಗಳಿಬ್ಬರೂ ಗಟ್ಟಿಯಾಗಿ ಅಪ್ಪಿಕೊಂಡರು. ಪ್ರತಾಪನ ಮುಖವು ಮಹಾರಾಣಿಯ ಮುಖದ ಸಮೀಪಕ್ಕೆ ಹೋಯಿತು. ಚುಂಬನದ ಪ್ರತಿಧ್ವನಿಯು ಸುತ್ತಲೂ ವ್ಯಾಪಿಸಿಕೊಂಡಿತು.

# ೨೫ ನೆಯ ಪ್ರಕರಣ.

## ಉದೇಪುರದ ಬೇಗಮ್ಮಳು ರಾಣಾನ ವಶದಲ್ಲಿ

---

ಅಕಬರಶಹನನ್ನು ಮುಂದಕ್ಕೆ ಕಳಿಸಿ ಬಾದಶಹನು ಉದಯಸಾಗರದ ದಂಡೆಯಮೇಲೆ ತನ್ನ ಛಾವಣಿಯನ್ನು ಹಾಕಿಕೊಂಡಿದ್ದನೆಂದು ವಾಚಕರಿಗೆ ಗೊತ್ತಿರಬಹುದು. ಮೊಗಲರ ಛಾವಣಿಯು ದೊಡ್ಡದೊಂದು ಶಹರದಂತೆ ಕಂಡುಬರುತ್ತಿತ್ತು. ಅಸಂಖ್ಯಡೇರೆಗಳು ಅಲ್ಲಲ್ಲಿಗೆ ಸುಶೋಭಿತವಾಗಿದ್ದವು. ಬಾದಶಹನ ಸುಖೋಪಭೋಗಕ್ಕೆ ಇಲ್ಲಿಯೂ ದಿಲ್ಲಿಯಂತೆ ಎಲ್ಲವೂ ಅಣಿಯಾಗಿತ್ತು ಆತನ ಡೇರೆಯ ಶೃಂಗಾರವು ಅಮೌಲ್ಯವಾದದ್ದು. ಡೇರೆಯು ಜರತಾರಿಯ ವಸ್ತ್ರದಿಂದ ಮಾಡಿತ್ತು. ಕಬ್ಬಿಣ ಹಿತ್ತಾಳಿಗಳ ಬದಲು ಬೆಳ್ಳಿಯನ್ನೆ ಉಪಯೋಗಿಸಿದ್ದರೂ ಒಳಮಗ್ಗಲಿರುವ ಗೋಡೆಗಳು ಕಿನಕಾಪಿನಿಂದ ಮುಚ್ಚಿಹೋಗಿದ್ದವು. ಒಳಗೆ ಬೇರೆಬೇರೆ ಕೋಣೆಗಳಾಗಿ ವಿಭಾಗಿಸಲ್ಪಟ್ಟಿತ್ತು ದರಬಾರಮಾಡುವ ಸ್ಥಳದಲ್ಲಿ ರತ್ನಖಚಿತವಾದದ್ದೊಂದು ಸಿಂಹಾಸನವು, ಡೇರೆಯ ಎದುರಿಗೆ ದೊಡ್ಡದೊಂದು ಮಹಾದ್ವಾರ, ನಾಲ್ಕೂಮಗ್ಗಲು ಹತ್ಯಾರಬಂದ ತಾರ್ತರಸ್ತ್ರೀಯರ ಪಹರೆಯು

ಬಾದಶಹನ ಡೇರೆಯ ಹಿಂದೆ ಅಮೀರ ಉಮರಾವಗಳ ಸಾಲುಗಳು. ನೋಡುವುದಕ್ಕೆ ಬಹು ಮನೋಹರವಾಗಿತ್ತು. ಡೇರೆಯ ಸುತ್ತಲೂ ದಿಲ್ಲಿಯ ಚೌಕಿಯಲ್ಲಿರುವಂತೆ ಅಂಗಡಿಗಳು ಬಾದಶಹನ ಆಗಮನದಿಂದ ಉದಯಸಾಗರದ ಮೇಲೆ ಹೊಸದೊಂದು ಶಹರವು ಹುಟ್ಟಿದಂತೆ ಕಂಡು ಬರುತ್ತಿತ್ತು.

ಬಾದಶಹನು ದಿಲ್ಲಿಯಿಂದ ಹೊರಗೆಹೊರಟ ಸರತಿಗೊಮ್ಮೆ ಆತನ ಜನಾನಖಾನೆಯು ಸಂಗಡ ಇರುತ್ತಿತ್ತು. ಈಸಾರೆಯಾದರೂ ಎಲ್ಲಾ

ಬೇಗಮ್ಮರೂ ಸಂಗಡಲೆ ಇದರು. ದಿಲ್ಲಿಯು ರಂಗಮಹಲಿನಲ್ಲಿ ಅವರಿಗೆ ಬೇರೆಬೇರೆ ಸ್ಥಳಗಳನ್ನು ನೇಮಿರೆಕೊಟ್ಟಂತೆ ಇಲ್ಲಿಯೂ ವ್ಯವಸ್ಥೆಯಾಗಿತ್ತು.

ಪ್ರಾತಃಕಾಲಕ್ಕೆ ಬಾದಶಹನ ಸೇನೆಯು ಮುಂದಕ್ಕೆ ರಹೊಟಿತು ಎಲ್ಲಕ್ಕೂಮುಂಚೆ ಆಯುಧಸಹಿತರಾದ ಕಾವಲಾಟಿಮನುಷ್ಯರದೊಂದು ಗುಂಪು ಇತ್ತು ಅವರಲ್ಲಿ ಗುದ್ದಿ, ಸಲಕಿ, ಕೊಡ್ಲಿ, ಕೊಯಿತ, ಇವೇ ಮೊದಲಾದ ಎಲ್ಲ ಆಯುಧಗಳ ಸಂಗ್ರಹವಿತ್ತು. ಅವರು ತಮ್ಮ ಆಯುಧಗಳಿಂದ ಗಿಡಗಳನ್ನು ಕಡಿದು ದೂರ ಬಿಸಾಡುತ್ತಿದ್ದರು ಹಳ್ಳಗಳನ್ನು ಮಣ್ಣಿನಿಂದ ಮುಚ್ಚುತ್ತಿದ್ದರು. ಹಿಂದೆ ಬರುವ ವಿಸ್ತಾರವಾದ ಸೇನೆಗೆ ಸಾಕಷ್ಟು ಮಾರ್ಗವನ್ನು ಸಜ್ಜುಗೊಳಿಸುವದು ಎಂಥ ಕಠಿಣ ಕೆಲಸವು! ಆ ದೊಡ್ಡದಾರಿಯಿಂದ ಮೊದಲು ಗಾಡಿಗಳ ಮೇಲೆ ಹೇರಿದ್ದ ತೋಫುಗಳ ಸಾಲು ನಡೆದವು. ಅದರೊಡನೆ ತೋಫಿನ ಅಮಲದಾರರು ಗೋಲಂದಾಜರು, ನಡೆದಿದ್ದರು ಅವರ ಹಿಂದೆ ಬಾದಶಹನ ಖಜಾನೆಯ ಸಂರಕ್ಷಕರಗುಂಪು ನಡೆದಿತ್ತು. ಯಾಕಂದರೆ ಔರಂಗಜೇಬನಿಗೆ ಯಾರ ಮೇಲೂ ವಿಶ್ವಾಸವಿದ್ದಿಲ್ಲ. ಆದ್ದರಿಂದ ಖಜಾನೆಯನ್ನು ತನ್ನ ಸಂಗಡಲೆ ತರುತ್ತಿದ್ದನು. ಆ ಖಜಾನೆಯನ್ನು ಹೊತ್ತ ಆನೆಗಳ ಸಾಲುಗಳ ಹಿಂದೆ ಬಾದಶಹನ ದಪ್ತರಖಾನೆಯು. ಅದರಹಿಂದೆ ನದಿಯನೀರನ್ನು ಹೊತ್ತು ಕೊಂಡಿರುವ ಒಂಟೆಗಳ ಸಾಲು. ನೀರಿನ ಹಿಂದೆ ಅನ್ನಸಾಮಗ್ರಿಯು ಅದರೊಡನೆ ಸಾವಿರಾರು ಅಡಿಗೆಯವರು ಅವರುಗಳ ಹಿಂದೆ ಬಾದಶಹನ ಅರಿವೆಗಳು, ಅವುಗಳ ಹಿಂದೆ ಮೊಗಲರ ಕುದುರೆಸವಾರರ ದಂಡು, ಹೀಗೆ ನಡೆದ ಆ ಫೌಜು ನೋಡತಕ್ಕಂಥಾದ್ದಿತ್ತು.

ಈ ಭಾಗದ ಹಿಂದೆ ಸಾವಿರಾರು ಒಂಟೆಗಳಮೇಲೆ ಸುಗಂಧದ್ರವ್ಯವನ್ನು ಹೇರಿದ್ದರು. ಇದರ ಹಿಂದೆ ಬಾದಶಹನ ಶರೀರಸಂರಕ್ಷಕರಗುಂಪು ಎರಡುಸಾಲಾಗಿ ನಡೆದಿತ್ತು. ಅದರ ಮಧ್ಯದಲ್ಲಿ ರತ್ನಖಚಿತವಾದ ಅಲಂಕಾರಗಳಿಂದ ಶೃಂಗರಿಸಿದ ಕುದುರೆಯಮೇಲೆ ಬಾದಶಹನು ಕುಳಿತಿದ್ದನು.

ಸೇವಕರು ಆತನಮೇಲೆ ಶ್ವೇತಛತ್ರವನ್ನು ಹಿಡಿದಿದ್ದರು. ಅವರ ಹಿಂದೆ ಔರಂಗಜೇಬನ ಪ್ರೀತಿಯ ಸ್ತ್ರೀಯರು. ಕೆಲವರು ಆನೆಯ ಮೇಲಿನ ಅಂಬಾರಿಗಳಲ್ಲಿ. ಕೆಲವರು ಕುದುರೆಗಳಮೇಲೆ ಕುಳಿತಿರುತ್ತಾರೆ, ಕೆಲಕೆಲವರು ಮೇಣೆಗಳಲ್ಲಿ ಕುಳಿತಿರುತ್ತಾರೆ ಇವರ ಹಿಂದೆ ಸಾಸಿಯರು ಕುದುರೆಗಳಮೇಲೆ ಕುಳಿತುಬರುತ್ತಿದ್ದರು. ಅವರ ಹಿಂದೆ ಗೋಲಂದಾಜರು ಇವರಲ್ಲಿರುವ ತೋಫುಗಳು ಸಣ್ಣವು.

ಮೂರನೇಭಾಗವು ಕಾಲಾಳುಗಳದು ಕಾಲಾಳುಗಳ ಹಿಂದೆ ನೌಕರ ಚಾಕರರು, ಆಮೇಲೆ ಗಾಯಕವಾದಕರು, ಆಮೇಲೆ ಕುದುರೆಗಳು ಡೇರೆಯ ಗಾಡಿಗಳು, ಇವೇ ಮೊದಲಾದ ಸಾಹಿತ್ಯಗಳು ಬರುತ್ತಿದ್ದವು.

ಯಾವದಾರಿಯಿಂದ ಅಕಬರಶಹನು ದಂಡು ತಕ್ಕೊಂಡು ಮುಂದೆ ಹೋಗುತ್ತಿದ್ದನೋ ಅದೇದಾರಿಯಿಂದ ಬಾದಶಹನು ನಡೆದಿದ್ದನು ಇಬ್ಬರೂಕೂಡಿ ಕುಮಾರ ಜಯಸಿಂಹನ ಸೇನೆಯನ್ನು ಸೋಲಿಸಬೇಕೆಂಬದೆ ಅಂತರಂಗದ ಉದ್ದೇಶವು ; ಆದರೆ ಪರ್ವತದ ಒಳಮಗ್ಗಲಿಗಿರುವ ಖಿಂಡಿಗೆ ಹೋದಕೂಡಲೆ ಮೇಲೆ ರಾಜಸಿಂಹನ ಛಾವಣಿಯದೆಯೆಂದು ತಿಳಿಯಬಂತು.

ಮೊದಲು ರಾಜಸಿಂಹನು ಬಂಡಿಯ ಹತ್ತರ ಕುಳಿತಿದ್ದನು ಅಲ್ಲಿಗೆ ಚಾರರು ಬಂದು ಅಕಬರನ ಸೇನೆಯ ಪರಿಣಾಮವನ್ನು ತಿಳಿಸಿದರು. ಆಮೇಲೆ ತನ್ನ ರಣಕೌಶಲ್ಯದ ಎರಡನೇದೊಂದು ಕೈಯನ್ನು ಬಾದಶಹನಿಗೆ ತೋರಿಸಬೇಕೆಂದು ಪರ್ವತದ ಮೇಲಿನ ಮಾರ್ಗವನ್ನು ದಾಟಿ ಒಮ್ಮೆಲೆ ಮೇಲಿನ ಖಿಂಡಿಗೆ ಬಂದನು

ರಾಜಸಿಂಹನ ಈ ಅಪೂರ್ವಕೌಶಲ್ಯದ ಮುಂದೆ ಮೊಗಲರ ಶರೀರದ ರಾಶಿಯು ಬಿತ್ತು. ಯಾಕೆಂದರೆ ಅವರು ಬರುವ ದಾರಿಯ ಮಗ್ಗಲಿಗೆ ರಾಜಸಿಂಹನ ಸೇನೆಯಿತ್ತು. ಒಂದುವೇಳೆ ಅವರು ಮುಂದಕ್ಕೆ ಹೋಗಿದ್ದರೆ ಒಂದು ಮಗ್ಗಲನ್ನು ಶತ್ರುಗಳನ್ನು ಹಲ್ಲಾಮಾಡುವದಕ್ಕೆ

ತೆರವು ಮಾಡಿಕೊಟ್ಟಂತಾಗುತ್ತಿತ್ತು. ಸೇನಾ ಮುಖವನ್ನು ತಿರುಗಿಸಿ ಮಗ್ಗಲಿಗಿರುವ ಶತ್ರುಗಳೊಡನೆ ಕಾದುವದು ಅಸಂಭವವಾಗಿತ್ತು. ಇಷ್ಟು ದೊಡ್ಡಸೇನೆಯ ಮುಖವನ್ನು ವ್ಯವಸ್ಥೆಗೊಳಿಸುವದಕ್ಕೆ ಆ ಖಿಂಡಿಯಲ್ಲಿ ಅಷ್ಟು ವಿಸ್ತಾರವಾದ ಸ್ಥಳವಿದ್ದಿಲ್ಲ ಅವರ ಮುಖವನ್ನು ಹೊರಳಿಸುವದರೊಳಗಾಗಿ ರಾಜಸಿಂಹನು ಪರ್ವತದಿಂದ ಇಳಿದುಬಂದು ಮೊಗಲರ ಮೇಲೆ ಹಲ್ಲಾಮಾಡಿ ಅವರನ್ನು ಸಹಜವಾಗಿ ಇಬ್ಭಾಗಿಸುತ್ತಿದ್ದನು ಮತ್ತು ಒಂದು ಭಾಗವನ್ನು ಸಹಜವಾಗಿ ಸೋಲಿಸಿ ಅವರ ಸಾಮಾನುಗಳನ್ನು ಅಪಹರಿಸುತ್ತಿದ್ದನು. ಮೊಗಲರ ಸೇನೆಯ ಸ್ಥಿತಿಯು ಈ ರೀತಿ ಭಯಂಕರವಾಯಿತು ಮುಂದೆ ಕುಮಾರ ಜಯಸಿಂಹನು ಹಿಂದೆ ರಾಣಾ ರಾಜಸಿಂಹನು ಇವರಿಬ್ಬರ ಕತ್ತರಿಯಲ್ಲಿ ಮೊಗಲರ ಸೇನೆಯು ಒಂದು ಕ್ಷಣದಲ್ಲಿ ಸಿಕ್ಕುಬಿತ್ತು

ಬಾದಶಹನಿಗೆ ಹಿಂದಕ್ಕೆ ಹೋಗುವ ಮಾರ್ಗವು ಮಾತ್ರ ತೆರವಿತ್ತು. ಸ್ವಲ್ಪಹೊತ್ತು ವಿಚಾರಮಾಡಿದ ಮೇಲೆ ಅದೂ ಅಸಂಭವವಾಗಿ ಕಂಡು ಬಂತು. ಉದೇಪುರಕ್ಕೆ ಹೋಗುವ ಎರಡನೇ ಮಾರ್ಗವನ್ನು ಹುಡುಕುವದಕ್ಕೆ ತೊಡಗಿದನು ಸುತ್ತಲು ಕುದುರೆ ಸವಾರರನ್ನು ಕಳಿಸಿದನು. ಸ್ವಲ್ಪ ಹೊತ್ತಿನಲ್ಲಿ ಅಂಥಾದ್ದೊಂದು ಮಾರ್ಗವನ್ನು ತೋರಿಸುವದಕ್ಕೆ ಮೊಗಲನೌಕರನೊಬ್ಬನು ಒಪ್ಪಿದಂತೆ ಒಬ್ಬ ಮನಸಬದಾರನು ಹೇಳಹತ್ತಿದನು. ಆ ಮನಸಬದಾರನೂ ಆ ಮಾರ್ಗವನ್ನು ನೋಡಿ ಬಂದಿದ್ದನು. ಆ ಮಾರ್ಗವು ಎರಡುಪರ್ವತಗಳ ನಡುವೆ ಆಕುಂಚಿತ ಖಿಂಡಿಯಂತಿದ್ದು ಬೇಗನೆ ಮುಂದಿನ ಮಾರ್ಗಕ್ಕೆ ಮುಟ್ಟಬಹುದಾದಂತೆ ಇತ್ತು. ಆ ಸ್ಥಳದಲ್ಲಿ ರಜಪೂತರಾರು ಕಾಣಿಸುತ್ತಿರಲಿಲ್ಲ.

ಔರಂಗಜೇಬನು ಸ್ವಲ್ಪಹೊತ್ತು ವಿಚಾರಿಸಿ—" ದಂಡು ಕಾಣಿಸುತ್ತಿರಲಿಕ್ಕಿಲ್ಲ. ಆದರೆ ಅಡಗಿ ಕುಳಿತಿದ್ದರೆ ?

ಬಖತ್ಯಾರಖಾನನೆಂಬ ಮನಸಬದಾರನು ಆ ದಾರಿಯನ್ನ ನೋಡಿ ಬಂದಿದ್ದನು. ಆತನು—" ನನಗೆ ದಾರಿ ತೋರಿಸಿದ ಮೊಗಲರವನನ್ನು

ನಾನು ಮುಂದಕ್ಕೆ ಕಳಿಸಿರುತ್ತೇನೆ. ರಜಪೂತರ ಸೇನೆಯು ಆ ಮಗ್ಗಲಿ ಗಿದ್ದರೆ ಆತನು ಆಗಲೆ ತಿಳಿಸುತ್ತಿದ್ದನು. '' ಎಂದನು.

ಔರಂಗಜೇಬ-'' ಆತನು ಯಾರು ! ನಮ್ಮ ಶಿಪಾಯಿಗಳೊಳಗಿನ ವನೆ ? '' ಬಖತ್ಯಾರಖಾನ-'' ಹುಜೂರ ಅಲ್ಲ ಆತನು ಒಬ್ಬ ವ್ಯಾಪಾರಿಯು. ಉದೇಪುರಕ್ಕೆ ಶಾಲುಮಾರುವದಕ್ಕೆ ಹೋಗಿದ್ದನು ಅಲ್ಲಿಂದ ತಿರುಗಿಬರುವಾಗ ನಮ್ಮ ಛಾವಣಿಯಲ್ಲಿ ಮಲಗಿಕೊಂಡು ಹೋಗುವದಕ್ಕೆ ಬಂದಿದ್ದನು.

ಔರಂಗಜೇಬ-''ಒಳ್ಳೇದು, ಹಾಗಾದರೆ ಆದಾರಿಯಿಂದ ಸೇನೆಯನ್ನು ನಡಿಸು, ಸೇನೆಗೆ ಹಿಂದಕ್ಕೆ ತಿರುಗುವದಕ್ಕೆ ಅಪ್ಪಣೆಯಾಯಿತು. ಯಾಕಂದರೆ ಹಿಂದಿರುಗಿ ಸ್ವಲ್ಪದೂರಹೋದಮೇಲೆ ಅದು ಪರ್ವತದ ಖಿಂಡಿಯಕಡೆಗೆ ಹೋಗುವ ಮಾರ್ಗವಾಗಿತ್ತು ಇಷ್ಟು ದಾರಿಯನ್ನು ನಡೆದು ಬಂದಮೇಲೆ ಪುನಃ ಹಿಂದಿರುಗುವದು ಸುಲಭವಾಗಿದ್ದಿಲ್ಲ. ಸೇನೆಯ ನಿಯಮ ಬದ್ಧ ರಚನೆಯಲ್ಲಿ ಹೆಚ್ಚುಕಡಿಮೆಯಾಯಿತು. ಮುಂಭಾಗವು ಹಿಂದೆ, ಹಿಂಭಾಗವು ಮುಂದೆ ಆಯಿತು. ಡೇರೆಯ ಗಾಡಿಗಳೂ ಕೂಲಿಯವರೂ ಮುಂದಾದರು ಗಾಡಿಯವರಿಗೂ ಕೂಲಿಯವರಿಗೂ ಕಿರುಕುಳಜನರಿಗೂ ಉದಯಸಾಗರದ ರಸ್ತೆಯಮೇಲೆ ನಿಲ್ಲಲಿಕ್ಕೆ ಬಾದಶಹನು ಆಜ್ಞಾಪಿಸಿದನು. ಮತ್ತು ಎಲ್ಲ ಸೇನೆಯು ಮುಂದೆ ಹೋದಮೇಲೆ ಅವರಿಗೆ ಬರಹೇಳಿದನು. ಆಜ್ಞಾನುಸಾರವಾಗಿ ನೌಕರ ಚಾಕರರು ಒತ್ತಟ್ಟಿಗೆ ನಿಂತುಬಿಟ್ಟರು ಆಮೇಲೆ ಔರಂಗಜೇಬನು, ಪಾಯದಳವು, ಸಣ್ಣ ತೋಪುಗಳೊಡನೆ ಗೋಲಂದಾಜರು ಎಲ್ಲರೂ ಆ ಖಿಂಡಿಯ ಮಾರ್ಗದಿಂದ ಮುಂದಕ್ಕೆ ನಡೆದರು. ಮಾರ್ಗ ತೋರಿಸುವದಕ್ಕೆ ಬಖತ್ಯಾರಖಾನನು ಎಲ್ಲಕ್ಕೂ ಮುಂದಾದನು. ರಾಜಸಿಂಹನು ಈ ಗಡಬಿಡಿಯನು ನೋಡುತ್ತಿದ್ದನು. ಹೊತ್ತು ದೊರೆತಕೂಡಲೆ ಸಿಂಹನಂತೆ ಹಾರಿ ಸಸೈನ್ಯನಾಗಿ ಪರ್ವತದಿಂದ ಕೆಳಗಿಳಿದನು. ಮೊಗಲಸೇನೆಯ ಮಧ್ಯದಲ್ಲಿ ಸೇರಿ ಅದನ್ನು ಇಭಾಗಿಸಿದನು. ಒಂದು ಭಾಗವು ಔರಂಗಜೇಬನೊಡನೆ ಖಿಂಡಿ

ಯಮಾರ್ಗದಿಂದ ನಡೆಯಿತು. ಎರಡನೆಯಭಾಗವು ರಾಜಸಿಂಹನ ಕೈಯಲ್ಲಿ ಸಿಕ್ಕಿತು ಈ ಭಾಗದಲ್ಲಿ ಬಾದಶಹನ ಜನಾನಖಾನೆಯಿತ್ತು. ಆ ಜನಾನಖಾನೆಯ ಎದುರಿಗೆ ರಾಜಸಿಂಹನು ಬಂದು ನಿಂತಕೂಡಲೆ ಕೋಲಾಹಲವುಂಟಾಯಿತು. ಇಲ್ಲಿ ರಾಣಾನಿಗೆ ಯುದ್ಧಮಾಡುವ ಅವಶ್ಯಕತೆಯು ಬೀಳಲಿಲ್ಲ. ಸ್ತ್ರೀಯರ ರಕ್ಷಣಕ್ಕಿದ್ದವರು ತಮ್ಮ ಕತ್ತಿಗಳನ್ನು ಎತ್ತಲೊಲ್ಲರು. ಯಾಕಂದರೆ ಶತ್ರುಗಳನ್ನು ಹೊಡೆಯಲಿಕ್ಕ ಹೋದರೆ ಹಿಂದಿನ ಸ್ತ್ರೀಯರಿಗೆ ತಗಲುವಂತೆ ದಟ್ಟಣೆಯಾಗಿತ್ತು. ಆದ್ದರಿಂದ ರಾಜಸಿಂಹನು ಸುಲಭವಾಗಿಯೆ ಅವರೆಲ್ಲರನ್ನು ಬಂದಿಯನ್ನಾಗಿ ಮಾಡಿದನು ಯಾವತ್ತು ಸ್ತ್ರೀಯರು ದಾಸದಾಸಿಗಳು ರಾಜಸಿಂಹನ ಕೈದಿಗಳಾದರು.

ರಾಜಸಿಂಹನು ಜಯಸಿಂಹನನ್ನು ವಿಶೇಷವಾಗಿ ಪ್ರೀತಿಸುತ್ತಿದ್ದನು ಅದರಿಂದ ಆತನು ಯಾವಾಗಲು ರಾಣಾನ ಸಂಗಡಲೆ ಇರುತ್ತಿದ್ದನು ಆತನು ರಾಣಾನಿಗೆ ಕೈಜೋಡಿಸಿ-" ಮಹಾರಾಜಾಧಿರಾಜಾ, ಈಸಮುದಾಯವನ್ನು ತಕ್ಕೊಂಡು ಏನು ಮಾಡಬೇಕೆನ್ನುವಿರಿ? ವಿನಾಕಾರಣ, "ತಿನ್ನುವದಕ್ಕೆ ಶೂರ, ಭೂಮಿಗೆಭಾರ" ಅದರೊಳಗೂ ಇವು ಸುಕುಮಾರ ರತ್ನಗಳು. ಅಪ್ಪಣೆಯಾದರೆ ಉದೇಪುರಕ್ಕೆ ಕಳಿಸುತ್ತೇನೆ.

ರಾಜಸಿಂಹ-"ಇವರೆಲ್ಲರನ್ನೂ ಉದೇಪುರಕ್ಕೆ ಕಳಿಸುವ ಕಾರಣವಿಲ್ಲ ಉದೇಪುರದಲ್ಲಿ ಇವರೆಲ್ಲರಿಗೆ ಕೂಳಿಲ್ಲ. ಉದೇಪುರದ ಬೇಗಮ್ಮಳನ್ನು ಮಾತ್ರ ಚಂಚಲಕುಮಾರಿಯ ಕಡೆಗೆ ಕಳಿಸು. ಯಾಕಂದರೆ ಅವಳ ವಿಷಯಕ್ಕೆ ಚಂಚಲೆಯು ಬಹಳ ಹೇಳಿರುತ್ತಾಳೆ. ಉಳಿದ ಯಾವತ್ತು ಔರಂಗಜೇಬನ ಧನವನ್ನು ಆತನಿಗೆ ತಿರುಗಿಕೊಡು-"

ಜಯಸಿಂಹ—" ಆದರೆ ಲೂಟಿಯೊಳಗಿನ ಕೆಲವುಭಾಗನ್ನು ಶಿಪಾಯರಿಗೆ ಕೊಡಬೇಕಾಗಿದೆ."

ರಾಜಸಿಂಹ—(ನಗುತ್ತ)-" ಅವಶ್ಯಕತೆ ಇದ್ದವರು ತೆಗೆದುಕೊಳ್ಳಲಿ, ಆದರೆ ಈ ಮುಸಲ್ಮಾನಸ್ತ್ರೀಯರನ್ನು ಹಿಂದುಜನರು ಮುಟ್ಟಬಾರದಲ್ಲವೆ ! "

ಜಯಸಿಂಹ—" ಅದರೊಳಗೇನು ? ಕುಣಿಯುವದಕ್ಕೂ ಹಾಡು ವದಕ್ಕೂ ಬರುವದಿಲ್ಲವೇನು ? " ರಾಜಸಿಂಹ—" ಕುಣಿಯುವದರಲ್ಲಿ ಲಕ್ಷ್ಯವಿದ್ದರೆ ರಜಪೂತರ ಕಾರ್ಯದಕೆಲಸಗಳಾಗುವವೆ ? ಸುಖೋಪಭೋಗದ ಬಯಕೆಯನ್ನು ಎಂದೂ ಮಾಡಬಾರದು ಮೊಗಲರಂತೆ ವಿನೋದಕ್ಕೆ ಬಿದ್ದರೆ ನಿಮ್ಮಿಂದ ಅವರೊಡನೆ ಕಾದುವದಕ್ಕಾಗುವದಿಲ್ಲ. ಹೋಗು ಉದೇಪುರದ ಬೇಗಮ್ಮಳನ್ನು ಅತ್ತ ಕಳಿಸು "

ಜಯಸಿಂಹನು ಕೂಡಲೆ ಉದೇಪುರದ ಬೇಗಮ್ಮಳನ್ನು ಹುಡುಕಿ ತೆಗೆದನು ಅವಳನ್ನು ಆನೆಯಿಂದ ಕೆಳಗಿಳಿಸಿದನು ಅವಳೊಡನೆ ಝೇಬಉನ್ನಿಸಳನ್ನೂ ಇಳಿಸಿ ಸಂಗಡ ಕುದುರೆ ಸವಾರರನ್ನು ಕೊಟ್ಟು ಉದೇಪುರಕ್ಕೆ ಕಳಿಸಿದನು.

---

## ೨೬ ನೆಯ ಪ್ರಕರಣ

### ಔರಂಗಜೇಬನು ಬಲೆಯಲ್ಲಿಸಿಕ್ಕನು.

ಉದೇಪುರದ ಬೇಗಮ್ಮಳನ್ನೂ ಝೇಬಉನ್ನೀಸಳನ್ನೂ ಉದೇಪುರಕ್ಕೆ ಕಳಿಸಿದಮೇಲೆ ರಾಣಾನು ಉಳಿದ ಯಾವತ್ತು ಸ್ತ್ರೀಯರನ್ನು ಔರಂಗಜೇಬನ ಹಿಂದಿಂದೆ ಆ ಬಿಂಡಿಯ ಮಾರ್ಗದಿಂದ ಹೋಗಬಿಟ್ಟನು ಅವರಹಿಂದಿಂದೆ ಮೊಗಲರ ಸೇನೆಯು ಹೋಯಿತು. ಅದರಹಿಂದೆ ಅನ್ನ ಸಾಮಗ್ರಿಯಿತ್ತು. ಅದನ್ನು ಮಾತ್ರ ರಜಪೂತರು ಲೂಟಿಮಾಡಿದರು. ತಮಗೆ ಬೇಕಾದ ಸಾಹಿತ್ಯಗಳನ್ನೆಲ್ಲ ತಮ್ಮ ದಂಡಿಗೆ ಕಳಿಸಿದರು. ಉಳಿದ ಮಾಂಸ ಮೊದಲಾದುದನ್ನು ಅಡವಿಯಲ್ಲಿ ಚಲ್ಲಿಬಿಟ್ಟರು. ಅದರ ಹಿಂದೆ

ಬಾದಶಹನ ಖಜಾನಿಯು ಅದರಸಂಗಡ ತೋಫುಗಳು ಖಜಾನೆಯನ್ನು
ನೋಡಿದಕೂಡಲೆ ರಜಪೂತರಿಗೆ ಲೋಭಉತ್ಪನ್ನವಾಯಿತು ಆದರೆ
ರಾಜಸಿಂಹನು ಅವರನ್ನು ತನ್ನ ಅಂಕಿತದಲ್ಲಿ ಇಟ್ಟುಕೊಂಡನು ಅವರಿಗೆ
“ ನಿಮ್ಮ ಚಿತ್ತವನ್ನು ಸ್ಥಿರವಾಗಿಟ್ಟುಕೊಳ್ಳಿರಿ ಇದೆಲ್ಲವೂ ನಿಮಗೇದೊರೆ
ಯುವದು ಆದರೆ ಈಹೊತ್ತು ಅದನ್ನು ಹೋಗಬಿಡಿರಿ ಈಗ ಈ ಗೋಲಂ
ದಾಜರೊಡನೆ ಕಾದುವವೇಳೆಯಲ್ಲ ” ಎಂದು ಸಮಾಧಾನ ಹೇಳಿದನು.
ಹೀಗೆ ಹೇಳಿ ತಾನು ಎಲ್ಲಕ್ಕೂ ಮುಂದೆ ಹೋಗಿನಿಂತನು ಈರೀತಿಯಿಂದ
ಔರಂಗಜೇಬನ ಇಡೀಸೇನೆಯು ಆ ಖಿಂಡಿಯಲ್ಲಿ ಪ್ರವೇಶಿಸಿತು. ಆಮೇಲೆ
ರಾಜಸಿಂಹನು ಜಯಸಿಂಹನನ್ನು ಒತ್ತಟ್ಟಿಗೆ ಕರೆದೊಯ್ದು “ ಈ ಮೊಗ
ಲರನ್ನು ಕಂಡು ನನಗೆ ಅತ್ಯಂತ ಆನಂದವಾಗಿರುತ್ತದೆ. ನಿನ್ನನ್ನು ಮೊಗ
ಲರ ವೇಷದಿಂದ ಕಳಿಸಬೇಕೆನ್ನುತ್ತೇನೆ. ಅಂದರೆ ಸರ್ವಸಂಗತಿಯೂ
ಗೊತ್ತಾಗುವದು ಮೊಗಲರೊಡನೆ ಯುದ್ಧಮಾಡದೆ ಗತ್ಯಂತರವಿಲ್ಲ
ಆದರೆ ಯುದ್ಧಮಾಡದೆ ಅವರನ್ನು ಓಡಿಸಿಬಿಡುವದು ಯೋಗ್ಯವಾದದ್ದು ”
ಎಂದು ಹೇಳಿದನು

ಇತ್ತ ಬಾದಶಹನ ಸ್ಥಿತಿಯು ಚಮತ್ಕಾರವಾಗಿತ್ತು ಆ ಖಿಂಡಿ
ಯಲ್ಲಿ ಆತನ ಯಾವತ್ತು ಸೇನೆಯು ಒಟ್ಟುಗೂಡಿತು ಆಮೇಲೆ ಬೇಗ
ಕತ್ತಲೆಯಾಯಿತು ಖಿಂಡಿಯ ಎರಡನೆ ಮಗ್ಗಲಿನಿಂದ ಯಾರೂ ಪಾರಾಗಿ
ದ್ದಿಲ್ಲ. ಆ ಖಿಂಡಿಯು ಎಷ್ಟುದೂರವಿರುವದೆಂಬದು ಯಾರಿಗೂ ಗೊತ್ತಿ
ದ್ದಿಲ್ಲ. ರಾತ್ರಿಯಾದದ್ದರಿಂದ ಸುತ್ತಲೂ ಕತ್ತಲೆಯು ತುಂಬಹೋ
ಯಿತು. ಇಡೀದಾರಿಯ ಮೇಲೆಲ್ಲಾ ಬೆಳಕುಮಾಡುವಷ್ಟು ಸಾಹಿತ್ಯವೂ
ಅವರಲ್ಲಿ ಇದ್ದಿಲ್ಲ. ಬಾದಶಹನ ಮತ್ತು ದೊಡ್ಡದೊಡ್ಡ ಬೇಗಮ್ಮರ
ಹತ್ತರ ಮಾತ್ರ ಬೆಳಕಿನ ವ್ಯವಸ್ಥೆಯನ್ನು ಮಾಡಿತ್ತು. ಉಳಿದ ಸೇನೆಯೆ
ಲ್ಲವೂ ಕತ್ತಲೆಯಲ್ಲಿ ಎಡವಿ ಮುಗ್ಗರಿಸಹತ್ತಿತು. ಸೇನೆಯ ಜನರು
ಹೆದರಿದರು. ಕುದುರೆಗಳು ಗಾಬರಿಗೊಂಡವು. ಎಷ್ಟೋ ಸ್ವಾರರನ್ನು
ತಮ್ಮ ಬೆನ್ನಿನಿಂದ ಎತ್ತಿ ಒಗೆದವು. ಈ ಗೊಂದಲವನ್ನು ಕಂಡು ಬಾದಶಹನು

ದಂಡಿಗೆಲ್ಲ ಅಲ್ಲಿಯೇ ಛಾವಣಿಯನ್ನು ಹಾಕಲಿಕ್ಕೆ ಹೇಳಿದನು. ಆದರೆ ಡೇರೆ ಹೊಡೆಯುವಷ್ಟು ಸಪಾಟಸ್ಥಳವು ಆ ಖಿಂಡಿಯಲ್ಲಿ ಇದ್ದಿಲ್ಲ. ಬಹಳ ಪ್ರಯಾಸದಿಂದ ಬಾದಶಹನಹಾಗು ಬೇಗಮ್ಮರ ಡೇರೆಗಳು ಸಿದ್ಧವಾದವು. ಸೇನೆಯ ವ್ಯವಸ್ಥೆಯೇನೂ ಆಗಲಿಲ್ಲ ಅವರು ನಿಂತಸ್ಥಳದಲ್ಲಿಯೆ ನಿಂತರು. ಕುದುರೆಯಮೇಲಿನವರು ಕುದುರೆಯಮೇಲೆ, ಆನೆಯ ಮೇಲಿನವರು ಆನೆಯಮೇಲೆ ಉಳಿಯಬೇಕಾಯಿತು. ಇಷ್ಟರಲ್ಲಿ ಎರಡನೇದೊಂದು ಸಂಕಟವು ಉದ್ಭವಿಸಿತು ದಂಡಿನ ಊಟದ ಸಾಹಿತ್ಯಗಳನ್ನು ರಜಪೂತರು ಎತ್ತಿಹಾಕಿದ್ದರಿಂದ ಎದೆ ಒಡೆದುಹೋಯಿತು ಖಿಂಡಿಯಲ್ಲಿ ಕುದುರೆಗಳ ಆಹಾರವೂ ಕಟ್ಟಾಯಿತು ಆಮೇಲೆ ಸೇನೆಯವರು ಮಾಡುವದೇನು ? ಬಾದಶಹ ಬೇಗಮ್ಮರದೂ ಇದೇಗತಿಯು, ಇಡೀ ರಾತ್ರಿಯೆಲ್ಲ ಹಸಿವೆಯಿಂದಲೂ ಜಾಗರಣೆಯಿಂದಲೂ ಸೇನೆಯು ತಳಮಳಿಸುತ್ತಿತ್ತು.

ರಜಪೂತರು ಝೇಬಉನ್ನೀಸಳನ್ನೂ, ಉದೇಪುರದ ಬೇಗಮ್ಮಳನ್ನೂ ಹರಣಮಾಡಿದ ಸುದ್ದಿಯು ಬಾದಶಹನಿಗೆ ಮುಟ್ಟಿತು ಅದನ್ನು ಕೇಳಿ ಬಾದಶಹನು ಮಿತಿಯಿಲ್ಲದಷ್ಟು ಕೋಪಗೊಂಡನು. ಸಿಟ್ಟಿನಿಂದ ಆತನ ಶರೀರವು ಕಂಪಿಸಹತ್ತಿತು. ಈಹೊತ್ತಿನಲ್ಲಿ ಆತನ ಕೈನಡಿಯುವಂತಿದ್ದು, ಒಂದುವೇಳೆ ಅಂಥ ಸಂಧಿಯು ದೊರೆದಿದ್ದರೆ ರಜಪೂತರನ್ನು ಜಗತ್ತಿನಲ್ಲಿ ಇಲ್ಲೆನಿಸಿ ಬಿಡುತ್ತಿದ್ದನು. ಆದರೆ ಉಪಾಯವಿದ್ದಿಲ್ಲ.

ಮಧ್ಯರಾತ್ರಿಗೆ ಸೇನೆಯಲ್ಲಿ ಶಾಂತತೆಯಾಯಿತು. ಆಕಾಲಕ್ಕೆ ಪರ್ವತದಮೇಲೆ ಸಾವಿರಾರು ಗಿಡಗಳನ್ನು ಕಡಿಯುತ್ತಿರುವಂತೆ ಕೇಳಬರಹತ್ತಿತು ಅದರಕಾರಣವು ಯಾರಿಗೂ ಗೊತ್ತಾಗಲಿಲ್ಲ ಭೂತಪಿಶಾಚಿಗಳ ಆಟವಿರಬಹುದೆಂದು ಎಲ್ಲರು ತಮ್ಮತಮ್ಮ ಸ್ಥಳದಲ್ಲಿ ಸ್ತಬ್ಧರಾಗಿದ್ದರು.

## ೨೭ ನೆಯ ಪ್ರಕರಣ.

### ದಾರಿಮೇಲಿನ ಸವಾರ.

ಸಾಯಂಕಾಲದ ಆಹ್ಲಾದಕಾರಕಸಮಯ. ಗಾಳಿಯು ಮಂದ ಮಂದವಾಗಿ ಬೀಸುತ್ತಿದೆ. ಬೇಸಿಗೆಯ ಕಾಲವಾದುದರಿಂದ ಶರೀರಕ್ಕೆ ಅತ್ಯಾನಂದವೆನಿಸುತ್ತಿತ್ತು. ಸೂರ್ಯಾಸ್ತಮಯದ ಅಪ್ರತಿಮ ಸೃಷ್ಟಿಸೌಂದರ್ಯ. ವನಲತಾದಿಗಳ ಮೇಲ ಚಮುಕಿತವಾಗುವ ಸೂರ್ಯನ ಕಾಂತಿಯಿಂದ ಯಾರಿಗೆತಾನೆ ಆನಂದವೆನಿಸಲಿಕ್ಕಿಲ್ಲ, ಯಾವಾತನು ತನ್ನ ದುಃಖವನ್ನು ಮರೆಯಲಿಕ್ಕಿಲ್ಲ ? ಇಂಥ ರಮಣೀಯಕಾಲದಲ್ಲಿ ಇಬ್ಬರು ಸವಾರರ ಹಿಂದಿಂದೆ ಸ್ವಲ್ಪ ಅಂತರದ ಮೇಲೆ ಕಪ್ಪುವಸ್ತ್ರದಿಂದ ಮುಖಾಚ್ಛಾದಿತರಾದ ಇಪ್ಪತ್ತುಸಾವಿರ ಸವಾರರು ಸುಮ್ಮನೆ ನೆಟ್ಟಗೆ ಮಾರ್ಗವನ್ನು ಕ್ರಮಿಸುತ್ತಿರುವರು. ಮುಂದಿನ ಸವಾರರೂ ಮುಖವನ್ನು ಆಚ್ಛಾದಿಸಿಕೊಂಡಿದ್ದರು. ಇಷ್ಟುದೊಡ್ಡ ಸಮುದಾಯವಾದಾಗ್ಯೂ ಪರಸ್ಪರವಾಗಿ ಮಾತಾಡಿಕೊಳ್ಳುವ ಧ್ವನಿಯು ಸ್ವಲ್ಪವೂ ಕೇಳಬರುತ್ತಿರಲಿಲ್ಲ. ಕುದುರೆಯ ಕೊಳಗುಗಳಿಗೆ ತಾಕಿದ ತರಗೆಲೆಗಳು ಮಾತ್ರ ‘ ಸರಸರ ’ ಶಬ್ದಮಾಡುತ್ತಿದ್ದವು. ಇದರಮೇಲಿಂದಲೆ ಅವರು ಕುದುರೆಯ ಸವಾರರೆಂದು ಗುರ್ತಿಸಬಹುದಾಗಿತ್ತು. ಇವರೆಲ್ಲರು ದಿಲ್ಲಿಯ ಕಡೆಯಿಂದ ಉದೇಪುರದ ಮಾರ್ಗದಿಂದ ನಡೆದಿದ್ದರು. ಬಹಳಹೊತ್ತಿನವರೆಗೆ ಶಾಂತತೆಯಿಂದ ನಡೆದು ಹೋದಮೇಲೆ ಮುಂದಿನವರಲ್ಲಿ ಒಬ್ಬನನ್ನು ಕುರಿತು—“ ಪ್ರತಾಪರಾಯಾ, ಈಕಾಲದಲ್ಲಿ ಸೃಷ್ಟಿಸೌಂದರ್ಯವು ಎಷ್ಟು ಮನೋಹರವಾಗಿ ಕಾಣುತ್ತದೆ. ಇಂಥ ಸಮಯದಲ್ಲಿ ತಾಸು ತಾಸಿನವರೆಗೆ ಅದನ್ನು ನೋಡುತ್ತ ನಿಲ್ಲಬೇಕೆಂದು ಯಾರಿಗೆ ಅನಿಸಲಿಕ್ಕಿಲ್ಲ.?

ಪ್ರತಾಪ—“ ಸರಿ, ಅದೆಲ್ಲ ನಿಜವಾದದ್ದು. ನಮ್ಮಂಥ ವೀರರು ಸೃಷ್ಟಿಸೌಂದರ್ಯವನ್ನು ನೋಡಿ ಸಮಾಧಾನಪಡುವಂತಿಲ್ಲ. ನಾವು ಇಂಥ

ವುಗಳನ್ನು ಹೃದಯದಲ್ಲಿ ಸಂಗ್ರಹಿಸುವ ಇಚ್ಛೆಯನ್ನು ಮಾಡಬಾರದು ಸೃಷ್ಟಿಸೌಂದರ್ಯವನ್ನು ಅವಲೋಕಿಸುವದು ಸೂಕ್ಷ್ಮ ಶರೀರಿಗಳ ಕೆಲಸ. ಅಥವಾ ಹೆಂಗಸರಕೆಲಸ, ಶತ್ರುಗಳಮೇಲೆ ಹಲ್ಲಾಮಾಡಿ ಅವರ ಕುತ್ತಿಗೆ ಯನ್ನು ಕೊಯ್ಯುವದಕ್ಕೆ ಬೇಕಾದ ಧೈರ್ಯ ಹಾಗು ಆಕಾಲದ ಘೋ ಭಾವಲೋಕನ ಇವೇ ನಮಗ ಈಶನಿರ್ಮಿತ ಅದ್ಭುತಸೃಷ್ಟಿಸೌಂದರ್ಯವು ನಿಮ್ಮ ಲಕ್ಷ್ಯವು ಈ ಸೌಂದರ್ಯದ ಕಡೆಗೆ ಹೋದದ್ದು ಆಶ್ಚರ್ಯವಲ್ಲ. ಸ್ತ್ರೀಯರು ಸ್ವಭಾವತಃ ಸೃಷ್ಟಿ ಸೌಂದರ್ಯಾನುಭವಿಗಳು ''

" ಈಮಾತು ಪೂರ್ಣವಾಗಿ ನಿಜವಿರುವದೆಂದು ನಾನು ಹೇಳ ಲಾರೆ! ಸ್ತ್ರೀಯರಷ್ಟೆ ಸೃಷ್ಟಿಸೌಂದರ್ಯಾನುಭವಿಗಳು ಪುರುಷರು ಅಲ್ಲವೇನು? ''

ಪ್ರತಾಪ—"ಹಾಗೇನು ಅಲ್ಲ. ಸ್ತ್ರೀಯರ ಓಘವು ಸ್ವಭಾವತಃ ಆತ್ತಕಡಗಿರುತ್ತದೆ ಪುರುಷರದು ಹಾಗಲ್ಲ ''

" ಈಮಾತಿಗೆ ಬೇಕಾದರೆ ಬಿದ್ದು ಕಟ್ಟೋಣ. ನನ್ನ ಮನೋಭಾ ವವು ಹಾಗೆ ಇರಲಿಲ್ಲ ಸರ್ವಸಾಧಾರಣನಿಯಮವನ್ನು ಹೇಳಿದೆನು. ಅದನ್ನು ನೀವು ವಿಪರೀತವಾಗಿ ಎಣಿಸಿದಿರಿ. ''

ಪ್ರತಾಪ:—"ರಾಣಿಯವರೆ! ಕ್ಷಮಿಸಿರಿ. ನನಗೆ ಹಾಗೆ ತೋರಿ ದ್ದರಿಂದ ಹೇಳಿದೆ! ''

ಈ ಪ್ರವಾಸಿಗಳು ಯಾರೆಂಬದು ವಾಚಕರಿಗೆ ಗೊತ್ತಾಗಿರಬಹು ದು. ಪ್ರತಾಪ ಹಾಗು ವೀರಸಂಘದ ಮಹಾರಾಣಿಯು ರಾಣಾರಾಜ ಸಿಂಹನಿಗೆ ಸಹಾಯಮಾಡುವದಕ್ಕೆ ಇಪ್ಪತ್ತುಸಾವಿರ ಸೇನೆಯೊಡಗೊಂಡು ಹೋಗುತ್ತಿದ್ದರು. ಪರಮಹಂಸ, ತಪಸ್ವಿನಿಯರು ಇವರ ಹಿಂದಿಂದೆ ಬರ ತಕ್ಕವರಿದ್ದರು.

ಸ್ವಲ್ಪಹೊತ್ತಿನಮೇಲೆ ಮಹಾರಾಣಿಯು—"ಪ್ರತಾಪರಾಯಾ, ಈಹೊತ್ತು ನನ್ನ ಸಮಾನವಾದ ಭಾಗ್ಯವಂತರು ಯಾರು ಇಲ್ಲೆಂದು ತಿಳಿ ಯುತ್ತೇನೆ. ಈಶ್ವರಕೃಪೆಯಿಂದ ಈ ಯುದ್ಧದಲ್ಲಿ ನಮಗೆ ಜಯವಾದರೆ

ನಾನು ನಿಮ್ಮ ಅರ್ಧಾ.....................................

ಮುಂದಿನ ಶಬ್ದವು ಅವಳ ಬಾಯಿಯಲ್ಲಿಯೆ ನಿಂತಿತು ಮುಖವನ್ನು ತಗ್ಗಿಸಿದಳು ಆ ಮೇಲೆ ಪ್ರತಾಪನು ಅರ್ಧಾಂಗಿಯಾಗುವೆನು! ಇಷ್ಟೆ ಅಲ್ಲವೆ! ಆಮೇಲೆ ನನ್ನ ಭಾಗ್ಯಕ್ಕೆ ಸೀಮೆಯೆ ಇಲ್ಲ. ದೊರೆತ ರತ್ನವನ್ನು ಕುಂದಣಕ್ಕ ಸೇರಿಸದೆ ಬಿಸಾಡುವದು ಮೂರ್ಖತನವಲ್ಲವೆ? ನಾನು ಸ್ಪಷ್ಟವಾಗಿ ಹೇಳುತ್ತೇನೆ. ದೇವಾಲಯದಿಂದ ಹಿಂದಿರುಗಿಬರುವಾಗ್ಗೆ ಆ ನರಾಧಮನು ನಿನ್ನಮೇಲೆ ಬಲಾತ್ಕಾರ ಮಾಡುತ್ತಿರಲು ಅದೇ ನ್ನಿನನ್ನು ನೊದಲುನೋಡಿದ್ದು ಆ ಕಾಲಕ್ಕೆ ನಿನ್ನಲ್ಲಿ ಒಂದುಪ್ರಕಾರದ ಹೊಸಪ್ರೀತಿಯುತ್ಪನ್ನವಾಯಿತು ಅದೇ ಪ್ರೇಮದ ಪ್ರಥಮದರ್ಶನವು ಆ ಪ್ರಿಯದರ್ಶನದ ವೇಳೆಯಲ್ಲಿಯ ನನ್ನ ಮನಸಿನಲ್ಲಿ ಒಂದುತರದ ಗೂಢಭಾವನೆಯುದ್ಭವಿಸಿತು ಅದರ ಉಪಯೋಗವಾದದ್ದನ್ನು ಕಂಡು ಅತ್ಯಾನಂದವಾಯಿತು ಇಲ್ಲವಿದ್ದರೆ ನಾನು ನಿಶ್ಚಯ ಮಾಡಿಯ ಇದ್ದೆನು ಸಾಯುವವರೆಗೆ...

ಮಹಾರಾಣಿ—" ಏನು ! ಅವಿವಾಹಿತರಾಗಿರುತ್ತಿದ್ದಿರಾ? ನಿಶ್ಚಯವೇನು! ಹಾಗಾದರೆ ನಮ್ಮಿಬ್ಬರ ಮನಸ್ಸು ಒಂದೇ ಆಯಿತು ಇದರೊಳಗೇನು ಆಶ್ಚರ್ಯ, ನನ್ನ ಮನಸಾದರೂ ಹಾಗೇ ಇಗಿತ್ತು ಆದರೆ ಸ್ವೀಕೃತಕಾರ್ಯವನ್ನು ಸಿದ್ಧಿಗೊಯ್ಯದೆ ಸುಖೋಪಭೋಗದ ಉದ್ಗಾರಗಳನ್ನು ತೆಗೆಯುವದು ಕೇವಲ ಪಾಪದಕೆಲಸವು ಅಂತೇ ಈವರೆಗೆ ನಿಮ್ಮ ವಿರಹದುಃಖವನ್ನು ಸಹಿಸುತ್ತಿರುವೆನು ಪ್ರಿಯಕರ, ಇನ್ನು ಮೇಲೆ ನೀವು ಮಹಾರಾಣಿ ಎಂದು ಸಂಬೋಧನೆ ಮಾಡುವದರಿಂದ ನನಗೆ ಲಜ್ಜೆಯೆನಿಸುತ್ತದೆ ಅದ್ದರಿಂದ ಬೇರೊಂದು ನಿಮ್ಮ ಪ್ರೀತಿಯಹೆಸರು ಹೇಳಿರಿ"

ಪ್ರತಾಪ—" ನಾವಿಬ್ಬರೂ ವಿವಾಹರಜ್ಜುವಿನಿಂದ ಬದ್ಧರಾಗುವವರೆಗೆ ನಾನು ನನ್ನ ಧರ್ಮದಂತೆಯೇ ನಡೆಯಬೇಕಾಗಿದೆ ಲೌಕಿಕದಲ್ಲಿ 'ಮಹಾರಾಣಿ' ಎಂಬ ಸಂಬೋಧನೆಯೆ ಹೆಚ್ಚು ಶ್ರೇಯಸ್ಕರವು ಏಕಾಂತದಲ್ಲಿ ಮಧುರವಾದ 'ಪ್ರಿಯೆ' ಎಂಬ ಮನೋಹರ ಶಬ್ದದಿಂದ ಸಂಬೋಧಿಸುವೆನು. ಆಯಿತೆ? "

ಮಹಾರಾಣಿ—(ನಕ್ಕು) " ಈಗ ಸ್ವಲ್ಪ ಆನಂದವೆನಿಸಿತು. ಆದರೆ ಉದೇಪುರಕ್ಕೆ ನಾವು ಎಷ್ಟುಹೊತ್ತಿಗೆ ಮುಟ್ಟಬಹುದು? ಪ್ರತಾಪ–" ಒಹಳಮಾಡಿ ಮುಂಜಾನೆ ಮುಟ್ಟಬಹುದೆಂದು ತೋರುತ್ತದೆ. ರಾಣಿಯವರಿಗ ಬಹಳ ಶ್ರಮವೆನಿಸಿದ್ದರ ಇಲ್ಲಿ ವಿಶ್ರಾಂತಿಗೆ ಸ್ವಲ್ಪ ವ್ಯವಸ್ಥೆಯನ್ನು ಮಾಡಿಕೊಡುವೆನು "

ಮಹಾರಾಣಿ—" ಸರಿ, ಹಾಗೇಮಾಡಿರಿ, ಸ್ವಲ್ಪ ವಿಶ್ರಮಿಸಿ, ಆಮೇಲೆ ಹೋಗೋಣ "

ಕೂಡಲ ವಿಶ್ರಾಂತಿಗೋಸ್ಕರ ನಿಲ್ಲುವ ವ್ಯವಸ್ಥೆಯಾಯಿತು ಸವಾರರೆಲ್ಲರೂ ಕುದುರಯಿಂದಿಳಿದರು ಅಲ್ಲಿಂದಲ್ಲೆ ತಮ್ಮ ತಮ್ಮ ಹಾಸಿಗಗಳನ್ನು ಹಾಸಿ ಉಪಾಹಾರದ ಯೋಚನೆಯನ್ನು ಮಾಡಹತ್ತಿದರು ಇಷ್ಟರಲ್ಲಿ ನಾಲ್ವರು ಕುದುರೆಸವಾರರು ಒಳ್ಳೇ ವೇಗದಿಂದ ಅಲ್ಲಿಗೆ ಬಂದರು. ಅವರನ್ನು ರಾಣಿಯವರಿರುವಸ್ಥಳಕ್ಕೆ ಕಳಿಸಿದರು

---

## ೨೮ ನೆಯ ಪ್ರಕರಣ.

### ಪಂಜರದೊಳಗಿನ ಸಿಂಹ

---

ರಾತ್ರಿ ಮುಗಿಯಿತು. ಸೂರ್ಯ ಪ್ರಕಾಶವು ದೃಗ್ಗೋಚರವಾದೊಡನೆ ಸೇನೆಗೆ ಮಾರ್ಗಕ್ರಮಿಸುವುದಕ್ಕೆ ಅಪ್ಪಣೆಯಾಯಿತು. ಸೇನೆಯವರು ಬೇಗಂ ಖಿಂಡಿಯ ಮುಂದಿನಮುಗ್ಗಲಿಗೆ ಹೋಗುವುದಕ್ಕೆ ನಡೆಯುವುದರಲ್ಲಿ ಕಡಿಮೆಮಾಡಲಿಲ್ಲ. ಹಸಿವು ನೀರಡಿಕೆಗಳಿಂದ ವ್ಯಾಕುಲರಾಗಿದ್ದರು. ಹೊರಗೆ ಹೋದಕೂಡಲೆ ತಿನ್ನುವುದಕ್ಕೆ ಏನಾದರೂ ದೊ

ರೆಯಬಹುದೆಂದು ಆತುರಮಾಡುತ್ತಿದ್ದರು. ಆದರಿಂದ ಸೇನೆಯವರು ಸಾಲುಬಿಟ್ಟು ಹೊರಬೀಳುವ ಗೊಂದಲವಬ್ಬಿಸಿದರು. ಉದೇಪುರದ ಜೇಗಮ್ಮಳನ್ನೂ ಜೇಬಉನ್ನೀಸಳನ್ನೂ ಬಿಡಿಸಿಕೊಂಡು ಉದೇಪುರವನ್ನು ನೆಲಸಮ ಮಾಡುವ ವಿಚಾರದಲ್ಲಿ ಬಾದಶಹನು ಮಗ್ನನಾಗಿದ್ದನು, ಕ್ಷಣವು ತಾಸಿನಂತಾಗಿತ್ತು ಕಡೆಗೆ ಮೊಗಲಸೇನೆಯು ಖಿಂಡಿಯ ಬಾಯಿಗೆ ಬಂತು. ಬಂದು ನೋಡುತ್ತಾರೆ ಇದೇನು ? ಮುಸಲ್ಮಾನರ ಸರ್ವನಾಶದ ಸಾಧನವು ಎದುರಿಗೆ ನಿಂತುಕೊಂಡಿದೆ. ರಜಪೂತರು ರಾತ್ರಿಯಹೊತ್ತಿನಲ್ಲಿ ದೊಡ್ಡದೊಡ್ಡ ಮರಗಳನ್ನು ಕಡಿದು ಮೇಲಿನಿಂದ ಕೆಳಕ್ಕೆ ಉರುಳಿಸಿ ಖಿಂಡಿಯ ಬಾಯಿಯನ್ನು ಮುಚ್ಚಿಬಿಟ್ಟಿದ್ದರು. ದೊಡ್ಡದೊಡ್ಡ ಮರಗಳ ಬೊಡ್ಡೆ ಟೊಂಗೆ ಎಲೆಗಳಿಂದ ಕಾಲಿಕ್ಕದಂತಾಗಿತ್ತು. ಅದರೊಳಗಿಂದ ಒಂದು ಸಣ್ಣನಾಯಿಯು ಹಾಯ್ದು ಹೋಗುವದು ಪ್ರಯಾಸವಾಗಿತ್ತು ಆನೆಗಳ ಗತಿಏನು ? ಕುದುರೆಗಳಿಗೆ ಮಾರ್ಗವೆಲ್ಲಿ?

ಇದನ್ನು ನೋಡಿ ಮುಸಲ್ಮಾನರ ಸೇನೆಯಲ್ಲಿ ಕೋಲಾಹಲವೆದ್ದಿತು ಸ್ತ್ರೀಯರು ಆಕ್ರೋಶ ಮಾಡಹತ್ತಿದರು ಕಠೋರಮನಸಿನ ಬಾದಶಹನ ಹೃದಯವು ನೀರುನೀರಾಯಿತು

ಹಾದಿಯನ್ನು ದುರಸ್ತಮಾಡುವ ಜನರ ಗುಂಪು ಈ ಕಾಲಕ್ಕೆ ಸೇನೆಯ ಅವ್ಯವಸ್ಥೆಯಿಂದ ಹಿಂಭಾಗದಲ್ಲಿ ಉಳಿದಿತ್ತು ಅವರು ಮಾರ್ಗವನ್ನು ಸರಿಗೊಳಿಸುವದರೊಳಗಾಗಿ ಈ ದಿವಸವೂ ಉಪವಾಸ ಬೀಳಬೇಕಾಗುವದೆಂದು ತೋರಿತು ಬಾದಶಹನು ಅವರು ಬರುವರೆಗೆ ಕಾಲಾಳುಗಳಿಗೂ ಉಳಿದ ಕೆಲವು ಜನರಿಗೂ ಮರದ ತುಂಡುಗಳನ್ನು ತೆಗೆದು ಹಾಕಲಿಕ್ಕೆ ಆಜ್ಞಾಪಿಸಿದನು ಅಪ್ಪಣೆಯಂತೆ ಸಾವಿರಾರು ಜನರು ಆ ಉದ್ಯೋಗಕ್ಕೆ ತೊಡಗಿದರು. ಅವರ ಸಹಾಯಕ್ಕೆ ಆನೆಗಳನ್ನು ಕೊಟ್ಟರು ಆದರೆ ಆ ಜನರು ಅಲ್ಲಿಗೆ ಬಂದ ಕೂಡಲೆ ಮೇಲಿನಿಂದ ಕೆಳಗೆ ಕಲ್ಲಿನ ಮಳೆ ಸುರಿಯಲಾರಂಭಿಸಿತು. ಕಾಲಾಳುಗಳಲ್ಲಿ ಕೆಲವರ ಕೈಯು ಕೆಲವರ ಕಾಲು ಬೇರೆ ಕೆಲವರ ತಲೆ ಮತ್ತೆ ಕೆಲವರ ಶರೀರಗಳು ತುಂಡಾಗ

ಹತ್ತಿದವು ಆನೆಗಳು ಭಯಂಕರವಾಗಿ ಒದರುತ್ತ ಓಡಹತ್ತಿದವು. ಅವುಗಳ ಕಾಲಲ್ಲಿ ಸಿಕ್ಕು ಎಷ್ಟೋ ಜನರು ನುಗ್ಗಾದರು ಪರ್ವತದ ಮೇಲೆ ರಜಪೂತರು ಇರುವೆಗಳ ಸಾಲುಗಳಂತೆ ಕಾಣುತ್ತಿದ್ದರು. ಅವರು ಸರಿಯಾಗಿ ನಿಂತು ಕೆಳಗೆ ಗಾಯಗೊಳ್ಳದ ಜನರನ್ನು ಗುಂಡುಗಳಿಂದ ಹೊಡೆಯತೊಡಗಿದರು ಅದರಿಂದ ಔರಂಗಜೇಬನ ಜನರಲ್ಲಿ ಒಬ್ಬನೂ ಆ ಕಟ್ಟಿಗೆಯ ಗೋಡೆಯ ಹತ್ತರ ಹೋಗಲೊಲ್ಲನು

ಈ ಸ್ಥಿತಿಯನ್ನು ಕಂಡು ಬಾದಶಹನ ವೃತ್ತಿಯು ಭಿನ್ನವಾಯಿತು. ಪುನಃ ಮತ್ತೊಮ್ಮೆ ಪ್ರಯತ್ನಮಾಡುವುದಕ್ಕೆ ಅಪ್ಪಣೆಯನ್ನು ಕೊಟ್ಟನು. ಆದೂ ಮೊದಲಿನಂತೆ ನಿರುಪಯೋಗವಾಯಿತು.

ಮರಗಳ ಗೋಡೆಯನ್ನು ತೆಗೆಯುವದು ನಿಷ್ಫಲವಾಗುವದೆಂದು ಔರಂಗಜೇಬನು ಸೇನೆಯವರಿಗೆ ಹಿಂದುರಗ ಹೇಳಿದನು ಬಂದ ದಾರಿಯಿಂದ ಹಿಂದಿರುಗ ಹೋಗಬೇಕೆಂದು ಯತ್ನಿಸಿದನು. ಆದರೆ ಅದರಿಂದಲೂ ಪ್ರಯೋಜನವಾಗಲಿಲ್ಲ. ಯಾಕಂದರೆ ಖಿಂಡಿಯ ಹಿಂದಿನ ಮಗ್ಗಲೂ ದೊಡ್ಡ ದೊಡ್ಡ ಮರಗಳಿಂದ ತುಂಬಿ ಹೋಗಿತ್ತು ಆ ಮಗ್ಗಲಿಗೂ ಪರ್ವತದ ಮೇಲೆ ರಜಪೂತರು ಸಾಲುಗೊಂಡಿದ್ದರು

ನಾವು ಈ ಖಿಂಡಿಯಿಂದ ಹೊರಬೀಳದಿದ್ದರೆ ಅನ್ನ ನೀರುಗಳಿಲ್ಲದೆ ಇಲ್ಲಿಯೆ ಒದ್ದಾಡಿ ಸಾಯುವ ಹೊತ್ತು ಬರುವದೆಂದು ಔರಂಗಜೇಬನು ವಿಚಾರದಲ್ಲಿ ಬಿದ್ದನು. ಆದ್ದರಿಂದ ಪುನಃ ಪ್ರಯತ್ನ ಮಾಡುವದಕ್ಕೆ ಹುಕುಮು ಮಾಡಿದನು. ಈಗ ಮಾತ್ರ ಸ್ವಲ್ಪ ಪರಿಣಾಮವಾಯಿತು. ಯಾಕಂದರೆ ಇಷ್ಟರಲ್ಲಿ ಮಾರ್ಗವನ್ನು ದುರಸ್ತು ಮಾಡುವ ಜನರೂ ಅಲ್ಲಿಗೆ ಬಂದಿದ್ದರು. ಅವರಸಹಾಯದಿಂದ ಸ್ವಲ್ಪ ಗಿಡಗಳನ್ನು ತೆಗೆದು ಹಾಕಿದರು ರಜಪೂತರು ಪುನಃ ಅಲ್ಲಿನ ವರ್ಷಾವವನ್ನು ಸುರುವು ಮಾಡಿದರು. ಕೂಡಲೆ ಆ ಪ್ರಯತ್ನವೂ ವ್ಯರ್ಥವಾಯಿತು. ಜನರು ಹಿಂದಿರುಗಿದರು.

ಎರಡನೇದೊಂದು ಭಯಂಕರ ಸಂಕಟವು ಉತ್ಪನ್ನವಾಯಿತು. ಎದುರಿನ ಪರ್ವತದ ಮೇಲಿರುವ ಸ್ವಲ್ಪ ಸಪಾಟ ಪ್ರದೇಶದಲ್ಲಿ ರಾಜಸಿಂಹನು ತನ್ನ ಛಾವಣಿಯನ್ನು ಹೊಡೆದಿದ್ದನು ರಾಜಸಿಂಹನು ತನ್ನ ತೋಫುಗಳಿಗೆ ಬತ್ತಿಯನ್ನು ಹಚ್ಚಹತ್ತಿದನು ತೋಫಿನ ಗುಂಡುಗಳು ಸೇನೆಯಲ್ಲಿ ಬೀಳಹತ್ತಿದೊಡನೆ ಸೈನಿಕರು ಮರಣೋನ್ಮುಖರಾಗಿ 'ಪಟ ಪಟ' ನೆಲದಮೇಲೆ ಬೀಳ ಹತ್ತಿದರು

ಇತ್ತ ಉದೇಪುರದ ಬೇಗಮ್ಮಳೂ ಝೇಬ ಉನ್ನಿಸಳೂ ಚಂಚಲ ಕುಮಾರಿಯು ಮಹಲಿಗೆ ಬಂದು ಮುಟ್ಟಿದರು ಚಂಚಲಕುಮಾರಿಯು ಅವರಿಗೆ ಬೇರೆ ಬೇರೆ ಆಸನಗಳನ್ನು ಕೊಟ್ಟು ಮನ್ನಣೆಯನ್ನುಮಾಡಿದಳು ಸಭ್ಯತನಕ್ಕನುಸರಿಸಿ ತಾನು ಎದ್ದು ನಿಂತಳು ತಮಗೆ ಅಂಜಿ ಮನ್ನಿಸುತ್ತಿರುವಳೆಂದು ಉದೇಪುರದ ಬೇಗಮ್ಮಳು ಗರ್ವದಿಂದ—"ನೀವು ಮೊಗರ ಕೈಯಿಂದ ಸಾಯಬೇಕೆನ್ನುವಿರಾ ?" ಎಂದು ಕೇಳಿದಳು ಅದಕ್ಕೆ ಚಂಚಲಕುಮಾರಿಯು—"ತಾವು ಅವರಲ್ಲಿ ಮರಣವನ್ನು ಬೇಡುವದಿಲ್ಲ. ಈ ವಸ್ತುವಿನ ಸ್ವಾದವನ್ನು ರಜಪೂತರಿಗೆ ತೋರಿಸಬೇಕೆಂದು ಅವರ ಮನದನಲ್ಲಿರಬಹುದು. ಆದರ ರಜಪೂತರು ಮೊಗಲರ ದಾನವನ್ನು ಪರಿಗ್ರಹಿಸುವವರಲ್ಲವೆಂಬುದು ಪಾಪ ಅವರಿಗೇನು ಗೊತ್ತು ?"

"ಉದೇಪುರದ ಒಕ್ಕಲಿಗರು ಒಬ್ಬರ ಹಿಂದೊಬ್ಬರು ಮುಸಲ್ಮಾನರ ದಾನವನ್ನು ಸ್ವೀಕರಿಸಿರುವರು. ಸುಲ್ತಾನ ಅಲ್ಲಾಉದ್ದೀನನ ಮಾತು ಒತ್ತಟ್ಟಿಗಿರಲಿ. ಅಕಬರಬಾದಶಹನಿಂದ ಆತನ ವಂಶಜರಿಂದ ಇದೇ ರಾಜಸಿಂಹನ ಪೂರ್ವಜರು ಈ ಮೃತ್ಯುದಾನವನ್ನು ಸ್ವೀಕರಿಸಿದರು ಅದು ನಿಮ್ಮಗೆ ಮರೆಯುವದು ?"

ಚಂಚಲೆ—"ಬೇಗಮ್ಮ ಸಾಹೇಬರೆ, ತಾವು ತಪ್ಪಿದಿರಿ. ಅದನ್ನು ಅವರು ದಾನವೆಂದು ತಿಳಿದಿಲ್ಲ. ಸಾಲವೆಂದು ತಿಳಿದಿದ್ದಾರೆ ಪ್ರತಾಪಸಿಂಹನು ಅಕಬರಬಾದಶಹನ ಬಡ್ಡಿಯನ್ನು ತೀರಿಸಿರುತ್ತಾನೆ. ನಮ್ಮ ಮಾವಂದಿರ ಸಾಲವು ನಮ್ಮ ಕಡೆಗದೆ. ಅದನ್ನು ನಾವೀಗ ತೀರಿಸುತ್ತೇವೆ.

ಇದು ಅವರ ಮೊದಲನೆ ಹಪ್ತೆಯು, ಅದನ್ನು ತೀರಿಸಿ ಪಾವತಿ ತೆಗೆದು ಕೊಳ್ಳುವದಕ್ಕೆ ನಿಮ್ಮನ್ನು ಇಲ್ಲಿಗೆ ಕರೆಸಿರುವರು"

ಝೀಬ—"ಆದರೆ ಈವರೆಗೆ ನೀವು ಬಾದಶಹನ ಪರಾಕ್ರಮ ವನ್ನು ನೋಡಿರುವಿರೆಲ್ಲಿ? ಇನ್ನು ಯಾವದೂ ಇಲ್ಲದ, ಆಕಾಶಕ್ಕೆ ನಿಚ್ಚ ಣಿಕೆಯನ್ನು ಹಚ್ಚಲೆತ್ನಿಸಿರುವಿರಿ?"

ಚಂಚಲೆ—"ನಾವು ಆಕಾಶಕ್ಕೆ ನಿಚ್ಚಣಿಕೆಯನ್ನು ಹಚ್ಚುವದು ನಿಮ್ಮ ತಂದೆಗೆ ಗೊತ್ತಿದೆ ನೀವೂ ಬೇಗಮ್ಮ ಸಾಹೇಬರೂ ನನ್ನ ದಾಸಿ ಯರಾದದ್ದು ನಿಮ್ಮಲಕ್ಷದಲ್ಲಿ ಬರಲಿಕ್ಕಿಲ್ಲ?"

ಉದೇಪುರಿ—"ಆಲಮಗೀರ ಬಾದಿಶಹನ ಬೇಗಮ್ಮಳು ನಿನ್ನ ದಾಸಿಯು!"

ಚಂಚಲೆ—"ನಿಜ"

ಝೀಬ—"ಈ ಮಾತು ನಿನಗೆ ಪೂರಾಜ್ಞಾಪಕವಿರಲಿ; ಸ್ವಲ್ಪ ಹೊತ್ತಿನಲ್ಲಿ ಈ ನಿಮ್ಮ ಶಬ್ದವನ್ನು ನಾನೇ ಹೇಳುವೆನು"

ಚಂಚಲೆ—"ಅದೆಲ್ಲ ಸ್ವಪ್ನ ಸೃಷ್ಟಿಯಲ್ಲಿ"

ಉದೇಪುರಿ—"ಒಳ್ಳೇದು, ಆಗಲಿ, ನಿಮ್ಮ ಸೊಕ್ಕಾದರೂ ಎಷ್ಟ ದೆ ನೋಡುತ್ತೇನೆ"

ಚಂಚಲೆ—"ಮುಂದೆ ನೀವು ನೋಡುವದೇನು? ಈಗ ಸದ್ಯಕ್ಕೆ ಔರಂಗಜೇಬನು ಪಂಜರದಲ್ಲಿ ಸಿಕ್ಕಿರುತ್ತಾನೆ; ಅದನ್ನು ನೋಡಿರಿ, ನಾಳೆ ಬೆಳಿಗ್ಗೆ ತಹ ಮಾಡಿಕೊಳ್ಳದಿದ್ದರೆ ಆತನು ಅನ್ನ ನೀರಿಲ್ಲದೆ ಸಾಯುವನು"

ಇದನ್ನು ಕೇಳಿ ಇಬ್ಬರೂ ಸ್ತಬ್ಧರಾದರು. ಅವರ ಬಾಯಿಂದ ಶಬ್ದಗಳು ಹೊರಡಲೊಲ್ಲವು. ತಮ್ಮಸ್ಥಿತಿಯ ಸ್ವರೂಪವು ತಮಗೆ ತಿಳಿದು ಬಂತು. ಇಬ್ಬರ ಕಣ್ಣೊಳಗಿಂದ ಅಶ್ರುಸ್ರಾವವಾಗಹತ್ತಿತು. ನಾವು ಸಮ್ರಾಟನ ಬೇಗಮ್ಮ ಹಾಗು ಮಗಳಿದ್ದು ನಮ್ಮ ದೈವದಲ್ಲಿ ದಾಸ್ಯವೆ? ಇದು ಎಂಥ ಅಪಮಾನವು! ಬಾದಶಹನ ಐಶ್ವರ್ಯದಿಂದ ಇತರರನ್ನು ತುಚ್ಛವಾಗಿ ಎಣಿಸುವ ಆಸ್ತ್ರೀಯರಿಗೆ ಈ ದುಃಖವು ಅಸಹ್ಯವಾಯಿತು.

ಈಕಾಲಕ್ಕೆ ಉದೇಪುರದ ಬೇಗಮ್ಮಳಿಗೆ ತನ್ನ ಪೂರ್ವವೃತ್ತಿಯ ಸ್ಮರಣೆಯಾಯಿತು ತಾನು ಮೊದಲು ದಾಸಿಯಾಗಿ ಮಾರಿಕೊಂಡವಳು ಪರಮೇಶ್ವರನು ಆಸ್ಥಿತಿಯಿಂದ ಬಿಡಿಸಿ ಇಡೀಜಗತ್ತಿನ ಬಾದಶಹನಾದ ಅಲಂಗೀರನ ಪ್ರೀತಿಯ ಬೇಗಮ್ಮಳನ್ನಾಗಿ ಮಾಡಿದ್ದನು ಆದರೆ ಅದನ್ನು ಬದಲಿಸಿ ಪುನಃ ಮೊದಲಿನಸ್ಥಿತಿಗ ತಂದದ್ದರಿಂದ ಆಕೆಗೆ ವಿಶೇಷ ದುಃಖವೆನಿಸಿತು—“ ನೀವು ಎಷ್ಟು ಮೊಹರುಗಳನ್ನು ತಕ್ಕೊಂಡು ನಮ್ಮನ್ನು ಬಿಡುವಿರಿ? ” ಎಂದು ಚಂಚಲಕುಮಾರಿಯನ್ನು ಕೇಳಿದಳು

ಚಂಚಲೆ—“ ಬಾದಶಹನು ಯಾವತ್ತು ಹಿಂದುಸ್ತಾನದೊಳಗಿನ ಮಸೀದೆಗಳನ್ನು ಕೆಡವಿಸಿದರೆ, ತನ್ನ ಸಿಂಹಾಸನವನ್ನು ಇತ್ತ ಕಳುಹಿಸಿ ಕೊಟ್ಟರೆ, ಮತ್ತು ಪ್ರತಿವರ್ಷ ಕಪ್ಪ ಕೊಡುವದಾದರೆ ನಿಮ್ಮನ್ನು ಬಿಡುವೆನು ಇಲ್ಲದಿದ್ದರೆ ವ್ಯರ್ಥ ಆಶ ಮಾಡಬಾರದು

ಈಮಾತಿನಿಂದ ಉದೇಪುರದ ಬೇಗಮ್ಮಳಿಗೆ ಬಹಳ ಸಿಟ್ಟುಬಂತು ಅವಳು ಎದ್ದು ಹೋಗತೊಡಗಿದಳು ಆದರೆ ಚಂಚಲ ಕುಮಾರಿಯು ಅವಳನ್ನು ತಡೆದು ನಿಲ್ಲಿಸಿ—“ ಖಬರದಾರ, ನೀವು ನನ್ನ ಕೈದಿಗಳು, ನನ್ನ ಅಪ್ಪಣೆಯಹೊರ್ತು ಎಲ್ಲಿಯೂ ಹೋಗಕೂಡದು. ”

## ೨೯ನೆಯ ಪ್ರಕರಣ

### ಶತ್ರುಗಳಮೇಲೆ ತೋರಿಸಿದ ದಯ

ಮಹಾರಾಣಾ ರಾಜಸಿಂಹ ಹಾಗು ಜಯಸಿಂಹರು ಪರ್ವತದಮೇಲಿರುವ ತಮ್ಮ ಛಾವಣಿಯಲ್ಲಿ ಕುಳಿತು ಮೊಗಲರ ಸೇನೆಯು ಸಂಕಟದಿಂದ ಚಡಪಡಿಸುತ್ತಿರುವದನ್ನು ನೋಡುತ್ತಿದ್ದರು ಹಸಿವೆ ನೀರಡಿಕೆಯಿಂದ

ವ್ಯಾಕುಲವಾದ ಮೊಗಲಸೇನೆಯು ಪರ್ವತದ ಮೇಲೆ ಹತ್ತುವದಕ್ಕೆ ಯತ್ನಿಸುತ್ತಿತ್ತು. ಆದರೆ ಅದು ಅವರಿಗೆ ಅಸಂಭವವಾಗಿತ್ತು. ಸೇನೆಯೆಲ್ಲವೂ ತಳಮಳಗೊಳ್ಳುತ್ತಿತ್ತು. ಈ ಸ್ಥಿತಿಯನ್ನು ದಯಾರ್ದ್ರಹೃದಯನಾದ ರಾಣಾನು ಸುಮ್ಮನೆ ನೋಡದಾದನು. ಆತನು ಜಯಸಿಂಹನನ್ನು ಕರೆದು-"ಜಯಸಿಂಹ, ಹ್ಯಾಗಾದರೂ ಆತನು ಬಾದಶಹನು. ಈಹೊತ್ತು ಇಡೀಹಿಂದುಸ್ಥಾನದ ಮೇಲೆ ಆತನ ಸ್ವಾಮಿತ್ವವು. ಆತನ ಹಾಗು ಬೇಗಮ್ಮರ ಈಭಯಂಕರ ಸ್ಥಿತಿಯನ್ನು ಕಂಡು ನನಗೆ ಬಹಳ ಕೆಡಕೆನಿಸುತ್ತದೆ.

ಜಯ—"ಈ ಯಾವತ್ತು ಆನೆ ಕುದುರೆ, ಒಂಟೆ ಮನುಷ್ಯರು ಇಲ್ಲಿ ಅನ್ನ ನೀರಿಲ್ಲದೆ ಸತ್ತುಹೋದರೆ, ಆಶವಗಳ ಕೊಳೆತ ದುರ್ಗಂಧದಿಂದ ಉದೇಪುರಕ್ಕೆ ಹಾನಿತಟ್ಟಬಹುದು. ಆದ್ದರಿಂದ ಇವರನ್ನು ಇಲ್ಲಿಸಾಯಗೊಲ್ಲುವದು ಯೋಗ್ಯವಲ್ಲ.

ರಾಣಾ—"ಹೌದು, ನನಗಾದರೂ ಹಾಗೇ ತೋರುತ್ತದೆ. ಯುದ್ಧದಲ್ಲಿ ಸಾವಿರಾರು ಜನರನ್ನು ಕೊಲ್ಲುವದು ಸ್ವಲ್ಪವೂ ಮನಸಿಗೆ ಸಂಕೋಚವೆನಿಸುವದಿಲ್ಲ. ಆದರೆ ಅನ್ನವಿಲ್ಲದೆ ಸಾಯಗೊಲ್ಲುವದು ಅತ್ಯಂತನಿಂದ್ಯವಾದದ್ದು. ಮೊಗಲರ ಬಗ್ಗೆ ನನಗೆ ದಯಬರುತ್ತದೆ. ಆದ್ದರಿಂದ ಇದಕ್ಕೆ ನಾವು ಯಾವ ಉಪಾಯವನ್ನು ಮಾಡಬೇಕು?

ಜಯ—"ಮಹಾರಾಜ, ನಾನು ನಿಮಗೆ ಯಾವ ಒಪ್ಪಿಗೆಯನ್ನು ಹೇಳಲಿ? ಕ್ಷುದ್ರ ಮನುಷ್ಯನಾದ ನನಗೆ ಏನುತಿಳಿಯುತ್ತದೆ? ಆದರೆ ತಹ ಮಾಡಿಕೊಳ್ಳಲಿಕ್ಕೆ ಇದೇ ಯೋಗ್ಯಸಮಯವು. ಮೊಗಲರು ಹಸಿದ ಹೊತ್ತಿನಲ್ಲಿ ಬಲು ಮೆತ್ತಗಿರುವರು. ಈ ಹೊತ್ತಿನಲ್ಲಿ ಒಪ್ಪಂದಕ್ಕೆ ಒಪ್ಪಿದಷ್ಟು ಬೇರೆ ಯಾವಕಾಲದಲ್ಲಿಯೂ ಒಪ್ಪಲಾರರು. ತಾವು ಪ್ರಧಾನ ಸೇನಾಪತಿ ಮೊದಲಾದ ಅಧಿಕಾರಸ್ಥರನ್ನು ಕರೆಸಿಕೊಂಡು ಅವರ ಅನುಮತಿಯನ್ನು ಕೇಳಬೇಕೆಂದು ಬೇಡಿಕೊಳ್ಳುತ್ತೇನೆ. ನನ್ನ ಅಲ್ಪ ಮತಿಗೆ ಇಷ್ಟು ಮಾತ್ರತಿಳಿಯುತ್ತದೆ."

ರಾಜ—"ನನಗಾದರೂ ಅದೇಗುಣವೆಂದು ತೋರುತ್ತದೆ. ಇವರನ್ನು ಉಪವಾಸ ಕೊಲ್ಲುವದು ನನ್ನ ಮನಸ್ಸಿಲ್ಲ ಹಸಿವವರಿಗೆ ಅನ್ನ ಕೊಡುವದು ಆರ್ಯರ ಕರ್ತವ್ಯವು. ಆದ್ದರಿಂದ ಶತ್ರುಗಳನ್ನು ಅನ್ನ ಎಲ್ಲದೆ ಕೊಲ್ಲಕೂಡದು ಆದರೆ ಅವರ ಎದುರಿಗೆ ನಿಂತು ಅವರೊಡನೆ ಕಾದಿ ಕೊಲ್ಲುವದು ರಜಪೂತರ ಧರ್ಮವು."

ಸಾಯಂಕಾಲಕ್ಕೆ ಅದೇಸ್ಥಳದಲ್ಲಿ ಸಭಗೂಡಿಸಿದರು ಆಸಭೆಗೆ ಪ್ರಧಾನ, ಸೇನಾಪತಿ, ಮೊದಲಾದ ದೊಡ್ಡದೊಡ್ಡ ಅಧಿಕಾರಸ್ಥರು ಬಂದಿದ್ದರು ಮೊದಲು ರಾಜಸಿಂಹನು ತನ್ನ ವಿಚಾರವನ್ನು ತಿಳಿಸಿದನು. ಆಮೇಲೆ ಯಾರಾದರೂ ಮಾತಾಡುವವರು ಮಾತಾಡ ಬಹುದೆಂದು ಅಪ್ಪಣೆಯನ್ನು ಕೊಟ್ಟನು ಎಷ್ಟೋಜನರು "ಅಡ್ಡಿಯಿಲ್ಲ. ಮೊಗಲರನ್ನು ಈಗಿರುವಸ್ಥಳದಲ್ಲಿಯೆ ಸಾಯಗೊಲ್ಲುವದು ಯೋಗ್ಯವಾದದ್ದು ನಾವು ಔರಂಗಜೇಬನ ಹಿರೇಮಗನನ್ನು ಕರೆತಂದು ಇಲ್ಲಿ ಆತನ ಅಂತರ್ವಿಧಿಯನ್ನು ಮಾಡಿಸೋಣ, ಅಂದರೆ ಮೊಗಲರು ರಜಪೂತರ ಮೇಲೆ ಈವರೆಗೆಮಾಡಿದ ಅತ್ಯಾಚಾರದ ಪ್ರತೀಕಾರವಾದಂತಾಗುವದು" ಎಂದು ಹೇಳಿದರು.

ರಾಜ—"ಸೇಡು ತೀರಿಸಿಕೊಳ್ಳಬೇಕೆಂಬ ಬುದ್ಧಿ ಹುಟ್ಟುವದು ಸಹಜವಾದದ್ದು ಆದರೆ ಔರಂಗಜೇಬನೂ ಆತನ ಸೇನೆಯೂ ಸತ್ತುಹೋದರೆ ಹಿಂದುಸ್ತಾನದಲ್ಲಿ ಮೊಗಲರ ನಿಃಪಾತವಾದಂತಾಗಲಿಲ್ಲ ಆತನ ಮಗನಾದ ಶಹಾ ಅಲಮನು ಗಾದಿಯಮೇಲೆ ಕುಳಿತುಕೊಳ್ಳುವನು ಆತನಹತ್ತರ ಮಹಾರಾಷ್ಟ್ರದಿಂದ ಒಂದ ಸೇನೆಇರುವದು ಅದು ಪರ್ವತದ ಆಚೀಮಗ್ಗಲು ಸಿದ್ಧವಾಗಿರುತ್ತದೆ. ಅಲ್ಲದೆ ಮತ್ತೆ ಎರಡು ಮಗ್ಗಲಿಗೆ ಮುಸಲ್ಮಾನರ ಸೇನೆಯು ನಿಂತಿದುತ್ತದೆ ನಮ್ಮ ಸ್ವಲ್ಪ ಸೇನೆಯಿಂದ ಇಂಥ ದೊಡ್ಡಸೈನ್ಯವೆಲ್ಲ ನಾಶವಾದೀತೆಂದು ಹೇಳಲಿಕ್ಕಾಗುವದಿಲ್ಲ ನಾವು ಈಹೊತ್ತಲ್ಲ, ನಾಳೆಯಾದರೂ ತಹಮಾಡಿಕೊಳ್ಳತಕ್ಕವರೆ. ತಹಮಾಡಿಕೊಳ್ಳುವದಕ್ಕೆ ಈ ಹೊತ್ತಿನಂಥ ಸಮಯವು ನಾಳೆ ದೊರೆಯಲಾರದು. ಔರಂಗಜೇಬನ ಕಡೆಗೆ ನಮಗೆ ಬೇಕಾದ ಶರ್ತುಗಳನ್ನು ಕಳಿಸಿ ತಹ ಮಾಡಿಕೊಳ್ಳೋಣ ಈ ಸಮಯವನ್ನು ಕಳೆಯಕೂಡದು."

ದಯಾಳಶಹ—"ಇಂಥ ಸಮಯ ದೊರೆಯದಿದ್ದರೂ ಅಡ್ಡಿಯಿಲ್ಲ. ಆದರೆ ಯಾವತ್ತು ಹಿಂದೂಜನರಿಗೆ ಮುಳ್ಳಿನಂತೆ ನೋಯಿಸುವ ಈ ದುಷ್ಟ ಔರಂಗಜೇಬನ ನಾಶಮಾಡಿದರೆ ಪೃಥ್ವಿಯ ಪುನರುದ್ಧಾರ ಮಾಡಿದಂತಾಗುವದು ಇಷ್ಟು ಪುಣ್ಯವು ಬೇರೆಯಾವದರಿಂದಲೂ ದೊರೆಯಲಾರದು ಮಹಾರಾಜ, ನೀವು ನಮ್ಮ ವಿರುದ್ಧ ಹೋಗಬೇಡಿರಿ"

ರಾಣಾ—"ನೀವು ಹೇಳಿದಂತೆ ಆತನೊಬ್ಬನೇಕೆ? ಯಾವತ್ತು ಮೊಗಲರು ಕಂಟಕರೂಪರೆ, ಔರಂಗಜೇಬನಿಗಿಂತ ಹೆಚ್ಚಿನನರಾಧಮರಿಲ್ಲವೆ? ಖುಷುರುವಿನಿಂದ ನಮ್ಮ ಅಮಂಗಲವು ಎಷ್ಟಾಗಿಲ್ಲ? ಔರಂಗಜೇಬನ ಕೈಯಿಂದ ಹಾಗಿರುವದೇನು? ಶಹಾಆಲಮ್ಮನು ಔರಂಗಜೇಬನಿಗಿಂತ ಸಂಭಾವಿತನೆಂದು ಯಾರು ಹೇಳುತ್ತಾರೆ? ಅದರಬಗ್ಗೆ ನಿಮಗೆ ನಿಶ್ಚಯ ಉಂಟೆ? ನಮ್ಮ ನಾಲ್ಕು ಮಗ್ಗಲಿನ ಸೇನೆಯು ಗೆಲ್ಲುವದೆಂದು ಹ್ಯಾಗೆ ತಿಳಿದಿರುತ್ತೀವೊ ಅದರಂತೆಯೆ ಅವರೂ ತಿಳಿದಿದ್ದರೆ, ಈ ನಿಮ್ಮ ಆಶೆಯನ್ನು ಪೂರ್ಣಮಾಡಿಕೊಳ್ಳಲಿಕ್ಕೆ ಎಷ್ಟು ಜನ ರಜಪೂತರನ್ನು ಬಲಿಕೊಡಬೇಕಾಗುವದೆಂಬದನ್ನು ವಿಚಾರಿಸಿರುವಿರ ? ನಿಮ್ಮ ಸೇನೆಯು ಎಷ್ಟು? ಕಡಿಮೆಯಾಗಬಹುದು? ಹಿಂದಕ್ಕೆ ನಿಮ್ಮ ಸೇನೆಯು ಉಳಿದೀತೆಷ್ಟು? ಮೊದಲೆ ನಮ್ಮ ಸಂಖ್ಯೆ ಸಣ್ಣದು. ಮುಸಲ್ಮಾನರದು ಹೆಚ್ಚು, ನಮ್ಮ ಕಡಿಮೆಯಾದ ಸಂಖ್ಯೆಯಿಂದ ಹಳಹಳಿಯನ್ನು ಸ್ವೀಕರಿಸುವದಕ್ಕಿಂತ ತಹ ಮಾಡಿಕೊಳ್ಳುವದು ಉತ್ತಮವು"

ದಯಾ—"ಮಹಾರಾಜ, ಯಾವತ್ತು ರಜಪೂತರು ಒಟ್ಟಾದರೆ ಮೊಗಲರನ್ನು ಹದ್ದು ಪಾರಮಾಡುವುದಕ್ಕೆ ಎಷ್ಟು ಹೊತ್ತು ?"

ರಾಜ—"ಅದೆಲ್ಲ ಸರಿಯಾದದ್ದು. ಆದರೆ ಹಾಗೆ ಎಂದಾದರೂ ಆಗಬಹುದೆ! ಯಾವ ಆಧಾರದಿಂದ ಆ ಆಶೆಯನ್ನು ಹಿಡಿಯಬಹುದು.?"

ದಯಾ—"ಆದರೆ ತಹಮಾಡಿಕೊಂಡ ಮೇಲಾದರೂ ಔರಂಗಜೇಬನು ಆದರಂತೆ ನಡೆದಾನೆಂಬ ಭರವಸೆಯಿಲ್ಲ. ಆತನು ಹೇಳಿಕೇಳಿ

ಅಸತ್ಯವಾದಿ ಬಿಡುಗಡೆಯಾದೊಡನೆಯೆ ತಹನಾಮೆಯನ್ನು ತುಂಡು ತುಂಡಾಗಿ ಹರಿದುಹಾಕಿ, ತನ್ನ ಮೂಲಸ್ವಭಾವದಂತೆ ವರ್ತಿಸುವನು ''

ರಾಜ—'' ನೀವು ಹೀಗೆ ವಿಚಾರಿಸಿದರೆ ತಹಮಾಡುವಂತೆಯು ಇಲ್ಲ.''

ಆಮೇಲೆ ಬಹಳ ಹೊತ್ತಿನವರೆಗೆ ವಿಚಾರ ನಡೆದು ಕಡೆಗೆ ತಹ ಮಾಡುವದು ನಿಶ್ಚಯವಾಯಿತು ಆದರೆ ತಹಮಾಡಿಕೊಳ್ಳಲಿಕ್ಕೆ ಅವರ ಕಡೆಯಿಂದ ದೂತನು ಬರಬೇಕಾಗುವದು ಅವರು ಬಾರದೆ ನಾವಾಗಿ ತಹಮಾಡುವದಕ್ಕೆ ಕೇಳಿಕೊಳ್ಳುವದು ಕಡಿಮೆಯತನವು ಹಿಡಿದಿಟ್ಟ ಪಂಜರದೊಳಗಿಂದ ಒಂದು ಇರುವೆಯೂ ಹೊರಬೀಳುವಂತಿಲ್ಲ. ಅಂದ್ಮೇಲೆ ದೂತನೆಲ್ಲಿಂದ ಬರಬೇಕೆಂಬ ವಿಚಾರವು ಮತ್ತೆ ಉತ್ಪನ್ನವಾಯಿತು ಕಡೆಗೆ ಶರ್ತಿನ ಕರಾರ ನಾಮೆಯನ್ನು ತಯಾರಮಾಡಿ ಆಯಿತು ಅದರೊಳಗೆ—

"ಬಾದಶಹನು ತನ್ನ ಸೇನೆಯನ್ನು ತಕ್ಕೊಂಡು ಮೇವಾಡದ ಸೀಮೆಯನ್ನು ದಾಟಿ ಹೋಗತಕ್ಕದ್ದು. ಮೇವಾಡಪ್ರಾಂತದಲ್ಲಿ ಆಗುವ ಗೋಹತ್ಯವನ್ನೂ ದೇವಾಲಯಗಳ ನಾಶವನ್ನೂ ಬಂದುಮಾಡತಕ್ಕದ್ದು. ಜೆಝಿಯಾ ತೆರಿಗಯನ್ನು ತೆಗೆದುಕೊಳ್ಳಕೂಡದು ಈ ಶರ್ತಿನ ಕಲಮುಗಳಿಗೊಪ್ಪಿದಮೇಲೆ ರಾಜಸಿಂಹನು ಮೊಗಲರನ್ನು ಬಿಡಬೇಕು ಕರಾರ ನಾಮೆಗೆ ಸಹಿಯಾದಮೇಲೆ ಉದೇಪುರದ ಬೇಗಮ್ಮಳನ್ನೂ ಝೇಬಉನ್ನೀಸಳನ್ನೂ ಬಿಟ್ಟು ಕೊಡತಕ್ಕದ್ದು.'' ಈ ರೀತಿಯ ಕಲಮುಗಳಿದ್ದವು ಕರಾರನಾಮೆಯನ್ನು ಬರೆದು ಜಯಸಿಂಹನ ಸ್ವಾಧೀನಕ್ಕೆ ಕೊಟ್ಟರು. ಅವನು ಯಾವದಾದರೊಂದು ಯುಕ್ತಿಯಿಂದ ಅದಕ್ಕೆ ಸಹಿಮಾಡಿಸಿಕೊಂಡು ಬರಬೇಕೆಂದು ನಿಶ್ಚಯವಾಯಿತು. ಆಮೇಲೆ ಸಭೆಯ ವಿಸರ್ಜನೆಯಾಯಿತು.

## ೩೦ ನೆಯ ಪ್ರಕರಣ.

### ಪಂಜರದೊಳಗಿನ ಸಿಂಹದ ಬಿಡುಗಡೆ.

ಬಾದಶಹನು ತಹಮಾಡಿಕೊಳ್ಳುವದಕ್ಕೆ ಒಪ್ಪಿದನು. ತನ್ನ ಕಾರಕೂನನ ಕಡೆಯಿಂದ ಕರಾರ ನಾಮವನ್ನು ಬರಿಸಿ ಮೊಹರುಮಾಡಿದನು. ಅದರಕೆಳಗೆ 'ಮಂಜೂರ' ಎಂದು ತನ್ನ ಕೈಯಿಂದ ಬರೆದನು. ಜಯಸಿಂಹನು ಕರಾರ ನಾಮವನ್ನು ತಂದ ಕೂಡಲೆ ಬಾದಶಹನ ಬಿಡುಗಡೆ ಮಾಡುವದಕ್ಕೆ ರಾಣಾನು ಅಪ್ಪಣೆಯನ್ನಿತ್ತನು. ಆನೆಯ ಸಹಾಯದಿಂದ ಗಿಡಗಳನ್ನು ತೆಗಿಸಿ ಮೊಗಲರಿಗೆ ಮಾರ್ಗಮಾಡಿಕೊಟ್ಟನು. ಹೊರಬಿದ್ದ ಕೂಡಲೆ ಅವರಿಗೆ ಅನ್ನದ ಸಾಮಗ್ರಿಯು ಸಿದ್ಧವಾಗಿತ್ತು. ದೊಡ್ಡದೊಡ್ಡ ಆನೆಗಳ ಮೇಲಿಂದ ಅನ್ನನೀರುಗಳನ್ನು ಕಳಿಸಿಕೊಟ್ಟನು. ಉದೇಪುರದ ಬೇಗಮ್ಮಳನ್ನೂ, ಝೇಬ ಉನ್ನೀಸಳನ್ನೂ ಬಿಡುಗಡೆ ಮಾಡುವಂತೆ ಚಂಚಲಕುಮಾರಿಗೆ ಪತ್ರವನ್ನು ಕಳಿಸಿದನು. ಅವರನ್ನು ಬಿಟ್ಟುಬಿಡುವ ಕಾಲಕ್ಕೆ ಚಂಚಲಕುಮಾರಿಯು—“ಬೇಗಮ್ಮ ಸಾಹೇಬರೇ, ನಿಮ್ಮನ್ನು ಈ ಸಂಕಟದೊಳಗಿಂದ ಬಹಳ ಉದಾರ ಮನಸಿನಿಂದ ಮುಕ್ತಮಾಡಿದರು. ನಾನು ಯಾರೆಂಬದು ನಿಮಗೆ ಗೊತ್ತಿದೆಯೆ? ಬಾದಶಹನ ಪಟವನ್ನು ಕಾಲಿನಿಂದ ತುಳಿದು ಮುಖವನ್ನು ತುಂಡುತುಂಡಾಗಿ ಹರಿದುಹಾಕಿದ ಆ ಚಂಚಲಕುಮಾರಿಯೆ ನಾನು-ಮತ್ತು ನೀವು ಬಾದಶಹನಿಗೆ “ರಜಪೂತ ಬಾಲಿಕೆಯರನ್ನು ಅಪಮಾನಗೊಳಿಸುವ ಇಚ್ಛೆಯನ್ನು ಮಾಡಬೇಡ. ಇಲ್ಲದಿದ್ದರೆ ಅವರು ಬರೇಚಿತ್ರದ ಮೇಲಿಷ್ಟೇ ಒದ್ದು ಸುಮ್ಮನಿರುವವರಲ್ಲ, ಎಂದು ಹೇಳಿರಿ”

ಇದನ್ನು ಕೇಳಿದೊಡನೆಯೆ ಉದೇಪುರದ ಬೇಗಮ್ಮಳು ನಿಸ್ತಬ್ಧಳಾಗಿ ಮುಖವನ್ನು ತಗ್ಗಿಸಿಕೊಂಡು ಆನೆಯಮೇಲೆ ಕುಳಿತು ಹೊರಟುಹೋದಳು. ಬೇಗಮ್ಮಳೂ, ಝೇಬ ಉನ್ನಿಸಳೂ, ಅನ್ನದೊರದೊಡನೆ ಬಾದಶಹನೂ

ಆ ಖಿಂಡಿಯಿಂದ ಹಾಯ್ದು ಉದಯಸಾಗರದ ದಂಡೆಯಮೇಲೆ ಪುನಃ ಛಾವಣಿಯನ್ನು ಹಾಕಿದರು. ಇವರು ರಾತ್ರಿಯನ್ನು ಅಲ್ಲಿಯೆ ಕಳೆಯ ಬೇಕೆಂದು ವಿಚಾರವಾಯಿತು. ಶಿಪಾಯಿ ಮೊದಲಾದವರು ಅನ್ನಪಾನಗ ಳಲ್ಲಿ ಮಗ್ನರಾಗಿದ್ದರು. ಊಟ ತೀರಿದಮೇಲೆ ಹಾಡೋಣ, ಬಾರಿಸೋಣ ಕಥೆಗಳನ್ನು ಹೇಳಿಕೊಳ್ಳೋಣ, ಇವೆಲ್ಲ ಆರಂಭವಾದವು ಒಬ್ಬ ಮುಸ ಲ್ಮಾನನು—« ಭಾಯಿ, ಹಿಂದುರಾಜ್ಯದಲ್ಲಿ ಬಂದದ್ದರಿಂದ ನಮಗೆ ಏಕಾ ದಶಿಯ ಉಪವಾಸವುಂಟಾಯಿತು " ಎಂದನು ಅದನ್ನು ಕೇಳಿ ಒಬ್ಬ ಮೊಗಲಸ್ತ್ರೀಯು—« ಬದುಕಿದ್ದದರಿಂದ ನಿಮಗದು ದೊರೆಯಿತು. ಇಲ್ಲ ದಿದ್ದರೆ ನೀವು ಸತ್ತುಹೋಗಿದ್ದರೆ, ನಾವು ಉಪವಾಸ ಬೀಳಬೇಕಾಗು ತ್ತಿತ್ತು" ಎಂದು ಹೇಳಿದಳು. ಒಬ್ಬ ಗಾಯಕಿಯು ಎಷ್ಟೋ ರಸಿಕರನ್ನು ತನ್ನ ಗಾನದಿಂದ ಆನಂದ ಗೊಳಿಸುತ್ತಿದ್ದಳು ಹಾಡುತ್ತ ಹಾಡುತ್ತ ತಾಳ ತಪ್ಪಿದನ್ನು ಕಂಡು ಒಬ್ಬನು—« ಬೀಬಿ, ಲಕ್ಷ್ಯ ಹೀಗೇಕೆ ಆಯಿತು? ತಾಳವೇಕೆ ತಪ್ಪಿತು? " ಎಂದು ಕೇಳಿದನು ಅದಕ್ಕೆ ಅವಳು–« ನಿಮ್ಮ ಪ್ರತಾಪವನ್ನು ಕಂಡು," ಎಂದು ಉತ್ತರಕೊಟ್ಟಳು ಉದೇಪುರದ ಬೇಗ ಮ್ಮಳ ಹರಣ ಮಾಡಿದ್ದನ್ನು ಕೇಳಿ ಎಲ್ಲರೂ ಚಕಿತರಾದರು. ಶೇರಖಾನ ನೆಂಬೊಬ್ಬ ಶಿಪಾಯಿಯು ರಾಮಾಯಣದೊಳಗಿನ ಸೀತಾಪಹರಣಕ್ಕೂ ಬೇಗಮ್ಮಳ ಹರಣಕ್ಕೂ ಸರಿಹೋಲಿಸಿ ಸರಸಾಗಿ ಹೇಳುತ್ತಿದ್ದನು. ಅದ ರೊಳಗೆ ಕೆಲಕೆಲವರು ನಡುವೆ ಬಾಯಿಹಾಕಿ « ಎಲೆ, ಬಾದಶಹನೊಡನೆ ಇಷ್ಟು ಕಪಿಸೇನೆಯು ಬಂದಮೇಲೆ ಸೀತೆಯ ಬಿಡುಗಡೆಯಾಗುವುದಿಲ್ಲ ವೇ?"ಎಂದು ಹೇಳುತ್ತಿದ್ದನು. ಈಪ್ರಕಾರ ಅನೇಕತರದ ಮಾತು ಕಥೆಗಳು ನಡೆಯುತ್ತಿದ್ದವು. ಬಾದಶಹನು ಬೇಗಮ್ಮಳ ಡೇರೆಗೆ ಹೋದಕೂಡಲೆ ಅವಳು ಎಲ್ಲ ಸಂಗತಿಯನ್ನು ಉಪ್ಪುಕಾರ ಹೆಚ್ಚಿ ಹೇಳಿದಳು. ಚಂಚಲ ಕುಮಾರಿಯ ಕಡೆಯ ವಾಕ್ಯವನ್ನೂ ಅವನ ಕಿವಿಯಮೇಲೆ ಹಾಕಿದಳು. ಅದನ್ನು ಕೇಳಿ ಬಾದಶಹನು ತಪ್ತನಾದನು. ಅಕಬರ ಬಾದಶಹನ ಬಿಡುಗ ಡಗ ದಿಲೇರಖಾನನನ್ನು ಕಳಿಸಿಕೊಟ್ಟನು. ಮರುದಿವಸ ಸಭೆಗೂಡಿಸಿ ಅಲ್ಲಿ

ತಹದ ಕರಾರ ನಾಮೆಯನ್ನು ಹರಿದುಹಾಕಿದನು. ಪ್ರಾಣವಿರುವವರೆಗೂ ಚಂಚಲಕುಮಾರಿಯನ್ನು ಅಪಹರಿಸಬೇಕೆಂಬ ನಿಶ್ಚಯವನ್ನು ಪ್ರಕಟಮಾಡಿದನು. ತಹನಾಮೆಯಲ್ಲಿ ಬರೆದ ಕರಾರುಗಳಿಗೆ ಸ್ವಲ್ಪವೂ ಒಪ್ಪಕೊಡದೆಂದು ಹೇಳಿ ಯುದ್ಧದ ಸಿದ್ಧತೆಯನ್ನು ಮಾಡಹತ್ತಿದನು

ಇತ್ತ ದಾಯುಸೂರಿನ ಮಾರ್ಗದಿಂದ ಮೇವಾಡದೊಳಗಿಂದ ಉದೇಪುರಕ್ಕೆ ದಿಲೇರಖಾನನ ಸೇನೆಯು ಒರುತ್ತಿರುವುದೆಂದು ಚಾರರು ರಾಜಸಿಂಹನಿಗೆ ಹೇಳಿದರು ಇದನ್ನು ಕೇಳಿ ರಾಜಸಿಂಹನು ಬಾದಶಹನ ಕಡೆಗೆ ದೂತನನ್ನು ಕಳಿಸಿದನು ಅದಕ್ಕೆ ಔರಂಗಜೇಬನು—“ ನಿಮ್ಮಂಥ ಯಃಕಶ್ಚಿತ ರಾಜನೊಡನೆ ಬಾದಶಹನು ತಹಮಾಡಿಕೊಳ್ಳುವದು ಯೋಗ್ಯವೆ? ಚಂಚಲ ಕುಮಾರಿಯನ್ನು ಸ್ವಾಧೀನ ಮಾಡಿದ ಹೊರ್ತು ನಿಮ್ಮನ್ನು ಕ್ಷಮೆ ಮಾಡಲಿಕ್ಕಿಲ್ಲ. ” ಎಂದು ನಿರೋಪ ಕಳಿಸಿದನು ಇದನ್ನು ಕೇಳಿ ರಾಣಾನು ‘ ಖದ ಖದಾ ’ ನಕ್ಕು—“ ಇನ್ನೂ ನಾನು ಬದುಕಿರುವೆನು. ಏನೂ ಕಾಳಜಿ ಮಾಡಬೇಡ ” ಎಂದು ತನ್ನಷ್ಟಕ್ಕೆ ನುಡಿದನು

ರೂಪನಗರದ ರಾಜಕನ್ನೆಯ ಹರಣವು ಬಾದಶಹನಿಗೆ ಶಲ್ಯದಂತೆ ಚುಚ್ಚುತ್ತಿತ್ತು ರಾಜಸಿಂಹನೊಡನೆ ಮಾಡಿಕೊಂಡ ಒಪ್ಪಂದವನ್ನು ಲಕ್ಷಿಸುವದಿಲ್ಲೆಂದು ಆತನಿಗೆ ತಿಳಿಸಿದಮೇಲೆ ರೂಪನಗರದ ವಿಕ್ರಮಸಿಂಹನಿಗೆ ಒಂದು ಹುಕುಮು ಕಳಿಸಿದನು. ಅದರೊಳಗೆ—“ ನಿಮ್ಮ ಕನ್ನೆಯು ಈ ವರೆಗೂ ಇತ್ತಕಡೆಗೆ ಬಂದಿಲ್ಲ. ಆದ್ದರಿಂದ ಆಕೆಯನ್ನು ಬೇಗನೆ ಇತ್ತ ಕಡೆಗೆ ಕಳಿಸತಕ್ಕದು. ಇಲ್ಲದಿದ್ದರೆ ರೂಪನಗರವು ಉಳಿಯಲಿಕ್ಕಿಲ್ಲ ” ಹೀಗೆ ಬರೆದಿತ್ತು. ತಂದೆಯು ಹಟಹಿಡಿದರೆ ಮಗಳು ತನ್ನಿಂದ ತಾನೇ ದಾರಿಗೆ ಬರುವಳೆಂದು ಬಾದಶಹನು ತಿಳಿದಿದ್ದನು . ಬಾದಶಹನ ಹುಕುಮು ಮುಟ್ಟಿದ ಕೂಡಲೆ ವಿಕ್ರಮ ಸಿಂಹನು ‘ ಎರಡುಸಾವಿರ ಸೇನಾ ಜನರನ್ನು ಕರಕೊಂಡು ತಮ್ಮ ಸೇವೆಗೆ ಹಾಜರಾಗುತ್ತೇನೆಂದು ’ ನಿರೋಪ ಕಳಿಸಿದನು

ಅದನ್ನು ನೋಡಿ ಔರಂಗಜೇಬನು “ ಆತನು ಸಸೈನ್ಯನಾಗಿ ಯಾಕೆ ಬರುತ್ತಿರಬಹುದು ? ಬಹಳಮಾಡಿ ನನ್ನ ಸಹಾಯಕ್ಕೆ ಬರುತ್ತಿರುವಂತೆ ಕಂಡುಬರುತ್ತದೆ !” ಎಂದು ತಿಳಿಸಿದನು

## ೨೧ ನೆಯ ಪ್ರಕರಣ.

### ಮಧ್ಯದಲ್ಲಿ ಬಂದ ವಿಘ್ನ.

ಮಹಾರಾಣಿಯು ತನ್ನ ಇಪ್ಪತ್ತೈದುಸಾವಿರ ಸೇನೆಯೊಡನೆ ಅರಣ್ಯದಲ್ಲಿ ವಿಶ್ರಾಂತಿಗೆ ನಿಂತುಕೊಂಡಿರುವ ಸ್ಥಳಕೆ ನಾಲ್ಕುಜನ ಸವಾರರು ಬಂದಿರುವದನ್ನು ತಿಳಿಸಿದರು. ರಾಣಿಯು ಬಹಳ ಬೇಸತ್ತಿದ್ದರೂ ಅವರ ಸಮಾಚಾರವನ್ನು ಕೇಳಿಕೊಳ್ಳಲೇ ಬೇಕಾಗಿತ್ತು. ಅದಕ್ಕಾಗಿ ಅವಳು ಹೊರಗೆಬಂದಳು. ತಾನು ಬರುವದಕ್ಕೆ ಪೂರ್ವದಲ್ಲಿ ಪ್ರತಾಪನನ್ನು ಕರೆಕಳಿಸಿದ್ದಳು. ಸವಾರರು ನಮಸ್ಕರಿಸಿದರು. ಅವರೊಳಗಿನವನೊಬ್ಬನು ಒಂದು ಪತ್ರವನ್ನು ತೆಗೆದು ರಾಣಿಯ ಕೈಯಲ್ಲಿ ಕೊಟ್ಟನು ಪತ್ರವನ್ನು ಓದಿ ಅವಳ ಮುಖದಮೇಲೆ ಬೇರೆ ಬೇರೆ ಚಿನ್ಹಗಳ ತೆರೆಗಳು ಉದ್ಭವಿಸಹತ್ತಿದವು. ಕ್ಷಣದಲ್ಲಿ ಆಶ್ಚರ್ಯ, ಕ್ಷಣದಲ್ಲಿ ಖೇದ, ಕ್ಷಣದಲ್ಲಿ ಭಯ, ಈ ರೀತಿಯಾಗಿ ಅವಳ ಮುಖಲಕ್ಷಣವು ಬದಲಾಗ ಹತ್ತಿತು. ಪತ್ರವನ್ನು ಓದಿ ತೀರಿಸಿದಮೇಲೆ ಒಂದು ದೀರ್ಘವಾದ ನಿಶ್ವಾಸವನ್ನು ಬಿಟ್ಟು, ಮುಖ ತಗ್ಗಿಸಿಕೊಂಡು ಸ್ತಬ್ಧಳಾಗಿ ಕುಳಿತುಬಿಟ್ಟಳು ಅವಳ ಮುಖದಿಂದ ಒಂದು ಅಕ್ಷರವೂ ಹೊರಡಲೊಲ್ಲದು. ಅವಳ ಈ ಪ್ರಕಾರದ ಸ್ಥಿತಿಯನ್ನು ಕಂಡು ಒಬ್ಬ ಸವಾರನು ಧೈರ್ಯದಿಂದ ಮುಂದಕ್ಕೆ ಬಂದು—“ ಸರಕಾರ, ಬೇಗನೆ ಇದರ ಬಂದೋಬಸ್ತು ಮಾಡತಕ್ಕದ್ದು. ನಮ್ಮ ವೀರರು ಅವರೊಡನೆ ಕಾದುವದಕ್ಕೆ ಯತ್ನಿಸಿದರು. ಆದರೆ “ ಜೋಲಿಯು ಹೊಲ ಮೇಯಲಿಕ್ಕೆ ಹತ್ತಿದಮೇಲೆ ಉಪಾಯವಿಲ್ಲ.” ಪರಮಹಂಸ

ಹಾಗು ತಪಸ್ವಿನಿಯರನ್ನು ಒಂದುವೇಳೆ ಕೈದು ಮಾಡಿದಾಗ್ಯೂ ಆತನಿಂದ ಅವರಿಗೆ ಕೆಡಕಾಗುವಂತಿಲ್ಲ. ಯಾಕಂದರ ಬೇಗನೆ ಅವರನ್ನು ಬಿಟ್ಟು ಬಿಡುವ ಸಂಭವವದೆ. ''

ಮಹಾರಾಣಿ—'' ನಿನಗೆ ಹುಚ್ಚು ಹಿಡಿದದೆ. ಆತನು ಅವರನ್ನು ಬಿಡುವದಿಲ್ಲವಷ್ಟೇ ಅಲ್ಲ, ಅವರನ್ನು ಕೊಲ್ಲಬಹುದು. ನಮ್ಮ ಯಾವತ್ತು ಆಶೆ, ಉತ್ಸಾಹ, ಹಾಗು ವೀರಶ್ರೀಗಳು ಅವರನ್ನೇ ಅವಲಂಬಿಸಿದ್ದವು. ಗುರುವರ್ಯಪರಮಹಂಸ, ಹಾಗು, ತಪಸ್ವಿನೀಮಾತೆಯ ಉತ್ಕಟವಾದ ಧರ್ಮಾಭಿಮಾನದಿಂದಲೆ ಈ ವೀರಸಂಘವು ಒಟ್ಟುಗೂಡಿತ್ತು. ಸುಮ್ಮನೆ ಆಶೆ ಮಾಡುವದು ವ್ಯರ್ಥವಾದದ್ದು. ಸುಜನಸಿಂಗ, ನೀವು ಐನೂರು ಜನರಿದ್ದು ಇಷ್ಟು ಹತಾಶರು ಹ್ಯಾಗಾದಿರಿ? ನಿಮ್ಮಿಂದ ಅವರ ಸಂರಕ್ಷಣೆ ಮಾಡುವದು ಆಗಲಿಲ್ಲವೆ? ''

ಸುಜನಸಿಂಗ—' ಮಹಾರಾಣಿಯವರೇ, ನಾವೆಲ್ಲರು ಕುರಿಗಳ ಮೇಲೆ ತೋಳದಂತೆ ಹರಿದುಹೋದೆವು. ಆದರೆ ವೀರಸೇನನು ಅವರಿಗೆ ಸಾಮೀಲನಾಗಿ ಗವಿಯ ಗುಪ್ತದ್ವಾರಗಳನ್ನೆಲ್ಲ ತೋರಿಸಿದನು. ಆದ್ದರಿಂದ ಉಪಾಯವಿಲ್ಲದವರಾಗಿರುತ್ತೇವೆ. ಮೊದಲು ಅವರು ಆಯುಧಶಾಲೆಯ ಮೇಲೆ ಹಲ್ಲಾಮಾಡಿ ಅದನ್ನು ಸ್ವಾಧೀನಮಾಡಿಕೊಂಡರು ಆಮೇಲೆ ಮದ್ದಿನ ಮನೆಯನ್ನು ವಶಪಡಿಸಿಕೊಂಡರು. ಆಮೇಲೆ ನಾವು ನಿರುಪಾಯರಾದೆವು. ಇಲ್ಲದಿದ್ದರೆ ಇಂಥ ಪ್ರಸಂಗವೆಂದೂ ಬರುತ್ತಿದ್ದಿಲ್ಲ ''

ಇದನ್ನು ಕೇಳಿ ರಾಣಿಯ ಮುಖಚರ್ಯೆಯು ಖದಿರಾಂಗಾರದಂತೆ ತಪ್ತವಾಯಿತು. ಆಕೆಯ ನೇತ್ರಗಳಿಂದ ಪ್ರಖರಾಗ್ನಿಯು ಹೊರಡುವಂತೆ ಕಂಡುಬಂತು. ಆ ವಿಕ್ರಾಳಸ್ವರೂಪವನ್ನು ಕಂಡು ಸವಾರರು ಭಯಭೀತರಾದರು ಅವರ ಶರೀರವು ಕಂಪಿಸ ತೊಡಗಿತು. ಸ್ವಲ್ಪಹೊತ್ತಿನ ಮೇಲೆ ರಾಣಿಯು ಆವೇಶದಿಂದ—'' ನಮ್ಮ ಸಂಘದಲ್ಲಿ ಫಿತೂರಿಯೆ! ಮತ್ತು ಅದಕ್ಕೆ ವೀರಸೇನನೆ! ಕುಲ ಕಲಂಕಾ! ಯಾಕೆ ರಾಜಪೂತರಹೆಸರು

ಹೇಳುವೆ? ವಿಶ್ವಾಸಘಾತಕಿಯಾದ ಚಂಡಾಲನಿಗೆ ಶಿಕ್ಷೆಯೂ, ಭಯಂಕರವಾಗಿಯೆ ಆಗಬೇಕು, ನೀಚ, ಕಪಟಿ, ಮತ್ತು ಸ್ವಾರ್ಥಿಗಳಾದ ನರಾಧಮರ ಉತ್ಪತ್ತಿಯು ನಮ್ಮ ರಾಜಸ್ಥಾನದಲ್ಲಿಯೆ! ಇದನ್ನು ಕೇಳಿ ನನ್ನ ಹೃದಯವು ತಪ್ತವಾಗಿ ಹೋಗಿದೆ. ಎಲೊ, ನರಾಧಮ, ನೀನು ನನ್ನ ಕೈಯ್ಯಲ್ಲಿ ಒಂದುವೇಳೆ ಸಿಕ್ಕಿದ್ದರೆ ತುಂಡುತುಂಡಾಗಿ ಕತ್ತರಿಸಿ ಹಾಕಿ ಕ್ರೂರ ಪಶುಗಳಿಂದ ತಿನ್ನಿಸುತ್ತಿದ್ದೆನು. ರಾಜಸ್ಥಾನವೇ, ನಿನ್ನುದರದಲ್ಲಿ ಎಂಥೆಥ ರತ್ನಗಳು ಉತ್ಪತ್ತಿಯಾದವು! ರಾಣಾಸಂಗ, ಹಮ್ಮೀರ, ಪ್ರತಾಪಸಿಂಹ ಮೊದಲಾದವರೂ ನಿನ್ನ ಮಕ್ಕಳೇ ಅಲ್ಲವೆ? ಅಂಥ ನಿನ್ನ ಹೊಟ್ಟೆಯಲ್ಲಿ ವೀರಸೇನನಂಥ ಗಾರುಗಲ್ಲುಗಳೂ, ಹುಟ್ಟಬಹುದೆ? ಇದೆಲ್ಲವೂ ಕಾಲದ ಮಹಿಮೆಯೆ? ರಜಪೂತರ ಭಾಗ್ಯ ಸೂರ್ಯನು ರಾಹುವಿನಿಂದ ಹಿಡಿಯಲ್ಪಟ್ಟಿರುವನು. ಅಂಥವರಲ್ಲ ಇಂಥ ಕೀಳರ ಉತ್ಪತ್ತಿಯ? ಇಷ್ಟು ಮಾತಾಡುವದರಲ್ಲಿ ರಾಣಿಯು ತೀರ, ಗಲಿತಳಾಗಿ ಹೋದಳು ಆಕೆಯ ಬುದ್ಧಿಯು ಇಲ್ಲದಂತಾಗುತ್ತ ಬಂತು. ಕೂತಸ್ಥಳದಲ್ಲಿಯೆ ಮೂರ್ಛೆಹೊಂದಿದಳು ಈಗ ಏನುಮಾಡಬೇಕೆಂಬ ವಿಚಾರವು, ಸವಾರರಿಗೆ ತೋರದಂತಾಯಿತು ಕೂಡಲೆ ಪ್ರತಾಪಸಿಂಹನು ಅಲ್ಲಿಗೆ ಬಂದನು ಪ್ರತಾಪನು ಅವಳ ಕಣ್ಣುಗಳಿಗೆ ನೀರುತೊಡೆದು, ಸಮಾಧಾನಗೊಳಿಸ ಎತ್ನಿಸಿದನು. ದಾಸಿಯರು ಗಾಳಿಹಾಕತೊಡಗಿದರು ಕೆಲವರು ವೈದ್ಯನನ್ನು ಕರೆಯಲಿಕ್ಕೆ ಹೋದರು. ವೈದ್ಯನು ಬಂದಾಯಿತು, ಆತನು ಯಾವದೋ ಒಂದು ಪದಾರ್ಥವನ್ನು ಮೂಸಿ ನೋಡುವದಕ್ಕೆ ಕೊಟ್ಟನು, ಆಮೇಲೆ ರಾಣಿಯು ಕಣ್ಣುತೆರೆದಳು. ಕಣ್ಣು ತೆರೆದಮೇಲೆ ಸ್ವಲ್ಪಹೊತ್ತಿನವರೆಗೆ ಸ್ವಸ್ಥಮಲಗಿಕೊಂಡಿರುವಂತೆ ಕೈಸಂಜ್ಞೆಯನ್ನು ಮಾಡಿ ವೈದ್ಯನು ಹೊರಟುಹೋದನು ಪ್ರತಾಪನು ದಾಸಿಯ ಕೈಯ್ಯೊಳಗಿನ ಬೀಸಣಿಗೆಯನ್ನು ತಕ್ಕೊಂಡು ಆಕೆಗೆ ಒಳಗೆಹೊಗುವದಕ್ಕೆ ಹೇಳಿದನು ಈಗ ಅಲ್ಲಿ ರಾಣಿಹಾಗು ಪ್ರತಾಪ ಇವರಿಬ್ಬರೇ ಉಳಿದರು ಕೆಲಹೊತ್ತಿನಮೇಲೆ ಪ್ರತಾಪನು—"ಒಮ್ಮಿಂದೊಮ್ಮೆಲೆ ಪ್ರಕೃತಿಯು ಈರೀತಿ ಹೆಚ್ಚುಕಡಿಮೆಯಾಗಲಿಕ್ಕೆ ಕಾರಣವೇನು"?

ಎಂದು ಕೇಳಿದನು ರಾಣಿಯು ಸ್ವಲ್ಪವೂ ಮಾತಾಡಲಿಲ್ಲ ಪತ್ರದ ಕಡೆಗೆ ಬೆರಳು ತೋರಿಸಿದಳು. ಪ್ರತಾಪನು ಪತ್ರವನ್ನು ತಕ್ಕೊಂಡು ಓದಹತ್ತಿದನು ಪತ್ರವನ್ನು ಓದಿದೊಡನೆಯೆ ಆತನ ವೃತ್ತಿಯು ಚಮತ್ಕಾರವುಳ್ಳದ್ದಾಯಿತು, "ಅಡ್ಡಿಯಿಲ್ಲ ಇನ್ನೂ ನಾವು ಬದುಕಿರುತ್ತೇವೆ! ಆದ್ರೋಹಿಯ ಸಮಾಚಾರವನ್ನು ತೆಗೆದುಕೊಳ್ಳುವಷ್ಟು ಶಕ್ತಿಯನ್ನು ದೇವರು ನಮಗೆ ದಯಪಾಲಿಸಿರುತ್ತಾನೆ ನೀನು ಸ್ವಲ್ಪವೂ ಹೆದರಬೇಡ, ನಾನು ಸ್ವಲ್ಪ ಜನರೊಂದಿಗೆ ಹೋಗಿ ಆತನ ಪಾರುಪತ್ಯವನ್ನು ಮಾಡುತ್ತೇನೆ. ಪೂಜ್ಯರಾದ ಪರಮಹಂಸರನ್ನೂ ತಪಸ್ವಿನೀಮಾತೆಯನ್ನೂ ಬಿಡಿಸಿಕೊಂಡು ಬರುತ್ತೇನೆ ನೀನು ಸುಖವಾಗಿ ಇರು "

ರಾಣಿ—" ಆದರೆ ತಾವು ಯಾವಕಾರ್ಯಕ್ಕೆ ಹೊರಟಿರುತ್ತೀರೆಂಬ ಪರವೆಯು ತಮಗುಂಟೇನು? ನಾವು ಈಗಿರುವದು ಭಯಂಕರವಾದ ಅರಣ್ಯ. ಇಂಥ ಹೊತ್ತಿನಲ್ಲಿ ತಾವು ಹೋಗುವದೆಂದರೆ ಕಠಿಣವಾದದ್ದು

ಪ್ರತಾಪ—" ನಿನ್ನ ಸಂರಕ್ಷಣೆಯ ಬಗ್ಗೆ ಚನ್ನಾಗಿ ವ್ಯವಸ್ಥೆಮಾಡಿ ಹೋಗುವೆನು ಬೆಳಗಾಗುವದರೊಳಗೆ ನಾನು ಅವರ ಶಾಸನವನ್ನು ಮಾಡಿ ಪುನಃ ಇಲ್ಲಿಗೆ ಬರುತ್ತೇನೆ ಈಗ ವಿಲಂಬ ಮಾಡುವದರಿಂದ ಪ್ರಯೋಜನವಿಲ್ಲ. ಆಗಲಿ, ನಾನು ಹೋಗಿಬರುತ್ತೇನೆ "

ರಾಣಿ—" ಪ್ರತಾಪರಾಯರೇ, ನೋಡಿರಿ, ನೀವು ಹೋಗುವದನ್ನು ನಾನು ತಡೆಯುವದಿಲ್ಲ ಯಾಕಂದರೆ ತಮಗೆ ಗೊತ್ತಿರಬಹುದು ನಮ್ಮಿಬ್ಬರ ಲಗ್ನವಾಗುವದಕ್ಕೆ ನಾನು ಯಾವ ಕುಲೋತ್ಪನ್ನಳೆಂಬದು ಅವರಿಂದ ಸುಲಭವಾಗಿ ತಿಳಿಯುವದು ಅದು ಅವರಿಗೆ ಚನ್ನಾಗಿ ಗೊತ್ತಿರುತ್ತದೆ. ನನ್ನನ್ನು ರಾಜ್ಞೀಪದಕ್ಕೆ ನೇಮಿಸುವ ಕಾಲಕ್ಕೆ, ಇಚ್ಛಿತ ಕಾರ್ಯಸಫಲವಾದರೆ ನಿನ್ನ ತಂದತಾಯಿಗಳನ್ನು ತೋರಿಸುತ್ತೇನೆಂದು ಅವರು ಹೇಳಿರುತ್ತಾರೆ ಅದು ಪೂಜ್ಯ ಪರಮಹಂಸ. ಹಾಗು ತಪಸ್ವಿನಿಯರ ಹೊರ್ತು ಅನ್ಯರಿಗೆ ಗೊತ್ತಿಲ್ಲ ಸಾರ್ಥಕವಾಗದು ಆದ್ದರಿಂದ ಪ್ರತಾಪರಾಯರೇ ಹ್ಯಾಗಾದರೂ ಮಾಡಿರಿ ಅವರನ್ನು ಸುರಕ್ಷಿತವಾಗಿ ಬಿಡಿಸಿರಿ.

ಪ್ರತಾಪ—“ ನಿನ್ನ ಬಯಕೆಯೆ ನನ್ನ ಸರ್ವಸ್ವವು ನೀನು ಸುಖವಾಗಿರು ಬರುತ್ತೇನೆ ” ಎಂದು ಹತ್ತುಸಾವಿರ ಸೇನೆಯನ್ನು ತಕ್ಕೊಂಡು ಹೊರಟುಹೋದನು

## ೩೨ ನೆಯ ಪ್ರಕರಣ.

### ರಾಜಸಿಂಹನ ಸಹಾಯ

ಯುದ್ಧನೀತಿ, ರಾಜನೀತಿಗಳಲ್ಲಿ ವಿಶಾರದರು, ರಾಣಾರಾಜಸಿಂಹನಂಥವರು, ಆ ಕಾಲಕ್ಕೆ ಯಾರೂ ಇದ್ದಿಲ್ಲ. ಮೊಗಲರು ತಮ್ಮ ಛಾವಣಿಯನ್ನು ಕೀಳುವವರೆಗೆ ಆತನು ತನ್ನ ಛಾವಣಿಯನ್ನು ಕೀಳುವಷ್ಟು ಮೂರ್ಖನಿರಲಿಲ್ಲ, ತನ್ನ ಯಾವತ್ತು ಸೇನೆಯನ್ನು ಮೊದಲಿನ ಸ್ಥಳದಲ್ಲಿಯೆ ಸ್ಥಿರವಾಗಿರಿಸಿದ್ದನು ಇಷ್ಟರಲ್ಲಿ ವಿಕ್ರಮಸಿಂಹನು ಎರಡುಸಾವಿರ ಸವಾರರನ್ನು ತಕ್ಕೊಂಡು ಇತ್ತಕಡೆಗೆ ಬರುತ್ತಾನೆಂದು, ಕೇಳಿ ತಾನೂ ಯುದ್ಧದ ಸಿದ್ಧತೆಯನ್ನು ಮಾಡಿದನು.

ಮೊದಲು ಒಬ್ಬ ಸವಾರನು ವಿಕ್ರಮಸಿಂಹನ ದೂತನೆಂದು ಹೇಳಿ ರಾಜಸಿಂಹನ ಕಡೆಗೆ ಬಂದನು. ಅವನು ವಿಕ್ರಮಸಿಂಹನು ನಿಮಗೆ ಭೆಟ್ಟಿಯಾಗಬೇಕೆಂದಿರುವನೆಂದು ಹೇಳಿದನು. ಅದಕ್ಕೆ ರಾಜಸಿಂಹನು—“ ಛಾವಣಿಯಲ್ಲಿ ಭೆಟ್ಟಿಯಾಗಬೇಕಾಗಿದ್ದರೆ ತಾವೊಬ್ಬರೇ ಬಂದು ಭೆಟ್ಟಿಯಾಗಿರಿ ಸೇನೆಯೊಂದಿಗೆ ಭೆಟ್ಟಿಯಾಗಬೇಕಾದರೆ ಛಾವಣಿಯ ಹೊರಗೆ ನಿಲ್ಲಿರಿ ನಾನೂ ಅಲ್ಲಿಗೆ ಸೇನೆಯನ್ನು ತೆಗೆದುಕೊಂಡು ಬಂದು ಭೆಟ್ಟಿಯಾಗುವೆನು ” ಎಂದು ಹೇಳಿ ಕಳಿಸಿದನು

ವಿಕ್ರಮಸಿಂಹನು ಛಾವಣಿಯೊಳಗೆ ಬಂದು ಭೆಟ್ಟಿಯಾಗುವೆನೆಂಬ ಇಚ್ಛೆಯನ್ನು ತೋರಿಸಿದನು ರಾಣಾನು ಒಡಂಬಟ್ಟನು ವಿಕ್ರಮಸಿಂಹನು ಬಂದೊಡನೆಯೆ ರಾಣಾನು ಸನ್ಮಾನಪೂರ್ವಕ ಆಸನದಮೇಲೆ ಕುಳ್ಳಿರಿಸಿದನು ವಿಕ್ರಮಸಿಂಹನು ರಾಣಾನಿಗೆ ಕಾಣಿಕೆಯನ್ನು ಕೊಟ್ಟನು

ಯಾಕಂದರೆ ಉದೇಪುರದ ರಾಣಾನು ರಜಪೂತ ಕುಲದಲ್ಲಿ ಮುಖ್ಯನೆಂದು ಎಣಿಸುತ್ತಿದ್ದರು ಆದರೆ ಆತನು ಕಾಣಿಕೆಯನ್ನು ತಕೊಳ್ಳದೆ-" ಈ ನಿಮ್ಮ ಕಾಣಿಕೆಯನ್ನು ತಕೊಳ್ಳಲಿಕ್ಕೆ ಬಾದಶಹನೆ ಯೋಗ್ಯನು'' ಎಂದು ಹೇಳಿದನು

ವಿಕ್ರಮಸಿಂಹ—" ಈವರೆಗೆ ಆ ಮಾತು ಆಯಿತು ಅಕಾಲವು ಹೋಯಿತು ಇನ್ನುಮೇಲೆ ರಾಣಾರಾಜಸಿಂಹನ ಶರೀರದಲ್ಲಿ ಜೀವವಿರುವವರೆಗೆ ಯಾವ ರಜಪೂತನೂ ಬಾದಶಹನಿಗೆ ಕಾಣಿಕೆಯನ್ನು ಕೊಡಲಿಕ್ಕಿಲ್ಲ ಮಹಾರಾಜರೇ ನನ್ನನ್ನು ಕ್ಷಮಿಸಿರಿ ನಾನು ಪತ್ರ ಬರದು ತಪ್ಪು ಮಾಡಿದೆನು ತಾವು ಒಬ್ಬರೇ ಮೊಗಲರನ್ನು ಶಾಸನ ಮಾಡಿದ್ದನ್ನು ಕಂಡು ನನಗ ನಾಚಿಕೆಯನಿಸುತ್ತದೆ ಯಾವತ್ತು ರಜಪೂತರು ನಿಮ್ಮ ಧ್ವಜದ ನೆರಳಿನಲ್ಲ ನಿಂತು ಕಾದುವದಕ್ಕೆ ಸಿದ್ಧರಾದರೆ ಮೊಗಲಬಾದಶಹನು ಹೇಳಹೆಸರಿಲ್ಲದಂತಾಗುವನು ಮತ್ತು ನಮ್ಮ ಬಿಳಕೂದಲುಗಳಿಗ ಕಲಂಕ ಬರುವ ಪ್ರಸಂಗವೂ ನಮ್ಮ ಮೇಲ ಬರುವದಿಲ್ಲ. ನಾನು ನಿಮಗೆ ಬರೇ ಕಾಣಿಕೆಯನ್ನಷ್ಟೆ ಕೊಡಬೇಕೆಂದು ಬಂದವನಲ್ಲ, ನನ್ನ ಪತ್ರದ ಕಡೆಯ ವಾಕ್ಯವು ತಮ್ಮ ಸ್ಮರಣೆಯಲ್ಲಿರಬಹುದು. ಅದನ್ನು ನಿಶ್ಚಯಗೊಳಿಸುವದಕ್ಕಾಗಿಯು ಈ ನನ್ನ ಎರಡು ಸಾವಿರ ಸವಾರರನ್ನೂ ಈ ನನ್ನ ಕತ್ತಿಯನ್ನೂ ತಮಗೆ ಅರ್ಪಿಸುವದಕ್ಕೆ ಬಂದಿದ್ದೇನೆ. ಈ ಮುಪ್ಪಿನ ಹಸ್ತದಲ್ಲಿ ಉಳಿದಿರುವ ಸ್ವಲ್ಪ ಶಕ್ತಿಯನ್ನು ತಮ್ಮ ಬೇಕಾದ ಕಾರ್ಯಕ್ಕೆ ಉಪಯೋಗಿಸಿಕೊಳ್ಳಬೇಕೆಂಬದೇ ನನ್ನ ಬಯಕೆಯು ''

ವಿಕ್ರಮಸಿಂಹನ ಈ ಮಾತುಗಳನ್ನು ಕೇಳಿ ರಾಜಸಿಂಹನಿಗ ಅತ್ಯಂತ ಆನಂದವಾಯಿತು ಅದಕ್ಕೆ ರಾಜಸಿಂಹನು—" ನೀವು ಈ ವರೆಗೆ ಮಾತಾಡಿದ್ದು, ಸೋಳಂಕಿವಂಶಕ್ಕೆ ಭೂಷಣವಾದದ್ದು ಮೊಗಲರು ತಮವನ್ನು ಮುರಿದಿರುತ್ತಾರೆ. ಶಹಾಬಾದಾ ಅಕಬರಶಹನನ್ನು ಬಿಡುಗಡ ಮಾಡಿಕೊಳ್ಳುವದಕ್ಕ ಬರುತ್ತಿರುವರು. ಅವರು ಇಲ್ಲಿಗೆ ಒಂದು ವೇಳೆ ಮುಟ್ಟಿದರ, ಕುವಾರಜಯಸಿಂಹನಿಗೆ ಬಹಳ ಸಂಕಟ ಬರುವದು ನಾನು

ಗೋಪೀನಾಥರಾದೊಡನನ್ನೇ ಕಳಿಸುತ್ತಿದ್ದನು ಆದರೆ ಆತನಲ್ಲಿ ಸೇನೆಯು ಸ್ವಲ್ಪವಿರುವದು ಆದ್ದರಿಂದ ತಮ್ಮ ಸೇನೆಯನ್ನು ಅತ್ತಕಡೆಗೆ ಕಳಿಸುವದು ಯೋಗ್ಯವಾದದ್ದು. ನೀವು ಅತ್ತಕಡೆಗೆ ಹೋಗಿ ದಿಲೇರಖಾನನ ಸೇನೆಯನ್ನು ನಾಶಗೊಳಿಸಬೇಕೆಂಬ ಅಪೇಕ್ಷೆಯದೆ ''

ವಿಕ್ರಮಸಿಂಹನು ಅತ್ಯಂತ ಹರ್ಷಿತನಾದನು ತಮ್ಮ ಅಪ್ಪಣೆಯು ಶಿರಸಾಮಾನ್ಯವಾದದ್ದೆಂದು ಹೋಗಲುದ್ಯುಕ್ತನಾದನು ಇಷ್ಟರಲ್ಲಿ ಪ್ರತಾಪಸಿಂಹನು ಅಲ್ಲಿಗೆ ಬರುವನೆಂಬ ಸುದ್ದಿಯು ಬಂತು ಬೇಗನೆ ಆತನಿಗೆ ಒಳಗೆ ಬರಹೇಳಿದನು ಪ್ರತಾಪನು ಒಳಗೆ ಬಂದು ರಾಣಾನಿಗೆ ನಮಸ್ಕರಿಸಿ ಹತ್ತಿರ ಕುಳಿತಿರುವ ತನ್ನ ಕಕ್ಕನನ್ನು ನೋಡಿದನು ಕ್ಷಣ ಹೊತ್ತು ಆತನು ಗೊಂದಲದಲ್ಲಿ ಬಿದ್ದನು ತನ್ನ ಕಕ್ಕನು ಇಲ್ಲಿಗೆ ಹ್ಯಾಗೆ ಬಂದನೆಂಬದು ತಿಳಿಯಲೊಲ್ಲದು ಮೊದಲಿನಿಂದಲೂ ವಿರುದ್ಧವಾಗಿದ್ದವನು ಈಗ ಇಲ್ಲಿ ಬಂದದ್ದನ್ನು ಕಂಡು ಅತ್ಯಂತ ಆಶ್ಚರ್ಯವುಂಟಾಗಿತ್ತು ವಿಕ್ರಮಸಿಂಹನು ಆತನ ಈ ಸ್ಥಿತಿಯನ್ನು ಕಂಡು—'' ಬಾಳಾ ಪ್ರತಾಪ, ಈ ಅಭಿಮಾನಶೂನ್ಯನಾದ ಕಕ್ಕನಿಗೆ ಒಂದಾವರ್ತಿ ಆಲಿಂಗನವನ್ನು ಕೊಡು, ನಿನ್ನ ಮೊದಲಿನ ಸ್ವಾಭಿಮಾನಹೀನನಾದ ಕಕ್ಕನು ತೀರಿಹೋಗಿ ಆತನ ಸ್ಥಳದಲ್ಲಿ ರಜಪೂತಸ್ಥಾನದ ಉಪಯೋಗಕ್ಕೆ ಬೀಳುವದಕ್ಕೆ ಉದ್ಭವಿಸಿದ ಹೊಸಕಕ್ಕನಿಗೆ ಭೆಟ್ಟಿಯನ್ನು ಕೊಡು '' ಎಂದದ್ದನ್ನು ಕಂಡು ಪ್ರತಾಪನಿಗೆ ಎಲ್ಲ ಸಂಗತಿಯೂ ಹೊಳೆಯಿತು ತಟ್ಟನೆ ಎದ್ದು ಬಂದು ಕಕ್ಕನ ಚರಣಕ್ಕೆ ನಮಸ್ಕರಿಸಿ ದೃಢವಾಗಿ ಆಲಂಗಿಸಿಕೊಂಡನು –'' ಕಕ್ಕನವರೇ, ಕಡೆಗೆ ಸತ್ಯಪಕ್ಷವನ್ನ ಕೂಡಿದಿರಿ ಆದರಿಂದ ನನ್ನ ಹೃದಯವು ಆನಂದಾತಿಶಯದಿಂದ ತುಂಬಿಹೋಗಿರುವದು. ಈಶ್ವರನು ಕಲ್ಯಾಣ ಮಾಡಿದನು ಇನ್ನು ಮೇಲೆ ನನಗೆ ಯಾವ ಚಿಂತೆಯೂ ಇಲ್ಲ ಎಂದು ರಾಣಾನ ಕಡೆಗೆ ತಿರುಗಿ—'' ಮಹಾರಾಣಾರಾಜಸಿಂಹನ ಚರಣಾರ್ಪಣಕ್ಕಾಗಿ ಇಪ್ಪತ್ತೈದು ಸಾವಿರ ಸವಾರರೊಂದಿಗೆ ನಮ್ಮ ಗುಪ್ತವೀರರ ಸಂಘದ ರಾಣಿಯವರು ಸಿದ್ಧರಾಗಿರುತ್ತಾರೆ ಮಹಾರಾಜರೇ, ಅಪ್ಪಣೆಯನ್ನು ಕೊಡಬೇಕು.''

ರಾಜಸಿಂಹ—" ಕುಮಾರ ಪ್ರತಾಪ, ನಿಮ್ಮಂಥ ವೀರರು ನನಗೆ ಸಹಾಯಕ್ಕಿದ್ದ ಮೇಲೆ ಈಶ್ವರನು ನಮಗೆ ನಿಶ್ಚಯವಾಗಿ ಜಯವನ್ನು ಕೊಡುವನು ರಾಣಿಯವರನ್ನು ಒಳಗೆ ಕರೆಯಿರಿ " ಎಂದು ಹೇಳಿದೊಡನೆಯೆ ಮುಖವನ್ನು ಕಪ್ಪನೆಯ ವಸ್ತ್ರದಿಂದ ಆಚ್ಛಾದಿಸಿಕೊಂಡಿರುವ ರಾಣಿಯವರು ಬಂದು ನಿಂತರು ಅವಳನ್ನು ಯೋಗ್ಯ ಆಸನದ ಮೇಲೆ ಕುಳ್ಳಿರಿಸಿದ ಮೇಲೆ ರಾಜಸಿಂಹನು—" ರಾಣಿಯವರೇ, ನೀವು ರಜಪುತ ಸ್ತ್ರೀನವನ್ನು ಮೊಗಲರ ಬಲುಮೆಯೊಳಗಿಂದ ಬಿಡಿಸಿಕೊಳ್ಳುವದಕ್ಕೆ ಕೈಕೊಂಡ ಉದ್ಯೋಗದಿಂದ ನನಗೆ ಅತ್ಯಂತ ಅಭಿಮಾನವೆನಿಸುತ್ತದೆ. ನಮ್ಮಂಥ ಪುರುಷರು ಅಂಥ ಮಹತ್ಕಾರ್ಯಕ್ಕೆ ಧೈರ್ಯಗೊಳ್ಳಲೊಲ್ಲೆವು ನೀವು ಅಗ್ರಗಣ್ಯರಾಗಿ ಆ ಕಾರ್ಯವನ್ನು ಸ್ವೀಕರಿಸಿ ಬರೆಬಾಯಿಮಾತಿನಿಂದಲ್ಲದೆ, ಕೃತಿಯಿಂದ ಮಾಡಿ ತೋರಿಸುತ್ತಿರುವಿರಿ ಅಂದಮೇಲೆ ನಮ್ಮಂಥವರಿಗೆ ಎಷ್ಟು ಅಭಿಮಾನವೆನಿಸಬೇಡ ? ಮೊಗಲರ ಕುನ್ನಿಗಳಾಗಿ ದಾಸತ್ವವನ್ನು ಸ್ವೀಕರಿಸಿ ಗುಲಾಮರಂತೆ ವರ್ತಿಸುತ್ತಿರುವಂಥ ರಜಪೂತ ಕುಲಾಂಗಾರರಿಗೆ ಇದು ಉತ್ತಮವಾದ ಮೇಲುಪಂಕ್ತಿಯಲ್ಲವೇನು ? "

ರಾಣಿ—" ಮಹಾರಾಜರೇ, ತಮ್ಮ ಕೃತಿಯು ಅವರ್ಣನೀಯವಾದದ್ದು ನಮ್ಮ ವೀರರು ತಮ್ಮ ದೇಶಾಭಿಮಾನದ ಆವೇಶದ ಪಾಸಂಗಕ್ಕೆ ಸಹ ಹತ್ತುವಂತಿಲ್ಲ ಪುರುಷನೆ ಆಗಲಿ, ಸ್ತ್ರೀಯೇ ಆಗಲಿ ಧರ್ಮಹಿತದ ಕಾರ್ಯಕ್ಕೆ ಉಪಯೋಗ ಬೀಳುವದು ಒಳಿತಾದದ್ದು.'

ರಾಜ—" ನಾನು ಧನ್ಯನಾದೆನು ಪ್ರತಾಪರಾಯಾ, ನಿನ್ನ ಸೇನೆಯ ಎರಡುಸಾವಿರ ಸವಾರರನ್ನು ತಕ್ಕೊಂಡು ವಿಕ್ರಮಸಿಂಹನೊಡಗೊಂಡು ಹೋಗಿ ದಿಲೇರಖಾನನನ್ನು ಗೊತ್ತಿಗೆ ಹಚ್ಚುವ ಉತ್ತಮಕೆಲಸವನ್ನು ನಿನಗೆ ನೇಮಿಸುತ್ತೇನೆ "

" ಅಪ್ಪಣೆ " ಎಂದು ವಿಕ್ರಮಸಿಂಹನೂ, ಪ್ರತಾಪಸಿಂಹನೂ ಕಾರ್ಯಸಿದ್ಧ್ಯರ್ಥವಾಗಿ ಹೊರಟುಹೋದರು

# ೩೩ ನೆಯ ಪ್ರಕರಣ

## ಬಾದಶಹನ ಪರಾಜಯ

ಗೋಪೀನಾಥರಾಠೋಡ, ಸೋಳಂಖಿ ವಿಕ್ರಮಸಿಂಹ, ಕುಮಾರ ಪ್ರತಾಪಸಿಂಹ, ಈ ಮೂವರೂ ಕೂಡಿ ದಿಲೇರಖಾನನ ಮೇಲೆ ಸಾಗಿ ಹೋದರು ಆತನು ಒರುವ ದಾರಿಯಮೇಲೆ ಬೇರೆ ಬೇರೆ ಮೂರು ಸ್ಥಳಗಳಲ್ಲಿ ಮೂವರೂ ತಮ್ಮ ತಮ್ಮ ಸೇನೆಯೊಡನೆ ಅಡಗಿ ಕುಳಿತು ಕೊಂಡರು ವಿಕ್ರಮಸಿಂಹ, ಹಾಗು ಪ್ರತಾಪಸಿಂಹರ ಹತ್ತರ ಕುದು ರೆಯ ಸವಾರರಿದ್ದದರಿಂದ ಅವರು ಎತ್ತರದ ಸ್ಥಳಗಳಮೇಲೆ ಹೋಗಿ ಕುಳಿ ತರು ಆ ಸ್ಥಳವು ಎದುರಿನ ಮಾರ್ಗದ ಮಗ್ಗಲಿಗಿತ್ತು ಮೇಲಿಂದ ಕೆಳಗೆ ಬರುವದಕ್ಕೆ ತೀರ ಸುಲಭವಾಗಿತ್ತು. ಪ್ರತಾಪಸಿಂಹನ ವಿರುದ್ಧ ಮಗ್ಗಲಿಗೆ ಸಮೀಪದಲ್ಲಿಯೆ ಎರಡನೆಯದೊಂದು ಗಿಡದ ಗುಂಪಿನಲ್ಲಿ ಗೋಪೀನಾಥರಾಠೋಡನು ತನ್ನ ಕಾಲಾಳುಗಳೊಂದಿಗೆ ಅಡಗಿ ಕುಳಿತು ಕೊಂಡಿದ್ದನು.

ಅಕಬರನ ದುರ್ದೆಶೆಯು ದಿಲೇರಖಾನನಿಗೆ ಗೊತ್ತಿತ್ತು ಆದ್ದರಿಂದ ಬಲು ಎಚ್ಚರದಿಂದ ಬರುತ್ತಿದ್ದನು ಮುಂದೆ ಎಲ್ಲಿಯಾದರೂ ರಜಪೂತರು ಅಡಗಿ ಕುಳಿತಿರಬಹುದೆಂದು ಮೇಲಿಂದಮೇಲೆ ಹುಡುಕಿಕೊಂಡು ಬರು ವದಕ್ಕ ಸೇವಕರನ್ನು ಕಳಿಸುತ್ತಿದ್ದನು. ವಿಕ್ರಮಸಿಂಹನು ಅಡಗಿ ಕುಳಿ ತದ್ದು ಅವನಿಗೆ ಗೊತ್ತಾಯಿತು ಆತನನ್ನು ಓಡಿಸುವದಕ್ಕೆ ತನ್ನ ಕುದು ರೆಯ ಸವಾರರನ್ನು ಕಳಿಸಿದನು ವಿಕ್ರಮಸಿಂಹನು ಉಳಿದ ಕೆಲಸಗಳಲ್ಲಿ ಮಂದಬುದ್ಧಿಯವನಾದಾಗ್ಯೂ ಯುದ್ಧದಲ್ಲಿ ಒಳ್ಳೇ ಕುಶಲಸಿದ್ದನು. ಆತನು ಮೊಗಲರೊಡನೆ ಸ್ವಲ್ಪ ಕಾದಿದವನಂತೆ ನಟಿಸಿ ತನ್ನ ಸೇನೆಗೆ ಹಿಂ

ದಕ್ಕೆ ಹೋಗಲಿಕ್ಕೆ ಹೇಳಿದನು ಗೆಲವಿನ ಆಶೆಯಿಂದ ಮೊಗಲರನ್ನು ಇನ್ನೂ ಸ್ವಲ್ಪ ಮುಂದಕ್ಕೆ ಎಳೆದೊಯ್ದು, ಆ ಮೇಲೆ ಮರಳಿ ದಿಲೇರಖಾನನ ಧೂಳು ತೆಡವಿ ಬಿಡಬೇಕೆಂದು ಆತನು ವಿಚಾರಿಸಿದನು

ದಿಲೇರಖಾನನು ಪ್ರತಾಪಸಿಂಹನನ್ನು ದಾಟಿ ಮುಂದಕ್ಕ ಹೋದನು. ಪ್ರತಾಪಸಿಂಹನು ಕುಳಿತದ್ದು ಆತನಿಗೆ ಗೊತ್ತಾಗಲಿಲ್ಲ ಆತನು ಒಳ್ಳೇ ಇಕ್ಕಟ್ಟಿನ ಸ್ಥಳದಲ್ಲಿದ್ದನು ಅತ್ತಿತ್ತ ಮಿಸುಕಿರಲಿಲ್ಲ ಕುದುರೆಯ ಹೇಷಾರವವೂ ಕೇಳಬರುವಂತಿದ್ದಿಲ್ಲ ಆದ್ದರಿಂದ ಇದ್ದಷ್ಟು ಸವಾರರನ್ನು ಓಡಿಸಿದರಾಯಿತಂದು ದಿಲೇರಖಾನನು ತಿಳುಕೊಂಡನು ಇನ್ನು ಮೇಲೆ ಪ್ರತಿ ಸ್ಪರ್ಧಿಗಳು ಯಾರೂ ಉಳಿಯಲಿಲ್ಲೆಂದು ಸಂತೋಷದಿಂದ ಎಚ್ಚರಿಲ್ಲದೆ ನಡೆಯುತ್ತಿದನು

ದಿಲೇರಖಾನನು ಗೋಪೀನಾಥನು ಅಡಗಿಕುಳಿತಲ್ಲಿಗೆ ಬಂದನು ಅಲ್ಲಿಯ ಮಾರ್ಗವು ಬಹಳ ಬಿಕ್ಕಟ್ಟಿನದಾಗಿತ್ತು ಸೇನೆಯ ಮುಂದಿನ ಭಾಗವು ಮುಂದಕ್ಕೆ ಒಂದಕೂಡಲ ರಾದೋಡನು ಅವರೊಡನೆ ಕಾದುವದಕ್ಕೆ ನಿಂತನು ಯುದ್ಧವು ಸುರುವು ಆಯಿತು ಮೊಗಲವೀರರು ಪಟ, ಪಟ, ಬಿದ್ದು ಸಾಯಹತ್ತಿದರು ಅದೇಕಾಲಕ್ಕೆ ಪ್ರತಾಪಸಿಂಹನು ಇಳಿದುಬಂದು ಮೈಮೇಲೆ ಬಿದ್ದನು ವಿಕ್ರಮಸಿಂಹನು ಹಿಂದಿನ ಮಗ್ಗಲಾದನು, ಈ ರೀತಿಯಾಗಿ ಮೂರೂ ಮಗ್ಗಲನಿಂದ ದಿಲೇರಖಾನನ ಸೇನೆಯು ಸುತ್ತುವರಿಯಲ್ಪಟ್ಟಿತು ಮೊಗಲಸೇನೆಯು ಸ್ಥಿರಗೊಳ್ಳಲಿಲ್ಲ ಪಲಾಯನ ಸೂಕ್ತವನ್ನು ಹೇಳಲುದ್ಯುಕ್ತವಾಯಿತು. ಕಡೆಗ ಮರಣವನ್ನು ಅನುಭವಿಸಬೇಕಾಯಿತು

ಗೋಪೀನಾಥರಾದೋಡನೊಡನೆ ಮಾತ್ರ ಮೊಗಲರು ಇನ್ನೂ ಕಾದುತ್ತಿದ್ದರು ಅಲ್ಲಿಯೂ ಮೊಗಲರು ಸ್ಥಿರಗೊಳ್ಳಬೊಲ್ಲರು. ಒಬ್ಬನ ಹಿಂದೊಬ್ಬರು ಕೆಳಗೆ ಬೀಳಹತ್ತಿದರು.

ಕಡೆಗೆ ರಜಪೂತರಿಗ ಜಯುವಾಯಿತು. ಮೊಗಲರು ಸೋತು ಹೋದರು. ರಜಪೂತರ ಸೇನೆಯು ಮರಳಿ ಛಾವಣಿಗೆ ಬಂತು. ರಾಜ

ಸಿಂಹನಿಗೆ ಅತ್ಯಾನಂದವಾಯಿತು. ಇಷ್ಟರಲ್ಲಿ—"ಯುದ್ಧದ ಪರಿಣಾಮಕ್ಕೆ ಔರಂಗಜೇಬನು ಅತ್ಯಂತ ಕೋಪಾವಿಷ್ಟನಾಗಿರುವನು. ನಾಳೆ ಛಾವಣಿಯನ್ನು ತಕ್ಕೊಂಡು ದಿಲ್ಲಿಗೆ ಹೋಗುವನು" ಎಂದು ಚಾರರು ಸುದ್ದಿಯನ್ನು ತಂದರು ಇದನ್ನು ಕೇಳಿದೊಡನೆಯೆ ರಾಜಸಿಂಹನು ನಾಳೆ ಛಾವಣಿಯನ್ನು ಎತ್ತಬಹುದೆಂದು ಆಜ್ಞಾಪಿಸಿದನು ಪ್ರತಿಯೊಬ್ಬರು ಮೊದಲು ತೋಪುಗಳನ್ನು ತಕ್ಕೊಂಡು ಸಿದ್ಧರಾಗಿರತಕ್ಕದ್ದು; ಆದರೆ ಮೊಗಲಸೇನೆಯು ಹೊರಟುಹೋದ ಹೊರ್ತು ಕೆಳಗೆ ಇಳಿಯಬಾರದೆಂದು ಕಟ್ಟಪ್ಪಣೆ ಮಾಡಿದನು

ಸ್ವಲ್ಪಹೊತ್ತಿನಮೇಲೆ ವಿಕ್ರಮಸಿಂಹನು ರಾಜಸಿಂಹನನ್ನು ಕುರಿತು "ರಾಣಾಜಿ, ಈಗ ನನ್ನಮನಸ್ಸು ಸಮಾಧಾನವಾಯಿತು ನನಗೆ ಒಬ್ಬಳೇಮಗಳು ಆಕೆಯನ್ನು ತಮಗೆ ಅತ್ಯಾನಂದದಿಂದ ಅರ್ಪಿಸುತ್ತೇನೆ ದಯಮಾಡಿ ತಾವು ಸ್ವೀಕರಿಸತಕ್ಕದ್ದು" ಎಂದನು

ರಾಣಾ—"ಉದೇಪುರಕ್ಕೆ ಹೋದಹೊರ್ತು ಈ ಮಾತಿನ ನಿಷ್ಕರ್ಷೆಯಾಗಲಾರದು" ಎಂದು ಉತ್ತರಕೊಟ್ಟನು

ಮರುದಿವಸ ಛಾವಣಿಯನ್ನು ಎತ್ತಿಕೊಂಡು ಉದೇಪುರಕ್ಕೆ ಹೊರಟುಹೋಗುವದಿತ್ತು. ವಿಚಾರದಲ್ಲಿ ಮಗ್ನರಾದ ಕೆಲವರಿಗೆ ರಾತ್ರಿಯೆಲ್ಲವೂ ಚನ್ನಾಗಿ ನಿದ್ರೆಹತ್ತಲಿಲ್ಲ.

# ೩೪ ನೆಯ ಪ್ರಕರಣ.

## ಚಿಂತೆಯ ನಿರ್ಮೂಲನ

ಬೆಳಗಿನ ಐದು ಘಂಟೆಯ ಸಮಯ. ಯುದ್ಧದಲ್ಲಿ ದಣಿದವರು ಸ್ವಲ್ಪ ವಿಶ್ರಾಂತಿಯ ಸುಖವನ್ನು ಅನುಭವಿಸುತ್ತಿದ್ದರು ಅಷ್ಟರಲ್ಲಿ ಛಾವಣಿಯನ್ನು ಕೀಳುವ ಸಂಕೇತದ ತೋಫು ಹಾರಿತು. ತೋಫಿನ ಸಪ್ಪಳವನ್ನು ಕೇಳಿ ಎಲ್ಲರೂ ತಮ್ಮತಮ್ಮ ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ಸಜ್ಜಾಗ ತೊಡಗಿದರು. ಕೆಲವು ವ್ಯಸನಶೀಲರು ಅಫುಏನ ಸೇವನೆಯನ್ನು ಮಾಡಹತ್ತಿದರು ಆಕಾಲಕ್ಕೆ ರಾಜಸ್ಥಾನದಲ್ಲಿ ಕುಸುಂಬೆಯನ್ನು ಕುಡಿಯುವ ಚಟವು ಈಗಿನ ಚಹದಷ್ಟೇ ಬಲವತ್ತರವಾಗಿತ್ತು. ಕೆಲವರು ಆ ಕುಸುಂಬೆಯನ್ನು ಆಸ್ವಾದಿಸಹತ್ತಿದರು. ತೋಫುಹಾರಿದ ಅರ್ಧತಾಸಿನೊಳಗಾಗಿ ಎಲ್ಲರೂ ಹೊರಡಲಿಕ್ಕೆ ಸಿದ್ಧರಾಗಿರಬೇಕೆಂದು ರಾಜಸಿಂಹನ ಕಟ್ಟಪ್ಪಣೆಯು ಅದನ್ನು ಯಾರೂ ಮುರಿಯುವಂತಿಲ್ಲ. ರಾಜಸಿಂಹನ ನಿಯಮಕ್ಕೆ ವಿರುದ್ಧವಾಗಿ ನಡೆದಾತನು ಶಿಪಾಯಿಯೆ ಇರಲಿ, ದೊಡ್ಡ ಅಧಿಕಾರಿಯೆ ಇರಲಿ, ಆತನಿಗ ಶಿಕ್ಷೆಯು ಆಗೇಆಗುತ್ತಿತ್ತು. ಈನಿಯಮಬದ್ಧಪದ್ಧತಿಯಿಂದ ಯಾವಕಾರ್ಯವೂ ಗೊತ್ತುಮಾಡಿದ ಹೊತ್ತನ್ನು ಮಿಾರುತ್ತಿದ್ದಿಲ್ಲ ಯುದ್ಧದಲ್ಲಿ ಹಿಂದಿರುಗ ಬಾರದೆಂಬ ನಿಯಮವು ಅತಿಶಯ ಕಠೋರವಾಗಿತ್ತು. ಯುದ್ಧದಕಾಲಕ್ಕೆ ಸಂಗಡ ಯಾರೂ ಸ್ತ್ರೀಯರನ್ನು ತೆಗೆದುಕೊಂಡು ಬರಕೂಡದು. ಶರ ಸಿಕ್ಕವರನ್ನು ಒಳ್ಳೇಪ್ರೀತಿಯಿಂದ ನಡಿಸಿಕೊಳ್ಳುತ್ತಿದ್ದರು ಗಾಯ ಹೊಂದಿದವರು ಯಾರೇಇರಲಿ ಅವರ ಶುಶ್ರೂಷಯನ್ನು ಉತ್ತಮರೀತಿಯಿಂದ ಮಾಡುತ್ತಿದ್ದರು ಶತ್ರುಗಳನ್ನು ಕಾರಣ ಪರತ್ವದಿಂದ ಸುಲಿಗೆಮಾಡಿದರೆ ಅದರ ಒಂದು ನಾಲ್ಕಾಂಶವನ್ನು ಸರಕಾರಕ್ಕೆ ಕೊಟ್ಟು ಉಳಿದದ್ದನ್ನು ಸುಲಿಗ ಮಾಡಿದವರು ಹಂಚಿಕೊಳ್ಳ

-ಯುದಾಗಿತ್ತು. ಶತ್ರುಗಳ ಸ್ತ್ರೀಯರಿಗೂ, ವೃದ್ಧರಿಗೂ, ಬಾಲಕರಿಗೂ ದುಃಖಕೊಡಬಾರದೆಂದು ಮಹತ್ವದ ಕಟ್ಟಪ್ಪಣೆಯಿತ್ತು. ಈ ತರಹದ ನಿಯಮಗಳನ್ನು ಪಾಲಿಸುತ್ತಿದ್ದದರಿಂದ ರಾಜಸಿಂಹನಿಗೆ ಯಶಸ್ಸು ಒಂದೇ ಬರುತ್ತಿತ್ತು.

ಅಕಬರಶಹನ ಸಹಾಯಕ್ಕೆ ಹೋಗುವ ದಂಡು ಮಧ್ಯದಲ್ಲಿಯೇ ಮಣ್ಣುಪಾಲಾಯಿತು. ದಿಲೇರಖಾನನು ಪರಾಭೂತನಾದನು. ಗೋಪೀನಾಥರಾದೋಡ, ವಿಕ್ರಮಸಿಂಹ, ಸೋಳಂಖಿ, ಬಹಾದ್ದೂರ ಪ್ರತಾಪಸಿಂಹ ಇವರ ಅಲೌಕಿಕಯುದ್ಧ ಕೌಶಲ್ಯದೆದುರಿಗೆ ದಿಲೇರಖಾನನು ಸ್ಥಿರಗೊಳ್ಳದೆ ರಣರಂಗವನ್ನು ಬಿಟ್ಟುಬಿಡಬೇಕಾಯಿತು. ಶತ್ರುಗಳ ಒಲವು ಹೆಚ್ಚಾಯಿತು. ಅವರಿಗೆ ಎಲ್ಲಕಡೆಯಿಂದಲೂ ಸಹಾಯವು ದೂರಯುಹತ್ತಿತು. ಇದನ್ನು ಕಂಡು ಔರಂಗಜೇಬನ ಶರೀರವು ಕುದಿಯಿದ್ದಿತು. ಒರೇಸಾಲ್ಕೈದುಸಾವಿರ ಸೇನೆಯು ಎದುರಿಗ ತನ್ನ ಅತ್ಯಗಾಧವಾದ ಸೇನಯು ಪರಾಭವವಾದದ್ದನ್ನು ಕಂಡು ಆತನಿಗ ನಾಚಿಕೆ ಜನಿಸಹತ್ತಿತು. ಆ ಧೂರ್ತನಾದ ಬಾದಶಹನಿಗೆ ಈ ಕಾಲಕ್ಕೆ ತಾನು ಮರಳಿಹೋಗುವದು ಉತ್ತಮವೆಂದು ಕಂಡುಬಂತು. ಮಳಗಾಲದ ಆರಂಭವಾದ್ದರಿಂದ ಆ ರಾಜಸ್ಥಾನದ ಪರ್ವತಪ್ರದೇಶದಲ್ಲಿ ಸ್ಥಿರಗೊಂಡು ನಿಲ್ಲುವಂತಿರಲಿಲ್ಲ. ಹಿಂದಿನ ಪ್ರಸಂಗದ ನೆನಪಾದಕೂಡಲೆ ಆತನ ಮೈಮೇಲ ರೋಮಾಂಚಗಳೇಳಹತ್ತಿದವು. ಈ ತರಹದ ಪ್ರಸಂಗವನ್ನು ಸ್ವತಃ ತಾನೇ ಸಹನಮಾಡಬೇಕಾದದ್ದರಿಂದ ಆತನಿಗೆ ಬಹಳ ಕೆಡಕೆನಿಸಿತು. “ರಾಜಸಿಂಹನು ಬಾದಶಹನನ್ನು ಬಂದಿಯಾಗಿಟ್ಟಿದ್ದನು” ಎಂಬ ಶಬ್ದವು ಆತನನ್ನು ವಿಶೇಷವಾಗಿ ಬಾಧಿಸಹತ್ತಿತು. “ನಾನು ಭರತಖಂಡದ ಸಮ್ರಾಟನೆನಿಸಿಕೊಳ್ಳುತ್ತೇನೆ. ನನ್ನನ್ನು ಈ ರಾಜಸಿಂಹನಂಥ ಸಾಧಾರಣ ಸಾಸ್ಥಾನಿಕನು ಅಟಕಿನಲ್ಲಿಡಬೇಕೆಂದರೆ ಎಂಥ ಲಜ್ಜಾಸ್ಪದವಾದ ಸಂಗತಿಯು! ಇದರ ಪ್ರತೀಕಾರವನ್ನು ಎಂದಾದರೊಂದುದಿನ ತೀರಿಸಿಕೊಳ್ಳಲೇಬೇಕು” ಎಂದು ಮನಸಿನಲ್ಲಿ ಸಂಕಲ್ಪಮಾಡಿಕೊಂಡನು. ಆಮೇಲೆ ತನ್ನ ಛಾವಣಿಯನ್ನು ಕೀಳು

ವುದಕ್ಕೆ ಅಪ್ಪಣೆಯನ್ನು ಕೊಟ್ಟನು ಬಾದಶಹನ ಛಾವಣಿಯೆಂದರೆ ಅತ್ಯಂತ ಘನವಾದ ಪ್ರಕರಣವು ಏಳುತ್ತ ಏಳುತ್ತ ಪೂರ್ಣನಾಲ್ಕು ತಾಸು ಹೊತ್ತೇರಿತು

ಮೊಗಲ ಬಾದಶಹನ ಸೇನೆಯೆಂದರೆ ಐಷ ಆರಾಮದ ಮೂರ್ತಿ ಸುಧಾರಿಸಿಕೊಳ್ಳುವದರಲ್ಲಿಯೆ ಎರಡು ತಾಸುಗಳು ಕಳೆದುಹೋಗುವವು ಬಹಳ ಜನರು ಬೇಗಮ್ಮಳನ್ನೂ ದಾಸದಾಸಿಯರನ್ನೂ ತರುತ್ತಿದ್ದರು ಇಂಥವರಪಾಲಿಗ ಅಪಜಯವು ಕಟ್ಟಿಟ್ಟವಾತು. ಈ ರೀತಿ ಉಭಯ ಸೇನೆಯ ಸ್ಥಿತಿ ಇತ್ತು, ಬಾದಶಹನ ಸೇನೆಯು ಹೊರಟುಹೋಗುವವರೆಗೆ ರಾಜಸಿಂಹನು ತನ್ನ ಛಾವಣಿಯನ್ನು ಹಾಗೇ ಸ್ಥಿರವಾಗಿಟ್ಟಿದ್ದನು ಆತನು ಹೊರಟುಹೋದನೆಂದು ಪೂರ್ಣವಾಗಿ ಗೊತ್ತಾದ ಮೇಲೆ ತನ್ನ ರಾಹುಟಿಯನ್ನು ಕೀಳಲಿಕ್ಕೆ ಅಪ್ಪಣೆಯನ್ನುಕೊಟ್ಟನು. ದಿಲೇರಖಾನನನ್ನು ಸೋಲಿಸಿದ್ದಕ್ಕೆ ಗೋಪೀನಾಥ, ವಿಕ್ರಮಸಿಂಹ, ಹಾಗು ಪ್ರತಾಪಸಿಂಹರಿಗ ಅತ್ಯಂತ ಅಭಾರ ಪೂರ್ವಕವಾಗಿ ಮನ್ನಣೆಮಾಡಿದನು ಆಪತ್ತಿನಿಂದ ಮುಕ್ತನಾದೊಡನೆಯ ಕಾರ್ಯ ಕರ್ತೃವಿನ ಚಿತ್ತವು ಸಮಾಧಾನಗೆಳ್ಳುವಂತೆ ಉದೇಪುರಕ್ಕೆ ಹೋದಮೇಲೆ ರಾಣಾನಿಗ ಅತ್ಯಂತ ಸಮಾಧಾನವಾಯಿತು. ವಿಜಯ ಮದದಿಂದ ಸ್ನಾತರಾದ ರಜಪೂತ ವೀರರು ನಗರವನ್ನು ಅತ್ಯುತ್ಸವದಿಂದ ಪ್ರವೇಶಿಸಿದರು. ನಗರವನ್ನು ಪ್ರವೇಶಿಸುವಕಾಲಕ್ಕೆ ಪುರವಾಸಿಗಳು ಮಾಡಿದ ಸ್ವಾಗತಾರ್ಥದಿಂದ ಅವರ ಪರಿಶ್ರಮವು ಪರಿಹಾರವಾಯಿತು ಈ ಹೊತ್ತು ನಮ್ಮ ಕರ್ತವ್ಯಕರ್ಮವನ್ನು ಮಾಡಿ ತೀರಿಸಿದೆವೆಂದು ಸಂತೋಷಸಾಗರದಲ್ಲಿ ಮುಳುಗಿ ಹೋದರು ಎತ್ತ ನೋಡಿದತ್ತ ' ಮಹಾರಾಣಾರಾಜಸಿಂಹಕಿ ಜಯ ' ಇದೇಧ್ವನಿಯು ತುಂಬಿಹೋಗಿತ್ತು. ಇದಕ್ಕೂ ಸ್ವಲ್ಪಹೊತ್ತಿನ ಪೂರ್ವದಲ್ಲಿ ಒಂದು ಮಹಲಿನಲ್ಲಿ ಇಬ್ಬರು ನವಯುವ್ವನೆಯರು ವಿಚಾರ ಸಾಗರದಲ್ಲಿ ಮಗ್ನರಾಗಿದ್ದರು ಅವರೊಳಗಿನವಳೊಬ್ಬಳು ಕಪೋಲವನ್ನು ವಾಮ ಹಸ್ತದಮೇಲೆ ಇಟ್ಟುಕೊಂಡು ಕುಳಿತಿದ್ದಳು. ಚಿಂತೆಯಿಂದ ಅವಳ ಮುಖವು

ಬಹುದಾಗಿತ್ತು. ಶತ್ರುಗಳ ಸ್ತ್ರೀಯರಿಗೂ, ವೃದ್ಧರಿಗೂ, ಬಾಲಕರಿಗೂ, ದುಃಖಕೊಡಬಾರದೆಂದು ಮಹತ್ವದ ಕಟ್ಟಪ್ಪಣೆಯಿತ್ತು. ಈ ತರಹದ ನಿಯಮಗಳನ್ನು ಪಾಲಿಸುತ್ತಿದ್ದದರಿಂದ ರಾಜಸಿಂಹನಿಗೆ ಯಶಸ್ಸು ಒಂದೇ ಬರುತ್ತಿತ್ತು.

ಅಕಬರಶಹನ ಸಹಾಯಕ್ಕೆ ಹೋಗುವ ದಂಡು ಮಧ್ಯದಲ್ಲಿಯೆ ಮಣ್ಣುಪಾಲಾಯಿತು. ದಿಲೇರಖಾನನು ಪರಾಭೂತನಾದನು. ಗೋಪೀನಾಥರಾಠೋಡ, ವಿಕ್ರಮಸಿಂಹ, ಸೋಳಂಖಿ, ಬಹಾದ್ದೂರ ಪ್ರತಾಪಸಿಂಹ ಇವರ ಅಲೌಕಿಕಯುದ್ಧ ಕೌಶಲ್ಯದೆದುರಿಗೆ ದಿಲೇರಖಾನನು ಸ್ಥಿರಗೊಳ್ಳದೆ ರಣರಂಗವನ್ನು ಬಿಟ್ಟುಬಿಡಬೇಕಾಯಿತು. ಶತ್ರುಗಳ ಬಲವು ಹೆಚ್ಚಾಯಿತು. ಅವರಿಗೆ ಎಲ್ಲಕಡೆಯಿಂದಲೂ ಸಹಾಯವು ದೊರೆಯಹತ್ತಿತು. ಇದನ್ನು ಕಂಡು ಔರಂಗಜೇಬನ ಶರೀರವು ಕುಂಠಿತವಾಯಿತು. ಒಂದೇಸಾಲಕ್ಕೆಯುಸಾವಿರ ಸೇನೆಯು ಎದುರಿಗೆ ತನ್ನ ಅತ್ಯಗಾಧವಾದ ಸೇನೆಯು ಪರಾಭವವಾದದ್ದನ್ನು ಕಂಡು ಆತನಿಗೆ ನಾಚಿಕೆ ಜನಿಸಹತ್ತಿತು. ಆ ಧೂರ್ತನಾದ ಬಾದಶಹನಿಗೆ ಈ ಕಾಲಕ್ಕೆ ತಾನು ಮರಳಿಹೋಗುವದು ಉತ್ತಮವೆಂದು ಕಂಡುಬಂತು. ಮಳೆಗಾಲದ ಆರಂಭವಾದ್ದರಿಂದ ಆ ರಾಜಸ್ಥಾನದ ಪರ್ವತಪ್ರದೇಶದಲ್ಲಿ ಸ್ಥಿರಗೊಂಡು ನಿಲ್ಲುವಂತಿರಲಿಲ್ಲ. ಹಿಂದಿನ ಪ್ರಸಂಗದ ನೆನಪಾದಕೂಡಲೆ ಆತನ ಮೈಮೇಲೆ ರೋಮಾಂಚಗಳೇಳಹತ್ತಿದವು. ಈ ತರಹದ ಪ್ರಸಂಗವನ್ನು ಸ್ವತಃ ತಾನೇ ಸಹನಮಾಡಬೇಕಾದದ್ದರಿಂದ ಆತನಿಗೆ ಬಹಳ ಕೆಡಕೆನಿಸಿತು. “ರಾಜಸಿಂಹನು ಬಾದಶಹನನ್ನು ಬಂದಿಯಾಗಿಟ್ಟಿದ್ದನು” ಎಂಬ ಶಬ್ದವು ಆತನನ್ನು ವಿಶೇಷವಾಗಿ ಬಾಧಿಸಹತ್ತಿತು. “ನಾನು ಭರತಖಂಡದ ಸಮ್ರಾಟನೆನಿಸಿಕೊಳ್ಳುತ್ತೇನೆ. ನನ್ನನ್ನು ಈ ರಾಜಸಿಂಹನಂಥ ಸಾಧಾರಣ ಸಂಸ್ಥಾನಿಕನು ಅಟಕಿನಲ್ಲಿಡಬೇಕೆಂದರೆ ಎಂಥ ಲಜ್ಜಾಸ್ಪದವಾದ ಸಂಗತಿಯು ! ಇದರ ಪ್ರತೀಕಾರವನ್ನು ಎಂದಾದರೊಂದುದಿನ ತೀರಿಸಿಕೊಳ್ಳಲೇಬೇಕು” ಎಂದು ಮನಸಿನಲ್ಲಿ ಸಂಕಲ್ಪಮಾಡಿಕೊಂಡನು. ಬಳಿಕ ತನ್ನ ಛಾವಣಿಯನ್ನು ಕೀಳು

ವುದಕ್ಕ ಅಪ್ಪಣೆಯನ್ನು ಕೊಟ್ಟನು ಬಾದಶಹನ ಛಾವಣಿಯೆಂದರೆ ಅತ್ಯಂತ ಘನವಾದ ಪ್ರಕರಣವು ಎಳುತ್ತ ಎಳುತ್ತ ಪೂರ್ಣನಾಲ್ಕು ತಾಸು ಹೊತ್ತೇರಿತು

ಮೊಗಲ ಬಾದಶಹನ ಸೇನೆಯೆಂದರೆ ಐಷ ಆರಾಮದ ಮೂರ್ತಿ ಸುಧಾರಿಸಿಕೊಳ್ಳುವದರಲ್ಲಿಯು ಎರಡು ತಾಸುಗಳು ಕಳೆದುಹೋಗು ವವು ಬಹಳ ಜನರು ಬೇಗಮ್ಮಳನ್ನೂ ದಾಸದಾಸಿಯರನ್ನೂ ತರು ತ್ತಿದ್ದರು ಇಂಥವರಪಾಲಿಗೆ ಅಪಜಯವು ಕಟ್ಟಿಟ್ಟವಾತು. ಈ ರೀತಿ ಉಭಯ ಸೇನೆಯ ಸ್ಥಿತಿ ಇತ್ತು, ಬಾದಶಹನ ಸೇನೆಯು ಹೊರಟುಹೋಗು ವವರೆಗೆ ರಾಜಸಿಂಹನು ತನ್ನ ಛಾವಣಿಯನ್ನು ಹಾಗೇ ಸ್ಥಿರವಾಗಿಟ್ಟಿ ದ್ದನು ಆತನು ಹೊರಟುಹೋದನೆಂದು ಪೂರ್ಣವಾಗಿ ಗೊತ್ತಾದ ಮೇಲೆ ತನ್ನ ರಾಹುಟಿಯನ್ನು ಕೀಳಲಿಕ್ಕೆ ಅಪ್ಪಣೆಯನ್ನುಕೊಟ್ಟನು. ದಿಲೇರಖಾನನನ್ನು ಸೋಲಿಸಿದ್ದಕ್ಕೆ ಗೋಪೀನಾಥ, ವಿಕ್ರಮಸಿಂಹ, ಹಾಗು ಪ್ರತಾಪಸಿಂಹರಿಗೆ ಅತ್ಯಂತ ಅಭಾರ ಪೂರ್ವಕವಾಗಿ ಮನ್ನಣೆಮಾಡಿದನು. ಆಪತ್ತಿನಿಂದ ಮುಕ್ತನಾದೊಡನೆಯೆ ಕಾರ್ಯಕರ್ತೃವಿನ ಚಿತ್ತವು ಸಮಾ ಧಾನಗೊಳ್ಳುವಂತೆ ಉದೇಪುರಕ್ಕೆ ಹೋದಮೇಲೆ ರಾಣಾನಿಗೆ ಅತ್ಯಂತ ಸಮಾಧಾನವಾಯಿತು. ವಿಜಯ ಮದದಿಂದ ಸ್ನಾತರಾದ ರಜಪೂತ ವೀರರು ನಗರವನ್ನು ಅತ್ಯುತ್ಸವದಿಂದ ಪ್ರವೇಶಿಸಿದರು ನಗರವನ್ನು ಪ್ರವೇಶಿಸುವಕಾಲಕ್ಕೆ ಪುರವಾಸಿಗಳು ಮಾಡಿದ ಸ್ವಾಗತಾರ್ಥದಿಂದ ಅವ ರ ಪರಿಶ್ರಮವು ಪರಿಹಾರವಾಯಿತು ಈ ಹೊತ್ತು ನಮ್ಮ ಕರ್ತವ್ಯಕ ರ್ಮವನ್ನು ಮಾಡಿ ತೀರಿಸಿದೆವೆಂದು ಸಂತೋಷಸಾಗರದಲ್ಲಿ ಮುಳುಗಿ ಹೋದರು ಎತ್ತ ನೋಡಿದತ್ತ 'ಮಹಾರಾಣಾರಾಜಸಿಂಹಕಿ ಜಯ' ಇದೇಧ್ವನಿಯು ತುಂಬಿಹೋಗಿತ್ತು. ಇದಕ್ಕೂ ಸ್ವಲ್ಪಹೊತ್ತಿನ ಪೂರ್ವ ದಲ್ಲಿ ಒಂದು ಮಹಲಿನಲ್ಲಿ ಇಬ್ಬರು ನವಯುವ್ವನೆಯರು ವಿಚಾರ ಸಾಗರ ದಲ್ಲಿ ಮಗ್ನರಾಗಿದ್ದರು ಅವರೊಳಗಿನವಳೊಬ್ಬಳು ಕಪೋಲವನ್ನು ವಾಮ ಹಸ್ತದಮೇಲೆ ಇಟ್ಟುಕೊಂಡು ಕುಳಿತಿದ್ದಳು. ಚಿಂತೆಯಿಂದ ಅವಳ ಮುಖವು

ಕಂದಿಹೋಗಿತ್ತು ಕ್ಷಣಹೊತ್ತು ದೂರದವರೆಗೆ ದೃಷ್ಟಿಚಲ್ಲಿ ನಿರೀಕ್ಷಿಸುತ್ತಿದ್ದಳು. ಮತ್ತೊಂದು ಕ್ಷಣ ದಿವಾನಖಾನೆಯೊಳಗಿನ ಚಿತ್ರಪಟವನ್ನು ಲಕ್ಷ್ಯಕೊಟ್ಟು ನೋಡುತ್ತಿದ್ದಳು ಅವಳ ವೃತ್ತಿಯು ಅತ್ಯಂತ ಚಂಚಲವಾಗಿತ್ತು. ಎರಡನೆಯವಳು ಆವಳ ವಿಕಾರಗಳನ್ನು ನೋಡಿಯೂ ನೋಡದವಳಂತೆ ನಿರೀಕ್ಷಿಸುತ್ತಿದ್ದಳು ಕಡೆಗೆ ಮೊದಲನೆಯವಳು ಬೇಸತ್ತು "ಸಖಿ, ಆಸಂಗತಿಯನ್ನು ಕೇಳಿ ನನಗೆ ಸ್ವಲ್ಪವೂ ಸಮಾಧಾನವಿಲ್ಲ. ಮಹಾರಾಣಾನು ಪಂಜರದೊಳಗಿನ ಸಿಂಹವನ್ನು ಬಿಟ್ಟು ಬಹಳ ಅನ್ಯಾಯ ಮಾಡಿದನು ಇನ್ನುಮೇಲೆ ಮುಂದಿನ ಪರಿಣಾಮವು ಹ್ಯಾಗಾಗುವದೆಂದು ನನ್ನ ಮನಸ್ಸು ವ್ಯಾಕುಲಗೊಂಡಿರುವದು" ಎಂದಳು "ಬಾಯಿಯವರೆ, ತಾವು ಸ್ವಲ್ಪವೂ ಚಿಂತಿಸ ಕೂಡದು. ಬೇಕಾದಂಥ ಶತ್ರುವೂ ರಾಣಾನ ಎದುರಿಗೆ ನಿಲ್ಲಲಾರನು."

"ನನಗಂತೂ ಅತ್ಯಂತ ಚಮತ್ಕಾರವೆನಿಸುತ್ತಿರುವದು ಚಂಡಾಲನಿಗ ವಚನದ ಬೆಲೆಯುಗೊತ್ತಿಲ್ಲ. ಒಮ್ಮೆ ತಪಮಾಡಿಕೊಂಡು ತನ್ನ ಕೆಲಸವಾದಮೇಲ ತಪಮಾಡಿಕೊಂಡಿರುವದಿಲ್ಲವೆಂದು ಹೇಳುವದು ಚಮತ್ಕಾರವಲ್ಲವೆ?"

"ಆರಕ್ಕಸನ ನಾಲಗೆಗೆ ಬೆಲೆಇದ್ದರಲ್ಲವೆ? ಇಡೀ ಜನ್ಮವನ್ನೆಲ್ಲ ಕಪಟಾಚರಣೆಯಲ್ಲಿ ಕಳೆದವನಿಗೆ ಯಾವ ಮಾತುತಾನೆ ಅಸಾಧ್ಯವು? ಇದರೊಳಗೆ ಚಮತ್ಕಾರವಾದರೂ ಏನು?"

ಈ ಸ್ತ್ರೀಯರು ಯಾರೆಂಬದನ್ನು ವಾಚಕ ಮಹಾಶಯರಿಗೆ ಹೇಳಲವಶ್ಯಕವಿಲ್ಲ. ಯುದ್ಧದ ಸ್ಥಿತಿಯು ಬದಲಾಯಿತೆಂದೂ ಔರಂಗಜೇಬನು ಪುನಃ ಯುದ್ಧಕ್ಕೆ ಆರಂಭಿಸಿರುವನೆಂದೂ ಕೇಳಿ ಚಂಚಲೆ ನಿರ್ಮಲೆಯರ ಆನಂದವು ಆಗಲೇ ಹಾರಿಹೋಗಿತ್ತು ರಾಜಕನ್ಯೆಯು ಏಕಲಿಂಗೇಶ್ವರನಿಗೆ ಸಹಸ್ರ ಸಹಸ್ರವಾಗಿ ಹರಕೆಹೊತ್ತಳು ರಾಣಾನಿಗೆ ಜಯದೊರೆಯಲೆಂದು ಒಮ್ಮನಸಿನಿಂದ ಧ್ಯಾನಿಸುತ್ತಿದ್ದಳು

ಎರಡನೇ ದಿವಸ ಮುಂಜಾನೆ ಮೇಲಿನ ಸಂಭಾಷಣೆಯಲ್ಲಿ ಮಗ್ನರಾಗಿರುವ ಕಾಲಕ್ಕೆ ಒಬ್ಬ ದೂತನು ಬಂದನು. ಆತನು ರಾಣಾವಿಕ್ರಮಸಿಂಹನೂ ಬಹದ್ದೂರ ಪ್ರತಾಪಸಿಂಹನೂ, ಗುಪ್ತವೀರಸಂಘದ ಮಹಾರಾಣಿಯೂ ಸಸೈನ್ಯರಾಗಿ ಸಹಾಯುಕ್ಕೆ ಬಂದದ್ದನ್ನು ತಿಳಿಸಿದನು. ಮತ್ತು ದಿಲೇರಖಾನನ ಪರಾಭವವನ್ನೂ ಬಾದಶಹನ ದಿಲ್ಲಿಪ್ರಯಾಣವನ್ನೂ ರಾಜಸಿಂಹನ ಆಗಮನವನ್ನೂ ತಿಳಿಸಿದನು. ಚಂಚಲಕುಮಾರಿಗೆ ಅತ್ಯಾನಂದವಾಯಿತು. ಬೇಗನೆ ಆರತಿಯನ್ನು ಸಜ್ಜುಗೊಳಿಸಿದಳು. ಆರತಿಯನ್ನು ಸಜ್ಜುಗೊಳಿಸುತ್ತ ಚಂಚಲೆಯು ನಿರ್ಮಲೆಯನ್ನು ಕುರಿತು—
“ನಿರ್ಮಲೆ, ಈಗ ಸ್ವಲ್ಪ ನನ್ನ ಭಾಗ್ಯವು ಉದಯುಕ್ಕೆ ಬಂದಂತಿದೆ. ಶ್ರೀ ಏಕಲಿಂಗೇಶ್ವರನು ಅಪ್ಪನಿಗೆ ಬುದ್ಧಿಯನ್ನು ಕೊಟ್ಟು ಇತ್ತ ಸಹಾಯುಕ್ಕ ಕಳಿಸಿದ್ದು ಎಷ್ಟು ಉತ್ತಮವಾಯಿತು, ಇಲ್ಲದಿದ್ದರೆ ಯುದ್ಧದಲ್ಲಿ ಜಯ ದೊರೆತಾಗ್ಯೂ ನನಗೆ ಅಷ್ಟು ಆನಂದವನಿಸುತ್ತಿರಲಿಲ್ಲ. ನನಗ ಜನ್ಮದಾತೃವೂ, ಸಣ್ಣವಳನ್ನು ದೊಡ್ಡವಳನ್ನಾಗಿಮಾಡಿದವನೂ ನನ್ನ ಪ್ರತಿಯೊಂದು ಮನೋಬಯಕೆಯನ್ನು ಪೂರ್ಣಗೊಳಿಸಿದವನೂ ಆದ ತಂದೆಯ ವಿರುದ್ಧ ನಡೆದು ಆತನ ಶಾಪಕ್ಕೆ ಯಾವ ಸುಕನ್ಯೆಯು ಪಾತ್ರಳಾದಳು ?”

ನಿರ್ಮಲೆ —“ಬಾಯಿಯವರೆ, ಅವರು ಮೊದಲೇ ತಮ್ಮ ಕುಲಧರ್ಮವನ್ನು ವಿಚಾರಿಸಿ ನಡೆಯಬೇಕಾಗಿತ್ತು, ತಾವು ಯಾವಕುಲದಲ್ಲಿ ಹುಟ್ಟಿರುತ್ತಾರೆಯೋ ಅದರಂತೆ ವರ್ತಿಸಬಾರದೇನು ?”

ಚಂಚಲೆ —“ನೀನು ಹೇಳುವದೆಲ್ಲ ಸರಿ, ಮೈಯಲ್ಲಿ ಶಕ್ತಿಯಿಲ್ಲದಿದ್ದರೆ ಪ್ರಸಂಗಬಂದಂತೆ ನಡೆಯಬೇಕಾಗುವದು, ಅಪ್ಪನು ಉಪಾಯವಿಲ್ಲದೆ ನನ್ನನ್ನು ದಿಲ್ಲಿಗೆ ಕಳಿಸಲೊಪ್ಪಿದನು. ಔರಂಗಜೇಬನೊಡನೆ ಕಾದುವಷ್ಟು ಶಕ್ತಿಯು ಆತನಲ್ಲಿ ಇದ್ದರೆ ಇಂಥ ಪ್ರಸಂಗವನ್ನು ಬರಗೊಡುತ್ತಿದ್ದಿಲ್ಲ. ಹಾಗಿಲ್ಲದ್ದರಿಂದಲೆ ರಾಜಸ್ಥಾನದೊಳಗಿನ ರಜಪೂತರನೇರು ಹ್ಯಾಗಿರುತ್ತದೆಂಬದನ್ನು ಔರಂಗಜೇಬನಿಗೆ ಪ್ರತ್ಯಕ್ಷ ನೋಡಬೇಕಾಯಿತು.”

ನಿರ್ಮಲೆ—"ಇಷ್ಟುಮಾತ್ರ ನಿಜ. ಈ ಸಂಗತಿಯುಂಟಾಗ ದಿದ್ದರೆ, ರಾಣಾನಕತ್ತಿಯು ಒರೆಯಿಂದ ಹೊರಬೀಳುತ್ತಿದ್ದಿಲ್ಲ. ಇಲ್ಲದಿದ್ದರೆ, ಈಹೊತ್ತಿನವರೆಗೆ ರಜಪೂತರು ಸ್ವಸ್ಥವಾಗಿ ಮಲಗಿಕೊಂಡಂತೆಯೆ ಇರಬೇಕಾಗುತ್ತಿತ್ತು, ಅವರು ಕತ್ತಿಯನ್ನು ಮೇಲಕ್ಕೆ ಎತ್ತುತ್ತಿರಲಿಲ್ಲ.

ಚಂಚಲೆ—"ಈ ಎಲ್ಲ ಸಂಗತಿಯೂ ಸರಳವಾಗಿ ಸಾಗಿಬಂದದ್ದಕ್ಕೆ ನನ್ನ ಅಣ್ಣ ಪ್ರತಾಪಸಿಂಹನೆ ಕಾರಣನು ಅಹಾ, ಏನು ಆತನ ಆ, ತೇಜಃಪುಂಜವಾದ ಮೂರ್ತಿ, ಆ ಸ್ವಾಭಿಮಾನ, ಆದೇಶಪ್ರೇಮ, ಆ ಸ್ವಜನರಲ್ಲಿ ಅಂತಃಕರಣ! ಆ ತನ್ನ ಕುಲಾಭಿಮಾನ! ಈ ಎಲ್ಲ ಸಂಗತಿಗಳನ್ನು ನೋಡಿದರೆ ನನಗೆ ಅತ್ಯಂತ ಆಶ್ಚರ್ಯವೆನಿಸುತ್ತದೆ ಬೆನ್ನಿಗ ಬಿದ್ದ ಅಣ್ಣನು ತಂಗಿಯ ಲಜ್ಜೆಯನ್ನು ಸಂರಕ್ಷಿಸುವವನಿದ್ದದರಿಂದ ಈ ಹೊತ್ತು ಇಂಥ ಈ ಸುದಿನವನ್ನು ಕಂಡೆವು ಇನ್ನು ಮೇಲಾದರೂ ನನ್ನ ಅಣ್ಣನು ಇದೇ ರೀತಿಯಿಂದ ನನ್ನನ್ನು ಸಂರಕ್ಷಿಸುತ್ತಿರಲೆಂದು ಈಶ್ವರನನ್ನು ಅನನ್ಯ ಭಾವದಿಂದ ಬೇಡಿಕೊಳ್ಳುವೆನು"

ಇಷ್ಟರಲ್ಲಿ ಪ್ರತಾಪಸಿಂಹನು ಅವರು ಕೂತಿರುವಸ್ಥಳವನ್ನು ಪ್ರವೇಶಿಸಿ—"ತಂಗೀ, ಸ್ವಲ್ಪವೂ ಸಂಶಯಗೊಳ್ಳಬೇಡ ಈ ಪ್ರತಾಪನ ಶರೀರದಲ್ಲಿ ಪ್ರಾಣವಿರುವ ವರೆಗೂ ತನ್ನ ತಂಗಿಯ ಸಂರಕ್ಷಣೆ ಮಾಡುವುದಕ್ಕೆ ತಿಲಮಾತ್ರವೂ ಹಿಂಜರಿಯುವದಿಲ್ಲ, ತಿಳಿಯಿತೆ?"

ಪ್ರತಾಪನ ಆಕಸ್ಮಿಕ ಆಗಮನವನ್ನು ಕಂಡು, ಚಂಚಲೆ ನಿರ್ಮಲೆಯರಿಗೆ ತೀರಆಶ್ಚರ್ಯವೆನಿಸಿತು, ಆಮೇಲ ಚಂಚಲೆಯು—"ಏನು ಚಮತ್ಕಾರವಿದು! ಈರೀತಿ ತಟ್ಟನೆ ಬಂದದ್ದಕ್ಕೆ ನಾವು ಹೆದರಿದೆವು! ಅಣ್ಣಾ! ಒಬ್ಬನೇ ಇರುವಿಯಲ್ಲ! ಅಪ್ಪನೆಲ್ಲಿರುವನು ?

"ಮತ್ತೂ ಯಾರು? ಮಹಾರಾಣಾನೆಂದು ತೋರುತ್ತದೆ ನಾನು ಇಲ್ಲಿ ಬಂದಕೂಡಲೆ ಆರತಿಯ ತಾಟು ದೃಷ್ಟಿಗೆ ಬಿತ್ತು. ಇಷ್ಟರಲ್ಲಿ ಇದರ ಸಿದ್ಧತೆ ಹ್ಯಾಗಾಯಿತು? ಇವರಿಗೆ ಸುದ್ದಿಯನ್ನು ಯಾರು ಹೇಳಿದರು? ಮತ್ತೂ ಇದೆಲ್ಲ ಯಾರಿಗೋಸುಗ? ಈ ವಿಚಾರದಲ್ಲಿಯೆ ನನ್ನ ತಲೆಯು

ಬೇಸತ್ತು ಹೋಗಿತ್ತು ಮೊದಲು ಇದರ ಮರ್ಮವೆ ಗೊತ್ತಾಗಲಿಲ್ಲ. ಈಗ ಸ್ವಲ್ಪ ತಿಳಿಯಿತು. ಇದೆಲ್ಲ ರಾಣಾನೊಬ್ಬನಿಗೇ ತೋರುತ್ತದೆ! ನಾನೇನೂ ಶ್ರಮಮಾಡಲಿಲ್ಲವೆ? ''

ಚಂಚಲ—''ಇದೇನು ಅಣ್ಣಾ! ಹೀಗೇಕೆ ಹೇಳುವಿ! ನೀನು ಶ್ರಮ ಮಾಡಲಿಲ್ಲೆಂದು ಯಾರು ಹೇಳುವರು! ನೀನು ಶ್ರಮಮಾಡದಿದ್ದರೆ ಇದೆಲ್ಲವೂ ಒದಗುತ್ತಿತ್ತೆ ? ಈ ಸರ್ವಾನಂದವು ನಿನ್ನ ಶ್ರಮದ ಫಲವಲ್ಲವೇನು? ''

ಪ್ರತಾಪ—'' ಮುಂದಿರುವ ಕಣ್ಣಿಗೆ ನೀರುಹಚ್ಚುವದನ್ನು ಯಾರಾದರೂ ಹೇಳಬೇಕಾಗಿದೆಯೆ? ಇದರಲ್ಲಿ ನೀನು ಜಾಣಳೆ ಇರುವಿ! ''

ಚಂಚಲೆ—'' ಅಣ್ಣಾ, ನಗೆಯಾದರೂ ಎಷ್ಟು? ''

ಪ್ರತಾಪ—''ನಗೆ ಯಂದರೆ ನಗ ಹಾಗಾದರೆ ಈಗಹೇಳು ಎಲ್ಲವೂನಿನ್ನ ಮನಸ್ಸಿನಂತೆಯೆ ಆಗಲಿಲ್ಲವ?''

ಚಂಚಲೆ—'' ನಿನ್ನಂಥ ಅಣ್ಣಾನಿದ್ದಮೇಲೆ ಮನಸಿನಂತ ಆಗಲಿಕ್ಕಿಲ್ಲೇನು? ''ಇಷ್ಟರಲ್ಲಿ ವಿಕ್ರಮಸಿಂಹನು ಬಂದನು ''ಮಗು, ಆತನಹೊರ್ತು ಬೇರೆಯಾರೂ ಇಲ್ಲವೆ ? ಅಣ್ಣನೆ ನಿನ್ನ ಮನಸಿನಂತೆ ಮಾಡುವವನು ನಾವುಮಾತ್ರ ನಿನ್ನ ವಿರುದ್ಧ, ಹೀಗ ಹೌದಲ್ಲೊ? '' ಎಂದು ಕೇಳಿದನು

ಚಂಚಲೆ—''ಇದೇನು, ಅಪ್ಪಾ, ಈರೀತಿ ಹೇಳುವಿರಿ? ನಿಮ್ಮ ಪುಣ್ಯ ಪ್ರತಾಪದಿಂದಲೆ ಇಂಥ ಸುದಿನವು ಬಂದಿದೆ ನಿಮ್ಮ ಪೂರ್ಣಆಶೀರ್ವಾದವನ್ನೆ ನಾನು ಯಾವಾಗಲು ಬೇಡುವೆನು ಎಂದು ವಿಕ್ರಮ ಸಿಂಹನ ಕಾಲಿಗೆರಗಿದಳು ವಿಕ್ರಮಸಿಂಹನು ಆಕೆಯನ್ನು ಹಿಡಿದೆತ್ತಿ ಅಪ್ಪಿಕೊಂಡನು ಇಷ್ಟರಲ್ಲಿ ರಾಜಸಿಂಹ, ಜಯಸಿಂಹ, ದುರ್ಗಾದಾಸ, ಮೊದಲಾದವರು ಒಬ್ಬರ ಹಿಂದೊಬ್ಬರು ಒಳಗೆ ಬಂದರು. ವಿಕ್ರಮಸಿಂಹನು ಮಗಳನ್ನು ಹಿಡಿದೆತ್ತಿ ಅಪ್ಪಿಕೊಂಡನು —'' ಬಾಳಾ, ನಿನಗೆ ಈಅಭಾಗ್ಯನ ಆಶೀರ್ವಾದವು ಯತ್ಕಿಂಚಿತವೂ ಬೇಡ, ಈಸ್ವಾಭಿಮಾನ ಶೂನ್ಯ ಹೃದಯವುಳ್ಳ ಮನುಷ್ಯನ ಆಶೀರ್ವಾದದಿಂದೇನು ಪ್ರಯೋಜನ ? ನಾನು

ರಾಣಾನಿಗೆ ಪತ್ರ ಬರೆದಾಗಲೆ ಅಲ್ಲದ್ದನ್ನು ಮಾಡಿದೆನೆಂದು, ಅರಿತುಕೊಂಡೆನು ಆಕಾಲಕ್ಕೆ ರಾಣಾನಕಾರ್ಯದ ಕಲ್ಪನೆಯೂ ನನಗೆ ಇರಲಿಲ್ಲ ಬಾಳಾ, ನೀನು ಬಯಸಿದ ವರವು ಈ ರಾಜಸ್ಥಾನದಲ್ಲಿಲ್ಲಾ, ಗೌರವವುಳ್ಳದು, ಆತನೊಡನೆ ಸುಖದಿಂದ ಅಖಂಡರಾಜ್ಯವನ್ನು ಅನುಭವಿಸು ಇದೇ ನನ್ನ ಆಶೀರ್ವಾದವು. '' ಆಮೇಲೆ ಚಂಚಲೆಯು ಎಲ್ಲರಿಗೂ ಆರತಿಮಾಡಿದಳು. ರಾಜಸಿಂಹನಿಗೆ ಆರತಿಮಾಡುವಕಾಲಕ್ಕೆ ಚಂಚಲೆಯ ಕಡೆಗಣ್ಣಿನ ಕಟಾಕ್ಷದಿಂದ ರಾಜಸಿಂಹನು ಧನ್ಯನಾದನು

## ೩೫ ನೆಯ ಪ್ರಕರಣ.

### ಗುಪ್ತವಾರ್ತೆಯ ಪರಿಸ್ಫೋಟ

ಈ ಮೊತ್ತಿನ ದಿವಸವು ರಾಜಸ್ಥಾನದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿರುವಂಥಾದ್ದು ರಾಜಸ್ಥಾನದ ರಜಪೂತರ ಮುಖದ ಮೇಲೆ ಒಂದು ಪ್ರಕಾರದ ತೇಜುವು ಮೂಡಿರುವದು

ಸಾಯಂಕಾಲದಸಮಯ ಸೂರ್ಯದೇವನು ಅಸ್ತಾಚಲಪರ್ವತದ ಕೋಡುಗಲ್ಲಿನಿಂದ ಮರೆಯಾಗುತ್ತಿದ್ದನು ಉದೇಪುರದ ರಾಣಾನ ಬೇರೊಂದು ಮಹಲಿನ ಮೇಲೆ ಒಂದುಕಿಡಿಕಿಯ ಹತ್ತರ ಒಬ್ಬತರುಣಿಯು ಸೃಷ್ಟಿಸೌಂದರ್ಯದ ಶೋಭೆಯನ್ನು ನಿರೀಕ್ಷಿಸುತ್ತ ನಿಂತಿದ್ದಳು. ಎದು

ರಿಗ ಅರವಲಿ ಪರ್ವತದ ಸಾಲು, ಆ ಸಾಲುಗಳ ಮೇಲಿನ ವನರಾಜಿ ಯನ್ನು ನೊಡಿ ಯಾರುತಾನೇ ಆಶ್ಚರ್ಯಚಕಿತರಾಗಲಿಕ್ಕಿಲ್ಲ ? ನಮ್ಮ ಸುಂದರಿಯೂ ಆ ವೃಕ್ಷಶ್ರೇಣಿಯ ಸೌಂದರ್ಯದ ಶೋಭಾರಾಶಿಯನ್ನು ಕಂಡು ಪರವಶಯಾಗುವದು ಸೋಜಿಗವಲ್ಲ ಈಶ ನಿರ್ಮಿತವಾದ ಪ್ರತಿಯೊಂದು ವಸ್ತುವನ್ನು ಸೂಕ್ಷ್ಮರೀತಿಯಿಂದ ನಿರೀಕ್ಷಿಸುವದರಿಂದ ಒಂದಿಲ್ಲೊಂದು ತರಹದ ಚಮತ್ಕಾರವು ಕಂಡೇಕಾಣುವದು. ಅದರಲ್ಲಿ ಅವಳ ಮನಸ್ಸು ತಲ್ಲೀನವಾದದ್ದು ಆಶ್ಚರ್ಯವಲ್ಲ ಸಪಾಟಪ್ರದೇಶದ ಮೇಲೆ ಒಂದಕ್ಕಿಂತ ಒಂದು ಹೆಚ್ಚು ಎತ್ತರವಾದ ಪರ್ವತಶ್ರೇಣಿಯು ಅಲ್ಲಲ್ಲಿಗೆ ಒಡೆದ ದೊಡ್ಡ ದೊಡ್ಡ ಒಂಡೆಗಳು , ಅಲ್ಲಲ್ಲಿ ನಾನಾತ ರದ ವೃಕ್ಷಗಳು, ಆನಿರ್ಜನ ಪ್ರದೇಶಸಲ್ಲಿ ಒಂದು ಝರಿಯು ಹರಿಯು ತ್ತಿತ್ತು ಒತ್ತಟ್ಟಿಗೆ ನೀರಿನ ಸಂಚಯವು ಸರೋವರದಂತೆ ಮನೋಹ ರವಾಗಿತ್ತು ಆ ಸರೋವರದಲ್ಲಿ ಆನಂದದಿಂದ ಕ್ರೀಡಿಸುವ ಹಂಸ, ಕ್ರೌಂಚ, ಮೊದಲಾದ ಪಕ್ಷಿಗಣವು ಮಧ್ಯದಲ್ಲಿ ನೀರಿನಮೇಲೆ ಮುಖವೆತ್ತಿ ತೆರೆಗಳಿಂದ ಅಲ್ಲಾಡುತ್ತಿರುವ ಪ್ರಫುಲ್ಲಿತವಾದ ಅನೇಕ ತರದ ಕಮಲಗಳು ಈ ಸೃಷ್ಟಿಸೌಂದರ್ಯವನ್ನು ಕಂಡು ಯಾನ ಮಾನವನು ಈಶ್ವರನ ಅಸ್ತಿ ತ್ವವನ್ನು ನಿಶ್ಚಯಿಸಲಿಕ್ಕಿಲ್ಲ ? ಮನುಷ್ಯನ ಮನಸಿಗ ಕ್ಷಣಕಾಲ ಆನಂದ ವನ್ನುಂಟುಮಾಡುವ ವಸ್ತುವು ತನ್ನಿಂದ ತಾನೇ ಉಂಟಾಗಿರಲಿಕ್ಕಿಲ್ಲ ಇದರೊಳಗೆ ಏನೋ ಒಂದು ಗೂಢವಿರುವದೆಂದು ಯಾವ ಜಾಣರು ಹೇಳಲಿಕ್ಕಿಲ್ಲ ?

ಈ ತರದ ಶೋಭಾರಾಶಿಯನ್ನು ನೋಡುವದರಲ್ಲಿ ಆ ತರುಣೀಮ ಣಿಯು ತಲ್ಲೀನಳಾಗಿರುವಳು ಅವಳಿಗೆ ತನ್ನ ದೇಹದ ಪರವೆ ಸಹಉಳಿ ದಿಲ್ಲ ಅವಳಹಿಂದ ಇಬ್ಬರು ಮನುಷ್ಯರು ಬಂದು ಅವಳ ಏಕಾರದ ಅಂ ಗಚೇಷ್ಟೆಗಳನ್ನು ನೋಡುತಿದ್ದರು ಅವಳಿಗೆ ತಿಲಮಾತ್ರವೂ ಗೊತ್ತಿಲ್ಲ. ಆಗಂತುಕ ವ್ಯಕ್ತಿಗಳು ಅವಳ ಲೀನತೆಗೆ ಅಡ್ಡಿಯನ್ನು ಮಾಡಲಿಲ್ಲ. ಆ ವ್ಯ ಕ್ತಿಗಳಿಬ್ಬರೂ ತಮತಮ್ಮೊಳಗೆ ಏನೋ ಸನ್ನೆಯನ್ನು ಮಾಡಹತ್ತಿದರು.

ಆಮೇಲೆ ಸಮೀಪದಲ್ಲಿರುವ ಆಸನದಮೇಲೆ ಕುಳಿತುಬಿಟ್ಟರು ಕೆಲಹೊತ್ತಿನಮೇಲೆ ಆ ಸುಂದರಿಯು ತನ್ನಷ್ಟಕ್ಕೆ—"ಈವರೆಗೆ ಆದದ್ದೆಲ್ಲ ಸರಿಯಾಯಿತು ವನಶ್ರೀಯ ಅವಲೋಕನದಲ್ಲಿ ತಲೆಮಟ್ಟ ಮುಳುಗಿ ಹೋಗಿದ್ದರೂ ಮನಸ್ಸಿಗೆ ತೃಪ್ತಿಯಿಲ್ಲ. ಈವರೆಗೆ ಅಪ್ಪನು ಒರಲಿಲ್ಲವೇಕೆ ? ತಪಸ್ವಿನೀ ಮಾತೆಯು ಈ ಕಾಲಕ್ಕೆ ನಿನ್ನ ತಾಯಿತಂದೆಗಳ ಸಂಗತಿಯನ್ನು ಹೇಳಿ ಅವರನ್ನು ತೋರಿಸಿಕೊಡುವೆನೆಂದು ಆಶ್ವಾಸಕೊಟ್ಟವಳು ಇನ್ನೂ ಬರಲಿಲ್ಲ " ಹೀಗಂದು ಆಕೆ ಮರಳಿನೋಡಿದಳು. ಪರಮಹಂಸ, ತಪಸ್ವಿನಿಯರು ಕುಳಿತುಕೊಂಡಿದ್ದರು ಅವರನ್ನು ಕಂಡು ಆವಳಿಗೆ ಆಶ್ಚರ್ಯವಾಯಿತು ಅದರೊಡನೆ ಸ್ವಲ್ಪ ಲಜ್ಜೆಯೂ ಉತ್ಪನ್ನವಾಯಿತು ಅವಳ ಬಾಯಿಂದ ಶಬ್ದಗಳು ಸಹ ಹೊರಡಲೊಲ್ಲವು. ಅದನ್ನು ಕಂಡು ಪರಮಹಂಸನು —"ಮಗಳೆ, ಇತ್ತಬಾ, ನೀನು ನಿನ್ನ ಮಾತಾಪಿತರನ್ನು ನೋಡುವದಕ್ಕೆ ಇಷ್ಟು ತತ್ಪರಳಾದದ್ದು ನನಗೆ ಈವರೆಗೂ ಗೊತ್ತಿರಲಿಲ್ಲ, ಈಹೊತ್ತು ನಿನ್ನ ಆತ್ಮಗತ ಸಂಭಾಷಣೆಯ ಮೇಲಿಂದ ತಿಳಿದುಕೊಂಡೆನು. ಅವರ ಭೆಟ್ಟಿಗಾಗಿ ಹಗಲು ರಾತ್ರಿಯೂ ಉತ್ಸುಕಳಾಗಿ ವ್ಯಸನಪಡುವಂತೆ ಕಾಣುತ್ತದೆ

ತರುಣಿ—"ಪಿತಾಜಿ, ನನಗೆ ಕೆಲಸವಿಲ್ಲದ ವೇಳೆಯಲ್ಲೆಲ್ಲಾ ಬಹಳ ಮಾಡಿ ಇದೇ ವಿಚಾರದಲ್ಲಿರುವೆನು. ನಾನು ಮೇಲೆಮೇಲೆ ಆನಂದವುಳ್ಳವಳಂತೆ ಕಾಣಿಸುತ್ತಿದ್ದಾಗ್ಯೂ ಅಂತರಂಗದಲ್ಲಿ ಇದೇ ವಿಚಾರವು ನೆಲೆಗೊಂಡಿರುತ್ತದೆ ನೀವು ವಚನ ಕೊಟ್ಟಂದಿನಿಂದಲೂ ಈಹೊತ್ತಿನ ದಿವಸವು ಎಂದು ಬರುವದೆಂತಲೆ ದಾರಿಯನ್ನು ನೋಡುತ್ತಿದ್ದನು ಅಹಾ, ಹಾ, ಮಾತೆ, ಮಾತೆ, ನಿನ್ನಪ್ರೇಮ ಪಾತ್ರಳಾದ ಈ ಬಾಲಿಕೆಯು ಒಂದಾವರ್ತಿ ಆತ್ಮಾರ್ಪಣ ಮಾಡುವದಕ್ಕೆ ಸಿದ್ಧಳಾಗಿದ್ದಳು. ಆದರೆ ತಪಸ್ವಿನೀ ಮಾತೆಯು ಆ ದಿವಸ ನನ್ನನ್ನು ಆತ್ಮಘಾತದಿಂದ ಪರಾವೃತ್ತಳನ್ನಾಗಿ ಮಾಡಿದಳು ಆಹೊತ್ತಿನಿಂದಲೂ ತಾಯಿತಂದೆಗಳನ್ನು ಸ್ಮರಿಸುತ್ತಿರುವೆನು. ಅಪ್ಪಾ, ಈ ಹೊತ್ತಿನವರೆಗೆ ತಮ್ಮನ್ನು ತಂದೆಯಂತೆಯೇ ಭಾವಿಸುತ್ತಿದ್ದೆನು!

ಮಾತಾಜಿ, ನಿಮ್ಮನ್ನು ಮಾತೆಯಂತೆ ತಿಳಿದಿರುತ್ತೇನೆ ನೀವು ನನ್ನ ತಾಯಿ ತಂದೆಗಳನ್ನು ತೋರಿಸತಕ್ಕವರು ಅವರು ನನ್ನ ಜನ್ಮದಾತೃಗಳು. ನೀವು ನನ್ನ ಧರ್ಮದ ಮಾತಾಪಿತರರು ನನಗೆ ಒಮ್ಮೆ ಅವರನ್ನು ತೋರಿಸಿರಿ ನನ್ನಿಂದ ಹೆಚ್ಚು ಹೊತ್ತು ತಡೆಯಲಿಕ್ಕಾಗದು.''

ಈವರೆಗೆ ಪತಸ್ವಿನಿಯು ಸ್ವಸ್ಥವಾಗಿ ಕುಳಿತಿದ್ದಳು. ಇನ್ನು ಮೇಲೆ ಅವಳ ಮನಸ್ಸು ತಡೆಯದಂತಾಯಿತು ಎದ್ದು ಒಂದು ಆ ಪ್ರೇಮ ನಂದಿನಿಯನ್ನು ದೃಢವಾಗಿ ಆಲಿಂಗಿಸಿಕೊಂಡು ಅತ್ಯಂತಕಾತರಸ್ವರದಿಂದ—

"ಮಗಳೆ, ಇವಳೇ ನಿನ್ನ ಅಭಾಗಿನಿಯಾದ ತಾಯಿಯು. ಈಹೊತ್ತಿನವರೆಗೆ ಈ ಚಂಡಾಲಿನಿಯು ನಿನ್ನ ಅಂತಃಕರಣವನ್ನು ನೋಡಿದಳು. ಮನಸ್ಸು ಕಲ್ಲುಮಾಡಿಕೊಂಡು ನಿನ್ನನ್ನು ಗೊಂದಲದಲ್ಲಿ ಕೆಡವಿದಳು. ಇದಕ್ಕೋಸುಗ ಅತ್ಯಂತ ಪಶ್ಚಾತ್ತಾಪವೆನಿಸುತ್ತದೆ ಬಾಳಾ, ಈ ಹೊತ್ತು ನಾನು ಕೃತಕೃತ್ಯಳಾದೆನು.'' ಎಂದಳು.

ತರುಣಿ—"ಏನು, ದೇವಿ, ನೀನು ನನ್ನ ತಾಯಿಯೆ ? ಹಾಗಾದರೆ ಈ ಅಭಾಗಿನಿಗೆ 'ನಾನೇ ನಿನ್ನ ತಾಯಿಯೆಂದು ಈವರೆಗೆ ಯಾಕೆ ಹೇಳಲಿಲ್ಲ ? ''

ಮಾತೆ, ಅಹಹಾ, ಮಾತೆ, ನಾನು ಧನ್ಯಧನ್ಯಳು, ದೇವಾ, ನನ್ನ ಬಯಕೆಯನ್ನು ಪೂರ್ಣಗೊಳಿಸಿದಿ ಒಳ್ಳೇದು ತಾಯಿ, ತಾತನೆಲ್ಲಿರುವನು,?'' ಎಂದು ಪರಮಹಂಸನ ಕಡೆಗೆ ಆಶ್ಚರ್ಯ ಯುಕ್ತದೃಷ್ಟಿಯಿಂದ ನೋಡ ಹತ್ತಿದಳು. ಇನ್ನು ಮೇಲೆ ಇವಳನ್ನು ಸಂಶಯದಲ್ಲಿರಿಸುವದು ಒಳಿತಲ್ಲವೆಂದು ಪರಮಹಂಸನು ಮುಂದಕ್ಕೆ ಬಂದು—"ಬಾ, ಮಗಳೆ, ನಾನೇ ನಿನ್ನ ಅಭಾಗಿಯಾದ ತಂದೆಯು; ಕೂಡಲೆ ಆ ತರುಣಿಯು "ಅಪ್ಪಾ, ಅಪ್ಪಾ,'' ಎಂದು ಪರಮಹಂಸನನ್ನು ಅಪ್ಪಿಕೊಂಡಳು. ಆಮೇಲೆ 'ಅಪ್ಪಾ, ಅಪ್ಪಾ, ನೀವು ನನ್ನ ಮನಸನ್ನು ಎಷ್ಟು ನೋಡಿದಿರಿ,? ಇಷ್ಟು ವರ್ಷಗಳವರೆಗೆ ನಾನು ನಿಮ್ಮ ಸಹವಾಸದಲ್ಲಿದ್ದು, ನಾನು ನಿಮ್ಮನ್ನು ತಿಳಿಯಲಿಲ್ಲ. ನಾನೆಂಥ ಮೂರ್ಖಳು ನಿಮ್ಮ ಮೋಹಮಮತೆಗಳು ನಿಜವಾದ

ತಾಯಿ ತಂದೆಗಳಿಗೆ ಶೋಭಿಸುವಂಥವುಗಳಿದ್ದವು. ಹೀಗಿದ್ದು ತಿಳಿಯಬಾರದೆಂದರೆ ನನ್ನ ದುರ್ಭಾಗ್ಯವಲ್ಲವೇನು ? ಅಪ್ಪ ಅವ್ವ ಇನ್ನುಮೇಲೆ ಮಾತ್ರ ನನ್ನನ್ನು ಅಗಲಬೇಡಿರಿ. ''

ತಪಸ್ವಿನಿ—''ಮಗಳೆ, ಇನ್ನುಮೇಲೆ ನಿನ್ನನ್ನು ಬಿಡುವದಿಲ್ಲ'' ಎಂದು ಪುನಃ ಆಲಿಂಗಿಸಿದಳು.

ಇಷ್ಟರಲ್ಲಿ ಪ್ರತಾಪಸಿಂಹನು ಅಲ್ಲಿಗೆ ಬಂದನು. ಇದೆಲ್ಲವನ್ನು ಕಂಡು, ಆಶ್ಚರ್ಯಚಕಿತನಾದನು ರಾಣಿಯು ತಟ್ಟನೆ—ಪ್ರತಾಪರಾಯಾ ಇವರನ್ನು ನೀನು ಗುರ್ತಿಸಿದೆಯೊ? ಪ್ರತಾಪ—''ಹೀಗೆಂದರೇನು? ಗುರುವರ್ಯ ಪರಮಹಂಸರನ್ನೂ ಮಾತಾ ತಪಸ್ವಿನಿಯನ್ನೂ ಪುನಃ ಬೇರೆ ಗುರ್ತಿಸಬೇಕಾಗಿದೆಯೊ? ''

ಪರಮಹಂಸ—''ಮಗನೆ, ನಾನು ಮೊದಲಿನ ಪರಮಹಂಸನಲ್ಲ. ಈಹೊತ್ತಿನಿಂದ ನಾನು ವೀರಪುರದ ಠಾಕುರ ಚಾಮುಂಡರಾಯ, ತಪಸ್ವಿನಿಯು ನನ್ನ ಧರ್ಮಪತ್ನಿಯು, ಮಹಾರಾಣಿಯು ನನ್ನ ಮಗಳಾದ ಚಂಪಕಕಲಿಕೆಯು. ''

ಪ್ರತಾಪ—''ಹಾಗಾದರೆ ಸ್ವಾಮಿ, ಈವರೆಗೆ ಇದನ್ನು ಗುಪ್ತವಿಡಲಿಕ್ಕೇನು ಕಾರಣ? ''

ಚಾಮುಂಡರಾಯ—''ಕಾರಣವು ಮಹತ್ವವಾದದ್ದು. ಅಂತೇ ಈವರೆಗೆ ಗುಪ್ತವಾಗಿ ಇಟ್ಟಿದ್ದೆನು ಔರಂಗಜೇಬನಸೇನಾಪತಿಯಾದ ಜಯಸಿಂಹನು ನಮ್ಮ ವೀರಪುರದ ಮೇಲೆ ಹಲ್ಲಾಮಾಡಿ ನಮ್ಮನ್ನು ದೇಶದಮೇಲೆ ಅಟ್ಟಿದನು ನನ್ನಹೆಂಡತಿಯನ್ನೂ ಮಗಳನ್ನೂ ಅಗಲಿಸಿದನು. ಅದಕ್ಕಾಗಿ ಹೊತ್ತು ಸಾಧಿಸಿ ಸೇಡುತೀರಿಸಿಕೊಳ್ಳಬೇಕೆಂದು ಸಂಕಲ್ಪವನ್ನು ಮಾಡಿದೆನು. ಸಂಕಲ್ಪದಂತೆ ಕಾರ್ಯವನ್ನು ಆರಂಭಿಸಿದೆನು. ಆಕಾಲಕ್ಕೆ ಈ ನನ್ನ ಕನ್ನೆಯು ಆಕಸ್ಮಾತ್ತಾಗಿ ಭೆಟ್ಟಿಯಾದಳು. ಇವಳು ಸಣ್ಣವಳಿದ್ದದರಿಂದ ನನ್ನ ಗುರ್ತು ಇವಳಿಗೆ ಹತ್ತಲಿಲ್ಲ. ನಾನು ಪ್ರೀತಿಯ ನನ್ನ ಮೋಹಕನ್ನಿಕೆಯಂದರಿತು ಕೊಂಡೆನು ಆಮೇಲೆ ನನ್ನ ಒಳಿಯಲ್ಲಿಟ್ಟುಕೊಂಡು ಈಕೂ

ಸನ್ನು ಬೆಳೆಸಿದೆನು. ಕೆಲಕಾಲದಮೇಲೆ ದೈವಗತಿಯ ವಿಚಿತ್ರಕ್ರಿಯೆಯಿಂದ ಪರಮಪಾವನೆಯಾದ ಪತ್ನಿಯೂ ದೊರೆದಳು. ಅಂದಿನಿಂದ ನಾವಿಬ್ಬರೂ ಈ ಬಾಲಿಕೆಗೆ ನಮ್ಮ ಪರಿಚಯವನ್ನು ಕೊಡದೆ ಈಕೆಯ ಕೈಯಿಂದ ದೇಶಹಿತದ ಕಾರ್ಯವನ್ನು ಕೊನೆಗಾಣಿಸಬೇಕೆಂದು ನಿಶ್ಚಯಿಸಿದೆವು. ಯಾಕೆಂದರೆ ಸ್ತ್ರೀಯರ ಧೈರ್ಯವನ್ನು ಕಂಡು ಭೀರುಗಳಾದ ಪುರುಷರೂ ಎದೆಗೊಟ್ಟು ಕಾದುವರು, ಅಂತೆ ಇವಳನ್ನು ರಾಜ್ಞೀಪದಕ್ಕೆ ನೇಮಿಸಿದ್ದೆನು ಮುಂದೆ ನಡೆದದ್ದೆಲ್ಲಾ ನಿನಗೆಗೊತ್ತಿದೆ ಮೊನ್ನಿನ ದಿವಸ ನಾವು ಮೊಗಲರ ಬಂದಿಯುವರಾದೆವು. ನಮ್ಮ ಆಶೆಯು ಅಲ್ಲಿಂದಲ್ಲೇ ನಾಶವಾಯಿತು. ಇನ್ನು ಮೇಲೆ ಮಗಳ ಮುಖದರ್ಶನವಾಗುವದಿಲ್ಲೆಂದು ಪೂರ್ಣವಾಗಿ ನಂಬಿದೆವು ನಮ್ಮಯಾವತ್ತು ಮನೋಬಯಕೆಯು ಈಹೊತ್ತಿಗೆ ಹಾಳಾಯಿತಂದು ತಿಳುಕೊಂಡೆವು. ಧರ್ಮದಕಡೆಗೆ ದೇವರು ಇದ್ದೇ ಇರುತ್ತಾನೆ. ಆಮೇಲೆ ನಿನ್ನ ಅಲೌಕಿಕ ಪರಾಕ್ರಮದಿಂದ ನಮ್ಮ ಆಶೆಯು ಪುನ ಪ್ರಜ್ವಲಿತವಾಯಿತು. ಬಾಳಾ, ನೀನು ಧನ್ಯನು ತಾಯಿತಂದೆಗಳ ಹೊಟ್ಟೆಯಲ್ಲಿ ನಿನ್ನಂಥ ಪುತ್ರರತ್ನರು ಹುಟ್ಟಬೇಕೆಂದು ನಾನು ಈಶ್ವರನನ್ನು ಪ್ರಾರ್ಥಿಸುತ್ತೇನೆ.

## ೩೭ ನೆಯ ಪ್ರಕರಣ.

### ಇಷ್ಟಲಾಭ.

ಈಹೊತ್ತು ಉದೇಪುರದಲ್ಲಿ ಎತ್ತನೊಡಿದತ್ತ ಆನಂದಮಯವಾಗಿದೆ! ಪ್ರತಿಯೊಬ್ಬರ ಮುಖವು ಆನಂದದಿಂದ ತುಂಬಿಹೋಗಿದೆ. ರಜಪೂತರ ವೃತ್ತಿಯು ಉತ್ಸಾಹಯುಕ್ತವಾಗಿದೆ. ಹಬ್ಬದ ದಿವಸದಂತೆ ನಗರರ ಆಬಾಲವೃದ್ಧರು ಈಹೊತ್ತಿನದಿವಸ ಉತ್ತಮೋತ್ತಮ ಆಭರಣಗಳಿಂದ ಭೂಷಿತರಾಗಿರುವರು. ಮಿಷ್ಟಾನ್ನದಿಂದ ತೃಪ್ತರಾಗಿರುವ. ಕೆಲವರು

ಕುಸುಂಬೆಯನ್ನು ಪಾನಮಾಡುತ್ತಿರುವರು ಕೆಲವರು ಅಫುಸೇವನದಲ್ಲಿ ದುಂದಾಗಿರುವರು ಕೆಲವರು ಬೇರೆಏನೇನೋ ಉದ್ಯೋಗಗಳಲ್ಲಿ ಪರವಶರಾಗಿ ಹೋಗಿರುತ್ತಾರೆ

ರಾಜವಾಡೆಯಲ್ಲಿ ವಿಲಕ್ಷಣಶೋಭೆಯು ಪರಿಶೋಭಿಸುತ್ತಿದೆ ಓಲಗದ ದಿವಾಣಖಾನೆಯಲ್ಲಿ ರಜಪೂತ ವೀರರ ಗುಂಪಿಗೆ ಗುಂಪು ಪ್ರವೇಶಿಸಿರುತ್ತಿದೆ ಯುದ್ಧಕ್ಕೆ ಬಂದ ರಜಪೂತ ಕುಟುಂಬದವರನ್ನೂ, ಯುದ್ಧದಲ್ಲಿ ಗಾಯಪಟ್ಟವೀರರನ್ನೂ, ಅಪ್ರತಿಮ ಪರಾಕ್ರಮಿಗಳನ್ನೂ, ಪರಾಮರ್ಶಿಸುವದಕ್ಕೋಸುಗ ಈಹೊತ್ತಿನ ಸಭೆಯು ನೆರೆದಿತ್ತು ಹೊತ್ತಾದಂತೆ ಒಡ್ಡೋಲಗದ ದಿವಾಣಖಾನೆಯು ತುಂಬಿಹೋಯಿತು ಸಭೆಯಲ್ಲಿ ಸರದಾರರೂ ಮಾಂಡಲಿಕರೂ, ಇತರ ಮುತ್ಸದ್ದಿಗಳೂ, ಪ್ರತಾಪ, ಪರಮಹಂಸ, ವಿಕ್ರಮಸಿಂಹ, ತಪಸ್ವಿನಿ ಮೊದಲಾದವರೆಲ್ಲರು, ತಮ್ಮ ತಮ್ಮ ಆಸನದಮೇಲೆ ವಿರಾಜಮಾನರಾಗಿರುತ್ತಾರೆ ಮಧ್ಯಭಾಗದಲ್ಲಿ ರಾಜಸಿಂಹನ ಸಿಂಹಾಸನವನ್ನು ಮಂಡಿಸಿದ್ದರು ಅದು ಈವರೆಗೆ ತೆರವಾಗಿತ್ತು ಮಗ್ಗಲಿಗೆ ತರೆಯಲ್ಲಿ ಚಂಪಕಕಲಿಕೆ, ಚಂಚಲಕುಮಾರಿ, ನಿರ್ಮಲೆ, ಮೊದಲಾದ ರಾಜಸ್ತ್ರೀಯರು ಕುಳಿತಿದ್ದರು ಕೆಲಹೊತ್ತಿನಮೇಲೆ ರಾಜಸಿಂಹನು ಬಂದನು ಎಲ್ಲರೂ ಎದ್ದುನಿಂತು ಅವನ ಸ್ವಾಗತವನ್ನು ಮಾಡಿದರು. ರಾಜಸಿಂಹನು ಆಸನದ ಮೇಲೆ ಕುಳಿತು —

"ವೀರರೆ, ಈಹೊತ್ತಿನ ಈ ಆನಂದದಾಯಕ ಪ್ರಸಂಗವು ಇಷ್ಟು ಬೇಗನೆ ಬರಬಹುದೆಂದು ನನಗೆ ತಿಳಿದಿರಲಿಲ್ಲ ಆದರೆ ಈಶ್ವರನ ಚಿತ್ತಕ್ಕೆ ಬಂದರೆ ಯಾವದು ತಾನೆ ಅಸಾಧ್ಯವು? ಈಹೊತ್ತಿನ ಪ್ರಸಂಗದಿಂದ ನಮ್ಮ ರಾಜಸ್ಥಾನದ ಮುಖವು ಉಜ್ವಲವಾಗಿದೆ ತರೆಯಲ್ಲಿರುವ ಮಹಾರಾಣಿಯು ಇದಕ್ಕೆ ಕಾರಣೀಭೂತಳು ಆಕೆಯ ತಂದೆಯಾದ ಪರಮಹಂಸನು ಅಥವಾ ಚಾಮುಂಡರಾಯನು ಆತನ ಪತ್ನಿಯಾದ ತಪಸ್ವಿನಿಯು ಇವರ ಪ್ರಯತ್ನವೇ ಇದಕ್ಕೆ ಮೂಲಾಧಾರವು. ಇವರ ಅನಿವಾರ ಪ್ರಯತ್ನದಿಂದಲೂ, ಅಗಾಧವಾದ ದೇಶಸೇವೆಯ ವ್ರತದಿಂದಲೂ, ಸ್ವಾರ್ಥವಾದ

ಯುಕ್ತ ಅಂತಃಕರಣದಿಂದಲೂ, ಈಹೊತ್ತಿನ ಈ ಆನಂದದ ದಿವಸವನ್ನು ಕಂಡೆವು ವೀರಪ್ರತಾಪ ಸೋಳಂಖಿಯಂಥ ದೇಶಾಭಿಮಾನಿಯೂ, ಸ್ವಜಾತಿಯಶ್ರೇಷ್ಠತೆಯ ಸಂರಕ್ಷಕನೂ, ಆದ ಆ ಮಹಾವೀರನ ಅನಿವಾರ ಪರಾಕ್ರಮದಫಲದಿಂದಲೇ ಈಹೊತ್ತಿನ ಸುಯೋಗವು ಪ್ರಾಪ್ತವಾಯಿತು ಮತ್ತು ಮುಂಜಾಗ್ರತೆಯುಳ್ಳ ಮಹನೀಯನಾದ ವಿಕ್ರಮಸಿಂಹನು ಯೋಗ್ಯಸಮಯಕ್ಕೆ ನಮಗೆ ಸಹಾಯ ಮಾಡದಿದ್ದರೆ ನಮ್ಮ ಕೆಲಸವೂ ನಿಷ್ಫಲವಾಗುವ ಸಂಭವವಿತ್ತು ಇವರೆಲ್ಲರ ಅಸಾಧಾರಣ ಪರಿಶ್ರಮದಿಂದ ಔರಂಗಜೇಬನಂಥ ಅತ್ಯದ್ಭುತ ಸೇನಾ ಸಂಸಾರವುಳ್ಳ ಸಮ್ರಾಟನನ್ನು ಹಿಂದಕ್ಕೆ ದೂಡಿದೆವು, ಇಲ್ಲದಿದ್ದರೆ ಈ ಆನಂದದ ಸುಸಮಯವನ್ನು ಕಾಣುವದಾಗುತ್ತಿದ್ದಿಲ್ಲ, ನಮ್ಮ ದೇಶವು ಹಾಳಾಗಿ ಹೋಗುತ್ತಿತ್ತು ಮೊಗಲರ ಬಲಾತ್ಕಾರವು ಅತಿಯಾಗುತ್ತಿತ್ತು ಇದಲ್ಲದೆ ಮುಖ್ಯಕಾರಣರಾದ ಈ ಚಾಮುಂಡರಾಯರ ಆಭಾರವನ್ನು ಮನ್ನಿಸುವದು, ನಮ್ಮೆಲ್ಲರಿಗೂ ಅವಶ್ಯವಾದದ್ದು—ಕೂಡಲೆ, ' ಪರಮಹಂಸ ಚಾಮುಂಡರಾಜಕಿಜಯ ' ಎಂಬ ಧ್ವನಿಯು ಹುಟ್ಟಿಗೊಂಡಿತು ಸ್ವಲ್ಪ ಶಾಂತತೆಯಾದಮೇಲೆ ಪುನಃ ರಾಜಸಿಂಹನು—'ವೀರಚಾಮುಂಡರಾಯನ ಮೇಲೆ ಔರಂಗಜೇಬನ ಸೇನಾಪತಿಯಾದ ಜಯಸಿಂಹ, ಅಂಬರಾಧಿಪತಿಯು, ಹಲ್ಲಾಮಾಡಿ ಆತನ ಸರ್ವಸ್ವವನ್ನೂ ಸೂರೆಗೊಂಡನು ಆಯುದ್ಧದಲ್ಲಿ ತಾಯಿ, ತಂದೆ, ಮಕ್ಕಳ ಅಗಲಿಕೆಯುಂಟಾಯಿತು ಅಂದಿನಿಂದಲೂ, ಮೊದಲು ತಮ್ಮಮೇಲೆ ಮಾಡಿದ ಬಲಾತ್ಕಾರದ ಸೇಡು ತೀರಿಸಿಕೊಳ್ಳುವದಕ್ಕೆ ಸಲುವಾಗಿ ಈಗು ಪ್ತವೀರರ ಸಂಘವನ್ನು ಸ್ಥಾಪಿಸಿ, ಸಹಸ್ರಾವಧಿ, ಸೇನೆಯನ್ನು ಕೂಡಿಸಿದರು ಅದೇ ಈಹೊತ್ತು ರಾಜಸ್ಥಾನದ ಉದ್ಧಾರದ ಉಪಯೋಗಕ್ಕೆ ಬಂತು ಅವರನ್ನು ಮನ್ನಿಸುವದು ಅವಶ್ಯವಾದದ್ದು. ಅದೇಕೆಲಸವನ್ನು ನಾನು ಮೊದಲು ಕೈಕೊಳ್ಳುತ್ತೇನೆ'' ಎಂದು, ಆಯಾವತ್ತು ವೀರಸೇನಾಸಮೂಹಕ್ಕೆ ಅಮೂಲ್ಯವಸ್ತ್ರಾಭರಣಗಳನ್ನು ಸಮರ್ಪಿಸಿದನು ಆಮೇಲ ಯುದ್ಧದಲ್ಲಿ ಸತ್ತವರ ಕುಟುಂಬದವರಿಗೂ, ಗಾಯಪಟ್ಟವರಿಗೂ, ವಿಶೇಷ

ದ್ರವ್ಯವನ್ನು ಕೊಟ್ಟನು ಆಮೇಲೆ ವಿಕ್ರಮಸಿಂಹನು ಎದ್ದುನಿಂತು, "ವೀರರೆ, ನಾನೊಬ್ಬ ಅಭಿಮಾನ ಶೂನ್ಯನಾಗಿ ವಿಷಯೋಪಭೋಗದಲ್ಲಿ ಹೊರಳಾಡುವ ನರಾಧಮನು, ಮೊಗಲರ ಕೈಕಾಲುಹಿಡಿದು ನನ್ನ ಐಶ್ವರ್ಯವನ್ನು ಸಂರಕ್ಷಿಸುತ್ತಿದ್ದೆನು ನನ್ನಲ್ಲಿಯ ರಜಪೂತತ್ವವು ಹೂರಟು ಹೋಗಿತ್ತು ಮೊಗಲರ ದಾಸನಾಗಿದ್ದೆನು ಅವರ ತಂತ್ರದಂತೆ ನಡೆಯದಿದ್ದರೆ ಯಾವಂಗ್ಗ ಏನಾಗುವದೆಂಬ ಭೀತಿಯು ನನ್ನಲ್ಲಿ ಮನೆಮಾಡಿಕೊಂಡಿತ್ತು ಆ ಮಹತ್ತರವಾದ ನನ್ನ ಭೀತಿಯನ್ನೂ ನನ್ನ ಪರತಂತ್ರವನ್ನೂ ಈ ಮಹಾರಾಣಾನು ಇಲ್ಲದಂತೆ ಮಾಡಿದನು ನನ್ನ ಮಗಳನ್ನು ಮೊಗಲರ ಕೈಯಿಂದ ಬಿಡಿಸಿದನು ನನ್ನ ಸ್ನೇಹದಕುಮಾರನಾದ ಪ್ರತಾಪನ ಮಾತು ಕೇಳದೆ ಕುಲಕ್ಕ ಕಲಂಕತರುವ ಉದ್ಯೋಗಕ್ಕ ಉದ್ಯುಕ್ತನಾಗಿದ್ದೆನು. ಮಹಾರಾಣಾನು ಮುಂದಾಳಾಗಿ ಆ ಅಪಮಾನದ ಸ್ಥಿತಿಯೊಳಗಿಂದ ನನ್ನನ್ನು ರಕ್ಷಿಸಿದನು ಅದಕ್ಕಾಗಿ ನನ್ನ ಮಗಳಾದ ಚಂಚಲಕುಮಾರಿಯನ್ನು ಆತನಿಗ ಅರ್ಪಿಸುತ್ತೇನೆ ಮಹಾರಾಣಾನು ನನ್ನ ಅರ್ಪಣೆಯನ್ನು ಸ್ವೀಕರಿಸಬೇಕೆಂದು ಬೇಡಿಕೊಳ್ಳುತ್ತೇನೆ " ಅದರೊಡನೆ 'ಜಯಮಹಾರಾಣಾಜಿಕಿಜಯ, ಎಂದು ಜನಸಮುದಾಯವೆಲ್ಲವೂ, ಗರ್ಜಿಸತೊಡಗಿತು ಆಮೇಲ ಪರಮಹಂಸನು ಎದ್ದುನಿಂತು, "ವೀರರೆ ಈಹೊತ್ತಿಗೆ ನನ್ನ ಕರ್ತವ್ಯವು ತೀರಿಹೋಯಿತು ನನ್ನ ವ್ರತವು ಈಡೇರಿತು, ನನ್ನ ಗುಪ್ತವೀರ ಸಂಘದ ಮಾಲೆಯನ್ನು ಈಹೊತ್ತಿನಿಂದ ಮಹಾರಾಣಾರಾಜಸಿಂಹನ ಕೊರಳಿನಲ್ಲಿ ಹಾಕುತ್ತೇನೆ, ಮತ್ತು ನನ್ನ ಮಗಳಾದ ಚಂಪಕ ಕಲಿಕೆಯನ್ನು ವಿಕ್ರಮಸಿಂಹನು ಅನುಮತಿಯನ್ನು ಕೊಟ್ಟರೆ ಕುಮಾರ ಪ್ರತಾಪಸಿಂಹನಿಗೆ ಕೊಡಬೇಕೆಂದಿರುತ್ತೇನೆ ವಿಕ್ರಮಸಿಂಹನು ನಮ್ಮನ್ನು ಉಡಿಯಲ್ಲಿ ತಕ್ಕೊಂಡು ಪವಿತ್ರರನ್ನಾಗಿ ಮಾಡುವನೆಂದು ಆಶಿಸುತ್ತೇನೆಂದು ಹೇಳಿದನು ಅದಕ್ಕ ವಿಕ್ರಮಸಿಂಹನ ಅನುಮತಿಯೂ ದೊರೆಯಿತು ಕಡೆಗೆ ರಾಜಸಿಂಹನು ಎದ್ದು—"ವೀರರೆ, ಎಲ್ಲರಮನಸ್ಸಿನಂತೆಯೂ ಯೋಗವು ಕೂಡಿ ಬಂದಿರುತ್ತದ ಒಬ್ಬವೀರನ ಸನ್ಮಾನಮಾಡುವದು ಮಾತ್ರ ಇನ್ನೂ ಉಳಿದಿದೆ.

ಆ ವೀರನು ಈ ನಮ್ಮ 'ಜಯಸಿಂಹನು' ಆತನ ಪರಾಕ್ರಮವು ನಿಮ್ಮೆಲ್ಲ ರಿಗೆ ಗೊತ್ತಿರುವದು ಆತನ ಧೈರ್ಯವು ಅವರ್ಣನೀಯವಾದದ್ದು ನೀಚ ಉದ್ಯೋಗವನ್ನು ಕೈಕೊಂಡವನು ಆಕಲ್ಪಿತಯೋಗದಿಂದ ಅದನ್ನು ಪರಿ ತ್ಯಜಿಸಿ, ಈಹೊತ್ತು ನನ್ನ ಸೇನಾಪತಿಯಾಗಿರುತ್ತಾನೆ ಆತನು ನನಗೆ ಎಷ್ಟೋ ಆನಂದವನ್ನುಂಟುಮಾಡಿರುವನು. ವಿಕ್ರಮಸಿಂಹನ ಅನುಮ ತಿಯು ದೊರೆತರೆ ತನ್ನ ಹೊಟ್ಟೆಯ ಮಗಳಂತೆ ಸಲಹಿದ ಆತನ ಸರದಾರನ ಮಗಳಾದ ನಿರ್ಮಲಕುಮಾರಿಯನ್ನು ವಿಜಯಸಿಂಹನಿಗೆ ಅರ್ಪಿಸಬೇಕೆಂದು ಇಚ್ಛಿಸುತ್ತೇನೆ" ಎಂದನು

ವಿಕ್ರಮಸಿಂಹ—"ಎಲ್ಲರ ಮನಸಿನಂತೆ ಯಾವತ್ತು ಸಂಗತಿಗಳು ಕೂಡಿ ಒಂದಿರುತ್ತವೆ ಇನ್ನು ಮೇಲೆ ನನ್ನ ವೃದ್ಧಾಪ್ಯಕಾಲವು ಸಮೀಪಿ ಸಿತು. ರಾಜಸಿಂಹನ ಇಚ್ಛೆಯು ನನಗೆ ಪೂರ್ಣವಾಗಿ ಮಾನ್ಯವದೆ, ಆದ್ದ ರಿಂದ ಬೇಗನೆ ಪ್ರತಾಪನನ್ನು ರೂಪನಗರದ ಗಾದಿಯಮೇಲೆ ಕೂಡ್ರಿಸಬೇ ಕೆಂದು ಬಯಸುತ್ತೇನೆ ಈಶ್ವರನು ಎಲ್ಲರಿಗೂ ಕಲ್ಯಾಣಮಾಡಲಿ,"

ರಾಜ—"ತಥಾಸ್ತು"

ಸಭೆಯ ಕೆಲಸವು ತೀರಿತು ರಜಪೂತ ವೀರರು 'ಮಹಾರಾಣಾರಾ ಜಕಿಜಯ' ಎಂದು ಗರ್ಜಿಸುತ್ತ ಮನೆಗಳಿಗೆ ಹೊರಟುಹೋದರು ರಣೋ ತ್ಸವವು ಪೂರ್ತಿಯಾಯಿತು ಎತ್ತನೋಡಿದತ್ತ ಮದನೋತ್ಸವದ ಉತ್ಸುಕ ತೆಯು ಕಂಡು ಬರುತ್ತದೆ

## ೩೭ ನೆಯ ಪ್ರಕರಣ

### ಪರ್ಯವಸಾನ.

ವಿವಾಹಕಾರ್ಯವು ಮುಗಿಯಿತು ಈಯುದ್ಧದಿಂದ ರಾಜಸ್ಥಾನ ದಲ್ಲಿ ರಾಜಸಿಂಹನ ದೊಡ್ಡಸ್ತನವು ಹೆಚ್ಚಾಯಿತು ರಾಜಸಿಂಹನು ತನ್ನ ಕುಲದೊಳಗಿನ ಶ್ರೇಷ್ಠಮನೆತನದ ಮಾನಸೀಯನೆಂದು ತಿಳಿಯುತ್ತಿದ್ದರು

ಆದಕ್ಕೆ ಸರಿಯಾಗಿ ತನ್ನ ಪೂರ್ವಜರಂತೆ ಆತನಲ್ಲಿ ಶೌರ್ಯವೂ ನೆಲೆಗೊಂಡಿತ್ತು ಈರೀತಿಯಾಗಿ ಎಲ್ಲ ರಜಪೂತರಿಗೆ ತಿಳಿದೊಡನೆಯೆ ಆತನಿಗೆ ವಿಶೇಷ ಮಾನ ದೊರೆಯುಹತ್ತಿತು ಇದರ ಪರಿಣಾಮವು ಔರಂಗಜೇಬನು ಮತ್ತೊಂದು ಸಾರೆ ದಂಡೆತ್ತಿ ಬಂದಾಗ್ಗೆ ಚನ್ನಾಗಿ ಕಂಡು ಬಂತು

ಪುನಃ ಔರಂಗಜೇಬನು ರಾಜಸಿಂಹನ ಮೇಲೆ ದಂಡೆತ್ತಿ ಬಂದನು. ಆಜಿಮುಶಹನ ಸೇನೆಯೊಡನೆ ಬಾದಶಹನ ಸೇನೆಯೂ ನಡೆದು ಹೋಗುತ್ತಿತ್ತು ಆಕಾಲಕ್ಕೆ ಮಾರವಾಡದ ಪ್ರಖ್ಯಾತವೀರನಾದ ದುರ್ಗಾಸಿಂಹನ ಸಹಾಯದಿಂದ ರಾಜಸಿಂಹನು ಔರಂಗಜೇಬನ ಮೇಲೆ ಹಲ್ಲಾ ಮಾಡಿದನು ಈಸಮಯದಲ್ಲಿಯೂ, ಬಾದಶಹನು ಪರಾಜಯವನ್ನು ಹೊಂದಿದನು ಈಕಾಲಕ್ಕೆ ರಜಪೂತರು ಆತನ ಸರ್ವಸ್ವವನ್ನು ಸೂರೆಗೊಂಡರು

ಔರಂಗಜೇಬನೂ, ಆಜೀಮುಶಹನೂ, ಓಡಿಹೋಗಿ ಚಿತೋಡದ ರಾಜಧಾನಿಯನ್ನು ಹೊಕ್ಕರು ಅಲ್ಲಿಯೂ ಅವರನ್ನು ಸುಖದಿಂದ ನಿಲ್ಲಗೊಡಲಿಲ್ಲ ಸಾವಳದಾಸನೆಂಬೊಬ್ಬ ರಜಪೂತ ವೀರಸೇನಾಪತಿಯು ಚಿತೋಡ ಹಾಗು ಅಜಮೀರಗಳ ಮಧ್ಯದಲ್ಲಿ ತನ್ನ ಛಾವಣಿಯನ್ನು ಹಾಕಿಕೊಂಡು ಕುಳಿತನು ಔರಂಗಜೇಬನಿಗೆ ಅನ್ನ ಸಹ ದೊರೆಯದಂತಾಯಿತು ರೋಹಿಲಖಾನನಿಗ ಹನ್ನೆರಡುಸಾವಿರ ಸವಾರರನ್ನು ಕೊಟ್ಟು ಸಾವಳದಾಸನೊಡನೆ ಕಾದುವದಕ್ಕೆ ಕಳಿಸಿದನು ಸ್ವತಃ ತಾನು ಅಜಮೀರಕ್ಕೆ ಓಡಿಹೋದನು ಆಮೇಲೆ ಬಾದಶಹನು ಉದೇಪುರದ ಮೇಲೆ ಎಂದೂ ದಂಡೆತ್ತಿ ಬರಲಿಲ್ಲ

ಇತ್ತ ಸಾವಳದಾಸನು ರೋಹಿಲಖಾನನಿಗ, ಚನ್ನಾಗಿ ಕೈತೋರಿಸಿದನು ಆತನೂ ಸೋತು ಅಜಮೀರಕ್ಕೆ ಓಡಿಹೋದನು ಬೇರೊಂದು ಮಗ್ಗಲಿಗೆ ರಾಜಸಿಂಹನ ಎರಡನೆಯ ಮಗನಾದ ಕುಮಾರಭೀಮಸಿಂಹನು ಗುಜರಾಥದ ಕಡೆಗಿರುವ ಮೊಗಲರ ಸೀಮೆಯಲ್ಲಿ ಹೊಕ್ಕು ಶಹರಗಳನ್ನು ಸುಲಿಯಹತ್ತಿದನು ಕಡಗ ರಾಜಧಾನಿಯನ್ನು ಸುಲಿದನು ಅಲ್ಲಿಯ ಮುಸಲ್ಮಾನಅಧಿಕಾರಿಗಳನ್ನು ಓಡಿಸಿಬಿಟ್ಟನು ಮತ್ತು ಸೌರಾಷ್ಟ್ರದ

ವರೆಗಿರುವ ದೇಶವನ್ನು ತನ್ನ ಸ್ವಾಧೀನಕ್ಕೆ ತಕ್ಕೊಂಡನು ಸುಲಿಗೆಯಿಂದ ಜನರಿಗೆ ತ್ರಾಸವಾಗುವದೆಂದು ರಾಜಸಿಂಹನು ಆತನನ್ನು ಹಿಂದಕ್ಕೆ ಕರೆಸಿದನು ಆತನ ದಯಾಳು ಸ್ವಭಾವದಮೂಲಕ ರಾಜ್ಯದ ವಿಸ್ತಾರವು ಹೆಚ್ಚಾಗಲಿಲ್ಲ

ರಾಜಸಿಂಹನ ಮಂತ್ರಿಯಾದ ದಯಾಳುಶಹನು ಅಷ್ಟು ದಯಾಶೀಲನಾಗಿರಲಿಲ್ಲ ಆದರೆ ಒಳ್ಳೇ ಧೈರ್ಯವಂತನೂ, ಉತ್ಸಾಹಿಯೂ, ಹಟವಟಿಕೆಯುಳ್ಳವನೂ ಆಗಿದ್ದನು ಯುದ್ಧದಲ್ಲಿ ಒಂದೇಸವನೆ ಆವೇಶದಿಂದ ಬೆಂಕಾದಲ್ಲಿಯವರೆಗ ಹೋಗಿ ಪಾರಾಗಿ ಬರುತಿದ್ದನು ಆತನು ಬಹುತೇಕ ಮಾಳವ ಪ್ರಾಂತವನ್ನು ವಶಪಡಿಸಿಕೊಂಡನು ಸಾರಂಗಪೂರ, ದೇವಾಸ, ಸರೋಜ, ಮಾಂಡವಿ, ಉಜ್ಜಯಿನಿ, ಚಂದೇರಿ ಮೊದಲಾದ ಮುಸಲ್ಮಾನರ ದಟ್ಟವಸ್ತಿಯುಳ್ಳ ಶಹರಗಳಸುಲಿಗೆ ಮಾಡಿದನು ಅಲ್ಲಿಯ ಮುಸಲ್ಮಾನ ರಕ್ಷಕರನ್ನೆಲ್ಲ ತರಿದುಹಾಕಿದನು ಔರಂಗಜೇಬನು ಹಿಂದೂಜನರ ಮೇಲೆ ತೋರಿಸುವ ಅತ್ಯಾಚಾರಕ್ಕೆ ಒಡಲಾಗಿ, ಕಾಜಿ, ಮುಲ್ಲಾಗಳನ್ನು ಹಿಡಿಸಿ ಕುತ್ತಿಗೆಗಳನ್ನು ಕೊಯ್ಸಿದನು ಕುರಾಣಗಳು ದೊರೆದರೆ ಕೆರೆಭಾವಿಗಳ ತಳಗಳಲ್ಲಿ ಜಲಸಮಾಧಿಯನ್ನು ಹೊಂದಿಸಲಿಕ್ಕೆ ಸಕ್ತತಾಕೀದು ಕೊಟ್ಟಿದ್ದನು. ಮುಸಲ್ಮಾನರು ದಯಾಳುಶಹನ ಹೆಸರನ್ನು ಕೇಳಿದಕೊಡಲೆ ಅಂಜಿ ಜೀವ ಉಳಿಸಿಕೊಳ್ಳುವದಕ್ಕ ಹೆಂಡರು ಮಕ್ಕಳುಗಳನ್ನು ಬಿಟ್ಟು ಓಡಿಹೋಗುತ್ತಿದ್ದರು

ದಯಾಳುಶಹನು ತನ್ನ ಸೇನೆಯನ್ನು ಕುಮಾರ ಜಯಸಿಂಹನ ಸೇನೆಯಿರುವಲ್ಲಿಗೊಯ್ದನು ಶಹಾಜಾದಾ ಆಜೇಮುಶಹನು, ಆತನೊಡನೆ ಕಾದಿ ಪರಾಜಯವನ್ನು ಹೊಂದಿ ರಣಕ್ಷೇತ್ರವನ್ನು ಬಿಟ್ಟು ಹೊರಟು ಹೋದನು

ರಾಜಪುತ್ರ ಭೀಮಸಿಂಹನು ಇನ್ನುಮುಂದೆ ಆತನು ಸಿಸೋದಿಯ ಹಾಗು ರಾಠೋಡದ ಎರಡೂ ಮನೆತನಗಳ ವತಿಯಿಂದ ಅಕಬರಶಹನೊಡನೆ ಕಾದಿ ಅಕಬರನನ್ನೂ, ತೈಬರಖಾನನ್ನೂ ಸೋಲಿಸಿದನು ಅದರ ವಿಲಕ್ಷಣವಾದ ಮನೋಹರ ವರ್ಣನೆಯನ್ನು ಭಾಟರು ಹೀಗೆಮಾಡಿರುತ್ತಾರೆ.

"ಒಬ್ಬ ರಜಪೂತ ಸರದಾರನು ಐನೂರು ಒಂಟೆಗಳಮೇಲೆ ದೀವಟಿಗೆಗಳನ್ನು ಕಟ್ಟಿ ರಾತ್ರಿಕಾಲದಲ್ಲಿ ಆ ಒಂಟೆಗಳನ್ನು ಮೊಗಲರ ಗುಂಪಿನಲ್ಲಿ ಹೊಡೆದು ಬಿಟ್ಟನು ಮೊಗಲರೆಲ್ಲರೂ ಎದ್ದುನಿಂತು ಈ ಚಮತ್ಕಾರವನ್ನು ನೋಡಹತ್ತಿದರು ಅದರಿಂದ ಏನಾದರೂ ಅನರ್ಥವಾಗಬಹುದೆಂದು ತಿಳಿದಿತ್ತು ಹಾಗೆಯೆ ಎಷ್ಟೋ ಜನರು ಅವುಗಳ ಬೆನ್ನುಹತ್ತಿದರು ಇದರಿಂದ ಆ ಒಂಟೆಗಳು ಶತ್ರುಗಳ ಸೇನೆಯಲ್ಲಿ ಓಡಾಡಹತ್ತಿದವು. ಸೇನೆಯು ಅಸ್ತವ್ಯಸ್ತವಾಯಿತು ಈಸಂಧಿಯನ್ನು ಸಾಧಿಸಿ ರಜಪೂತರು ಒಮ್ಮೆಲೆ ಅವರ ಮೈಮೇಲೆ ಬಿದ್ದು ಅವರೆಲ್ಲರನ್ನು ಕಡಿದುಹಾಕಿದರು."

ಈರೀತಿಯುದ್ಧವು ನಾಲ್ಕುವರ್ಷಗಳವರೆಗೆ ಒಳ್ಳೇಭರದಿಂದಸಾಗಿತು. ದಕ್ಷಿಣದಲ್ಲಿ ಸಂಭಾಜಿಯ ಪ್ರಾಬಲ್ಯವು ಹೆಚ್ಚಾಯಿತು ಆಮೇಲೆ ಇಬ್ಬರೊಡನೆ ಕಾದುವದು ಹಿತವಲ್ಲೆಂದು ಔರಂಗಜೇಬನು ರಜಪೂತರೊಡನೆ ತಹಮಾಡಿಕೊಳ್ಳುವದನ್ನು ನಿಶ್ಚಯಿಸಿದನು ಆದರೆ ಈ ಮನೋಬಯಕೆಯನ್ನು ಪ್ರಕಟಮಾಡಿದರೆ ತನ್ನ ದೊಡ್ಡಿಸ್ತನಕ್ಕೆ ಕುಂದು ಬರುವದೆಂದು ತನ್ನಕಪಟ ಸ್ವಭಾವಕ್ಕನುಸರಿಸಿ ರಾಣಾಸಿಂದಲೆ ಅದರ ಎಳೆಹೊರಡುವಂತೆ ಯುಕ್ತಿಯನ್ನು ತೆಗೆದನು ದಿಲೇರಖಾನನೊಡನೆ ವಿಚಾರಿಸಿ, ರಾಣಾನಕಡೆಗೆ ಒಬ್ಬರಜಪೂತ ಸರದಾರನನ್ನು ಕಳಿಸಿದನು ಆತನು ಯುಕ್ತಿಪ್ರಯುಕ್ತಿಗಳಿಂದ ಮಾತಾಡುತ್ತ ಮಾತಾಡುತ್ತ ಯುದ್ಧದವಿಷಯವನ್ನು ತೆಗದು ಬಾದಶಹನೊಡನೆ ತಹಮಾಡಿಕೊಳ್ಳುವ ಭಾರದಹೊರೆಯನ್ನು ತನ್ನತಲೆಯ ಮೇಲೆ ತಕ್ಕೊಂಡನು ರಾಣಾನ ಅಣ್ಣನಾದ ಸೂರಸಿಂಗ, ಸರದಾರ ಪದ್ಮಸಿಂಗ, ಮತ್ತು ಬಾದಶಹನ ಕಡೆಯವನಾದ ಸರಹರಭಟ್ಟ ಇವರ ಸಹಿಯಿಂದ ಒಂದು ಪತ್ರವನ್ನು ಬರೆದು ಬಾದಶಹನಕಡೆಗೆ ಕಳಿಸಿದರು. ಅದರ ಅಭಿಪ್ರಾಯವು ಕೆಳಗೆ ಬರೆದಂತೆ —

೧. ಚಿತೋಡ ಹಾಗು ಅದರ ಸುತ್ತಲಿನ ರಜಪೂತರ ಪ್ರದೇಶವನ್ನೆಲ್ಲ ಬಾದಶಹನುಬಿಟ್ಟು ಬಿಡಬೇಕು.

೨ ಹಿಂದೂ ಜನರ ಪವಿತ್ರಸ್ಥಳಗಳನ್ನೂ ದೇವಾಲಯಗಳನ್ನೂ. ಕೆಡಿಸಿ ಮುಸಲ್ಮಾನರು ಬಲತ್ಕಾರದಿಂದ ಮಸೀದಿಗಳನ್ನು ಕಟ್ಟಿಸಿದರು ಅದು ಈವರೆಗೆ ಆದದ್ದು ಆಗಿಹೋಯಿತು ಇನ್ನುಮುಂದೆ ಹಾಗೆ ಎಂದೂ ಮಾಡಕೂಡದು ಹಿಂದೂಜನರ ಮೇಲಿನ ಬಲಾತ್ಕಾರವನ್ನು ತೀರನಿಲ್ಲಿಸಿ ಬಿಡಬೇಕು

೩ ರಾಣಾನ ಕಡೆಯಿಂದ ಈಪೂರ್ವದಲ್ಲಿ ಎಷ್ಟು ಸಹಾಯವನ್ನು ಬೇಡೋಣವಾಗಿತ್ತೊ ಅಷ್ಟೇ ಸಹಾಯವು ದೊರೆದೀತಲ್ಲದೆ ಅದಕ್ಕೂ ಹೆಚ್ಚಿಗೆ ದೊರೆಯಲಾರದು.

೪ ಮಯತರಾಜಾ ಜಸವಂತ ಸಿಂಹನ ಮಕ್ಕಳು ತಮ್ಮಿಂದ ತಾವೇ ರಾಜ್ಯಕಾರಭಾರವನ್ನು ನೋಡುವಷ್ಟು ದೊಡ್ಡವರಾದ ಕೂಡಲೆ ಅವರ ರಾಜ್ಯವನ್ನು ಅವರಿಗೆ ಬಿಟ್ಟುಕೊಡಬೇಕು

ಈಪ್ರಕಾರ ಬರೆದ ತಹದ ಕಲಮುಗಳನ್ನು ಓದಿ ತನ್ನ ಸಹಿಯನ್ನು ಮಾಡಿ ಅದರನೆಂದು ಮಗ್ಗಲಿಗೆ 'ಮಂಜೂರ' ಎಂದು ಅಕ್ಷರಗಳಿಂದ ಬರೆದು ಔರಂಗಜೇಬನು ಕಪಟ ವಿರಹಿತರಾದ ರಜಪೂತರೊಡನೆ ತನ್ನ ಆಯುಷ್ಯದಲ್ಲಿ ಮೊದಲನೆ ತಹವನ್ನು ಮಾಡಿಕೊಂಡನು

